
ನಿರಂಜನವಂಶ ರತ್ನಾಕರ.

೨ ನೆಯ ಭಾಗ.

ಬಿಡಿಪ ಕೆಲವು ಮಾತುಗಳು.



'ನಿರಂಜನವಂಶ ರತ್ನಾಕರ' ಎಂಬ ಪುಸ್ತಕವನ್ನು ರಾವಸಾಹೇಬ ಫ ಗು ಹಳಕಟ್ಟಿಯವರು ಶಿವಾನುಭವ ಗ್ರಂಥ ಮಾಲೆಯ ನಂಬರ ೩೩ ನೆಯದನ್ನಾಗಿ ಪ್ರಕಟಿಸಿ ಇರುತ್ತಾರೆ. ಆದರಲ್ಲಿ ನಿರಂಜನ ಜಗದ್ಗುರು ಶ್ರೀಮತು ಅಲ್ಲಮಪ್ರಭುವಿನ ವಿಷಯವು ಮೊದಲನೆಯದಾಗಿ ಮುರುಗಾರಾಜೇಂದ್ರ ಸ್ವಾಮಿಗಳು ಚಿತ್ರದುರ್ಗದಲ್ಲಿ ಬೃಹನ್ಮಠ ಮಹಾಸಂಸ್ಥಾನವನ್ನು ಏರ್ಪಡಿಸಿ ಅಲ್ಲಿ ಮೊದಲನೆಯವರಾಗಿ ಸಿಂಹಾಸನಾರೂಢರಾದರೆಂಬ ವಿಷಯವೇ ಕಡೆಯದಾಗಿ ಇರುತ್ತದೆ. ಆದರಲ್ಲಿನ ಕಟ್ಟ ಕಡೆಯ ವಿಷಯವು ಹೀಗೆ ಇದೆ:— "....ಆ ಬಳಿಕ ಸಕಲ ಗುರು ಚರಮೂರ್ತಿಗಳು ಮುಂತಾದ ದೇವಭಕ್ತರು ಕೂಡಿ ಮುರುಗಾರಾಜೇಂದ್ರ ಸ್ವಾಮಿಗಳವರು ಕಾರಣತ್ವಕ್ಕೆ ಗುರುಗಳು ಕಾರ್ಯತ್ವಕ್ಕೆ ಶ್ರೀ ಕುಮಾರ ದೇಶಿಕೇಂದ್ರರವರೇ ಗುರುಗಳೆಂದು ಸ್ವಾದಿ ದೊರೆಗಳು ಮುಂತಾದ ಸೀಮೆಗೌಡರು ಆ ಗುರು ಚರಮೂರ್ತಿಗಳು ಸೆಟ್ಟರು ದೈವದವರು ಸಹವಾಗಿ ನಿಯಮಿಸಿಕೊಟ್ಟು ಕುಮಾರ ಸ್ವಾಮಿಗಳವರಿಗೆ ಮುರುಗಾಸ್ವಾಮಿಗಳವರು ಮುಂತಾದ ಸಕಲ ಗುರು ಚರಮೂರ್ತಿಗಳು ಅಹೀರು ಮುಂತಾದ ಸಕಲ ಮರ್ಯಾದೆಗಳಂ ಕೊಟ್ಟು ಶ್ರೀ ಮುರುಗಾರಾಜೇಂದ್ರ ಸ್ವಾಮಿಗಳವರ ಸರಿಯಾಗಿ ಸಿಂಹಾಸನಾರೂಢರಂ ಮಾಡಿಸಿ ಅಂದೋಳಿಕ ಮುಂತಾದ ೭೨ ಬಿರುದುಗಳ ಸಮೇತವಾಗಿ ಉತ್ಸಹಂಗೊಳಿಸಿ ಮಹಾ ಗಣಾರಾಧನೆಯಂ ಮಾಡಿಸಿದ ಬಳಿಕ ಸಕಲ ದೇವ ಭಕ್ತರು ಕಾಣಿಕೆಯಂ ಒಪ್ಪಿಸಿ ಉಭಯ" (ಪುಟ ೬೬-೬೭) ಇಲ್ಲಿಗೆ ಆ ಪುಸ್ತಕವು ಮುಗಿದಿದೆ. ಈ ಪೊತ್ತಗೆಯಲ್ಲಿ ಬರೆದ ವಿಷಯಗಳು ಅದರ ಮುಂದಿನ ಸಂಗತಿಗಳಿಂದ ಕೂಡಿರುವುದರಿಂದ ಇದಕ್ಕೆ ನಿರಂಜನವಂಶ ರತ್ನಾಕರ ೨ ನೆಯ ಭಾಗ ಎಂಬುದಾಗಿ ಹೆಸರಿಟ್ಟು ಮುದ್ರಿಸಿದುದಾಗಿದೆ.

ಈ ಹೊತ್ತಗೆಯು ಹಾನಗಲ್ ತಾಲ್ಲೂಕು ಅಲೂರಲ್ಲಿ ಇರುವ ಮ. ರಾ. ಸೆಟ್ಟರ ದುಂಡಪ್ಪನವರಲ್ಲಿ ಸಿಕ್ಕಿದ ಕಾಗದದ ಸುರಳಿಗಳು ಮೂರರಲ್ಲಿ ಇದ್ದಂತೆ ಮುದ್ರಿಸಲ್ಪಡಲಿಕ್ಕಾರಂಭವಾಯಿತು. ಆ ಮೇಲೆ 'ಕ' ಪ್ರತಿ 'ಗ' ಪ್ರತಿ 'ಡ' ಪ್ರತಿ ಎಂಬ ನೂರು ಪುಸ್ತಕಗಳಲ್ಲಿ

ಇರುವ ಕೆಲವು ಭಾಗಗಳನ್ನು ಸೇರಿಸಿ ಮುದ್ರಿಸಲ್ಪಟ್ಟಿವೆ ಇದು ಮೇಲೆ ಕಂಡ ಚಿತ್ರದುರ್ಗ ಸಂಸ್ಥಾನದಲ್ಲಿ ಸಿಂಹಾಸನಾರೂಢರಾದ ಮೂರನೆಯ ಸ್ವಾದಿ (ಸೋದೆ= ಸುಧಾಪುರ) ಚನ್ನಬಸವಸ್ವಾಮಿಗಳವರ ವರೆಗಿನ ವಿಷಯಗಳನ್ನು ಒಳಗೊಂಡಿದೆ ಮೇಲೆ ಕಂಡ 'ಖ' 'ಗ' 'ಡ' ಪ್ರತಿಗಳು ಆಲೂರಿನಲ್ಲಿ ಪ್ರಸಿದ್ಧರಾದ ಲಿಂಗಪ್ಪನವರು ಕೂಬಿಹಾಳ ಇವರ ಸಹಾಯದಿಂದ ದೊರಕಿದವುಗಳು.

ನಿ. ಜ. ಶ್ರೀಮತು ಅಲ್ಲಮ ಪ್ರಭುವಿಗಾಗಿ ಏರ್ಪಡಿಸಿದ ಶೂನ್ಯಸಿಂಹಾಸನದ ಪರಂಪರೆಯ ಅಧಿಕಾರಿಗಳೇ ನಿರಂಜನ ಜಗದ್ಗುರುಗಳೆಂದು ಒಪ್ಪತಕ್ಕುದು ಎಲ್ಲರಿಗೂ ತಿಳಿಯುವ ಮಾತಾಗಿದೆ. ಆ ಮೇರೆಗೆ ಅಲ್ಲಮ ಪ್ರಭು ಮತ್ತು ಬಸವೇಶ್ವರರ ಕಾಲದಿಂದ ಬೆಳೆದು ಬಂದ ಈಗಿನ ವೀರಶೈವ ಸಮಾಜದಲ್ಲಿ ನಿರಂಜನ ಜಗದ್ಗುರು ಎಂಬದಾಗಿ ಒಬ್ಬರೇ ಇರಬೇಕಲ್ಲವೇ? ವಿಚಾರ ಮಾಡಿ ನೋಡಿದರೆ ಈಗಿನಸ್ಥಿತಿಯು ಹಾಗಿಲ್ಲ. ಚಿತ್ರದುರ್ಗದಲ್ಲಿ ಮುರುಗೇಂದ್ರ ಮಹಾಸ್ವಾಮಿಗಳವರು ಜಗದ್ಗುರು ಎಂದು ಕರೆಸಿಕೊಳ್ಳಲ್ಪಡುತ್ತಾರೆ. ಹುಬ್ಬಳ್ಳಿಯಲ್ಲಿ ಮೂರುಸಾವಿರ ಮಠದ ಗುರುಸಿದ್ಧೇಶ್ವರ ಮಹಾಸ್ವಾಮಿಗಳವರು ಜಗದ್ಗುರು ಎಂದು ಕರೆಸಿಕೊಳ್ಳಲ್ಪಡುತ್ತಾರೆ. ಗದಗಿನಲ್ಲಿ ತೋಂಟದಾರ್ಯ ಮಹಾಸ್ವಾಮಿಗಳವರು ಜಗದ್ಗುರು ಎಂಬದಾಗಿ ಕರೆಸಿಕೊಳ್ಳಲ್ಪಡುತ್ತಾರೆ. ಮುಂಡರಗಿಯಲ್ಲಿ ಅನ್ನದಾನ ಸ್ವಾಮಿಗಳು ಜಗದ್ಗುರುಗಳೆಂದು ಸರಕಾರದಿಂದ ಶೀ ವರ್ಾನಿಸಲ್ಪಟ್ಟಿರುವುದಾಗಿ ತಿಳಿಯುತ್ತದೆ. ಆಂಗ್ಲರಾಜರಿಂದ ಅಡ್ಡಪಲ್ಲಕ್ಕಿ ಮೊದಲಾದ ಬಿರುದಾವಳಿಗಳೂ ಇವರೆಲ್ಲರಿಗೂ ಕೊಡಲ್ಪಟ್ಟಿರುತ್ತವೆ. ಇದಲ್ಲದೆ ತಮ್ಮ ತಮ್ಮ ಮಠಗಳಲ್ಲಿ ತಾವೇ ಜಗದ್ಗುರುಗಳೆಂದು ಪತ್ರ ಬರೆವವರೂ ಭಕ್ತರಿಂದ ಅದೇ ರೀತಿ ಕರೆಯಲ್ಪಡುವವರೂ ಬಹು ಸ್ವಾಮಿಗಳಿದ್ದಾರೆ. ಹೀಗಿದ್ದಾಗ್ಯೂ, ವೀರಶೈವ ಮಹಾಸಭೆಯು ಸಮಾಜದ ತೊಡಕುಗಳನ್ನು ಬಗೆ ಹರಿಸಿ ಸಮಾಜವನ್ನು ಧಾರ್ಮಿಕ ಆರ್ಥಿಕ, ನೈತಿಕ, ವ್ಯಾವಹಾರಿಕ ಮುಂತಾದವುಗಳಲ್ಲಿ ಅಭಿವೃದ್ಧಿಯನ್ನು ತರುವುದಕ್ಕಾಗಿ ಏರ್ಪಟ್ಟು ಸುಮಾರು ೩೫ ವರ್ಷಗಳಾಗಿದ್ದಾಗ್ಯೂ ಈ ಅನೇಕರಲ್ಲಿ ನಿರಂಜನ ಜಗದ್ಗುರು ಒಬ್ಬರು ಯಾರೆಂಬುದನ್ನು ಈ ವರೆವಿಗೂ ಗೊತ್ತುಮಾಡಲಿಕ್ಕೇ ಹೋಗಿಲ್ಲ. ವೀರಶೈವ ಸಮಾಜವು ತನ್ನ ಚರಿತ್ರೆಯನ್ನು ತಾನು ತಿಳಿಯದೆ ಇರುವುದೂ ಮತ್ತು ಈ ಪೀಠದ

ಪರಂಪರೆಯಲ್ಲಿ ಹೀಗೆ ಏಕೆ ಭಿನ್ನಗಳಾದವು? ಈ ಪೀಠವು ಸಮಾಜದಲ್ಲಿ ಎಷ್ಟು ಮುಖ್ಯವಾದುದು? ಎಂಬುದನ್ನು ಸರಿಯಾಗಿ ಗೊತ್ತುಹಚ್ಚದೆ ಇರುವುದೂ ಇದಕ್ಕೆ ಕಾರಣವಾಗಿದೆ.

ಈ ಶೂನ್ಯ ಸಿಂಹಾಸನದ ವಿಷಯದಲ್ಲಿ ಇದೂ ವರೆವಿಗೆ ನಡೆದುಕೊಂಡು ಬಂದಿರುವ ಸಂಭವಗಳನ್ನು ಸಮಾಜವು ತಿಳಿದು ಈಗಲಾದರೂ ಒಂದು ನಿರ್ಣಯಕ್ಕೆ ಬಂದು ಒಬ್ಬರೇ ಜಗದ್ಗುರು ಯಾರೆಂಬುದನ್ನು ನಿರ್ಣಯಿಸಲಿ ಎಂಬ ಉದ್ದೇಶದಿಂದಲೇ ಈ ಮುನ್ನುಡಿಯನ್ನು ಬರೆದುದಾಗಿದೆ.

ಈ ಪುಸ್ತಕವು ಕೇವಲ ಚಂತ್ರರೂಪವಾದ ವಿಮರ್ಶೆಯಾಗಿ ನಿಜ ಸ್ಥಿತಿಯನ್ನು ಹೊರಗೆಡವಲಿಕ್ಕೆ ಅವಕಾಶವಾಗಲಿ ಎಂಬ ಭಾವನೆಯಿಂದ ಮುದ್ರಿತವಾಗಿರುವುದರಿಂದ ಇದರಲ್ಲಿ ಸತ್ಯಾಂಶವಿಲ್ಲದ ವಿಷಯಗಳನ್ನು ಯಾರಾದರೂ ತಿಳಿಸಿ ನಿಜವಾದ ಪ್ರಮಾಣಗಳನ್ನು ತೋರಿಸಿದಲ್ಲಿ ಅದರಂತೆ ಮುಂದೆ ತಿದ್ದಿ ಪ್ರಕಟಿಸಲಿಕ್ಕೆ ಸಿದ್ಧನಾಗಿದ್ದೇನೆ.

ಇದರಲ್ಲಿ ಹೈದರಾಬಾದು ದೇಶದಲ್ಲಿರುವ ಕಲ್ಯಾಣ, ಮೈಸೂರು ದೇಶದಲ್ಲಿ ಮೈಸೂರು ಜಿಲ್ಲೆಯಲ್ಲಿನ ಹರದನಹಳ್ಳಿ, ಜಿಲ್ಲಾ ಸ್ಥಳವಾದ ಚಿತ್ರದುರ್ಗ, ಶಿವಮೊಗ್ಗಾಜಿಲ್ಲೆಯಲ್ಲಿರುವ ಜಡೆ (ಜಟಾಪುರ), ಧಾರವಾಡ ಜಿಲ್ಲೆಯಲ್ಲಿನ ಗದಗು, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಯಲ್ಲಿನ ಮಂಟಮುರಿ ಮೊದಲಾದ ಸ್ಥಳಗಳಲ್ಲಿನ ನಿರಂಜನ ಪೀಠದ ಅಧಿಕಾರಿಗಳಾದ ಗುರುಗಳ ವಿಷಯವು ಮುದ್ರಿತವಾಗಲು ಪ್ರಯತ್ನವು ಮಾಡಲ್ಪಟ್ಟಿದೆ

ರಾ. ಸಾ. ಹಳಕಟ್ಟಿಯವರು ಪ್ರಕಟಿಸಿದ ನಿರಂಜನ ವಂಶ ರತ್ನಾಕರ [ಇದು ಇನ್ನು ಮುಂದೆ ನಿರಂಜನ ವಂಶ ರತ್ನಾಕರ ಮೊದಲನೆಯ ಭಾಗ ಎಂದು ಕರೆಯಲ್ಪಡುವುದು] ದಲ್ಲಿ ೨೩ನೆಯ ಪಟ್ಟದ ಕಟ್ಟಿಗೆಹಳ್ಳಿ ಸ್ವಾಮಿಗಳು(ಇವರಿಗೆ ಸಿದ್ಧಲಿಂಗಸ್ವಾಮಿಗಳು, ಕಟ್ಟಿಗೆಹಳ್ಳಿದೇವ, ಕಟ್ಟಿಗೆಹಳ್ಳಿಸಿದ್ಧವೀರ ಸ್ವಾಮಿಗಳು ಎಂಬ ಹೆಸರುಗಳೂ ಇದ್ದಂತೆ ತಿಳಿಯುತ್ತದೆ) ಇವರಕಾಲದ ವರೆವಿಗೂ ಈ ಪೀಠದ ಅಧಿಕಾರಿಗಳು ಒಬ್ಬರೇ ಇದ್ದಂತೆ ಗೊತ್ತಾಗಿದೆ. ಈ ಪುಸ್ತಕವೂ ಆರಂಭದಲ್ಲಿ ಸಂಗ್ರಹವಾಗಿ ಹಾಗೆಯೇ ಹೇಳುತ್ತದೆ, ಅವರ ಕಾಲದಿಂದ ಮುಂದೆ ಈ ಶೂನ್ಯ ಸಿಂಹಾಸನಾಧಿಕಾರಿಗಳ ಭಿನ್ನ ಶಾಖೆಗಳೂ, 'ಸಮಯ' (ಆಚಾರಭೇದ) ಗಳೂ ಉತ್ಪನ್ನವಾದವು. ಈ ಅಭಿಪ್ರಾಯವೇ ಈ ಹೊತ್ತಗೆಯಿಂದಲೂ ಸಿದ್ಧವಾಗುತ್ತಿದೆ. ಇದರ ವಿವರವು ಹೀಗಿದೆ :—

೧. ಕಟ್ಟಿಗೆಹಳ್ಳಿ ಸ್ವಾಮಿಗಳು ಶ್ರೀ ನಿರಂಜನ ಸಂಪಾದನೆಯ ಸಿದ್ಧ

ವೀರಪ್ಪನವರನ್ನು (ಇವರೇ ಸರ್ವಜ್ಞಮೂರ್ತಿ ನಿರೂಪಿಸಿದ ತ್ರಿವಿಧಿ ಪದ್ಯಗಳು ಕೆಲವನ್ನು ಸೇರಿಸಿ ಒಂದು ಪುಸ್ತಕ ಮಾಡಿದವರು. ಇದಕ್ಕೇ ಸಂಪಾದನೆಎಂಬ ಹೆಸರು ಬಂದಿರಬಹುದು) ಅವರ ಲಿಂಗದಗೋಳಕವು ಸಡಲಿತೆಂದು ಹೊರಗೆ ಹಾಕಿಸಿದರು. ಆಮೇಲೆ ಅವರು ಹಾಗಲವಾಡಿಗೆ ಹೋಗಿ ಅಲ್ಲಿಯ ರಾಜನ ಭಕ್ತಿಯಿಂದ ಮಠ ಮಾನ್ಯಗಳನ್ನು ಪಡೆದು ಪ್ರಸಿದ್ಧರಾದರು. 'ಸಂಪಾದನೆಯ ಸಮಯ' ಎಂಬುದಾಗಿ ಇವರ ಪರಂಪರೆಯವರಿಗೆ ಹೆಸರಾಯಿತು. ಇವರ ಮಠಗಳು ಬೆಂಗಳೂರು, ಹಾಗಲವಾಡಿ, ಹ.ಕ್ಯೇರಿನಾಡು, ಒಂಟಮುರಿ, ನರೇಂದ್ರ, ಬಾಗೇವಾಡಿ ಮುಂತಾದ ಸ್ಥಳಗಳಲ್ಲಿ ಇರುತ್ತವೆ. (ನಿರಂಜನ ವಂಶ ರತ್ನಾಕರ 1 ಪುಟ ೫೯-೬೦) ಇವರ ಮುಂದಿನವರು ಈ ಪರಂಪರೆಯನ್ನು ತೋಂಟದ ಸಿದ್ಧಲಿಂಗ ಸ್ವಾಮಿಗಳ ಕಾಲದಿಂದ ಬಂದುದೆಂದು ಬರೆವಣಿಗೆ ಮಾಡಿಟ್ಟರು.

೨. ಮುಂದೆ ಇದೇ ನಿ. ಜ. ಕಟ್ಟಿಗೆಹಳ್ಳಿ ಸ್ವಾಮಿಗಳವರು ತಮ್ಮಲ್ಲಿ ಇದ್ದ ಮಠಗಳಲ್ಲಿ ನೋಟದ (ನೋಡ) ಸಿದ್ಧಲಿಂಗ ಸ್ವಾಮಿಗಳವರಿಗೆ ತಮಗೆ ಚನ್ನಬಸವೇಶ್ವರರ ಪರಂಪರೆಯಿಂದ ಬಂದ ಶಿವಾನುಭಾವ ಪಟ್ಟದ ಅಧಿಕಾರವನ್ನು ಕೊಟ್ಟು ಮುರುಗೇಂದ್ರ ಸ್ವಾಮಿಗಳೊಡನೆ ಡಿಳ್ಳಿಗೆಹೋಗಿ ಮುರುಗೇಂದ್ರ ಸ್ವಾಮಿಗಳು ಅಲ್ಲಿ ಪವಾಡವನ್ನು ತೋರಿಸಿ ಅಲ್ಲಿ ಸಿಕ್ಕಾ ಶೈಲಗಳನ್ನು ತರುವರು, ಅಮೇಲೆ ಅವರಿಗೆ ಶಿಖಾಪಟ್ಟವನ್ನು ಕಟ್ಟಿ ನೀವು ಉಭಯತರೂ ಗುರುಗಳಾಗಿ ಇರಬೇಕೆಂದು ಅಪ್ಪಣೆ ಕೊಡಿಸಿದರು, (ನಿರಂಜನ ವಂಶ ರತ್ನಾಕರ 1 ಪು ೬೧) ಆ ಮೇರೆಗೆ ಅವರು (ನೋಟದ ಸಿದ್ಧಲಿಂಗ ಸ್ವಾಮಿಗಳು) ಶಿಖಾ ಪಟ್ಟವನ್ನು ಮಾಡಿದರು. ಅದುವರೆವಿಗೂ ಒಂದಾಗಿದ್ದುದು ಆಗ್ಯೆ ಶಿಖಾಪಟ್ಟ ಶಿವಾನುಭವಪಟ್ಟವೆಂದು ಎರಡಾದುವು. ಈ ಎರಡು ಶಾಖೆಯುವರೂ ತಮ್ಮ ಪರಂಪರೆಯನ್ನು ತೋಂಟದ ಸಿದ್ಧಲಿಂಗ ಸ್ವಾಮಿಗಳ ಕಾಲದಿಂದ ಕ್ರಮವಾಗಿ ಹೇಳಲಿಕ್ಕೆ ಹತ್ತಿದರು.

ನೋಟದ(ನೋಡ) ಸಿದ್ಧಲಿಂಗ ಸ್ವಾಮಿಗಳು ಮುರುಗೇಂದ್ರ ಸ್ವಾಮಿಗಳಿಗೆ ಶಿಖಾಪಟ್ಟವನ್ನು ಮಾಡಿದರೆಂಬುದನ್ನು ನಿರ್ಧರಿಸಲಿಕ್ಕೆ ಈ ಕೆಳಗಿನ ವಿಷಯವು ಸಹಾಯವಾಗಬಹುದು.

ಮಹಂತ ಸ್ವಾಮಿ ಎಂಬುವವರು ಮುರುಗೇಂದ್ರ ಸ್ವಾಮಿಗಳವರ ಸಾಂಧ್ಯ (ಸ್ತುತಿ ರೂಪವಾದ ಷಟ್‌ಪದಿ ಗ್ರಂಥ) ವನ್ನು ರಚಿಸಿದ್ದಾರೆ ಅದರಲ್ಲಿ ಈ ಪದ್ಯವಿದೆ. [ಕ. ಚ 2 ಪು ೨೫೩]

ಸಿದ್ಧಲಿಂಗನ ಕರುಣ ಶೇಷಂ । ಸಿದ್ಧಿಸಿದ ನಿಜ ಬೋಳಬಸವನ ।
ಶುದ್ಧಮಾಹಪ್ರಸಾದ ಸೇವನೆಯಿಂದ ಬಳೆದಿರ್ದ ॥
ಉದ್ಧನಾದಾ ಗುರುವಿನಿಂ । ಸಲೆ ಸಿದ್ಧ ಕಟ್ಟಿಗೆಹಳ್ಳಿದೇವನ ।
ಶುದ್ಧ ಜ್ಞಾನದಿ ಬೆಳೆದ ಮುರಿಗೆಯ ದೇವ ಪಾಲಿಪುದು ॥

ಇದರಲ್ಲಿ "ತೋಂಟದ ಸಿದ್ಧಲಿಂಗ (ಸಿದ್ಧೇಶ್ವರ) ಸ್ವಾಮಿಗಳವರ ಪಾದೋದಕ ಪ್ರಸಾದವು ಸಿದ್ಧಿಸಿದಂಥಾ ಬೋಳಬಸವನ ಪ್ರಸಾದ ಸೇವನೆಯಿಂದ ಬಳೆದಂಥಾ ಗಗನಾಚಾರ್ಯರಿಂದ ಸಿದ್ಧನಾದಂಥ ಕಟ್ಟಿಗೆಹಳ್ಳಿ ದೇವನ ಶುದ್ಧ ಜ್ಞಾನದಿಂದ ಬೆಳೆದಂಥ ಮುರಿಗೆಯ ದೇವನೇ ರಕ್ಷಿಸು" ಎಂದಿರುವುದರಿಂದ ಮೊದಲಿನ ಮೂವರು ಸ್ವಾಮಿಗಳಿಗೆ ಪಾದೋದಕ ಪ್ರಸಾದಗಳು ಸಿದ್ಧ (ಎಂದರೆ ಅನುಗ್ರಹ ಮತ್ತು ಅಧಿಕಾರ ದೀಕ್ಷೆಯು) ಆಯಿತೆಂದೂ ಕಟ್ಟಿಗೆ ಹಳ್ಳಿ ದೇವನ ಶುದ್ಧ ಜ್ಞಾನದಿಂದ ಬೆಳೆದವರು ಮುರಿಗೆಯ ದೇವರೆಂದೂ ಗೊತ್ತಾಗುತ್ತದೆ ಎಂದರೆ ಮುರುಗೇಂದ್ರ ಸ್ವಾಮಿಗಳು ಕಟ್ಟಿಗೆ ಹಳ್ಳಿ ಸ್ವಾಮಿಗಳಲ್ಲಿ ವಿದ್ಯೆಯನ್ನು ಸಂಪಾದಿಸಿ ಮುರಿಗೆಯದೇವ ಅಥವಾ ಮೃಗೇಂದ್ರ (ಮುರಿಗೇಂದ್ರ) ದೇಶಿಕ ಎನಿಸಿಕೊಂಡಿದ್ದರಿಂದೂ ಬೇರೊಬ್ಬರಿಂದ ಆ ಮೇಲೆ ಶಿಖಾಪಟ್ಟದ ಸ್ವಾಮಿಗಳಾಗಿ ಮಾಡಲ್ಪಟ್ಟರಿಂದೂ ತಿಳಿಯುವುದಕ್ಕೆ ಬರುತ್ತದೆ.

೩. ಮುಂದೆ ಈ ಎರಡು ಶಾಖೆಗಳ ಒಂದನೇ ಎರಡನೇ ಗುರುಗಳ ಕಾಲದಲ್ಲಿ ಚೀಲಾಳ ಸಮಯವೇ ಮೊದಲಾದ ಅನೇಕ ಸಮಯಗಳು ಹುಟ್ಟಿ ಅವರೂ ಮಹಿಮರಾದ ಎಡೆಯೂರಿನಲ್ಲಿ ಸಮಾಧಿಸ್ಥರಾದ ತೋಂಟದ ಸಿದ್ಧಲಿಂಗ ಸ್ವಾಮಿಗಳ ಕಾಲದಿಂದ ತಮ್ಮ ಪರಂಪರೆಯನ್ನು ಬರೆವಣಿಗೆಗೆ ತಂದರು.

ಹೀಗೆ ಎಲ್ಲ ಸಮಯಗಳವರೂ ತೋಂಟದ ಸಿದ್ಧಲಿಂಗ ಸ್ವಾಮಿಗನ್ನು ತಮ್ಮ ಮುಖ್ಯ ಅಥವಾ ಮೂಲ ಗುರುಗಳೆಂದು ಒಪ್ಪುವುದರಿಂದ ಶ್ರೀ ನಿ. ಜ. ಅಲ್ಲಮ ಪ್ರಭುವಾದಿಯಾಗಿ ತೋಂಟದ ಸಿದ್ಧಲಿಂಗ ಸ್ವಾಮಿಗಳ ವರೆವಿಗೆ ಆದ ಸ್ವಾಮಿಗಳವರ ಪರಂಪರೆಯ ವೃಕ್ಷ (೧ನೆಯದು) (ವಂಶವೃಕ್ಷ೧) ಇದರಲ್ಲಿ ಕೊಡಲ್ಪಟ್ಟಿದೆ (ಕಡೆಯಲ್ಲಿ ನೋಡಿರಿ)

ಮಹಿಮಾವಂತರಾದ ನಿ. ಜ. ತೋಂಟದ ಸಿದ್ಧಲಿಂಗ ಮಹಾ ಸ್ವಾಮಿಗಳವರು ತಮ್ಮ ಪೂರ್ವದ ಪರಂಪರೆಯನ್ನು ತಾವು ರಚಿಸಿರುವ ಸಿದ್ಧೇಶ್ವರ ವಚನದಲ್ಲಿ ತೋರಿಸಿರುತ್ತಾರೆ ೮-೫ ಓಲೆ ಪ್ರತಿಗ

ಳ ಸಹಾಯದಿಂದ ಈ ಶಿವಲಿಂಗ ವಿಜಯ ಮುದ್ರಾಲಯದಲ್ಲಿ ಅದೂ ಮು ದ್ರಣವಾಗಿದೆ. ಅದರಲ್ಲಿ ಅವರು ಅನಾದಿ ಗಣನಾಥರ ನೊದಲು ಮಾಡಿಕೊಂಡು ತಮ್ಮ ವರೆಗಿನ ಪರಂಪರೆಯನ್ನು ಈಗ ಮುದ್ರಣ ವಾದಂತೆಯೇ ತೋರಿಸಿ ಇರುತ್ತಾರೆ. ವಿರಕ್ತ ತೋಂಟದಾ ರ್ಯರ ಸಿದ್ಧೇಶ್ವರ ಪುರಾಣದಲ್ಲಿ ಸಿದ್ಧೇಶ್ವರ ಸ್ವಾಮಿಗಳ ಪರಂಪರೆ ಯು ಇದೇ ರೀತಿ ಹೇಳಲ್ಪಟ್ಟಿದೆ. ಆದುದರಿಂದ ಈ ೧ನೆಯ ವಂಶ ವೃಕ್ಷವು ಸರಿಯಾದುದೆಂದು ತಿಳಿಯಲೇಬೇಕು.

ಳ ಇಬ್ಬರು ಶೂನ್ಯ ಸಿಂಹಾಸನ ಪೀಠದ ಗುರುಗಳಾದರು, ಎಂದು ಮೇಲೆಹೇಳಿದೆ. ಹೀಗೆ ಆದವರಲ್ಲಿ ಶಿಖಾಪಟ್ಟಕ್ಕೆ ಮುರುಗೇಂದ್ರ ಸ್ವಾಮಿ ಗಳವರೇ ಮೊದಲನೆಯವರು. ಇವರಿಗೆ ಮುರುಗಾಶಾಂತವೀರ ಸ್ವಾಮಿ ಗಳು ಎಂಬ ಹೆಸರೂ ಇದ್ದಂತೆ ತಿಳಿಯುತ್ತದೆ.

ಮೃಗೇಂದ್ರಾಗಮ ಎಂಬ ಒಂದು ಆಗಮವು ವೀರಶೈವ ಮತ ಬೋಧನೆಯನ್ನು ಮಾಡುತ್ತಿದೆ. ಅದನ್ನು ಕೈಲಾಸದಲ್ಲಿ ಶಂಕರನು ಸಿಂಹ ರೂಪದಲ್ಲಿದ್ದ ದೇವೇಂದ್ರನಿಗೆ ಬೋಧಿಸಿದುದರಿಂದ ಅದಕ್ಕೆ ಮೃಗೇಂ ದ್ರಾಗಮ ಎಂದು ಹೆಸರಾಗಿದೆ. ಈ ಆಧಾರವನ್ನು ಅನುಸರಿಸಿ ವೀರ ಶೈವರಲ್ಲಿ ಮೃಗೇಂದ್ರ ಅಥವಾ ಅದರ ತದ್ಭವವಾಗಿ ಮುರುಗೇಂದ್ರ ಎಂ ದು ಹೆಸರಿಡುವುದು ವಾಡಿಕೆ.

ಎರಡಾದನಂತರದ ಶಿವಾನುಭವ ಪಟ್ಟಕ್ಕೆ ನೋಡ (ನೋಟದ) ಸಿದ್ಧಲಿಂಗ ಸ್ವಾಮಿಗಳೇ ಮೊದಲನೆಯವರು. ಇವರು ಲಿಂಗದಲ್ಲಿ ದೃಷ್ಟಿಯಿಟ್ಟು ನೋಡುವ ಯೋಗಾಭ್ಯಾಸವ ನ್ನು ನಡೆಸುತ್ತಿದ್ದುದರಿಂದ ಇವರಿಗೆ ಈ ಹೆಸರು ಬಂದಿತು.

ಈ ಇಬ್ಬರು ಅಧಿಕಾರಿ ಗಳೂ ಪ್ರೀತಿಯಿಂದಲೇ ನಡೆದುಕೊಂಡರು. ಇವರಲ್ಲಿ ನೋಡ (ನೋಟ ದ) ಸಿದ್ಧಲಿಂಗ ಸ್ವಾಮಿಗಳು ಮುರುಗೇಂದ್ರ ಸ್ವಾಮಿಗಳಿರುವಾಗಲೇ ಶಿವಾಧೀನರಾದರು ಮುಂದೆ ಮುರುಗೇಂದ್ರ ಸ್ವಾಮಿಗಳೇ ಆ ನೋಡ ಸಿದ್ಧಲಿಂಗ ಸ್ವಾಮಿಗಳಲ್ಲಿ ಮ ೦ (ಸ್ವಾಮಿತ್ವ ಪಡೆವುದಕ್ಕಾಗಿ ಕಲಿ ವವರು) ಆದ ಕುಮಾರ ಸ್ವಾಮಿಗಳನ್ನು ಶಿವಾನುಭಾವ ಪಟ್ಟದ ಸಿಂಹಾಸ ನದಲ್ಲಿ ಕೂಡಿಸಿದರು ಮತ್ತು ಮೆರವಣಿಗೆಮಾಡಿಸಿದರು[ನಿ. ವಂ. ರ. 1 ೬೭]

ಈ ಕುಮಾರ ಸ್ವಾಮಿಗಳ ಮೆರವಣಿಗೆಯವರೆಗೂ ನಡೆದ ಸಂಗತಿ ಗಳು ನಿರಂಜನ ವಂಶ ರತ್ನಾಕರ ಮೊದಲನೆಯ ಭಾಗದಲ್ಲಿ ವಿವರ

ವಾಗಿಯೂ ಎರಡನೆಯ ಭಾಗದಲ್ಲಿ ಸಂಗ್ರಹವಾಗಿಯೂ ಒಂದೇ ವಿಧವಾಗಿ ಬಂದಿರುವುದರಿಂದ ನಿಜವೆಂದು ತಿಳಿವುದಕ್ಕೆ ಏನೂ ಅನುಮಾನವಿಲ್ಲ. ಕಾಗದದ ಸುರುಳಿಗಳೊಳಗಿನ ಅಭಿಪ್ರಾಯ ಮತ್ತೆ ೧–೬ ಪುಸ್ತಕಗಳಲ್ಲಿ ಬರೆದ ಅಭಿಪ್ರಾಯ ಎಲ್ಲವೂ ಸರಿಗೂಡುತ್ತವೆ.

ಶ್ರೀ. ನಿ. ಜ ಮುರುಗೇಂದ್ರ ಸ್ವಾಮಿಗಳೂ ಕುಮಾರ ಸ್ವಾಮಿಗಳೂ ಚಿತ್ರದುರ್ಗದಲ್ಲಿ ಕೂಡಿ ಇದ್ದು ವಿಜಯ ದಶಮಿ ಮಹೋತ್ಸವದಲ್ಲಿ (ಸು. ಕ್ರಿ. ೧೭೦೦) ಸಮಾನ ಮರ್ಯಾದೆಯನ್ನು ಹೊಂದಿದಾಗ ಆ ಉತ್ಸವಕ್ಕೆ ಕೂಡಿದ ಈ ಶೂನ್ಯ ಸಿಂಹಾಸನ ಪೀಠದ ಆಶ್ರಯದಲ್ಲಿರುವ ಏಳುನೂರೆಪ್ಪತ್ತು ಬುಡಕಟ್ಟಿನ ವಿರಕ್ತ ಚರಮೂರ್ತಿಗಳಲ್ಲಿ ಕೆಂಪಿನ ಬುಡಕಟ್ಟಿನ ಸಂಗನ ಬಸವಪ್ಪನವರು ಸೋಮೆಕಟ್ಟೆ ಬುಡಕಟ್ಟಿನ ಚನ ಬಸವಪ್ಪನವರು ಗದ್ದಕಟ್ಟಿನ ಬುಡಕಟ್ಟಿನ ಗುರುಬಸವಪ್ಪನವರು ಗೊಳಿ ಕೊಂಡಯ್ಯನವರ ಬುಡಕಟ್ಟಿನ ರುದ್ರಪ್ಪನವರು ಅಯಕಟ್ಟಿನ ಬುಡಕಟ್ಟಿನ ಸಿದ್ಧಲಿಂಗಪ್ಪನವರು ಎಂಬೈವರು ಚರಮೂರ್ತಿಗಳು (ಕೆಂಪಿನ ಚನ್ನಬಸವಪ್ಪನವರು ಗದ್ದಕಟ್ಟಿನ ಸಂಗನ ಬಸವಪ್ಪನವರು ಆಯಕಟ್ಟಿನ ಗುರುಬಸವಪ್ಪನವರು ಗೊಳಿಕೊಂಡಯ್ಯಗಳ ರುದ್ರಪ್ಪನವರು ಸೋಮೆಕಟ್ಟೆ ಚನ್ನವೀರಪ್ಪನವರು ಇವರೈವರೆಂದು 'ಕ' ಪ್ರತಿ) "ಮುರುಗಾ ಸ್ವಾಮಿಗಳು ಕುಮಾರ ಸ್ವಾಮಿಗಳನ್ನು ತಮ್ಮ ಸಮಾನವಾಗಿ ಕೂಡಿಸಿಕೊಳ್ಳಬಾರದು ಅವರು ನಮ್ಮಂತೆ ಚರಮೂರ್ತಿಗಳಾದುದರಿಂದ ನಮ್ಮ ಜೊತೆಯಲ್ಲಿ ಕೂತುಕೊಳ್ಳಬೇಕು" ಎಂದು ವ್ಯಾಜ್ಯ ತೆಗೆದರು ಇದಕ್ಕೆ ಮುರುಗೇಂದ್ರ ಸ್ವಾಮಿಗಳು ಒಪ್ಪದೆ ಕೂಡಿದ ವೀರಶೈವ ಮಹಾಜನಂಗಳೂ ಒಪ್ಪದೆ ಚಿತ್ರದುರ್ಗದ ಬಿಚ್ಚುಗತ್ತಿ ಬರಮಣ್ಣನಾಯಕರೂ ಒಪ್ಪದೆ ಎಲ್ಲರೂ ಸೇರಿ ಆ ಐವರು ಚರಮೂರ್ತಿಗಳನ್ನು ಮಠದಿಂದ ಹೊರಗೆ ಹಾಕಿಸಿದರು. ಆಗ ಅವರು ಕ್ರಮವಾಗಿ ಕೆಂಪಿನ ಸಮಯ, ಸೋಮೆಕಟ್ಟೆ ಸಮಯ, ಗದ್ದಕಟ್ಟಿನ ಸಮಯ, ಗೊಳಿಕೊಂಡಯ್ಯಗಳ ಸಮಯ, ಆಯಕಟ್ಟಿನ ಸಮಯ ಎಂಬುದಾಗಿ ಭೇದಗಳನ್ನು ಮಾಡಿಕೊಂಡು ಸ್ವತಂತ್ರರಾದರು. ಇವರ ಸೂತ್ರಿಕರ ಮಠಗಳು ಕಲ್ಯಾಣಸೀಮೆ ಬಗ್ಗುಂಜಿ ಸೀಮೆ ಮೊದಲಾದವುಗಳಲ್ಲಿ ಇರುತ್ತವೆ.

೫. ಅನಂತರ ನಿ. ಜ. ಮುರುಗೇಂದ್ರ ಸ್ವಾಮಿಗಳೂ ಕುಮಾರ ಸ್ವಾಮಿಗಳೂ ಐಕಮತ್ಯದಿಂದ ಒಂದೇ ಕಡೆಯಲ್ಲಿ ಇರುತ್ತಿದ್ದರು. ಕುಮಾರಪ್ಪನವರು ಚಿತ್ರದುರ್ಗದಲ್ಲಿದ್ದರೆಂದು 'ಪಟ್ಟವಲ್ಲರಿ' ಎಂಬ ಪು

ಸ್ತಕವೂ ಹೇಳುತ್ತದೆ. ಮುರುಗೇಂದ್ರ ಸ್ವಾಮಿಗಳು ಕುಮಾರ ಸ್ವಾಮಿಗಳನ್ನು ಬೇರೆ ಕಡೆಗೆ ಮಠದ ಖರ್ಚಿನ ಬಗ್ಗೆ ಕಾಣಿಕೆಯನ್ನು ಎತ್ತಿಕೊಂಡು ಬರಲಿಕ್ಕೆ ಕಳುಹಿಸಿಕೊಟ್ಟು ತಾವು ಮಠದಲ್ಲಿ ಇದ್ದಾಗ ಅಂತಕಾಲವು ಸಮೀಪಿಸಿತೆಂದು ಯೋಚಿಸಿ ತಮ್ಮ ಬಳಿಯಲ್ಲಿದ್ದ ಖಾಸ ಚರಮೂರ್ತಿ ರುದ್ರದೇವರು ಎಂಬವರಿಗೆ ಇಮ್ಮಡಿ ಮುರುಗೇಂದ್ರ ಸ್ವಾಮಿಗಳಾದ ಗುರುಸಿದ್ಧ ಸ್ವಾಮಿಗಳು ಎಂಬ ಹೆಸರಿಟ್ಟು ತಮ್ಮ ಮುಂದಿನ ಅಧಿಕಾರಿಗಳನ್ನಾಗಿ ಮಾಡಿದರು. [ಪುಟ ೧೨] ಈ ಇಮ್ಮಡಿ ಗುರುಸಿದ್ಧ ಸ್ವಾಮಿಗಳ ವಿಷಯವು ಇಕಳೂರಿನಲ್ಲಿ ಸ್ವಾದಿ (ಸೋದೆ) ಸಂಸ್ಥಾನದ ದೊರೆಗಳಾದ ಸದಾಶಿವ ರಾಜರ ಭಕ್ತಿಯನ್ನು ಕೈಕೊಂಡು ಇರುತ್ತಿದ್ದ ಕುಮಾರ ಸ್ವಾಮಿಗಳವರಿಗೆ ತಿಳಿದಮೇಲೆ ದುರ್ಗದ ಸನ್ನಿಧಾನಕ್ಕೆ ಆಹೇರು ವಸ್ತ್ರಗಳನ್ನು ಕಳುಹಿಸಿದಬಳಿಕ ನಮ್ಮನ್ನು ಕರೆಸದೆ ಮುರುಗಾ ಸ್ವಾಮಿಗಳು ಮುಂದಿನ ಅಧಿಕಾರಿಗಳನ್ನು ಮಾಡಿದರು ಎಂಬ ಸಂಕೋಚವನ್ನು ತಾಳಿಕೊಂಡು ತಮ್ಮ ಸನ್ನಿಧಾನದಲ್ಲಿ ಇದ್ದ ಸಿದ್ದರಾಮಪ್ಪನವರಿಗೆ ಅವರು ಕೆಂಪಾದ ದೇಹವುಳ್ಳವರಾದುದರಿಂದ ಕೆಂಪಿನ ಸಿದ್ಧಬಸವ ಸ್ವಾಮಿಗಳು ಎಂಬ ಹೆಸರಿಟ್ಟು ಅವರಿಗೆ ತಮ್ಮ ಅಧಿಕಾರವನ್ನು ಕೊಟ್ಟು (ಶು. ಕ್ರಿ. ೧೭೯) ಶಿವಾಧೀನರಾದರು.

ಈ ಸಿದ್ಧಬಸವ ಸ್ವಾಮಿಗಳು ಸೋದೆಯ ಸದಾಶಿವ ರಾಜರಲ್ಲಿದ್ದ ಉಳುವೆ ಮಹಾಮನೆಯಿಂದ ತಂದ ಓಲೆಯ ಪುಸ್ತಕವನ್ನು ಓದಿದುದರಿಂದ ಅವರು ಸಂತುಷ್ಟರಾಗಿ ತಮ್ಮ ಊರಿನಲ್ಲಿ (ಸೋದೆಯಲ್ಲಿ) ಮಠವನ್ನು ಮಾಡಿಸಿ ಕೊಟ್ಟುದಲ್ಲದೆ ತಾವು ಕೆತ್ತಿಸಿದ ಸಹಸ್ರ ಲಿಂಗಗಳಿರುವ ಸ್ವಾದಿಹೊಳೆಗೆ ಇವರಿಗೆ ಬಿನ್ನಹ ಮಾಡಿ ಕರೆದುಕೊಂಡು ಹೋಗಿ ಪ್ರತಿಷ್ಠಾಪನೆಮಾಡಿಸಿ ಗಣಾರಾಧನೆ ಮಾಡಿ ಭಕ್ತಿತೋರಿಸಲು ಆಸದಾಶಿವ ರಾಜರ ಭಕ್ತಿಯಲ್ಲಿ ಸ್ವಾದಿಯಲ್ಲಿಯೂ ಇಕಳೂರಲ್ಲಿಯೂ ಇರುತ್ತಾ ಇದ್ದರು.

ಈ ಕುಮಾರ ಸ್ವಾಮಿಗಳು ಯೋಚಿಸಿದಂತೆಯೇ ನಿ. ಜ. ಮುರುಗೇಂದ್ರ (ಮುರುಗಾ ಶಾಂತವೀರ) ಸ್ವಾಮಿಗಳಲ್ಲಿ ಖಾಸಾ ಚರಮೂರ್ತಿಗಳಾದ ಚೀಲಾಳ ಬುಡಕಟ್ಟಿನ ತೋಟಪ್ಪನವರು ತಮಗೆ ತಿಳಿಸದೆ ರುದ್ರಪ್ಪನವರಿಗೆ ಗುರುಸಿದ್ಧ ಸ್ವಾಮಿಗಳು ೨ನೆಯ ಶಿಖಾಪಟ್ಟವನ್ನು ಕೊಟ್ಟುದು ಸರಿಯುಲ್ಲವೆಂದು ಯೋಚಿಸಿ ವ್ಯಾಜ್ಯ ತೆಗೆಯಲು ಬರಮಪ್ಪನಾಯಕನು ಅವರನ್ನು ಚಿತ್ರದುರ್ಗದ ಮಠದಿಂದ ಹೊರಗೆಹಾಕಿಸಿದನು. ಹೀಗೆ ಸಮಯಗಳು ಹುಟ್ಟಲಿಕ್ಕೆ ಅನೈಕಮತ್ಯವೇ ಕಾರಣವಾಯಿತು.

ಮೇಲೆ ರುದ್ರಪ್ಪನವರಿಗೆ (ಗುರುಸಿದ್ಧ ಸ್ವಾಮಿಗಳಿಗೆ) ಹೀಗೆ ಇರುವುದರ ಬದಲಾಗಿ ಗುರುಸಿದ್ಧ ಸ್ವಾಮಿಗಳು ಎಂದು ಮುದ್ರಣವಾಗಿದೆ.

ಒಂಬನೆಯ ಪರಂಪರಾವೃಕ್ಷದ ವಿಷಯದಲ್ಲಿ ಕೆಲವು ಕಡೆ ಭಿನ್ನಾಭಿಪ್ರಾಯಗಳಿರುವುದರಿಂದ ಆ ಸಂಬಂಧದ ವಿಮರ್ಶೆಯು ಈ ರೀತಿ ಇದೆ :-

ಪಟ್ಟವಲ್ಲರಿ.

ಚಿತ್ರದುರ್ಗದ ಮುರುಗೇಂದ್ರ ಸ್ವಾಮಿಗಳವರ ಪರಂಪರೆಯು ತೋರಿಸುವ 'ಪಟ್ಟವಲ್ಲರಿ' ಎಂಬ ಒಂದು ಪುಸ್ತಕವು ಮುದ್ರಣವಾಗಿದೆ. ಇದರಲ್ಲಿ ನಿ. ಜ. ಕಲ್ಯಾಣದ ಚನ್ನ ಬಸವೇಶ್ವರರ ತರುವಾಯ ೨ನೇಯ ಶೂನ್ಯ ಸಿಂಹಾಸನದ ಪಟ್ಟದವರೇ ತೋಂಟದ ಸಿದ್ಧಲಿಂಗ ಸ್ವಾಮಿಗಳೆಂದು ಬರೆಯಲ್ಪಟ್ಟಿದೆ. ಮುಂದೆ ಯರಗಂಬಳಿ ಸ್ವಾಮಿಗಳು ಪಟ್ಟಕ್ಕೆ ಬರುವರೆಂದು ಚನ್ನಬಸವೇಶ್ವರರು ಅಪ್ಪಣೆ ಕೊಟ್ಟದ್ದರಿಂದಲೂ ತೋಂಟದ ಸಿದ್ಧಲಿಂಗ ಸ್ವಾಮಿಗಳೇ ಯರಗಂಬಳಿ ಸಿದ್ಧೇಶ್ವರರೆಂಬ ಹೆಸರುಳ್ಳವರು ಆದುದರಿಂದಲೂ ಇವರನ್ನು ೨ನೆಯ ಪಟ್ಟದವರೆಂದು ಪಟ್ಟವಲ್ಲರಿಕಾರರು ತಿಳಿದಿರುತ್ತಾರೆ. ಈ ವಿಷಯಕ್ಕೆ ಆಧಾರವು ಎಲ್ಲಿಯೂ ಕಂಡು ಬರುವುದಿಲ್ಲ. ಮತ್ತು ನಿ. ಜ. ತೋಂಟದ ಸಿದ್ಧಲಿಂಗ ಸ್ವಾಮಿಗಳು ಅನಾದಿಗಣನಾಥರ ಮೊದಲುಗೊಂಡು ತಮ್ಮ ಪರಂಪರೆಯನ್ನು ಹೇಳಿಕೊಂಡು ಬಂದಿರುತ್ತಾರೆ (ಸಿದ್ಧೇಶ್ವರವಚನ)

ಈ ಅನಾದಿ ಗಣನಾಥರು ಮೈಸೂರು ಜಿಲ್ಲೆಯ ಹರದನಹಳ್ಳಿಯಲ್ಲಿ ಇದ್ದವರು. ಈ ಅನಾದಿ ಗಣನಾಥರ ಮುಂದಿನ ಪರಂಪರೆಯವರೊಬ್ಬರು [೧೧. ನಿ. ಜ. ತಿಪ್ಪೆರುದ್ರಮುನಿ ಸ್ವಾಮಿಗಳು] ವಿಜಯನಗರದ ಪ್ರೌಢದೇವೇಂದ್ರನಿಂದ ಸನ್ಮಾನಿತರಾದಂತೆ (ಪುಟ ೧೨೯) ಹೇಳಲ್ಪಟ್ಟಿರುವುದರಿಂದಲೂ ಮತ್ತು ಈ ಪರಂಪರೆಯ ಅನೇಕ ಸ್ವಾಮಿಗಳವರು ದೇಶಸಂಚಾರ ಮಾಡುತ್ತ ಶ್ರೀಶೈಲ, ಕಲ್ಯಾಣ, ತಿರುಣಾಮಲೆ, ಗೋವೆ ಮೊದಲಾದ ಕಡೆಗಳಲ್ಲಿ ಅನೇಕ ಕಾಲ ವಾಸಿಸಿ ವೀರಶೈವವನ್ನು ಉದ್ಧರಿಸಿದರೆಂದು ಹೇಳಲ್ಪಟ್ಟಿರುವುದರಿಂದಲೂ ಶೂನ್ಯ ಸಿಂಹಾಸನದ ಅಧಿಕಾರವು ಹರದನ ಹಳ್ಳಿಯಲ್ಲಿ ಇದ್ದ ಸ್ವಾಮಿಗಳವರಿಗೆ ನಿ. ಜ. ಸಿದ್ಧರಾಮೇಶ್ವರರ ತರುವಾಯ ಇತ್ತೆಂದು ನಂಬಲನುಮಾನವೇನೂ ಇಲ್ಲ. ಇವರಲ್ಲಿ ಸಿಕ್ಷಾ (ಶಿಕ್ಷಾ) ಇಲ್ಲಿಲ್ಲವಾದುದರಿಂದ ಇವರು ಸ್ವಾಮಿಗಳಲ್ಲವೆಂದು ಹೇಳುವುದಾದರೆ ನಿ ಜ. ತೋಂಟದ ಸಿದ್ಧೇಶ್ವರ ಸ್ವಾಮಿಗಳವರಲ್ಲಿಯೂ ಅದು

ಇರಲಿಲ್ಲವೆಂದು ವ್ಯಕ್ತವಾಗಿ ಇರುವುದರಿಂದಲೂ ಅವರನ್ನು ಸ್ವಾಮಿಗಳೆಂದು ಒಪ್ಪಿಕೊಂಡಮೇಲೆ ಅವರೇ ಹರದನ ಹಳ್ಳಿಯ ಪರಂಪರೆಯನ್ನು ಒಪ್ಪಿಕೊಂಡಿರುವುದರಿಂದಲೂ ಅನಾದಿ ಗಣನಾಥರಿಂದ ನಡೆದುಬಂದ ಆ ಪರಂಪರೆಯನ್ನು ಒಪ್ಪಲೇ ಬೇಕಾಗುತ್ತದೆ. ಸಿದ್ಧರಾಮೇಶ್ವರರ ಕಾಲವು (ಸು ಕ್ರಿ ೧೧೭೦) ತೋಂಟದ ಸಿದ್ಧೇಶ್ವರ ಸ್ವಾಮಿಗಳವರ ಕಾಲವು (ಸು ಕ್ರಿ ೧೪೭೦) ಆಗುತ್ತದೆ. ಇಷ್ಟು ದೀರ್ಘಕಾಲ (ಸುಮಾರು ೩೦೦ ವರುಷ) ಮಧ್ಯದ ಶೂನ್ಯ ಸಿಂಹಾಸನಾಧಿಕಾರಿಗಳು ತಮ್ಮ ಅಧಿಕಾರವನ್ನು ನಡಸದೆ ಇದ್ದರೆ ಸಮಾಜದಲ್ಲಿ ಬಿಗಿಯೇ ಇಲ್ಲದಂತಾಗುತ್ತಿತ್ತು ಇಂತಹ ಸಂಭವವನ್ನು ಸಮಾಜದವರು ತಂದುಕೊಂಡಿಲ್ಲ ಆದರೆ ನಿ. ಜ. ತೋಂಟದ ಸಿದ್ಧೇಶ್ವರ ಸ್ವಾಮಿಗಳ ಕಾಲದಿಂದೀಚೆಗೆ ಕಟ್ಟಿಗೆ ಹಳ್ಳಿ ಸ್ವಾಮಿಗಳವರವಿಗೂ ಆದ ಸ್ವಾಮಿಗಳ ಹೆಸರುಗಳು ಈ 'ನಿರಂಜನವಂಶ ರತ್ನಾಕರ'ಕ್ಕೂ 'ಪಟ್ಟವಲ್ಲರಿ'ಗೂ ಸರಿ ಹೋಲುತ್ತವೆ.

'ಗ' ಪ್ರತಿಯಲ್ಲಿ ಜಡೆಯ ಸಂಸ್ಥಾನ ಮಠದ ಸ್ವಾಮಿಗಳ ಪರಂಪರೆಯನ್ನು ಹೇಳಿರುವುದರಲ್ಲಿ ನಿ. ಜ ಚನ್ನಬಸವೇಶ್ವರರ ತರುವಾಯ ಗೋಸಲ ಯತೀಶ್ವರ (ಎಂದರೆ ೧೫ ನೆಯ ಗೋಸಲ ಸಿದ್ಧೇಶ್ವರ) ರನ್ನೂ ಅವರ ಮುಂದಿನವರನ್ನೂ ಹೇಳಿದೆ (ಅವರ ಕಾಲ ಸುಮಾರು ಕ್ರಿ ೧೪೬೦) ಆದುದರಿಂದ ಇದೂ ಆಧಾರವಿಲ್ಲದ ಅಂಶವೇ ಆಗಿದೆ.

ಹೀಗಿದ್ದಾಗ್ಯೂ ಒಂದೊಂದರಲ್ಲಿಯೂ ಇರುವ ನಿಜಾಂಶಗಳನ್ನೇ ಗ್ರಹಿಸಿಕೊಂಡು ಶೂನ್ಯಪೀಠದ ಪರಂಪರೆಯ ಚರಿತ್ರೆಯನ್ನು ಈಗ ಗೊತ್ತು ಮಾಡಿದುದಾಗಿದೆ.

ಶ್ರೀ ನಿ. ಜ. ತೋಂಟದ ಸಿದ್ಧಲಿಂಗ ಸ್ವಾಮಿಗಳ ಮೊದಲುಗೊಂಡು ಕಟ್ಟಿಗೆಹಳ್ಳಿ ಸಿದ್ಧವೀರ ಸ್ವಾಮಿಗಳವರ ವರೆಗಿನ ಪರಂಪರೆಯುವೃಕ್ಷ (೨ನೆಯದು) (ವಂಶ ವೃಕ್ಷ ೨) ಈ ಹೊತ್ತಗೆಯ ಕಡೆಯ ಭಾಗದಲ್ಲಿ ಕೊಡಲ್ಪಟ್ಟಿದೆ. ಇದರ ವಿಷಯದಲ್ಲಿಯೂ ಬಿನ್ನಾಭಿಪ್ರಾಯವುಳ್ಳ ಲೇಖನಗಳು ಇರುವುದರಿಂದ ಅವುಗಳ ವಿಮರ್ಶೆಯು ಈ ರೀತಿಇದೆ:-

ನಿರಂಜನ ವಂಶ

ಗದಗಿನ ತೋಂಟದಾರ್ಯ ಸ್ವಾಮಿಗಳವರ (ಚಿಲಾಳ ಸಮಯದ) ವಂಶಪರಂಪರೆಯನೊಳಗೊಂಡು 'ನಿರಂಜನ ವಂಶ ದರ್ಪಣ' ಎಂಬ ಒಂದು ಪುಸ್ತಕವು ಮುದ್ರಣ ಮಾಡಲ್ಪಟ್ಟಿದೆ. ಇದರಲ್ಲಿ ಪ್ರಸಿದ್ಧರೂ

ಮಹಾನುಭಾವಿಗಳೂ ಆದ ನಿ. ಜ. ತೋಂಟದ ಸಿದ್ಧೇಶ್ವರ (ಸಿದ್ಧ ಲಿಂಗ) ಸ್ವಾಮಿಗಳವರ ಕಾಲದಿಂದ ಮುಂದೆ ನಿರಕ್ಷರದ ಬೋಳಬಸವ ಸ್ವಾಮಿಗಳು ಅವರ ತರುವಾಯ ಗೂಳೂರು ಸಿದ್ಧವೀರ ಸ್ವಾಮಿಗಳು [ಇವರಿಗೆ ಗೂಳೂರು ಗುರುಸಿದ್ಧ ಸ್ವಾಮಿಗಳು ಎಂದು ಒಂದು ಕಡೆ ಬರಹವಿದೆ] ಅವರ ತರುವಾಯ ಉದ್ದನೆಯ ಸ್ವಾಮಿಗಳು ಅವರ ನಂತರ ಹರಿಹರ ಸ್ವಾಮಿಗಳು ಅವರ ನಂತರ ಭಿಕ್ಷುಕದ ಬಸವಲಿಂಗ ಸ್ವಾಮಿಗಳು ಅವರ ನಂತರ ಕಟ್ಟಿಗೆ ಹಳ್ಳಿ ರಾಚೋಟಿ ಸ್ವಾಮಿಗಳು ಹೀಗೆ ಪರಂಪರೆಯು ಬರೆಯಲ್ಪಟ್ಟಿದೆ. ವೀರಶೈವರು ಗಗನ ಶಬ್ದವನ್ನು ಕನ್ನಡಿಸಬೇಕಾದರೆ ಉದ್ದ ಎಂದು ಉಪಯೋಗಿಸುವುದರಿಂದ ಉದ್ದನೆಯ ಸ್ವಾಮಿಗಳು ಎಂಬಹೆಸರು ಗಗನದಾಚಾರ್ಯರು ಎಂಬ ಹೆಸರಿಗೆ ಪರ್ಯಾಯವಾಗಿದೆ (ಇದರಂತೆ ಸಂಸ್ಕೃತದ ಅಪ್ಪುತೇಶ್ವರ ಎಂಬ ಹೆಸರಿಗೆ ಕನ್ನಡದಲ್ಲಿ ಸಪ್ಪೆಯಾರ್ಯರು ಎಂದು ಕರೆವುದು ವೀರಶೈವರ ರೂಢಿ. ಕೇವಲ ಕನ್ನಡ ಪದಗಳನ್ನು ಇವರು ಬಹಳವಾಗಿ ಮೆಚ್ಚುವರು) ಇವನ್ನು ನಿರಂಜನವಂಶ ರತ್ನಾಕರದ ಪರಂಪರೆಯ ಜೊತೆಗೆ ಹೋಲಿಸಿದರೆ ತೋಂಟದ ಸಿದ್ಧೇಶ್ವರ ಸ್ವಾಮಿಗಳತರುವಾಯ ೩ನೆಯವರಾದ ಗುಮ್ಮಳಾಪುರದ ಸಿದ್ಧಲಿಂಗ ಸ್ವಾಮಿಗಳ ಹೆಸರು ತಪ್ಪಿ ಆ ೩ನೆಯ ಸ್ಥಾನದಲ್ಲಿ ಗೂಳೂರು ಸಿದ್ಧವೀರ ಸ್ವಾಮಿಗಳವರೂ ೪ನೆಯ ಸ್ಥಾನದಲ್ಲಿ ೫ನೆಯವರಾದ ಗಗನದಾರ್ಯರ [ಉದ್ದನೆಯ] ಸ್ವಾಮಿಗಳವರೂ ೫ನೆಯ ಸ್ಥಾನದಲ್ಲಿ ಹರಿಹರ ಸ್ವಾಮಿಗಳೂ ೬ನೆಯವರಾಗಿ ಭಿಕ್ಷುಕದ ಬಸವಲಿಂಗ ಸ್ವಾಮಿಗಳೂ ೭ನೆಯವರಾಗಿ ಕಟ್ಟಿಗೆಹಳ್ಳಿ ರಾಚೋಟಿಸ್ವಾಮಿಗಳವರೂ ಬರುತ್ತಾರೆ. ವಿರಕ್ತ ತೋಂಟದಾರ್ಯರ ಸಿದ್ಧೇಶ್ವರ ಪುರಾಣದಲ್ಲಿ ಬೋಳಬಸವೇಶ್ವರನ ಕರುಣದಿಂ ಷಟ್ಸ್ಥಲ ಬ್ರಹ್ಮವಂ ತಿಳಿದ ಗೂಳೂರು ಸಿದ್ಧವೀರೇಶನ ದಯಾಪಾತ್ರನು ತಾನು ಎಂದು ಗ್ರಂಥಕರ್ತರು ಹೇಳಿಕೊಂಡಿರುವುದರಿಂದ ಅದನ್ನು ಅನುಸರಿಸಿ ಈ ನಿರಂಜನ ವಂಶ ದರ್ಪಣವನ್ನು ಬರೆದಂತೆ ತೋರುತ್ತದೆ. ಬೋಳಬಸವೇಶ್ವರನಿಂದ ಕರುಣವಂ (ಅನುಗ್ರಹವನ್ನು) ಪಡೆದವರು ಗೂಳೂರು ಸಿದ್ಧವೀರ ಸ್ವಾಮಿಗಳಾದಾಗ್ಯೂ ಅವರ ಅಧಿಕಾರವನ್ನು ಪಡೆದವರು ಗುಮ್ಮಳಾಪುರದ ಸಿದ್ಧಲಿಂಗ ಸ್ವಾಮಿಗಳು ಎಂದು ತಿಳಿವುದಕ್ಕೆ ಬಹಳ ಪ್ರಮಾಣಗಳಿವೆ. ನಿ. ಜ. ತೋಂಟದ ಸಿದ್ಧೇಶ್ವರ ಸ್ವಾಮಿಗಳವರಿಂದ ಬೋಳಬಸವೇಶ್ವರರು ಮತ್ತು ಗುಮ್ಮಳಾಪುರದ ಸಿದ್ಧಲಿಂಗ ಸ್ವಾಮಿ

ಗಳು ಇಬ್ಬರೂ ಗುರುಕರುಣವನ್ನು ಪಡೆದಿದ್ದಾಗ್ಯೂ ಬೋಳಬಸವ ಸ್ವಾಮಿಗಳು ಶೂನ್ಯಸಿಂಹಾಸನದ ಅಧಿಕಾರಕ್ಕೆ ಬಂದ ಮೇಲೆ ಗುಮ್ಮಳಾಪುರದ ಸಿದ್ಧಲಿಂಗ ಸ್ವಾಮಿಗಳು ಅಧಿಕಾರಿಗಳಾದರೆಂದು ಅನೇಕ ಕಡೆಗಳಲ್ಲಿ (ಚಿತ್ರದುರ್ಗದ ಪಟ್ಟವಲ್ಲರಿ ಮೊದಲಾದವುಗಳಲ್ಲಿ) ಹೇಳಲ್ಪಟ್ಟಿರುವುದರಿಂದ ೩ನೆಯವರು ಗುಮ್ಮಳಾಪುರದ ಸಿದ್ಧಲಿಂಗ ಸ್ವಾಮಿಗಳೆಂದೂ ೪ನೆಯವರು ಗೂಳೂರು ಸಿದ್ಧವೀರೇಶ್ವರರೆಂದೂ ೫ನೆಯವರು ಗಗನದಾರ್ಯ ಸ್ವಾಮಿಗಳೆಂದೂ ನಿರ್ಣಯಿಸಬಹುದಾಗಿದೆ. ಈ 'ಗೂಳೂರು' 'ಗುಮ್ಮಳಾಪುರ' ಈ ಭೇದಗಳಲ್ಲಿ ವಿಶೇಷವೇನೂ ತೋರುವುದಿಲ್ಲ ಏಕಂದರೆ ಒಬ್ಬರು ಗೂಳೂರಲ್ಲಿ ಇದ್ದವರು. ಗುಮ್ಮಳಾಪುರದಲ್ಲಿ ಇವರ ಗದ್ದುಗೆಯಾಗಿದೆ ಇನ್ನೊಬ್ಬರು ಗುಮ್ಮಳಾಪುರದಲ್ಲಿ ಇದ್ದವರು ಗೂಳೂರಲ್ಲಿ ಇವರ ಸಮಾಧಿ ಇವೆ ಆದದರಿಂದ ಯಾರಿಗೆ ಗೂಳೂರು ಎನ್ನಬೇಕೋ ಯಾರಿಗೆ ಗುಮ್ಮಳಾಪುರ ಎನ್ನಬೇಕೋ ನಿರ್ಧಾರವೇ ಇಲ್ಲದಂತೆ ಬರಹಗಳಿವೆ. ೫ನೆಯುವರೆಂದು ಗದಗಿನ ನಿರಂಜನ ವಂಶದಲ್ಲಿ ಹೇಳಲ್ಪಟ್ಟ ಹರಿಹರ ಸ್ವಾಮಿಗಳಹೆಸರು ಯಾವ ಕಡೆಯಲ್ಲಿಯೂ ಬಂದಿಲ್ಲವಾದುದರಿಂದಲೂ ಮತ್ತು ನಿರಂಜನ ವಂಶ ದರ್ಪಣದಲ್ಲಿ ಈ ಹೆಸರನ್ನು ನಮೂದಿಸಲು ಯಾವ ಆಧಾರವಿದೆ ಎಂಬುದನ್ನು ತೋರಿಸಿಲ್ಲವಾದುದರಿಂದಲೂ ಈ ಹರಿಹರ ಸ್ವಾಮಿಗಳು ಶೂನ್ಯಪೀಠದ ಅಧಿಕಾರದ ಪರಂಪರೆಯುವರೆಂದು ನಂಬಲಾಗುವುದಿಲ್ಲ ಇವರ ಮುಂದಿನ ಭಿಕ್ಷುಕದ ಬಸವಲಿಂಗ ಸ್ವಾಮಿಗಳ ಹೆಸರೂ ನಿರಂಜನವಂಶ ದರ್ಪಣವಲ್ಲಲ್ಲದೆ ಬೇರೆ ಯಾವ ಕಡೆಗೂ ದೊರಕುವುದಿಲ್ಲ. ಕಟ್ಟಿಗೆಹಳ್ಳಿ ಸ್ವಾಮಿಗಳ ಸಮಾಧಿ ಇದ್ದ ತಿಳವಳ್ಳಿಯಲ್ಲಿ ಈ ಉಭಯರೂ ಇದ್ದಿರಬಹುದೆಂದು ತೋರುತ್ತದೆ ಹಾಗಿದ್ದರೆ ಕಟ್ಟಿಗೆಹಳ್ಳಿಸ್ವಾಮಿಗಳ ಕಾಲದಿಂದ ಮುಂದೆ ಶೂನ್ಯ ಪೀಠದ ಅಧಿಕಾರವು ಶಿವಾನುಭವ ಪಟ್ಟದ ನೋಟದಸಿದ್ಧಲಿಂಗ ಸ್ವಾಮಿಗಳವರಿಗೆ ಹೋಗಿರುವುದರಿಂದ ಈ ಉಭಯರು ಆ ಅಧಿಕಾರದ ಪರಂಪರೆಯುವರಲ್ಲವೆಂದು ತಿಳಿಯಬಹುದಾಗಿದೆ. ಸಿದ್ಧನಂಜೇಶನು ತನ್ನ ರಾಘವಾಂಕ ಚರಿತ್ರೆಯಲ್ಲಿ ನೋಟದ ಸಿದ್ಧಲಿಂಗ ಸ್ವಾಮಿಗಳವರ ಶಿಷ್ಯರಾದ ಶಿವಲಿಂಗ ಸ್ವಾಮಿಗಳಿಗೆ ಚರಚಕ್ರವರ್ತಿ ಶಿವಲಿಂಗ ದೇವಾರ್ಯ ಎಂದು ಸ್ತೋತ್ರ ಮಾಡಿರುವುದೂ ಈ ವಿಷಯಕ್ಕೆ ಆಧಾರವಾಗಿದೆ. ಹೀಗೆ ಶಿವಾನುಭವ ಪಟ್ಟವು ನೋಟದ ಸಿದ್ಧಲಿಂಗ ಸ್ವಾಮಿಗಳ ಪರಂಪರೆಯವರೆಗೆ ಬಂದಿರುವುದು ವ್ಯಕ್ತವಾಗುತ್ತದೆ.

ಸಮಯಗಳ ಬೆಳವಣಿಗೆ.

ಕಟ್ಟಿಗೆಹಳ್ಳಿ ಸ್ವಾಮಿಗಳಿಂದೀಚೆಗೆ ಈ ಶೂನ್ಯಪೀಠದ ಪರಂಪರೆಯು ಶಿಖಾಪಟ್ಟ ಶಿವಾನುಭವಪಟ್ಟವೆಂದು ಕವಲೊಡೆದಿರುವುದರಿಂದ ಚಿತ್ರದುರ್ಗದ ಸಂಸ್ಥಾನ ಬೃಹನ್ಮಠ (ಶಿಖಾಪಟ್ಟ)ದ ಪರಂಪರೆಯನ್ನು ೧ನೆಯ ವೃಕ್ಷವಾಗಿಯೂ ಸೊರಬದತಾಲ್ಲೂಕು ಜಡೆಯ ಸಂಸ್ಥಾನಮಠ (ಶಿವಾನುಭವ ಪಟ್ಟ) ದ ಪರಂಪರೆಯನ್ನು ೨ನೆಯ ವೃಕ್ಷವಾಗಿಯೂ ತೋರಿಸಿ ಇರುತ್ತದೆ ಇವರಲ್ಲಿ ಅನೈಕಮತ್ಯತೆಯುಂಟಾಗಿ ಬಹಳ ಗಲಭೆಯಾಗಿದೆ. ಇದರ ನಿಜವಾದ ಕಾರಣವೇನು ಎಂಬುದನ್ನು ಸಮಾಜದವರು ತಿಳಿಯಬೇಕಾದುದು ಅವಶ್ಯಕವಾಗಿದೆ. ಕಟ್ಟಿಗೆಹಳ್ಳಿ ಸ್ವಾಮಿಗಳವರ ತರುವಾಯದಲ್ಲಿ ಶಿಖಾಪಟ್ಟದ ಮುರುಗೇಂದ್ರ ಸ್ವಾಮಿಗಳೂ ಶಿವಾನುಭವ ಪಟ್ಟದ ನೋಡಸಿದ್ಧಲಿಂಗ ಸ್ವಾಮಿಗಳೂ ಇವರ ಎರಡನೆಯ ಪಟ್ಟದವರಾದ ಕುಮಾರಸ್ವಾಮಿಗಳೂ ಐಕಮತ್ಯದಿಂದ ಒಂದೇ ಕಡೆಯಲ್ಲಿ ಇರುತ್ತಿದ್ದರೆಂದು ಈ ಮೊದಲು ಗೊತ್ತಾಗಿರುವುದಷ್ಟೆ! ಕಟ್ಟಿಗೆಹಳ್ಳಿ ಸ್ವಾಮಿಗಳವರ ಕಾಲದಲ್ಲಿ ಮೈಸೂರ ದೇಶದ ಹಾಸನ ಡಿ. ಹಳೇಬೀಡಿನಲ್ಲಿದ್ದ ಒಬ್ಬ ಗುರುವರ್ಗದ ಮಠಸ್ಥನಾದ ಕಲ್ಯಾಣಯ್ಯನೆಂಬಾತನು ಹೊಲತಿಯ ಸಂಗಮಾಡಿದನೆಂದ ಫಿರ್ಯಾದು ಬಂದು ಸದರಿಯವನ ತಪ್ಪು ನಿಜವೆಂದು ಗೊತ್ತಾಗಿ ಆತನನ್ನು ಸಮಾಜದಿಂದ ಬಹಿಷ್ಕರಿಸಿದ್ದರು. ಆತನು ಸತ್ತು ಹೋಗಿ ಆತನ ಮಗ ಚನ್ನವೀರಯ್ಯ ಇದ್ದಾಗ ಆ ಮಗನನ್ನು ಬಳಕೆಯೊಳಗೆ ತೆಗೆದುಕೊಳ್ಳಬೇಕೆಂದು ಇಮ್ಮಡಿ ಮುರಿಗೇಂದ್ರಸ್ವಾಮಿಗಳಾದ ಗುರುಸಿದ್ಧಸ್ವಾಮಿಗಳಲ್ಲಿ ತಪ್ಪುಗಾರನ ಕಡೆಯವರು ಬಂದು ಹೇಳಿಕೊಂಡದ್ದರಿಂದ ಕರುಣ ಹುಟ್ಟಿ ಸದರೀ ಗುರುಸಿದ್ಧ ಸ್ವಾಮಿಗಳು ಆತನನ್ನು ಶುದ್ಧಮಾಡಿ ಸಮಾಜದೊಳಗೆ ತೆಗೆದುಕೊಂಡರು. ಹಿಂದೆ ಕಟ್ಟಿಗೆ ಹಳ್ಳಿ ಸ್ವಾಮಿಗಳು ಮತ್ತು ಮುರುಗೇಂದ್ರ ಸ್ವಾಮಿಗಳು ಬಹಿಷ್ಕರಿಸಿದವನನ್ನು ಸಮಾಜದೊಳಗೆ ತೆಗೆದುಕೊಂಡದ್ದು ಸಮನಲ್ಲವೆಂದೂ ಆತನು ಗುರುಸಿದ್ಧಸ್ವಾಮಿಗಳ ಸಂಬಂಧಿಕನಾದುದರಿಂದ ಹೀಗೆ ತೆಗೆದುಕೊಂಡರೆಂದೂ ಕುಮಾರ ಸ್ವಾಮಿಗಳ ಮುಂದಿನ ಶಿವಾನುಭವ ಪಟ್ಟದವರಾದ (ಮೂರನೆಯವರಾದ)ಕೆಂಪಿನ ಸಿದ್ಧಬಸವಸ್ವಾಮಿಗಳು ದೋಷಾರೋಪಣೆ ಮಾಡಿ ಗುರುಸಿದ್ಧಸ್ವಾಮಿಗಳ ಜೊತೆಯಲ್ಲಿ ಕೂಡಿ ಇರುವುದನ್ನು ಬಿಟ್ಟುಬಿಟ್ಟರು. ಗುರುಸಿದ್ಧ ಸ್ವಾಮಿಗಳಾದರೂ ತಾವು ಆ ಚನ್ನವೀರಯ್ಯನನ್ನು ಸಮಾಜದೊಳಗೆ ತೆಗೆದುಕೊಂಡುದು ಯುಕ್ತವಾದ ಕಾರ್ಯವೆಂತಲೂ ಕೆಂ

ಪಿನ ಸಿದ್ಧಬಸವ ಸ್ವಾಮಿಗಳನ್ನು ಏನಾದರೂ ಉಪಾಯದಿಂದ ತಮ್ಮ ಜೊತೆಯಲ್ಲಿ ಕೂಡಿ ಇರುವಂತೆ ಮಾಡಬೇಕೆಂತಲೂ ಬಹಳವಾಗಿ ಪ್ರಯತ್ನಪಟ್ಟರು. ನಯದಿಂದ ಅದು ಸಾಧ್ಯವಾಗದೆ ಹೋಗಲು ಭಯದಿಂದಲಾದರೂ ಅವರನ್ನು ಜೊತೆಗೆ ಸೇರಿಸಿಕೊಳ್ಳಬೇಕೆಂದು ಪ್ರಯತ್ನಿಸಿದರು. ಇದು ಏತಕ್ಕೆ? ವೀರಶೈವರ ನಡೆಯು ಭಕ್ತಿಪ್ರಧಾನವಾದುದೆಂದು ಎಲ್ಲರಿಗೂ ಗೊತ್ತೇ ಇದೆ ತಮ್ಮ ಹಿರಿಯರಾದ ಮುರುಗೇಂದ್ರ ಸ್ವಾಮಿಗಳು ಕುಮಾರಸ್ವಾಮಿಗಳು ಒಬ್ಬರಿಗೊಬ್ಬರು ತೀರ್ಥಪ್ರಸಾದಗಳ ಸಮರಸಾಚರಣೆಯಲ್ಲಿದ್ದು ಭಕ್ತಿ ಪ್ರಾಧಾನ್ಯವಾಗಿ ನಡೆದುಕೊಂಡು ಇರುವಲ್ಲಿ ತಮ್ಮ ಕಾಲಕ್ಕೆ ಆ ಭಕ್ತಿಯ ಆಚರಣೆಯು ತಪ್ಪಬಾರದು, ಮತ್ತು ಪೂರ್ವಿಕರಂತೆ ಆ ಶಿವಾನುಭವ ಪಟ್ಟದವರಿಗೆ ತಕ್ಕ ಗೌರವವನ್ನು ಕೊಡಬೇಕು, ಎಂಬುದಕ್ಕಾಗಿಯೇ. (ಸಮರಸಾಚರಣೆಗಾಗಿಯೇ ಹೀಗೆ ಪ್ರಯತ್ನಪಟ್ಟರೆಂದು ಬರೆದಿರುವ ಪೂರ್ವಿಕರ ಲೇಖನವನ್ನು ನೋಡಿದ್ದೇನೆ. ಪ್ರಕಾಶಕ.)

ಸೌಮ್ಯದಿಂದ ಇದು ಸಾಧಿಸದೆ ಇದ್ದುದರಿಂದ ಕೆಂಪಿನ ಸಿದ್ಧಬಸವ ಸ್ವಾಮಿಗಳು ಇದ್ದ ಸ್ವಾದಿ ದೇಶದ ರಾಜನು ಗುರುಸಿದ್ಧಸ್ವಾಮಿಗಳಲ್ಲಿ ಅನುಗ್ರಹದೀಕ್ಷೆಯನ್ನು ಪಡೆದವನಾದುದರಿಂದ ಆತನ ಮುಖಾಂತರವಾಗಿ ಕೆಂಪಿನ ಸಿದ್ಧಬಸವ ಸ್ವಾಮಿಗಳನ್ನು ಹೆದರಿಸಿ ತಮ್ಮಲ್ಲಿ ಕೂಡಿಸಿಕೊಳ್ಳಬೇಕೆಂದು ಕೊನೆಗೆ ಯೋಚಿಸಿದರು. ಅದರಂತೆ ಕಾರ್ಯ ನಡಸಿದರು. ಇದು ವಿರಸದಲ್ಲಿ ಪರಿಣಮಿಸಿತು. ಆ ಕೆಂಪಿನ ಸಿದ್ಧಬಸವ ಸ್ವಾಮಿಗಳ ಸ್ವಾದಿರಾಜ್ಯದಲ್ಲಿ ಇಸಳೂರಿನಲ್ಲಿ ಇದ್ದ ಮಠವನ್ನು ಕಸಿದುಕೊಳ್ಳಬೇಕೆಂದು (ಅಪಹರಿಸಬೇಕೆಂದು) ಗುರುಸಿದ್ಧಸ್ವಾಮಿಗಳು ಹೀಗೆ ಮಾಡುತ್ತಾರೆಂದು ಯೋಚಿಸಿ ಕೆಂಪಿನ ಸಿದ್ಧ ಬಸವ ಸ್ವಾಮಿಗಳ ಕಡೆಯವರು ಬಹಳ ಅನ್ಯಾಯ ಕಾರ್ಯಗಳನ್ನು ಮಾಡಿದರು. ಸದರಿ ಗುರುಸಿದ್ಧಸ್ವಾಮಿಗಳನ್ನು ಕತ್ತರಿಸಬೇಕೆಂದು ಯೋಚಿಸಿದರು. ಅದು ತಪ್ಪಿ ಬೇರೊಬ್ಬ ಚರಮೂರ್ತಿಗಳ ಹತ್ಯೆಯಲ್ಲಿ ಮುಗಿಯಿತು. ಈಹತ್ಯೆಯ ಕಾಲದಲ್ಲಿಇವರೊಬ್ಬರು ಬಾಗಿಲಲ್ಲಿದ್ದ ಗರ್ಭಿಣಿ ಹೆಂಗಸು ಅವಳಹೊಟ್ಟೆಯಲ್ಲಿನ ಕೂಸು ಪಾದೋದಕ ಪ್ರಸಾದ (ಇವೆರಡೂ ಜೀವವುಳ್ಳ ಮೂರ್ತಿಗಳಿಂದ ಬರುವುದರಿಂದ ಜೀವವುಳ್ಳವುಗಳೆಂದೇ ವೀರಶೈವರ ನಂಬುಗೆ) ಹೀಗೆ ಐವರಹತಿ (ಪಂಚ ಹತ್ಯ) ಆಯಿತೆಂದೂ ಇದನ್ನು ಕೆಂಪಿನ ಸಿದ್ಧಬಸವ ಸ್ವಾಮಿಗಳೇ ಮಾಡಿಸಿದರೆಂದೂ ಅವರಲ್ಲಿ ದೋಷಾರೋಪಣೆ

ಯನ್ನು ಗುರುಸಿದ್ದ ಸ್ವಾಮಿಗಳು ಮಾಡಿದರು.

ಒಬ್ಬರನ್ನು ಭಯಪಡಿಸಿ ಸುಖವನ್ನು ಪಡೆಯಬೇಕೆಂಬಾಲೋಚನೆಯು ಕೆಲವು ಸಂದರ್ಭಗಳಲ್ಲಿ ಕೆಟ್ಟುಹೋಗಿ ಮಹಾ ಅನರ್ಥಕ್ಕೆ ಗುರಿಯಾಗಬೇಕಾಗುವುದೆಂಬ ನೀತಿಯ ಪಾಠವನ್ನು ಈ ಸಂದರ್ಭದಿಂದ ಕಲಿಯಬಹುದಾಗಿದೆ.

ಈ ಇಬ್ಬರು ಮುಖ್ಯ ಸ್ವಾಮಿಗಳ ದೋಷಾರೋಪಣೆಯನ್ನು ಕೇಳುವರಾರು? ಈ ತಪ್ಪುಗಳನ್ನು ಸರಿ ಅಥವಾ ಅಲ್ಲವೆಂದು ನಿರ್ಣಯಿಸುವವರಾರು? ಕೊನೆಗೆ ಈ ಜಗಳವು ಶಾ. ಶ. ೧೬೪೧ (ಕ್ರಿ. ಶ. ೧೭೧೯) ವಿಕಾರಿ ಸಂರದಲ್ಲಿ ಸ್ವಾದಿ ಸಂಸ್ಥಾನಕ್ಕೂ ಕೆಳದಿ ರಾಜರ ಸಂಸ್ಥಾನಕ್ಕೂ ನಡುವೆ ಗಡಿಯಾಗಿ ಇದ್ದ ಈಗಿನ ಸೊರಬತಾಲೂಕು ಜಡೆಯದ ಹತ್ತಿರ ಇರುವ ಮೆಣಸಿನ ಹಳ್ಳದ ಆಚೆ ಈಚೆ ದಡಗಳಲ್ಲಿ ಇಡೀ ವೀರಶೈವ ಸಮಾಜದ ಪ್ರತಿನಿಧಿಗಳು ಸಾವಿರಾರು ಗಟ್ಟಲೆಯಾಗಿ ಸೇರಿ ಗುರುಸಿದ್ಧಸ್ವಾಮಿಗಳು ಹೊಲೆಬಳಕೆಯ ವಂಶದವನನ್ನು ತೆಗೆದ ಕೊಂಡುದು ತಪ್ಪೆಂತಲೂ ಕೆಂಪಿನ ಸಿದ್ಧಬಸವ ಸ್ವಾಮಿಗಳು ಪಂಚ ಹತ್ಯವನ್ನು ಮಾಡಿಸಿದವರಲ್ಲವೆಂತಲೂ ನಿರ್ಣಯಿಸಿದರು. ಆ ಸಭೆಯಲ್ಲಿದ್ದ ಗುರುಸಿದ್ಧ ಸ್ವಾಮಿಗಳ ಪ್ರತಿನಿಧಿ ಚರಮೂರ್ತಿಗಳು ತಮ್ಮದು ತಪ್ಪೇನು ಒಪ್ಪಿಕೊಳ್ಳಲಿಲ್ಲ. ಆಗಸಮಾಜದವರು ಕೆಂಪಿನ ಸಿದ್ದಬಸವ ಸ್ವಾಮಿಗಳಲ್ಲಿ ಭಕ್ತಿಯನ್ನು ಇಟ್ಟು ಒಂದು ಪತ್ರವನ್ನು ಬರೆದು ಕೊಟ್ಟರು. (ಹೀಗೆ ನಿರ್ಣಯಿಸಿ ಸಮಾಜದವರು ತಮ್ಮ ತಮ್ಮ ಪೇಟೆ ಹೆಸರು ನಮೂದಿಸಿ ಸಹಿಮಾಡಿದ ಪತ್ರವನ್ನು ಜಡೆಯಸಂಸ್ಥಾನ ಮಠದ ಸ್ವಾಮಿಗಳಲ್ಲಿ ಇದ್ದುದನ್ನು ನೋಡಿದ್ದೇನೆ. ಪ್ರಕಾಶಕ.) ಹೀಗೆ ನಿರ್ಣಯಿಸಲು ಸೇರಿಪವರ ಅಂದಾಜು ಸಂಖೆಯು ಐವತ್ತುಸಾವಿರದ ಒಂಬೈನೂರು ಎಂದು ಈ ನಿರಂಜನವಂಶ ರತ್ನಾಕರ (ಪುಟ ೧೫೩) ದಲ್ಲಿ ಕಂಡು ಬಂದಿದೆ. ಇದಲ್ಲದೆ ಆಗ ಸೇರಿದವರ ಮುಖ್ಯರ ಹೆಸರುಗಳನ್ನು ತೋರಿಸುವ ಪಟ್ಟಿಗಳೂ ಬೇರೊಂದು ಮಠದಲ್ಲಿ ಸಿಕ್ಕಿರುತ್ತವೆ. ಈ ದೆಸೆಯಿಂದಲೂ ಈ ವ್ಯಾಜ್ಯ ವಿಚಾರಣೆಯಾದ ಒಂದು ತಿಂಗಳ ಮೇಲೆ ಕೆಳದಿ ರಾಜರಿಂದ ಕೆಂಪಿನಸಿದ್ಧಬಸವ ಸ್ವಾಮಿಗಳಿಗೆ ಬರೆದುಕೊಟ್ಟ ಕಾಣಿಕೆ ವಸೂಲಿಯ ಸನದಿನ ನಕಲು ದೊರಕಿರುವುಧರಿಂದಲೂ ಮತ್ತೆ ಕೆಲವು ಗ್ರಾಮಸ್ಥರು ಕೆಂಪಿನ ಸಿದ್ಧಬ

ಸವಸ್ವಾಮಿಗಳಿಗೆ ಕಾಣಿಕೆ ಮುಂತಾದ್ದು ಕೊಡುವುದಾಗಿ ಬರೆದುಕೊಟ್ಟ ಶಾಸನ ಪತ್ರಗಳ ಮೂಲ (ಅಸಲು) ಪ್ರತಿಗಳು ಸಿಕ್ಕಿರುವುದರಿಂದಲೂ ಮೇಲೆ ಕಂಡ ನಿರ್ಣಯವು ನಡೆದುದು ನಿಜವೆಂದು ಒಪ್ಪಲಿಕ್ಕೆ ಏನೂ ಅನುಮಾನವಿಲ್ಲ ಆ ಮೇಲೆ ಕೆಂಪಿನ ಸಿದ್ಧಬಸವಸ್ವಾಮಿಗಳನ್ನು ಕೂಡಿಸಿಕೊಳ್ಳ ಬೇಕೆಂಬ ಹವ್ಯಾಸವನ್ನು ಬಿಟ್ಟು ಗುರುಸಿದ್ಧಸ್ವಾಮಿಗಳು ತಮ್ಮಷ್ಟಕ್ಕೆ ತಾವು ಇರಲಿಕ್ಕೆ ಪ್ರಾರಂಭಿಸಿದರು ಅನಂತರ ಗುರುಸಿದ್ಧ ಸ್ವಾಮಿಗಳು ಮುರುಗಾಸಮಯವೆಂದೂ ಕೆಂಪಿನ ಸಿದ್ಧಬಸವ ಸ್ವಾಮಿಗಳು ಕುಮಾರ ಸಮಯವೆಂದೂ ಸಮಯ ಭೇದಗಳನ್ನು ತಮ್ಮ ಗುರುಗಳ ಹೆಸರಿನಲ್ಲಿ ಉಂಟುಮಾಡಿಕೊಂಡರೇ ಹೊರತು ಕುಮಾರ ಸ್ವಾಮಿಗಳಾಗಲೀ ಮುರುಗೇಂದ್ರ ಸ್ವಾಮಿಗಳಾಗಲೀ ತಾವು ಇರುವಾಗ ಈ ಸಮಯ ಭೇದಗಳನ್ನು ಏರ್ಪಡಿಸಲಿಲ್ಲ.

ನಿ. ಜ ಶ್ರೀ ಮುರುಗೇಂದ್ರ ಸ್ವಾಮಿಗಳು ತಮ್ಮ ಬಳಿಯಲ್ಲಿ ಇದ್ದ ಖಾಸ ಚರಮೂರ್ತಿ ಚೀಲಾಳಪ್ಪನವರೆಂಬವರನ್ನು ಹರಪನಹಳ್ಳಿ ಸೀಮೆಗೆ ಕಳುಹಿಸಿದ್ದರು (ಇವರ ಸರಿಯಾದ ಹೆಸರು ಚೀಲಾಳ ಬುಡಕಟ್ಟಿನ ತೋಟಪ್ಪನವರು) ಅವರೂ ಖಾಸ ಚರಮೂರ್ತಿಗಳಾದ ತಮಗೆ ಪಟ್ಟಕಟ್ಟದೆ ಮುರುಗೇಂದ್ರ ಸ್ವಾಮಿಗಳು ಗುರುಸಿದ್ಧ ಸ್ವಾಮಿಗಳಿಗೆ ಪಟ್ಟವನ್ನು ಮಾಡಿದುದು ಸರಿಯಲ್ಲವೆಂದು ವ್ಯಾಜ್ಯ ತೆಗೆಯಲು ಚಿತ್ರದುರ್ಗದ ಭರಮನಾಯಕನು (ಆಗಿನ ರಾಜ) ಅವರನ್ನು ಮಠದಿಂದ ಹೊರಗೆ ಹಾಕಿಸಿದನು, ಎಂದು ಹಿಂದೆ ಹೇಳಿದೆ. ಆ ಮೇಲೆ ಅವರು ಹರಪನಹಳ್ಳಿ ಸೀಮೆಯ ಚಂದ್ರಶೇಖರ(ಸೋಮಶೇಖರ) ರಾಜನ (ಸು ಕ್ರಿ ೧೭೧೪) ಹತ್ತಿರಬಂದು ಆಶ್ರಯವನ್ನು ಸಂಪಾದಿಸಿದರು. ಇವರ ಪರಂಪರೆಯು ಮಹಂತಸ್ವಾಮಿಗಳ ಕಾಲಕ್ಕೆ (ಮುರುಗೇಂದ್ರ ಸ್ವಾಮಿಗಳ ನಾಂದ್ಯವನ್ನು ರಚಿಸಿದವರು ಈ ಮಹಂತ ಸ್ವಾಮಿಗಳೇ) ಕರಿಬಸವಪ್ಪನವರ ಸಹಾಯದಿಂದ ಗದುಗಿನಲ್ಲಿ ಈಗ ಮುಂಭಾಗದಲ್ಲಿ ಗದ್ದುಗೆ ಇರುವ ಮಠವೂ ಆಯಿತು. (ಪ್ರಸಿದ್ಧರೂ ಮಹಿಮರೂ ಆದ ಹರಪನಹಳ್ಳಿ ತಾಲ್ಲೂಕು ಲಿಂಗನಾಯಕನ ಹಳ್ಳಿಯಲ್ಲಿ ಸಮಾಧಿಸ್ಥರಾದ ಚನ್ನವೀರಸ್ವಾಮಿಗಳು ಚಿತ್ರದುರ್ಗದ ಮುರುಗೇಂದ್ರ ಸ್ವಾಮಿಗಳ ಸಮಕಾಲೀನರು. ಅವರೂ ಹರಪನಹಳ್ಳಿಯಲ್ಲಿ ಮೊದಲು ಇದ್ದರು. ಅವರ ಶಿಷ್ಯರಾದ ಕರಿಬಸವಪ್ಪನವರೇ ಇವರಾಗಿರಬಹುದು.)

ಹೀಗೆ ಚೀಲಾಳಪ್ಪನವರೇ ಈ ಪರಂಪರೆಗೆ ಕಾರಣರಾದುದರಿಂದ ಇವರ ಮುಂದಿನವರು ತಮ್ಮ ಗುರುಗಳ ಹೆಸರಿನಲ್ಲಿ "ಚೀಲಾಳಸಮಯ" ಎಂಬದಾಗಿ ಒಂದು ಸಮಯುವನ್ನು ಏರ್ಪಡಿಸಿಕೊಂಡರು.

ಶಿಖಾಪಟ್ಟದ ೨ನೆಯ ಗುರುಸಿದ್ಧಸ್ವಾಮಿಗಳಿಗೆ ತೊಂದರೆ ಕೊಡಬೇಕೆಂದು ಉದ್ಯುಕ್ತರಾದ ಮೂರ್ತಿಗಳಲ್ಲಿ ಕೆಲವರಿಗೆ "ಸಮಯ ಬಿಟ್ಟ ಶಂಕರದೇವರ ಸಮಯ" ಎಂದು ಹೆಸರಾಯಿತೆಂದು (ಪು ಟ. ೭೧) ಗೊತ್ತಾಗುತ್ತದೆ ಸೋಮೆಕಟ್ಟೆ ಸಮಯ ಮುಂತಾಗಿ ೫ ಸಮಯುಗಳು ಆದದ್ದು ಗೊತ್ತಾಗಿರುತ್ತದೆ. ಇವಲ್ಲದೆ ಸಂಪಾದನೆಯ ಸಮಯ ಬೇರೆ, ಹೀಗಾಗಿ ಚಿತ್ರದುರ್ಗದ ಗುರುಸಿದ್ಧ ಸ್ವಾಮಿಗಳ ಅಂತ್ಯ ಕಾಲದಲ್ಲಿ ೧೬ ಸಮಯುಗಳಾಗಿದ್ದುವೆಂದು ಚಿತ್ರದುರ್ಗದ ಪಟ್ಟವಲ್ಲರಿಯ ಒಂದು ಬರಹದ ಪ್ರತಿಯು ಹೇಳುತ್ತದೆ. ಈ ಸಮಯ ಭೇದಗಳು ಕ್ರಿ. ಶ. ೧೬೬೦ ರಿಂದ ಆರಂಭಿಸಿದರೂ ಇವುಗಳ ಬಹುಭಾಗವು ಕ್ರಿ. ಶಕೆ ೧೭೨೦ ರಿಂದೀಚೆಗೆ ೧೦-೨೦ ವರ್ಷಗಳೊಳಗೆ ಆದುದೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಪ್ರಭುದೇವರ ತರುವಾಯ ಸುಮಾರು ಐದುನೂರು ವರ್ಷಗಳಕಾಲ ಒಬ್ಬರೇ ನಿರಂಜನ ಶೂನ್ಯಪೀಠದ ಸ್ವಾಮಿಗಳ ಆಡಳಿತದಲ್ಲಿ ಶಾಂತರೀತಿಯಲ್ಲಿ ಇರುತ್ತಿದ್ದ ಸಮಾಜವು ಈಚೆಗೆ ಛಿನ್ನಭಿನ್ನವಾಗಿ ಅನೈಕ್ಯತೆಯಿಂದ ಕೂಡಿ ಅನೇಕ ಸಮಯುಗಳಾಗಿ ಅನೇಕ ಗಲಭೆಗಳಿಗೆ ಅವಕಾಶವನ್ನು ಕೊಟ್ಟಿರುವುದು. ಈ ಗಲಭೆಗಳೂ ಆ ಸಂಬಂಧ ಕಾರ್ಯಕಲಾಪಗಳೂ ಈಗಲಾದರೂ ಕೆಲಮಟ್ಟಿಗೆ ಇದ್ದೇ ಇರುತ್ತವೆ. ಇದು ಬಹಳ ಶೋಚನೀಯವಾದ ವಿಷಯವಾಗಿದೆ. ಹೀಗಿರುವದನ್ನು ತಪ್ಪಿಸಿ ಯಾವ ರೀತಿಯಲ್ಲಿ ಇವುಗಳನ್ನು ಮೊದಲಿನಂತೆ ಒಂದು ಮಾಡಬೇಕೆಂದು ಯೋಚಿಸುವವರು ಈ ಕೆಳಗೆ ಕಂಡ ಸಂಗತಿಗಳಿಗೆ ಮುಖ್ಯವಾಗಿ ಗಮನ ಕೊಡಬೇಕಾಗಿದೆ.

ಶ್ರೀ. ನಿ. ಜ. ಮಹಾ ಮಹಿಮರಾದ ತೋಂಟದ ಸಿದ್ಧೇಶ್ವರ (ಸಿದ್ಧಲಿಂಗ) ಮಹಾ ಸ್ವಾಮಿಗಳವರು ಚರಮೂರ್ತಿಗಳಲ್ಲಿ ಏರ್ಪಡಿಸಿದ ಪಂಚ ಶಿಖಾ (ಇದಕ್ಕೆ ಕನ್ನಡದಲ್ಲಿ ಲೋಚು ಎಂದು ಕರೆವರು) ಈ ಲೋಚಿನ ಬಡಕಟ್ಟು ಬಿಸಿಯಗ್ಗಣಿ ಬುಡಕಟ್ಟು ಒಪ್ಪತ್ತಿನ ಬುಡಕಟ್ಟು ಮುಂತಾದ ಅವರವರ ವೃತ್ತಿಗಳ ನೋಳಗೊಂಡ ಏಳುನೂರು ಭೇದಗಳೂ, ಆಯಾ ಬುಡಕಟ್ಟಿನವರಿಗೆ ಅದೇ ಬುಡಕಟ್ಟಿನವರೇ ಅಧಿಕಾರವನ್ನು ಕೊಡಬೇಕು, ಅವರಿಲ್ಲದಿದ್ದರೆ ಇನ್ನೊಂದು ಬುಡಕಟ್ಟಿನವರು ಕೊ

ಡಬೇಕು, ಎಂಬ ನೇಮಗಳೂ, ಸ್ವಲ್ಪಮಟ್ಟಿಗೆ ಷಟ್‌ಸ್ಥಲ ಬ್ರಹ್ಮಿಗಳಾದ ವಿರಕ್ತ ಚರಮೂರ್ತಿಗಳಲ್ಲಿ ಭಿನ್ನ ಭಾವನೆಗೆ ಅವಕಾಶವನ್ನು ಕೊಡುವಂತೆ ಪರಿಣಮಿಸಿದರೂ ಈ ನಿರಾಭಾರಿ ವೀರಶೈವರಾದ ವಿರಕ್ತ ಆಶ್ರಮದವರಿಗೆ ತೋಂಟದ ಸ್ವಾಮಿಗಳವರ ಮಠವು (ಇದೊಂದೇ) ಮೂಲಸೂತ್ರದ ಮಠವಾಗಿ ಗುರುಪೀಠವಾಗಿ ಇದ್ದಿತು. ಈಸ್ಥಿತಿಯು ಸುಮಾರು ೧೦೦ ವರ್ಷಗಳಕಾಲ ನಡೆದು ಬಂದಿತು. ಆಗ ಗಲಭೆ ಏನೂ ಇರಲಿಲ್ಲ ಅನಂತರ ಏರ್ಪಡಾದ ಸಂಪಾದನಾ ಸಮಯ ಮುಂತಾದವುಗಳಿಗೆ ಸೇರಿದವರು ಪ್ರತಿಯೊಬ್ಬರೂ ತಾವೇ ಸ್ವತಂತ್ರರೆಂದು ಹೇಳುವುದು ಈ ವರೆವಿಗೂ ನಡೆದಿರುವುದರಿಂದ ಇವುಗಳಲ್ಲಿ ಶೂನ್ಯಪೀಠಾಧಿಕಾರದ ಪರಂಪರೆಯ ಸಂಬಂಧವು ಎಷ್ಟು ಮಟ್ಟಿಗೆ ಇರುವುದೆಂಬುದನ್ನು ಪರಿಶೀಲಿಸಲೇ ಬೇಕಾಗುವುದು.

ಸಂಪಾದನೆಯ ಸಮಯ

ಸಂಪಾದನೆಯ ಸಿದ್ಧವೀರಸ್ವಾಮಿಗಳಿಂದ ಮುಂದೆ ಈ ಪರಂಪರೆಯು ಬಂದಿತೆಂಬುದಕ್ಕೆ ಚತುರಾಚಾರ್ಯರ ಪುರಾಣದಲ್ಲಿ ಇವರ ವಿಷಯವಾಗಿ "ಜರಿದು ಶೈವವ ವೀರಶೈವವಂ ಸ್ಥಾಪಿಸಿದಂ" ಎಂದು ಬರೆದಿರುವುದು, ಇವರು ಹಾಗಲವಾಡಿ ರಾಜನ ಆಶ್ರಯದಲ್ಲಿ ಮಾಡಿದ ಕಾರ್ಯದ ಸೂಚನೆಯಾಗಿ ಇರುವುದೇ ಸಾಕ್ಷಿಯಾಗಿದೆ. ಇವರ ಪರಂಪರೆಯನ್ನು ತೋರಿಸುವ ಗ್ರಂಥವಾವುದೂ ಇದೂ ವರೆವಿಗೆ ಮುದ್ರಣವಾದಂತೆ ತೋರುವುದಿಲ್ಲ ಈ ಸಮಯದ ಗುರುಲಿಂಗ ದೇವರೆಂಬವರೊಬ್ಬರು ವಂಶಾವಳಿಯನ್ನು ಬರೆದಿರುವುದರಲ್ಲಿ ಹೀಗಿರುತ್ತದೆ:– ಶ್ರೀಮತ್ ಸಚ್ಚಿದಾನಂದ....ತೋಂಟದ ಸಿದ್ಧಲಿಂಗ ಪ್ರಭುವೆಂಬಾಚಾರ್ಯರು, ಅವರ ನಿಜದರಿವಿನಾಚರಣೆಯನುಭವಿಯೇ ಬೋಳಬಸವೇಶ್ವರ, ಅವರ ನಿಜದರಿವಿನಾಚರಣೆಯ ಅನುಭವಿಯೇ ಹರತಾಳ ಚನ್ನನಂಜೇದೇವರು, ಅವರ ಅನುಭವದ ಅಖಂಡ ತೇಜೋ ವಿಗ್ರಹವೇ ಎಳಮಲೆಯ ಗುರುಶಾಂತ ದೇವರು, ಅವರ ಭಕ್ತಿ ಜ್ಞಾನ ವೈರಾಗ್ಯದ ಸಮರಸಾನಂದಾನುಭಾವಿಯೇ ಸಂಪಾದನೆಯ ಸಿದ್ಧವೀರಣ್ಣಾಚಾರ್ಯರು.

ಹೀಗೆ ಇರುವ ಪರಂಪರೆಯನ್ನು ನೋಡಿದರೆ ಇದು ಮಹಿಮರಾದ ತೋಂಟದ ಸಿದ್ಧಲಿಂಗಸ್ವಾಮಿಗಳನ್ನು ಮೊದಲು ಮಾಡಿಕೊಂಡು ಇದ್ದಾಗ್ಯೂ ಅವರ ಅನುಗ್ರಹ ಸಮರಸಶ್ರೀಅಧಿಕಾರವನ್ನು ಪಡೆದವರ ಪರಂಪರೆಯಲ್ಲಿ ಸಂಪಾದನೆಯ ಸಿದ್ಧವೀರಸ್ವಾಮಿಗಳು ಇದ್ದವರೆಂಬ ಮಾತು ಇದ

ದಲ್ಲಿಲ್ಲ. ಆದರೆ ಎಳೆಮಲೆಯ ಗುರುಶಾಂತದೇವರ ಅನುಗ್ರಹವನ್ನೂ ಸಮರಸವನ್ನೂ ಪಡೆದವರು ಎಂಬುದು ಗೊತ್ತಾಗುತ್ತದೆ. ಉಳಿದವರಿಗೆಲ್ಲಾ ಅರಿವಿನ ಆಚರಣೆ (ಜ್ಞಾನಾಚರಣೆ) ಯವರೆಂದೇ ಕರೆದಿದ್ದಾರೆ.

ಇಲ್ಲಿ ಅನುಗ್ರಹ ಸಾಮರಸ್ಯ ಎಂದರೆ ಯಾವ ಶಿಷ್ಯನಿಗೆ ಗುರುತ್ವಾಧಿಕಾರವನ್ನು ಕೊಡುವರೋ ಆತನು ತಮ್ಮ ಗುರುವೆಂದು ಕೊಟ್ಟವರು ತಿಳಿದು ಪಾದೋದಕ ಪ್ರಸಾದಗಳಲ್ಲಿ ಸಮರಸವಾಗಿ ಆಚರಿಸಿ, ಬಹಿರಂಗವಾಗಿ ಭಕ್ತರೆಲ್ಲರೂ ಕಾಣುವಂತೆ ಹೊಸಬರಿಗೆ ಸಾಷ್ಟಾಂಗವನ್ನು ಹಾಕಿ ತಮ್ಮ ಅಧಿಕಾರವನ್ನು ಒಪ್ಪಿಸುವುದು ಇದೇ ಮುಖ್ಯವಾದುದು. ಬರೀ ಅನುಗ್ರಹ ಅಥವಾ ಜ್ಞಾನ ಬೋಧೆ ಆದ ಮಾತ್ರಕ್ಕೆ ಸಾಮರಸ್ಯವಾದಂತೆ ತಿಳಿಯಲಾಗುವುದಿಲ್ಲ. ಒಂದು ವೇಳೆ ಇಲ್ಲಿ ಕವಿಯ ಶೈಲಿಯು ಈ ನಮೂನೆಯುದೆಂದು ಹೇಳುವದಾದರೆ ಇದೇ ಕವಿಯೇ ಈ ಸಂಪಾದನಾ ಸಮಯದ ಸಿದ್ಧವೀರಣ್ಣಾಚಾರ್ಯರವರ ಮುಂದಿನ ಸ್ವಾಮಿಗಳನ್ನು ಕುರಿತು ಹೇಳುವಾಗ ಅವರಂಗಲಿಂಗದನುಭಾವದಾಚರಣೆಯು ನಿಜದ ನಿರಿಗೆವಿಡಿದು ಸ್ವಲೀಲಾ ನಂದದಲ್ಲಾಚರಿಸಿದವರೇ ಸಂಪಾದನೆಯ ಬೋಳ ಬಸವದೇವರು ಅವರ ಲಿಂಗಾಂಗ ಸಂಗ ಸಮರಸದರುಹಿನ ಪ್ರಸಾದ ಪರಿಪೂರಿತ ಹೃದಯರಾದ ಸಂಪಾದನೆಯ ಗುರುಲಿಂಗದೇವರು ಎಂದು ಹೇಳಿರುತ್ತಾನೆ. (ಕವಿಚರಿತೆ ೨ ಪುಟ ೪೫೪ ನೋಡಿರಿ). ಹೀಗೆ ಭಿನ್ನವಾಗಿ ಹೇಳಿರುವುದರಿಂದ ಸಿದ್ಧವೀರಣಾಚಾರ್ಯರು ತಮ್ಮ ಮುಂದಿನ ಸಂಪಾದನೆಯ ಬೋಳಬಸವ ದೇವರಿಗೆ ಅನುಗ್ರಹ ಸಾಮರಸ್ಯವನ್ನು ಕೊಡಲಿಲ್ಲವೆಂತಲೂ ಮತ್ತು ಸಂಪಾದನೆಯ ಬೋಳಬಸವಸ್ವಾಮಿಗಳ ಕಾಲದಿಂದ ಅವರ ಮುಂದಿನವರು ಅನುಗ್ರಹ ಸಾಮರಸ್ಯ ಪಡೆದಂತೆಯೂ ಅಭಿಪ್ರಾಯವಾಗುತ್ತದೆ.

ಇವರು ನಿ. ಜ. ಕಟ್ಟಿಗೆಹಳ್ಳಿ ಸ್ವಾಮಿಗಳ ಬಳಿಯಲ್ಲಿ ಇದ್ದಾಗ್ಯೂ ಅವರ ಸಂಪ್ರದಾಯ ಅವರ ಅನುಗ್ರಹ ಅಧಿಕಾರ ಪಡೆದ ಸುದ್ದಿಯನ್ನು ಇಲ್ಲಿ ಎತ್ತದಿರುವುದರಿಂದಲೂ ಆ ಸಿದ್ಧವೀರಸ್ವಾಮಿಗಳು ಇವರಿಗೆ ಅನುಗ್ರಹ ಅಧಿಕಾರ ಕೊಟ್ಟರು ಎಂಬ ಮಾತೂ ಬೇರೆಕಡೆಯಲ್ಲಿ ಇಲ್ಲದಿರುವುದರಿಂದಲೂ ಈ ಪರಂಪರೆಯು ಜ್ಞಾನ ಪ್ರಸಾದ ಎಂದರೆ ಬರಿಯ ಬೋಧೆಯಿಂದ ಮುಂದೆ ಬಂದಿರುವುದೆಂದು ಮೇಲೆ ತಿಳಿಯಬಂದಿರುವುದರಿಂದಲೂ ಕಟ್ಟಿಗೆಹಳ್ಳಿಸ್ವಾಮಿಗಳಿಂದ ಇವರು ಹೊರಗೆ ಹಾಕಿಸಲ್ಪಟ್ಟವರು ಎಂದು ತಿಳಿಯಲನುಮಾನವೇನೂ ಇಲ್ಲ.

ಕಟ್ಟಿಗೆಹಳ್ಳಿ ಸ್ವಾಮಿಗಳಾದರೂ ಇವರನ್ನು ಯಾವುದೊಂದು ದ್ವೇಷದಿಂದಲೂ ಹೊರಗೆ ಹಾಕಿಸಿಲ್ಲ. ಲಿಂಗವೂ ಅಂಗವೂ ಒಂದಾಗಿ ಆಚರಿಸತಕ್ಕ ಲಿಂಗಾಂಗ ಸಾಮರಸ್ಯ ಪದ್ಧತಿಯು ವೀರಶೈವರಲ್ಲಿ ಇದೆ ಅದರಲ್ಲಿ ಸ್ವಾಮಿಗಳಿಗಂತೂ ಈ ಪದ್ಧತಿಯು ಬಹಳ ಮುಖ್ಯ ಬೇರೊಂದು ಓಲೆಯುಗರಿಯ ಪ್ರತಿಯಲ್ಲಿ ಲಿಂಗದ ಗೋಳಕ ಬಾಣ ಸಡಲಿದರೆ ಅಥವಾ ಕಂಥೆಯ ಒಳಗಿರುವ ಲಿಂಗಕ್ಕೆ ಏನಾದರೂ ಭಿನ್ನತೆಯುಂಟಾದರೆ ಅವರಿಗೆ ಲಿಂಗಾಂಗ ಸಾಮರಸ್ಯವಿಲ್ಲವೆಂದು ಬಹಿಷ್ಕರಿಸಬೇಕೆಂದು ಬರೆಯಲ್ಪಟ್ಟಿರುವುದರಿಂದ ಆ ಅಭಿಪ್ರಾಯಕ್ಕನುಸಾರವಾಗಿ ಕಟ್ಟಿಗೆಹಳ್ಳಿ ಸ್ವಾಮಿಗಳು ಇವರನ್ನು ದೂರ ಮಾಡಿದುದು ನಿಜ ಎಂದು ಒಪ್ಪಲೇಬೇಕಾಗುತ್ತದೆ. ಇದು ಹೇಗಿದ್ದರೂ ಇರಲಿ ಸಂಪಾದನಾ ಸಮಯವು ನಿಜ ಅಲ್ಲಮಪ್ರಭು ಸ್ವಾಮಿಯ ಅಧಿಕಾರ ಪರಂಪರೆಯಿಂದ ಬಂದುದೆಂದು ನಿರ್ಣಯಿಸುವುದಕ್ಕೆ ಸ್ವಲ್ಪವಾದರೂ ಅವಕಾಶವೇ ಇಲ್ಲ. ತೋಂಟದ ಸಿದ್ಧಲಿಂಗಸ್ವಾಮಿಗಳವ ಕಾಲದಿಂದ ಈ ಪರಂಪರೆ ಬಂದಿದ್ದರೆ ಸಿದ್ಧೇಶ್ವರ ಸಮಯವಾಗಬೇಕಾಗಿದ್ದಿತೇ ಹೊರತು ಸಂಪಾದನಾ ಸಮಯವಾಗುತ್ತಿರಲಿಲ್ಲ ಕೆಲವರು ಕಲ್ಯಾಣದಲ್ಲಿ ಇದ್ದ ಪ್ರಮಥರ ಶೀಲ ಸಂಪಾದನೆಯ ಸಮಯ ಎಂದು ಹೇಳುತ್ತಾರೆ ಆದರೆ ಸಿದ್ಧೇಶ್ವರ ಸ್ವಾಮಿಗಳ ಪೂರ್ವದಲ್ಲಿ ಸಮಯಗಳಿದ್ದವೆಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ.

ಈ ಸಂಪಾದನಾ ಸಮಯದ ಪರಂಪರೆಯ ಗುರುಗಳು ಬೋಳಬಸವೇಶ್ವರ ಸ್ವಾಮಿಗಳ ತರುವಾಯ ಹರತಾಳ ಚನ್ನನಂಜೇದೇವರು, ಅವರ ತರುವಾಯ ಎಳಮಲೆಯ ಗುರುಶಾಂತದೇವರು ಹೀಗೆ ಹೆಸರು ಹೇಳಿರುವುದರಲ್ಲಿ 'ಸಂಪಾದನೆ' ಎಂಬ ಹೆಸರು ಇಲ್ಲದಿರುವುದರಿಂದ ಸಂಪಾದನೆಯ ಸಿದ್ಧವೀರಸ್ವಾಮಿಗಳವರ ಕಾಲದಿಂದ ಮುಂದೆ ಈ ಸಮಯವು ಏರ್ಪಡಾದುದೆಂದು ನಿಶ್ಚಯಿಸಲಿಕ್ಕೆ ಬರುವಂತಿದೆ. ಸಂಪಾದನೆಯ ಚನ್ನನಂಜೇದೇವರು ಅಥವಾ ಚನ್ನಾಚಾರ್ಯರು ಎಂತ ಬರೆದಿರುವ ಲೇಖನವು ಒಂದೆರಡುಕಡೆ ಸಿಕ್ಕಿದ್ಯಾಗ್ಯೂ ಈಚೆಗೆ ಸಂಪಾದನಾ ಸಮಯವು ಏರ್ಪಡಾದ ಮೇಲೆ ಈ ವಿಶೇಷಣವು ಬಂದಿದೆ ಎಂದು ತಿಳಿಯಬಹುದಾಗಿದೆ ಏಕೆಂದರೆ ಚನ್ನನಂಜೇದೇವರ ತರುವಾಯ ಎಳಮಲೆಯ ಗುರುಶಾಂತದೇವರು ಎಂದು ಇದೆಯೇ ಹೊರತು ಸಂಪಾದನೆಯ ಗುರುಶಾಂ

ತದೇವರು ಎಂದು ಎಲ್ಲಿಯೂ ಇಲ್ಲ. ಬೋಳಬಸವೇಶ್ವರ ಸ್ವಾಮಿಗಳ ತರುವಾಯು ಗುಮ್ಮಳಾಪುರದ ಸಿದ್ಧಲಿಂಗ ಸ್ವಾಮಿಗಳು, ಅಥವಾ ಗೂಳೂರು ಸಿದ್ಧವೀರ ಸ್ವಾಮಿಗಳು ಮುಂತಾದವರು ಆ ಪೀಠದ ಅಧಿಕಾರದಲ್ಲಿದ್ದರೆಂದು ನಿರಂಜನವಂಶ ರತ್ನಾಕರ, ಗದಗಿನ ನಿರಂಜನವಂಶ, ಪಟ್ಟವಲ್ಲರಿ, ಸೋಮಶೇಖರ ಶಿವಯೋಗಿಯ ಲೇಖನ (ಶ. ಚ. ೨, ೫೨೭) ಮಹಂತಸ್ವಾಮಿಯ ಬರೆವಣಿಗೆ (ಶ. ಚ. ೨, ೪೫೩) ಮುಂತಾದವುಗಳು ನಿರ್ವಿವಾದವಾಗಿ ಒಪ್ಪುವುದರಿಂದ ಬೋಳಬಸವೇಶ್ವರ ಸ್ವಾಮಿಗಳವರ ತರುವಾಯ ಹರತಾಳ ಚನ್ನನಂಜೇದೇವರು ಶೂನ್ಯಪೀಠದ ಅಧಿಕಾರಿಗಳಾಗಿದ್ದರೆಂದು ಒಪ್ಪಲಿಕ್ಕಾಗುವುದಿಲ್ಲ. ಅದಕ್ಕೆ ತಕ್ಕ ಆಧಾರವೂ ಇಲ್ಲ

ಈ ಸಮಯದ ಪರಂಪರೆಯವರು ಮುಂದೆ ಒಂಟಮುರಿ ಮೊದಲಾದ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿದರೆಂದು (ಪುಟ ೧೩೬) ಗೊತ್ತಾಗುತ್ತದೆ.

ವೇ. ಬುದ್ಧಯ್ಯಸ್ವಾಮಿ ಪುರಾಣಿಕ ಇವರು ಈ ಸಂಪಾದನಾ ಸಮಯದ ಮುಖ್ಯ ಮಠವು ಒಂಟಮುರಿಯಲ್ಲಿ ಇರುವುದಾಗಿಯೂ ಈ ಸಂಬಂಧವಾಗಿ ಈ ಪುಸ್ತಕದಲ್ಲಿ ಕೊಟ್ಟ ಕಾಲವು ಸರಿಯಲ್ಲವೆಂತಲೂ ಬರೆದಿರುವರು. ಇದನ್ನು ಮುಂದೆ " ಶ್ರೀಮದನಾದಿ ಅಲ್ಲಮಪ್ರಭು " ಎಂಬ ಪ್ರಕರಣದಲ್ಲಿ ವಿಮರ್ಶಿಸಲಾಗುವುದು.

ಚೀಲಾಳ ಸಮಯ.

ಇವರೂ ತೋಂಟದ ಸಿದ್ಧಲಿಂಗ ಸ್ವಾಮಿಗಳಿಂದ ತಮ್ಮ ಪರಂಪರೆ ಬಂದಿರುವುದಾಗಿ 'ನಿರಂಜನವಂಶ' ಅಥವಾ 'ನಿರಂಜನವಂಶ ದರ್ಪಣ' ಎಂಬ ಪುಸ್ತಕವನ್ನು ಮುದ್ರಣ ಮಾಡಿಸಿ ಇರುತ್ತಾರೆ.

ಸಿದ್ಧೇಶ್ವರ ವಚನ (ಶಿವಲಿಂಗ ವಿಜಯ ಮುದ್ರಾಲಯ ಹಾವೇರಿ ಇಲ್ಲಿ ಮುದ್ರಣವಾಗಿದೆ.) ದಲ್ಲಿ " ಪ್ರಕಾಶಕನ ಮೊದಲ ವಾಕ್ಯಗಳು" ಎಂಬ ಭಾಗದ ೨ನೆಯ ಪುಟದಲ್ಲಿ ೨೧ ಗುರು ಸಂಪ್ರದಾಯವಿಡಿದು ಬಂದ ಆಚಾರ್ಯಪೀಠದ ಚನ್ನಬಸವೇಶ್ವರನೆಂಬ ದಿವ್ಯ ಜ್ಞಾನಮೂರ್ತಿಯ (ಇವರು ತೋಂಟದ ಸಿದ್ಧಲಿಂಗ ಸ್ವಾಮಿಗಳ ಗುರುಗಳು) ಕರಕಮಲದೊಳುದಯರಾಗಿ ಸಿದ್ಧೇಶ್ವರನೆಂಬ ಅಭಿಧಾನವ ತಳೆದು ಸ್ವಯಸ್ಥಲವ ಬಿಟ್ಟು ಚರಸ್ಥಲವನೊಡಗೂಡಿ" ಎಂಬುದಾಗಿ ಮಹಿಮರಾದ ನಿ. ಜ. ತೋಂಟದ ಸಿದ್ಧಲಿಂಗಸ್ವಾಮಿಗಳ ವಿಷಯವಾಗಿ ಹೇ

ಳಲ್ಪಟ್ಟಿರುತ್ತದೆ. ಈ ೨೧ ಗುರು ಸಂಪ್ರದಾಯದವರು ಚೀಲಾಳ ಸಮುಯದವರು, ಇವರು ತೋಂಟದಾರ್ಯರಿಂದ ಬಂದ ಪರಂಪರೆಯುವರು ಎಂದು ಕೆಲವರು ಹೇಳುವ ವಾಡಿಕೆಯೂ ಇರುತ್ತದೆ. ಈ ೨೧ ಗುರು ಸಂಪ್ರದಾಯಕ್ಕೆ 'ಅನಾದಿ ಗುರುಕುಲ' ಎಂದೂ ಕರೆಯುತ್ತಾರೆ. ಈ ೨೧ ಗುರುಗಳ ಹೆಸರು (ಕವಿಚರಿತೆ ೨, ಪುಟ ೫೦ರ ಪ್ರಕಾರ) ಪರಶಿವ ನಂದಿಕೇಶ್ವರ ದೂರ್ವಾಸದೇವ ದ್ವಿತಿಯಶಂಭು ತ್ರಿನೇತ್ರದೇವ ವಿಶ್ವೇಶ್ವರ ಸದಾಶಿವದೇವ, ಅಥವಾ (ಕವಿಚರಿತೆ ೨ ಪುಟ ೫೪೮ರ ಪ್ರಕಾರ) ೧ ಸೋಮಶಂಭುದೇಶಿಕ, ೨ ಸಕಲಾಗಮಾಚಾರ್ಯ ೩ ಶಿವಲೆಂಕ ಮಂಚಣ್ಣ ೪ ಉರಿಲಿಂಗದೇವ ೫ ಉರಿಲಿಂಗಪೆದ್ದಣ್ಣ ೬ ಸರ್ವೇಶ್ವರದೇವ ೭ ವಿಶ್ವೇಶ್ವರ ಪೆದ್ದಣ್ಣ ೮ ಸಂಹಿತೆಯ ಕಾಳಿದಾಸಭಟ್ಟ (ಇವರ ವಿಷಯವು ಸಿದ್ಧೇಶ್ವರ ಪುರಾಣದಲ್ಲಿ ಹೇಳಲ್ಪಟ್ಟಿರುತ್ತದೆ.) ೯ ಸದಾಶಿವದೇವ ೧೦ ಪ್ರಣಮಿದೇವ ೧೧ ಈಶಾನದೇವ (ಇವರು ಈಶಾನ ಜಂಗಮ ಎಂಬುವವರಲ್ಲ) ೧೨ ಮೌನಿವಾಸದೇವ ೧೩ ಚನ್ನ ಸೋಮೇಶ್ವರ ೧೪ ಬಾಗೆಯ ಬಂಕನಾಥ ೧೫ ಶಂಕರದೇವ ೧೬ ಗಂಗಾಧರದೇವ ೧೭ ಬಂಕನಾಥದೇವ ೧೮ ಪುರಾಣದ ಮಾಯಿದೇವ ೧೯ ಬಂಕಯ್ಯ ೨೦ ಮಹಾಲಿಂಗದೇವ ೨೧ ಇವನ ಶಿಷ್ಯ ಕುಮಾರ ಬಂಕನಾಥ (ಇವರೇ ವಿಜಯನಗರದ ಪ್ರೌಢರಾಯನ ಮಂತ್ರಿ ಜಕ್ಕಣಾಚಾರ್ಯನಿಗೆ ಅನುಗ್ರಹ ಮಾಡಿದ ಗುರು) ಈ ೨೧ ಗುರುಗಳೂ ಒಬ್ಬರ ತರುವಾಯ ಮತ್ತೊಬ್ಬರೆಂದು ತಿಳಿಯಲಿಕ್ಕೆ ಬರುವಂತಿಲ್ಲ. ಹೀಗೆ ಹೇಳಿರುವುದರಿಂದ ಮಹಿಮರಾದ ನಿ. ಜ. ತೋಂಟದ ಸಿದ್ಧಲಿಂಗ ಸ್ವಾಮಿಗಳವರ ಗುರುಗಳಾದ ಗೋಸಲ ಚನ್ನಬಸವೇಶ್ವರರು ೨೧ ಗುರು ಸಂಪ್ರದಾಯದ ಕಡೆಯವರಾದ ಕುಮಾರಬಂಕನಾಥನ ತರುವಾಯದವರು (ಸು.ಕ್ರಿ.೧೪೬೫) ಎಂದು ನಿರ್ಣಯಿಸಲಿಕ್ಕೆ ಬರುತ್ತದೆ. ಕುಮಾರ ಬಂಕನಾಥರಿಗೂ ಗೋಸಲ ಚನ್ನಬಸವೇಶ್ವರರಿಗೂ ಈ ಸಂಪ್ರದಾಯ ಸಂಬಂಧವು ಹೇಗೆ ಬಂದಿತೆಂಬುದನ್ನು ತಿಳಿವುದಕ್ಕೆ ಸಾಕಾದಷ್ಟು ಬರೆವಣಿಗೆಗಳು ಇನ್ನೂ ದೊರಕಿ ಇರುವುದಿಲ್ಲ. ೨೧ ಗುರು ಸಂಪ್ರದಾಯದಿಂದ ಬಂದ ಆಚಾರ್ಯ ಪೀಠದ ಚನ್ನಬಸವೇಶ್ವರ ಎಂಬ ಬರೆವಣಿಗೆಯೇ ಈಗ ಮುಖ್ಯವಾಗಿ ಗಣಿಸಲ್ಪಡಬೇಕಾಗಿದೆ. ಈ ಸಂಪ್ರದಾಯದಲ್ಲಿ ಕಂಡ ಸೋಮಶಂಭು ದೇಶಿಕನ ಕಾಲವಾದರೂ ಅಲ್ಲಮಪ್ರಭುದೇವನ ಸಮಕಾಲವೇ ಆಗುತ್ತದೆ. ಈತನ ಅನುಯಾಯಿ ಮತ್ತು ಸಮಕಾಲದವನಾದ ಈಶಾನಜಂಗಮವು ಬಸ

ವೇಶ್ವರನ ಕಾಲಕ್ಕೆ ಇದ್ದನೆಂದೂ ಬಸವೇಶ್ವರನು ಈ ಈಶಾನಜಂಗಮಕ್ಕೆ ಜೋಳವನ್ನು ಮುತ್ತು ಮಾಡಿ ಸಮರ್ಪಿಸಿದನೆಂದೂ ಗೊತ್ತಾಗಿದೆ. (ಶ. ಚ ೨, ಪು. ೫೩೧) ಸೋಮಶಂಭು ಕೃತ ಸಂಸ್ಕೃತ ಶ್ಲೋಕಗಳು ಕೆಲವು ಸಿಕ್ಕಿವೆ. ಅವು ಬಸವೇಶ್ವರನ ಬೋಧೆಯ ಪದ್ಧತಿಯನ್ನೇ ಅನುಸರಿಸಿ ಇವೆಯೇ ಹೊರತು ಭಿನ್ನ ಲಕ್ಷಣವನ್ನು ಹೊಂದಿಲ್ಲ. ಹೀಗೆ ಅನಾದಿ ಗುರು ಸಂಪ್ರದಾಯವೊಂದು ಬೇರೆಯಾಗಿ ವಿಜಯನಗರದ ಪ್ರೌಢರಾಯನ ಕಾಲದ ವರೆವಿಗೂ ನಡೆದು ಬಂದಿತು. ಈ ಸಂಪ್ರದಾಯದಲ್ಲಿ ೪ ನೆಯವರಾದ ಸಂಹಿತೆಯ ಕಾಳಿದಾಸಭಟ್ಟ ಎಂಬುವರ ಹೆಸರು ಬ್ರಾಹ್ಮಣ ಸ್ಮಾರ್ತರಂತೆ ಇದ್ದಾಗ್ಯೂ ಇವರು ವೀರಶೈವರಾಗಿದ್ದರೆಂದು ತಿಳಿದು ಬಂದಿದೆ.

ಈ ದೆಸೆಯಿಂದ ಅಲ್ಲಮಪ್ರಭುವಿನ ಸಂಪ್ರದಾಯವಲ್ಲದ ಬೇರೊಂದು ಗುರು ಸಂಪ್ರದಾಯವು ವೀರಶೈವರಲ್ಲಿ ಪೂರ್ವದಲ್ಲಿ ಇದ್ದಿತೆಂದು ಊಹೆಗೆ ಬರುವುದಾದರೂ ಈ ಸಂಪ್ರದಾಯವು ಮಹಿಮರಾದ ತೋಂಟದ ಸಿದ್ಧಲಿಂಗಸ್ವಾಮಿಗಳವರ ಗುರುಗಳಾದ ಚನ್ನಬಸವಸ್ವಾಮಿಗಳಲ್ಲಿಗೆ ಕೂಡಿ ಹೋಗಿ ಆ ತೋಂಟದ ಸಿದ್ಧಲಿಂಗಸ್ವಾಮಿಗಳ ಕಾಲಕ್ಕೆ ಅವರಲ್ಲಿ ಸಂಪೂರ್ಣ ಮುಳುಗಿ ಹೋಗಿರುತ್ತದೆ. ಅವರಿಂದೀಚೆಗೆ ಆ ಪ್ರಸಕ್ತಿಯೇ ಇಲ್ಲ.

ಈ ಮಹಿಮರಾದ ನಿ. ಜ. ತೋಂಟದ ಸಿದ್ಧಲಿಂಗಸ್ವಾಮಿಗಳವರನ್ನೇ ಮೊದಲು ಮಾಡಿಕೊಂಡು ಚೀಲಾಳ ಸಮಯವು ಬಂದಿತೆಂದು ಹೇಳಲಿಕ್ಕೆ ಬರುವಂತಿಲ್ಲ ಆ ಮಹಿಮರು ಬುಡಕಟ್ಟುಗಳನ್ನು ಏರ್ಪಡಿಸಿದರೇ ಹೊರತು ಎಂದೆಂದೂ ಜಗಳವಾಡುವ ಒಬ್ಬರೊಬ್ಬರು ಕೂಡಿದರೆ ನಡುವೆ ತೆರೆ (ಪರದೆ) ಗಳನ್ನು ಹಾಕಿಕೊಳ್ಳಬೇಕೆನ್ನುವಷ್ಟು ಭಿನ್ನತೆಯ ಉಗ್ರ ಸ್ವರೂಪದ ಸಮಯವನ್ನೇರ್ಪಡಿಸಲಿಲ್ಲ. ಮತ್ತು ಚೀಲಾಳ ಸಮಯ ಎಂಬ ಒಂದು ಸಮಯವನ್ನು ಏರ್ಪಡಿಸುವ ಕಾರಣವೂ ಇರಲಿಲ್ಲ. ಚೀಲಾಳಪ್ಪನವರು ಚಿತ್ರದುರ್ಗದಿಂದ ಹೊರಗೆ ಹಾಕಲ್ಪಟ್ಟಾಗಿನಿಂದ ಮುಂದೆ ಈ ಪರಂಪರೆಯು ಬಂದಿತೆಂಬುದಕ್ಕೆ ಚೀಲಾಳ ಸಮಯ ಎಂಬ ಇದರ ಹೆಸರೇ ಸಾಕ್ಷಿಯಾಗಿದೆ.

ಈ ಚೀಲಾಳಪ್ಪನವರು ಚಿತ್ರದುರ್ಗದಿಂದ ಸುಮಾರು ಕ್ರಿ.ಶ. ೧೭೪೯ ರಲ್ಲಿ ಕೆಲವು ಚರಮೂರ್ತಿಗಳೊಡನೆ ಹೊರಟು ಬಂದರೆಂದು ಗೊತ್ತಾಗುತ್ತದೆ. (ಈ ವರ್ಷವೇ ಮುರುಗಾ ಶಾಂತವೀರಸ್ವಾಮಿಗಳು ಇಮ್ಮಡಿ

ಮುರುಗಾಸ್ವಾಮಿಗಳಿಂದ ಗುರುಸಿದ್ಧಸ್ವಾಮಿಗಳಿಗೆ ಅಧಿಕಾರ ಕೊಟ್ಟಂದು.) ಮೊದಲು ಇವರು ಯಾವುದಾದರೊಂದು ಮುಖ್ಯ ಮಠವನ್ನಾಗಲೀ, ಸಂಸ್ಥಾನದ ಆಡಳಿತೆಯನ್ನಾಗಲೀ ಸ್ಥಾಪಿಸಲಿಲ್ಲ. ಹರಪನಹಳ್ಳಿ ರಾಜನನ್ನು ಆಶ್ರಯಿಸಿದ ಮೇಲೆ ಇವರ ತರುವಾಯದ ರಾಚೋಟಿ ಸ್ವಾಮಿಗಳು, ಮಹಂತಸ್ವಾಮಿಗಳು ಇವರ ಕಾಲಕ್ಕೆ ಈ ಚೀಲಾಳ ಸಮಯವು ಏರ್ಪಡಿಸಲ್ಪಟ್ಟಂತೆ ತೋರುತ್ತದೆ. ಈ ಮಹಂತಸ್ವಾಮಿಗಳೇ ಮುರುಗಾ ಶಾಂತವೀರಸ್ವಾಮಿಗಳಲ್ಲಿ ಭಕ್ತಿಯನ್ನಿಟ್ಟವರು. ಆ ಸ್ವಾಮಿಗಳು ಇದ್ದಾಗಲೇ ಇವರು ನಾಂದ್ಯವನ್ನು ರಚಿಸಿದರು. ಈಗಲೂ ವೀರಶೈವ ಮಠಗಳಲ್ಲಿ ದೊಡ್ಡವರ ಸ್ತೋತ್ರವನ್ನು ಸಣ್ಣವರು ಮಾಡುತ್ತಿರುತ್ತಾರೆ.

"ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳು ಸೇರಿಸಿದ ಏಕೋತ್ತರ ಶತಸ್ಥಲಸಾರ" ಎಂಬ ಒಂದು ಗ್ರಂಥವು ದೊರಕುತ್ತದೆ. ಇದರಿಂದ ನೋಟದ ಸಿದ್ಧಲಿಂಗಸ್ವಾಮಿಗಳನ್ನು ಮತ್ತು ಮುರುಗೆಯ ದೇಶಿಕೇಂದ್ರರವರನ್ನು ದೆಹಲಿಗೆ ಔರಂಗಜೇಬ ಪಾದ್‌ಷಹನ ಬಳಿಗೆ ಕಳುಹಿಸಿದವರೇ ಈ ಸಿದ್ಧವೀರಸ್ವಾಮಿಗಳು ಎಂದು ತಿಳಿಯಬಹುದಾಗಿದೆ. ಇವಂಗೆ ಸಿದ್ಧಲಿಂಗಸ್ವಾಮಿ ಎಂದು ಸೋಮಶೇಖರ ಶಿವಯೋಗಿಯು ಕರೆಯುತ್ತಾನೆ. (ಕ. ಚ. ೨, ೫೨೭) ಇವರ ಬಳಿಯಲ್ಲಿ ಮರಿ ರಾಚವಟ್ಟೀಶ (ಪ್ರಭುನಟನ ತಾರಾವಳಿ ಗ್ರಂಥವನ್ನು ರಚಿಸಿದವರು) ಮತ್ತು ಮಹಂತ ದೇಶಿಕ ಎಂಬುವವರಿದ್ದರು. ಇವರಿಬ್ಬರೂ ಸೇರಿ ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳವರ ತರುವಾಯ ಹಗರಿಹೊಳೆ ದಡದಲ್ಲಿ ವಾಸ ಮಾಡಲಿಕ್ಕೆ ಹೋದವರು. ಈ ಮರಿ ರಾಚವಟ್ಟೀಶ ಎಂಬುವವರೇ ಕಟ್ಟಿಗೆಹಳ್ಳಿ ರಾಚೋಟಿಸ್ವಾಮಿಗಳು ಎಂದು ಗದುಗಿನ ನಿರಂಜನ ವಂಶದಲ್ಲಿ ಪ್ರಕಟಿಸಲ್ಪಟ್ಟವರು ಎಂದು ತೋರುತ್ತದೆ. ರಾಘವಾಂಕ ಚರಿತೆಯನ್ನು ರಚಿಸಿದ ಸಿದ್ಧನಂಜೇಶನು ನಂದೀಶ, ರಾಚವಟ್ಟಕವಿ, ಇವರ ಕೃಪೆಯಿಂದ ತನ್ನ ಗ್ರಂಥವು ಪೂರ್ತಿಯಾಯಿತೆಂದು ಹೇಳಿರುತ್ತಾನೆ (ಕ. ಚ. ೨, ೩೭೯) ಇವರಲ್ಲಿ ನಂದೀಶನೇ ಸೋದೆಯ ರಾಜರ ಗುರುವಾಗಿದ್ದವನು. 'ಗುರುನಂದೀಶಾ' ಎಂಬಅಂಕಿತದಲ್ಲಿ ಸೋದೆಯ ರಾಜರು ರಚಿಸಿದ ಸದಾಶಿವ ನೀತಿ ಎಂಬ ಗ್ರಂಥವಿದೆ. ರಾಚವಟ್ಟ ಕವಿಯೇ ಈ ಕಟ್ಟಿಗೆಹಳ್ಳಿಯ ರಾಯಚೋಟಿ ಸ್ವಾಮಿಯು. (ಇವರ ಕಾಲ ಸು. ೧೭೧೦) ಏಕೆಂದರೆ ಇವರೆಲ್ಲರೂ ಸಮಕಾಲೀನರು. ಮತ್ತು ಇವರು ಮೊದಲನೆಯ

ಮುರುಗೇಂದ್ರಸ್ವಾಮಿಗಳ ಸಮಕಾಲದವರು. (ಮೊದಲನೆಯ ಮುರು ಗೇಂದ್ರಸ್ವಾಮಿಗಳು ಎರಡನೆಯ ಮುರುಗೇಂದ್ರ ಸ್ವಾಮಿಗಳಾದ ಗುರು ಸಿದ್ಧಸ್ವಾಮಿಗಳು ಅಧಿಕಾರಕ್ಕೆ ಬಂದ ಕೆಲವು ತಿಂಗಳುಗಳ ತರುವಾಯ್ಯ ಲಿಂಗೈಕ್ಯರಾದರೆಂದು ನಿರ್ವಿವಾದವಾಗಿ ಹೇಳಲಿಕ್ಕೆ ಬರುವಂತಿದೆ.) ಈ ಕಾರಣಗಳಿಂದ ಕಟ್ಟಿಗೆಹಳ್ಳಿ ರಾಜೋಟಿಸ್ವಾಮಿಗಳು ನಿ.ಜ. ತೋಂಟದ ಸಿದ್ಧೇಶ್ವರಸ್ವಾಮಿಗಳ ಪರಂಪರೆಯವರು, ಇವರ ತರುವಾಯ ಕೌದಿ ಮಹಂತಸ್ವಾಮಿಗಳು, ಎಂದು ಗದುಗಿನ ನಿರಂಜನ ವಂಶದರ್ಪಣದಲ್ಲಿ ಹೇಳಿರುವುದು ಈ ಇಬ್ಬರಿಗಾಗಿಯೇ ಎಂದು ನಿರ್ಣಯಿಸಬಹುದಾದರೂ ಕಟ್ಟಿ ಗೆಹಳ್ಳಿ ಸಿದ್ಧವೀರಸ್ವಾಮಿಗಳ ತರುವಾಯ ಶಿವಾನುಭಾವ ಪಟ್ಟವು ನೋಟದ ಸಿದ್ಧಲಿಂಗಸ್ವಾಮಿ ಗಳಿಗೆ ಆಯಿತೆಂದೂ, ಶಿಖಾಪಟ್ಟವು ಅವರಿಂದ ಮುರು ಗಾಸ್ವಾಮಿಗಳಿಗಾಯಿತೆಂದೂ ಈ ಮೊದಲೇ ವಿಮರ್ಶಿಸಲ್ಪಟ್ಟಿದೆ. ರಾಯ ಚೂಟಿ= ರಾಜೋಟಿ (ಈಶಬ್ದವು ರಾಜಚೂಡ ಎಂಬುದರತದ್ಭವ) ಸ್ವಾಮಿ ಗಳು ತಮ್ಮ ಅಧಿಕಾರವನ್ನು ಮಹಂತಸ್ವಾಮಿಗೆ ಕೊಟ್ಟಿರುವುದರಿಂದ ಇಮ್ಮ ಡಿ ಮುರುಗೇಂದ್ರಸ್ವಾಮಿ (ಗುರುಸಿದ್ಧಸ್ವಾಮಿ) ಗಳಿಗೆ ಕೊಡಲಿಕ್ಕಾಗುವು ದಿಲ್ಲವೆಂದು ಅವರು ಹೇಳಿದರೆಂದು (' ಅನಾದಿ ಅಲ್ಲಮಪ್ರಭು ' ಪು.೧೨೬) ಜನತೆಯು ತಿಳಿದುಕೊಂಡಿದ್ದ ಕಥೆಯು ನಿಜವೆಂದು ನಂಬಲವಕಾಶವಿರ ದಿದ್ದರೂ ಈ ರಾಯಚೂಟಿಸ್ವಾಮಿಗಳಿಂದ ಮೊದಲನೆಯ ಮುರುಗೇಂ ದ್ರಸ್ವಾಮಿಗಳವರಿಗೆ ಅಧಿಕಾರ ದೊರೆಯಲಿಲ್ಲವೆಂಬ ಚರಿತ್ರಾಂಶವನ್ನು ದೃಢಪಡಿಸದೆ ಬಿಡುವುದಿಲ್ಲ. ಮೊದಲನೆಯ ಮುರುಗೇಂದ್ರಸ್ವಾಮಿ ಗಳಿಗೆ ಶಿಖಾ (ಸಿಕ್ಕಾ) ಪಟ್ಟದವರಲ್ಲವೆಂದು ಯಾರೂ ಹೇಳಲಾರರು. ಆದರೆ ಕೆಂಪಿನ ಸಿದ್ಧಬಸವಸ್ವಾಮಿಗಳೊಡನೆ ಗುರುಸಿದ್ಧಸ್ವಾಮಿ ಗಳು ಜಗಳ ಮಾಡಿ ಸಾಕಾದ ಮೇಲೆ ಅವರಿಗಿದ್ದ ಶಿವಾನುಭವ ಪಟ್ಟ ವನ್ನು ಕಟ್ಟಿಗೆಹಳ್ಳಿಯವರಾದ ರಾಜೋಟಿಸ್ವಾಮಿಗಳಿಂದ ತಾವು ಪಡೆ ಯಬೇಕೆಂದು ಗುರುಸಿದ್ಧಸ್ವಾಮಿಗಳು ಒಂದು ವೇಳೆ ಅಪೇಕ್ಷಿಸಿರಬಹುದು. ಆದರೆ ರಾಜೋಟಿಸ್ವಾಮಿಗಳು ಅದನ್ನೂ ಕೊಟ್ಟಿಲ್ಲ. ಮುಂದೆ ಚೀಲಾಳ ಸಮಯವನ್ನು ಬಳೆಯಿಸಿದರೇ ಹೊರತು ಶಿವಾನುಭವ ಪಟ್ಟ ವನ್ನು ಮುಂದಕ್ಕೆ ತರಲಿಲ್ಲ. ಆದುದರಿಂದ ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿ ಗಳಿಂದ ಈ ರಾಯಚೂಟಿಸ್ವಾಮಿಗಳಿಗೆ ಶೂನ್ಯಸಿಂಹಾಸನದ ಅಧಿಕಾರವು ಶಿಖಾರೂಪವಾಗಿ ಆಗಲೀ, ಶಿವಾನುಭಾವರೂಪವಾಗಿ ಆಗಲೀ ಬಂದಿರಲಿ ಲ್ಲವೆಂದು ನಿರ್ಧರಿಸಲಿಕ್ಕೆ ಯಾವ ಅಡ್ಡಿಯೂ ಬಾರದು. ಈ ಕಾರಣ

ಗಳಿಂದ ಚೀಲಾಳಪ್ಪನವರು ತಮಗೆ ಮೊದಲನೆಯ ಮುರುಗೇಂದ್ರ ಸ್ವಾಮಿಗಳು ಶೂನ್ಯಪೀಠದ ಅಧಿಕಾರವನ್ನು ಕೊಡಲಿಲ್ಲವೆಂದು ಅವರನ್ನು ತಿರಸ್ಕರಿಸಿ ಅವರ ಪೂರ್ವದ ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳ ಶಿಷ್ಯರಾದ ರಾಯಚೂಟಸ್ವಾಮಿಗಳು ಅವರ ಶಿಷ್ಯರು ಮಹಂತಸ್ವಾಮಿಗಳು ಇವರನ್ನು ಕೂಡಿಕೊಂಡು ಇದ್ದರೆಂದು ತಿಳಿಯಬೇಕಾಗಿದೆ.

ಈ ಮಹಂತಸ್ವಾಮಿಗಳು ಮುರುಗೇಂದ್ರಸ್ವಾಮಿಗಳ ಸ್ತುತಿ ಮಾಡಿರುವುದರಿಂದ ಅವರ ತರುವಾಯದ ಚಿತ್ರದುರ್ಗದ ಮಠದ ಸ್ವಾಮಿಯಾಗಿರಬೇಕೆಂದು ಕವಿಚರಿತ್ರಕಾರರು ಊಹಿಸುತ್ತಾರೆ ಇದು ಸರಿಯಲ್ಲ

ಚೀಲಾಳ ಸಮಯದವರು ಪ್ರಬಲರಾಗಿದ್ದುದರಿಂದ ಇವರ ಸಮಯಕ್ಕೆ ಮುಂದೆ ಸಂಪಾದನಾ ಸಮಯ ಮುಂತಾದ ಉಳಿದ ಸಮಯಗಳವರು ಕೂಡಿಕೊಂಡುದರಿಂದ ಈ ಸಮಯದವರು ಬರಬರುತ್ತಾ ಪ್ರಬಲರಾದರು. ಚೀಲಾಳಪ್ಪನವರು ಹೋದ ಕೂಡಲೇ ಸಮಯವನ್ನೇರ್ಪಡಿಸಲಿಲ್ಲ, ಎಂಬುದಕ್ಕೆ ಚೀಲಾಳಪ್ಪನವರ ವಿಷಯವಾಗಿ ಕುಮಾರ ಸ್ವಾಮಿಗಳು ಬಾಗಲಕೋಟೆಯವರಿಗೆ ಪತ್ರ ಬರೆಯುವಾಗ ಚೀಲಾಳ ಸಮಯವೆಂದು ಉಲ್ಲೇಖಿಸದೆ ಇರುವುದೇ ಸಾಕ್ಷಿಯಾಗಿದೆ.

ಚೀಲಾಳಪ್ಪನವರು ತಮ್ಮ ಕಾಲಕ್ಕೆ ಸಂಪಾದನಾ ಸಮಯದವರ ಪ್ರತಿಷ್ಠೆ ನಡೆಯುತ್ತಿದ್ದ ಹಾಗಲವಾಡಿ ಸೀಮೆಯಲ್ಲಿ ಇದ್ದ ನಂದಿಪುರದ ಚಿಕ್ಕ ಭೂಪಾಲಕನ ಆಶ್ರಯದಲ್ಲಿ ಇದ್ದ ವಿರಕ್ತ ತೋಂಟದಾರ್ಯರು ಮೊದಲಾದವರ ಮಹತ್ವವನ್ನು ತಿಳಿದು ಆ ತೋಂಟದಾರ್ಯರಲ್ಲಿ ಭಕ್ತಿ ಇಟ್ಟುದರಿಂದಲೂ, ಅವರು ಅನೇಕ ಗ್ರಂಥಗಳನ್ನು ರಚಿಸಿ ಮಹಿಮರಾಗಿದ್ದುದರಿಂದಲೂ ಆ ತೋಂಟದಾರ್ಯರ ಹೆಸರನ್ನೇ ಮುಂದುಮಾಡಿಕೊಂಡು ಈ ಸಮಯದವರು ಮಠಗಳು ಮೊದಲಾದುವನ್ನು ನಿರ್ಮಿಸಿದರೆಂದು ಹೇಳುವುದಾದರೆ ತಕ್ಕ ಆಧಾರವು ಬೇಕು. ಈಗಲೂ ತೋಂಟದಾರ್ಯರ ಮಠ ಎಂಬುದಾಗಿಯೇ ಗದುಗಿನ ಮಠ ಮೊದಲಾದವುಗಳಿಗೆ (ತೋಂಟದಾರ್ಯ ಮುದ್ರಾಲಯ ಮೊದಲಾದವುಗಳಿಗೆ) ಹೆಸರಿಟ್ಟಿರುತ್ತಾರೆ. ಆದರೆ ಈ ತೋಂಟದಾರ್ಯ ಎಂಬ ಹೆಸರಿನವರು ಮಹಾಮಹಿಮರಾದ ನಿರಂಜನ ಜಗದ್ಗುರು ತೋಂಟದ ಸಿದ್ಧೇಶ್ವರಸ್ವಾಮಿಗಳಿಂದ ಭಿನ್ನರೆಂಬುದನ್ನು ಇಲ್ಲಿ ಮತ್ತೆ ಹೇಳಬೇಕಾದುದಿಲ್ಲ. ಮಹಾಮಹಿಮರಾದ ತೋಂಟದ ಸಿದ್ಧಲಿಂಗಸ್ವಾಮಿಗಳವರಿಗೆ ಅನಾದಿ ತೋಂಟದಾರ್ಯ ಎಂದು ಕೆಲವು ಕಡೆ ಲೇಖನಗಳಿವೆ. ಇವರ ಕಾಲದಿಂದ ಈ ಪರಂಪರೆಯು

ಬೀದಿದ್ದರೆ ಚೀಲಾಳ ಸಮಯವೆಂದು ಹೆಸರು ಬರುತ್ತಿರಲಿಲ್ಲ. ಚೀಲಾಳ ಬುಡಕಟ್ಟಿನ ತೋಂಟಪ್ಪನವರು ಈ ಸಮಯದ ಕರ್ತರಾದ್ದರಿಂದ ಅವರಿಗಾಗಿ ತೋಂಟದಾರ್ಯ ಎಂಬ ಹೆಸರನ್ನು ಈ ಪರಂಪರೆಯವರು ಗೌರವಿಸಿದಂತೆ ತೋರುತ್ತದೆ. ಈ ಚೀಲಾಳ ಸಮಯ ಪರಂಪರೆಯು ಐನೆಯ ವೃಕ್ಷವಾಗಿ ಕಡೆಯಲ್ಲಿ ಕೊಡಲ್ಪಟ್ಟಿದೆ. ಇದು ಈಗ ಆಂಗ್ಲೇಯ ಸಂಕಾರದಿಂದ ಜಗದ್ಗುರು ಎಂದು ಒಪ್ಪಲ್ಪಟ್ಟ ಗದಗಿನ ತೋಂಟದ ಮಹಾಸ್ವಾಮಿಗಳವರ ಪರಂಪರೆಯ ವೃಕ್ಷವೆಂದು ತಿಳಿಯಬೇಕು.

ಕೆಂಪಿನ ಸಮಯ.

ಚಿತ್ರದುರ್ಗದಲ್ಲಿ 'ಮುರುಗೇಂದ್ರಸ್ವಾಮಿಗಳೂ, ಕುಮಾರಸ್ವಾಮಿಗಳೂ ಸೇರಿ ಮಹಾನವಮಿಯ ಉತ್ಸವವನ್ನು ಏರ್ಪಡಿಸಿದ ಕಾಲದಲ್ಲಿ ಕುಮಾರಸ್ವಾಮಿಗಳನ್ನು ಮುರುಗೇಂದ್ರಸ್ವಾಮಿಗಳ ಸಮ ಆಸನದಲ್ಲಿ ಕೂಡಿಸಿಕೊಳ್ಳಬಾರದೆಂದು ಜಗಳ ತೆಗೆದ ಐವರೂ ಒಂದೊಂದು ಸಮಯ ಭೇದವನ್ನು ಏರ್ಪಡಿಸಿಕೊಂಡರೆಂದೂ ಅದರಲ್ಲಿ ಕೆಂಪಿನ ಬುಡಕಟ್ಟಿನ ಸಂಗನಬಸವಪ್ಪನವರು ಒಬ್ಬರೆಂದೂ ಈ ಹಿಂದೆಯೇ ಹೇಳಲ್ಪಟ್ಟಿರುವುದಷ್ಟೆ. ಈ ಕೆಂಪಿನ ಸಂಗನಬಸವಪ್ಪನವರು ಕಲ್ಯಾಣ ಸೀಮೆಯಲ್ಲಿ ನಿಂತರು. ಅಲ್ಲಿ ಹೂಲಿಕುಂಟೆಯಲ್ಲಿ ಇವರ ಸಮಯದ ಮಠವು ಪ್ರಸಿದ್ಧಿಗೆ ಬಂದಿತು. ಈ ಸಂಗನಬಸವಪ್ಪನವರದು ಕೆಂಪಿನ ಸಮಯದ ಒಂದು ಶಾಖೆಯು. ಈ ಪರಂಪರೆಯ ವಿಷಯವಾಗಿ ಯಾವ ಗ್ರಂಥವೂ ಮುದ್ರಣವಾಗಿಲ್ಲ. ಈ ಸಮಯದ ಇನ್ನೊಂದು ಶಾಖೆ ಇದೆ. ಈ ಶಾಖೆಯೇ ಕೆಂಪಿನ ಬುಡಕಟ್ಟಿನ ನೋಟದ ಸಿದ್ಧಲಿಂಗ ಸ್ವಾಮಿಗಳವರ ಸಂಬಂಧದ ಕೆಂಪಿನ ಶಿವಲಿಂಗಪ್ಪನವರದು. ಸಿದ್ಧನಂಜೇಶನು ತನ್ನ ರಾಘವಾಂಕ ಚರಿತ್ರೆಯಲ್ಲಿ ಚರಚಕ್ರವರ್ತಿ ಜಡೆಯ ಶಿವಲಿಂಗದೇವಾರ್ಯ ಎಂಬದಾಗಿ ಸ್ತೋತ್ರ ಮಾಡಿರುವುದು ಇವರನ್ನೇ. ಇವರು ನೋಟದ ಸಿದ್ಧಲಿಂಗಸ್ವಾಮಿಗಳಲ್ಲಿ ಮುಖ್ಯ ಶಿಷ್ಯರಾಗಿದ್ದಂತೆ ತೋರುತ್ತದೆ. ಆದುದರಿಂದಲೇ ನೋಟದ ಸಿದ್ಧಲಿಂಗಸ್ವಾಮಿಗಳಿಗೆ ಉಪಯೋಗಿಸುವ 'ಚರಚಕ್ರವರ್ತಿ' ಎಂಬ ಪದವನ್ನು ಇವರಿಗೆ ಉಪಯೋಗಿಸಿದ್ದಾರೆ. ಇದರಿಂದ ಶಿವಾನುಭಾವ ಪಟ್ಟಕ್ಕೆ ಆಗ ವಿಶೇಷ ಗೌರವವು ಕೊಡಲ್ಪಡುತ್ತಿದ್ದಿತೆಂದು ತಿಳಿಯುತ್ತದೆ. ಮುಂದೆ ಕುಮಾರ ಕೆಂಪಿನ ಸಿದ್ಧಬಸವಸ್ವಾಮಿಗಳು ಏರ್ಪಡಿಸಿದ ಕುಮಾರ ಸಮ

ಯದಲ್ಲಿ ಇವರ ಪರಂಪರೆ ಕೂಡಿ ಹೋದಂತೆ ತೋರುತ್ತದೆ.

ಮುರುಗಾಸಮಯ ಕುಮಾರಸಮಯಗಳು.

ಶಿಖಾಪಟ್ಟದ ಇಮ್ಮಡಿ ಮುರುಗೇಂದ್ರಸ್ವಾಮಿಗಳಾದ ಗುರುಸಿದ್ಧ ಸ್ವಾಮಿಗಳೂ ಶಿವಾನುಭವ ಪಟ್ಟದ ೧ ಕಂಪಿನ ಸಿದ್ಧಬಸವಸ್ವಾಮಿಗಳೂ ಜಗಳಮಾಡಿ ಕಡೆಗೆ ಕ್ರಮವಾಗಿ ಮುರುಗಾಸಮಯ, ಕುಮಾರ ಸಮಯಗಳನ್ನೇರ್ಪಡಿಸಿಕೊಂಡರೆಂದು ಈ ಹಿಂದೆ ಹೇಳಿದೆ. ಶೂನ್ಯ ಸಿಂಹಾಸನದ ಅಧಿಕಾರ ಪರಂಪರೆಯಿಂದ ಬಂದ ತಮ್ಮ ಈ ಪಟ್ಟಗಳ ಹೆಸರನ್ನು ಹೇಳುವುದನ್ನು ಬಿಟ್ಟು ಉಳಿದವರಂತೆ ತಾವೂ ಒಂದೊಂದು ಸಮಯವನ್ನು ಇವರೂ ಏರ್ಪಡಿಸಿಕೊಂಡುದಕ್ಕಾಗಿ ಆಶ್ಚರ್ಯವನ್ನೂ ವ್ಯಸನವನ್ನೂ ಹೊಂದಬೇಕಾಗಿದೆ. ಪಟ್ಟಕ್ಕಿಂತಲೂ ಸಮಯ ದೊಡ್ಡದಾಯಿತೇ ಎಂಬುದು ಆಶ್ಚರ್ಯ. ಅಧಿಕಾರ ಪರಂಪರೆಯವರಾದ ತಾವೂ ಎಲ್ಲರಂತೆ ಜಗಳದ ಸಮಯದವರು ಎಂದೆನಿಸಿಕೊಳ್ಳುತ್ತಿರುವುದು ವ್ಯಸನ. ಈ ಎರಡು ಸಮಯಗಳು ಉಂಟಾಗಲು ಒದಗಿದ ಸಂಭವಗಳೂ (ಹಳೆಯಬೀಡು ವ್ಯಾಜ್ಯ ಇಸಳೂರಿನ ಪಂಚಹತ್ಯ ಮೊದಲಾದವುಗಳೂ) ವೀರಶೈವ ಸಮಾಜದ ದುರ್ದೈವ ಘಟನೆಗಳೇ ಎಂದು ಹೇಳಲನುಮಾನವೇನೂ ಇಲ್ಲ. ನಿರಂಜನ ಪೀಠದ ಅಧಿಕಾರದಲ್ಲಿ ಇದ್ದ ಕಟ್ಟಿಗೆಹಳ್ಳಿ ಸಿದ್ಧವೀರ ಸ್ವಾಮಿಗಳವರು ಸಂತೋಷದಿಂದ ಒಪ್ಪಿ ಮಾಡಿಕೊಟ್ಟ ಎರಡು ಭಾಗಗಳಿವು. ಮೊದಲು ಒಬ್ಬರಿಗೊಬ್ಬರು ಪ್ರೀತಿಯಿಂದ ನಡೆದುದು ನ್ಯಾಯವಾದ ಪರಂಪರೆಗಳೆಂಬುದಕ್ಕೆ ಹೆಗ್ಗುರುತು ಇವು ತಮ್ಮ ಮೊದಲಿನ ಪಟ್ಟದ ಹೆಸರನ್ನೇ ಹೇಳಿಕೊಂಡು ಬಂದಿದ್ದರೆ ಸಮಾಜಕ್ಕೆ ಇವುಗಳಲ್ಲಿ ಗೌರವವು ಹೆಚ್ಚು ಬೆಳೆಯುತ್ತಿದ್ದಿತು. ಅಧಿಕಾರ ಪರಂಪರೆಯಲ್ಲಿ ಕಟ್ಟಿಗೆಹಳ್ಳಿ ಸ್ವಾಮಿಗಳ ತರುವಾಯ ಮುರುಗೇಂದ್ರ ಸ್ವಾಮಿಗಳೆಂದು ಹೇಳಿರುವುದನ್ನು ಗ್ರಂಥ ಶೋಧಕರು ಬಹಳ ಕಡೆಗಳಲ್ಲಿ ನೋಡಬಹುದು. ಶಿವಾನುಭಾವ ಪಟ್ಟವವರಿಗೂ ರಾಜರ ಶಾಸನ, ಭಕ್ತರು ಬರೆದುಕೊಟ್ಟ ಕಾಣಿಕಾ ಸಲ್ಲಿಸುವ ಪತ್ರ ಮೊದಲಾದವುಗಳೂ ಉಂಟು. ಆದುದರಿಂದ ಈ ಸಮಯಗಳ ಪರಂಪರೆಯ ವೃಕ್ಷಗಳನ್ನು (೩ ಮತ್ತು ೪) ಶಿಖಾಪಟ್ಟ ಶಿವಾನುಭಾವ ಪಟ್ಟ ಎಂಬ ಶಿರೋಲೇಖದಲ್ಲಿ ಕೊಟ್ಟಿರುತ್ತದೆ.

ಉಳಿದ ಸಮಯಗಳು.

ಈಗ ಪ್ರಸಿದ್ಧವಾಗಿ ಸಂಪಾದನಾ ಸಮಯ, ಮುರುಗಾ ಸಮ

ಯು, ಕುಮಾರ ಸಮಯು, ಚೀಲಾಳ ಸಮಯು, ಕೆಂಪಿನ ಸಮಯ. ಹೀಗೆ ಐದು ಸಮಯುಗಳು ಮಾತ್ರ ಇರುವುದರಿಂದಲೂ, ಇವುಗಳಲ್ಲಿ ಉಳಿದ ಸಮಯುಗಳು ಕೂಡಿ ಹೋಗಿರುವುದರಿಂದಲೂ ಒಂದು ವೇಳೆ ತೋರಿದರೂ ಮುಖ್ಯವಾಗಿಲ್ಲವಾದುದರಿಂದಲೂ ಇವುಗಳಲ್ಲಿ ಕೆಲವು ಸಮಯುಗಳ ಹೆಸರನ್ನು 'ಸಮಯುಗಳ ಬೆಳೆವಣಿಗೆ' ಎಂಬ ಪ್ರಕರಣದಲ್ಲಿ ಹೇಳಿರುವುದರಿಂದಲೂ ಪುನಃ ಅವುಗಳ ಪ್ರಸ್ತಾಪವನೆತ್ತಿ ವಾಚಕರ ತಲೆಬೇನೆಯನೆಬ್ಬಿಸಬಾರದೆಂದು ಇಲ್ಲಿಗೆ ವಿರಮಿಸಿದುದಾಗಿದೆ. ಈಗ ಅನೇಕ ಮಠಗಳವರು ಅಪೇಕ್ಷಿಸಬಹುದಾದರೆ ಅನೇಕ ಸಮಯುಗಳನ್ನು ಏರ್ಪಡಿಸಿಕೊಳ್ಳಬಹುದಾಗಿದೆ, ಎಂದು ತಿಳಿಯಲಿಕ್ಕೆ ಬಾಧಕವೇನೂ ಇಲ್ಲ

ಒಟ್ಟಿನಲ್ಲಿ ಈ ಸಮಯುಗಳು ಎಂಬವು ಜಗಳದಿಂದ ತಾವು ತಾವೇ ಮಾಡಿಕೊಂಡವುಗಳಾಗಿವೆ.

ಸಮಯುಗಳಿಂದಾಗಿರುವ ಪರಿಣಾಮ.

ವೀರಶೈವರ ಇತಿಹಾಸ ದೃಷ್ಟಿಯಿಂದ ಶಾ. ಶ. ೧೬೪೧ ನೆಯ ವಿಕಾರಿ ಸಂ॥ರವು (ಕ್ರಿ. ಶ. ೧೭೧೯) ಬಹಳ ಕೆಟ್ಟವರ್ಷವು. ಆ ವರ್ಷ ಸೊರಬದ ತಾ॥ ಜಡೆಯದ ಮೆಣಸಿನ ಹಳ್ಳದ ಎರಡೂ ದಡಗಳಲ್ಲಿ ಕೂಡಿದ ವೀರಶೈವರ ಸಾವಿರಾರು ಪ್ರತಿನಿಧಿಗಳು ಧಾರ್ಮಿಕ ಮೂಢಭಾವನೆ ಎಂದರೆ ಹಿರಿಯರು ಅಪ್ಪಣೆ ಮಾಡಿದಂತೆ ನಡೆಯಬೇಕೆಂಬ ಮುಗ್ಧಾಭಿಪ್ರಾಯದ ಪ್ರಕಾರ ಈ ಇಬ್ಬರು ಸ್ವಾಮಿಗಳ ವಿವಾದದ ತೀರ್ಮಾನ ಮಾಡಿದರೇ ಹೊರತು ವೀರಶೈವ ಧರ್ಮದ ಮೂಲಾಭಿಪ್ರಾಯವನ್ನು ವಿಚಾರ ಮಾಡಿದಂತೆ ತೋರುವುದಿಲ್ಲ. ಚಿತ್ರದುರ್ಗದ ಶಿಖಾಪಟ್ಟದ ಎರಡನೆಯ ಸ್ವಾಮಿಗಳಾದ ಗುರುಸಿದ್ಧ ಸ್ವಾಮಿಗಳು ಹಳೇಬೀಡ ಹೊಲೆಬಳಕೆಯ ಮನೆತನದವನಾದ ಚನ್ನವೀರಯ್ಯನನ್ನು ಶುದ್ಧಮಾಡಿದುದು ದೊಡ್ಡತಪ್ಪೆಂದು ಸಮಾಜವು ನಿರ್ಣಯಿಸಿದ.ದು ವೀರಶೈವರ ಧಾರ್ಮಿಕಾಭಿಪ್ರಾಯಕ್ಕೆ ಭಿನ್ನವಾದ ವಿಷಯವಾಗಿದೆ. ಆಗಿನ ಜನರು ಗುರುಸಿದ್ಧ ಸ್ವಾಮಿಗಳ ಹಿಂದಿನ ಮುರುಗೇಂದ್ರ ಸ್ವಾಮಿಗಳೂ ಅವರ ಹಿಂದಿನ ಕಟ್ಟಿಗೆಹಳ್ಳಿ ಸಿದ್ಧವೀರ ಸ್ವಾಮಿಗಳೂ ವಂಶ ಪಾರಂಪರ್ಯವಾಗಿ ಬಹಿಷ್ಕಾರ ಪಡಿಸಿದುದನ್ನು ಈ ಗುರುಸಿದ್ಧ ಸ್ವಾಮಿಗಳು ಶುದ್ಧ ಮಾಡಿದರೆಂದು ಆ ಗುರುಸಿದ್ಧ ಸ್ವಾಮಿಗಳ ಮೇಲೆ ದೊಡ್ಡ ಆರೋಪವನ್ನು

ಹೊರಿಸಿರುತ್ತಾರೆ. ಒಂದು ಬ್ರಹ್ಮವೇ ಅಂಗ ಲಿಂಗ ಎಂಬ ಎರಡು ಭಾಗವಾಗಿ ಬಂದಿತೆಂದೂ ಅಥವಾ ಒಬ್ಬ ಶಿವನೇ ಪೂಜ್ಯ ಪೂಜಕ ಭಾವದಿಂದ ಲೀಲೆಗಾಗಿ ಜಗತ್ತಿನಲ್ಲಿ ಅವತಾರ ಮಾಡಿದನೆಂದೂ ಹೇಳುವ ವೀರಶೈವರು, (ದೀಕ್ಷೆಯಾದ ಕೂಡಲೇ ತಂದೆಯ ಹೆಸರನ್ನು ಬಿಟ್ಟು ಗುರುವಿನ ಹೆಸರನ್ನು ಹೇಳಿ ಗುರುವಿನ ಮಕ್ಕಳಾಗುವ ವೀರಶೈವರು) ಹಳೆಯ ಬೀಡಿನಲ್ಲಿ ಒಬ್ಬನು ಹೊಲೆಬಳಕೆ ಮಾಡಿದರೆ ಅವನ ಮಗನೇನೂ ತಪ್ಪು ಮಾಡಿದವನಲ್ಲ ಆ ಮಗನ ಅವತಾರವೇ ಬೇರೊಂದು ಎಂದು ಏಕೆ ಯೋಚಿಸದೆ ಹೋದರು ? ಒಬ್ಬನ ಜನ್ಮವೇ ಕೊನೆಯದು ಎಂದು ದೃಢದಿಂದ ತಿಳಿದುಕೊಂಡಿದ್ದ ವೀರಶೈವರು ತಮ್ಮಲ್ಲಿ ಒಬ್ಬನು ತಪ್ಪು ಮಾಡಿದರೆ ಅವನ ಮಗನಿಗೆ ಅಥವಾ ಅವನ ವಂಶಕ್ಕೆ ಬಹಿಷ್ಕಾರ ಹಾಕುವದೆಂತು? ಈ ವಿಧವಾದ ಧಾರ್ಮಿಕಾಭಿಪ್ರಾಯದ ಆಧಾರದಿಂದ ನಿರ್ಣಯ ಮಾಡುವುದಾದರೆ ನಿ. ಜ. ಗುರುಸಿದ್ಧಸ್ವಾಮಿಗಳು ಚನ್ನವೀರಯ್ಯನನ್ನು ಶುದ್ಧಮಾಡಿದುದು ಎಷ್ಟು ಮಾತ್ರವೂ ಅನ್ಯಾಯವಲ್ಲ. ಒಬ್ಬ ಹೊಲೆಯನೇ ವೀರಶೈವ ಮಾರ್ಗದ ಆಚರಣೆ ಮಾಡಿದರೆ ಅವನಿಗೆ ಎಲ್ಲರ ಸಮನಾಗಿ ಕಾಣಬೇಕೆಂದು ನಿಯಮವಿರುವಲ್ಲಿ ತಪ್ಪು ಮಾಡಿದ ಕಲ್ಯಾಣಯ್ಯನ ಮಗನಾದ ಚನ್ನವೀರಯ್ಯನು ಏನು ದೋಷ ಮಾಡಿರುತ್ತಾನೆ ಎಂದು ನಿರ್ಣಯಿಸಬೇಕು? ಇದೊಂದು ದೋಷವೆಂದು ನಿ. ಜ. ಗುರುಸಿದ್ಧಸ್ವಾಮಿಗಳಮೇಲೆ ಆಪಾದನೆ ಮಾಡಿದ ಕೆಂಪಿನ ಸಿದ್ಧಬಸವ ಸ್ವಾಮಿಗಳೂ ಕೂಡಾ ವೀರಶೈವ ಧರ್ಮದ ನಿಜಾಭಿಪ್ರಾಯವನ್ನು ತಿಳಿಯದೆ ಹೋದುದಕ್ಕಾಗಿ ಬಹಳ ವ್ಯಸನ ಪಡಬೇಕಾಗಿದೆ. ಈ ನಿ. ಜ. ಕೆಂಪಿನ ಸಿದ್ಧಬಸವ ಸ್ವಾಮಿಗಳ ಮೇಲೆ ಬಂದ ಪಂಚಹತ್ಯೆಯ ದೋಷಕ್ಕೆ ಆ ದೊಡ್ಡಸಭೆಯತೀರ್ಮಾನದಂತೆ ಆ ತಪ್ಪಿಗೆ ಬಾಧ್ಯರಲ್ಲವೆಂದು ನಾವು ತಿಳಿಯಬಹುದು. ಆದರೆ ಸಭೆಯ ನಿರ್ಣಯವಾದಮೇಲೆ ಮೊದಲಿನಂತೆ ಉಭಯರೂ ಐಕಮತ್ಯವಾಗಿ ನಡೆಯಬೇಕಾಗಿದ್ದಿತು. ಇದಕ್ಕೆ ಗುರುಸಿದ್ಧಸ್ವಾಮಿಗಳು ಒಪ್ಪಿಗೆಯಿಂದಿದ್ದರೆಂಬ ಬಗ್ಗೆ (ನಿರಂಜನವಂಶ ರತ್ನಾಕರ ೨ ಪುಟ ೪೩) ದಿಂದ ನಮಗೆ ಸರಿಯಾದ ಆಧಾರವು ದೊರಕುತ್ತದೆ. ಹೀಗಿರುವ್ರುದರಿಂದ ಕೆಂಪಿನಸಿದ್ಧಬಸವ ಸ್ವಾಮಿಗಳೇ ಈ ಜಗಳವನ್ನೆಬ್ಬಿಸುವುದಕ್ಕೆ ಮೊದಲನೆಯವರೆಂದು ನಿರ್ಣಯಿಸಲಿಕ್ಕೆ ಅನುಮಾನವೇನೂ ಇಲ್ಲ. ಒಂದು ವೇಳೆ

ತಮ್ಮ ಪೂರ್ವದ ಗುರುಗಳು ಕೊಟ್ಟ ಬಹಿಷ್ಕಾರವೆಂದು ಗೌರವವಿಡಬೇಕೆಂದು ಅವರು ಯೋಚಿಸಿದ್ದರೆ ಅದನ್ನು ತಿದ್ದುವವರು ಯಾರೂ ಇಲ್ಲವೆಂದು ಯೋಚಿಸಿದ್ದುದೂ ಸರಿಯಲ್ಲ. ನಿ. ಜ. ಅಲ್ಲಮಪ್ರಭುಸ್ವಾಮಿಗಳ ಕಾಲಕ್ಕೆ ಇಡೀ ಭರತಖಂಡದಲ್ಲಿನ ವೀರಶೈವರೆಲ್ಲಾ ತಮ್ಮ ಶಿಷ್ಯರೆಂಬ ಅವರ ಭಾವನೆ ಯಾವುದು? ಕೆಳದೀ ರಾಜನ ನಯವೊಂದಿದ್ದರೆ ಸಾಕೆಂಬ ಇವರ ಭಾವನೆ ಯಾವುದು? ನಿ. ಜ. ಮಹಾಮಹಿಮರಾದ ತೋಂಟದ ಸಿದ್ಧೇಶ್ವರ (ಸಿದ್ಧಲಿಂಗ) ಸ್ವಾಮಿಗಳ ಕಾಲಕ್ಕೆ ವೀರಶೈವ ಸಮಾಜವನ್ನೇ ಉದ್ಧಾರ ಮಾಡಬೇಕೆಂದು ಏಳನೂರು ಚರಮೂರ್ತಿ (ಬಂಡಕಟ್ಟು) ಗಳನ್ನು ಏರ್ಪಡಿಸಿ ದಕ್ಷಿಣ ಹಿಂದೂದೇಶ ಮೊದಲಾದ ಕಡೆಗಳಲ್ಲಿ ಸಂಚರಿಸಿದ ಅವರ ಭಾವನೆ ಎತ್ತ? ಕೆಳದಿಯ ರಾಜ್ಯದ ಕೆಲವು ಭಾಗದವರು ದೀಪಾರಾಧನೆ ಕಾಣಿಕೆ ಮತ್ತು ವ್ಯಾಪಾರದ ರುವಿಗಳನ್ನು ಕೊಟ್ಟರೆ ಸಾಕು, ಕೆಳದಿಯ ರಾಜ್ಯದಲ್ಲಿಯೇ ಇದ್ದರೆ ಸಾಕು, ಎಂಬ ಈ ಸಿದ್ಧಬಸವ ಸ್ವಾಮಿಗಳ ಭಾವನೆ ಎತ್ತ? ಹೀಗಾಗಿ ಇಡೀ ವೀರಶೈವ ಜಗತ್ತನ್ನು ಉದ್ಧಾರಮಾಡುವ ಶೂನ್ಯಪೀಠವು ಆ ಕಾಲದಲ್ಲಿ ವೀರಶೈವರ ಮಧ್ಯಸ್ಥಳ (Centre) ಆದ ಕರ್ನಾಟಕದಲ್ಲಿ ಒಂದು ಮೂಲೆಯಲ್ಲಿ ಒಬ್ಬಾನೊಬ್ಬ ರಾಜನನ್ನು ಆಶ್ರಯಿಸಿಕೊಂಡು ಇರುವುದಕ್ಕೆ ಯೋಚಿಸಿದ್ದುದು ವೀರಶೈವ ಸಮಾಜದ ದುರ್ದೈವವೆಂದು ಭಾವಿಸಬೇಕಲ್ಲವೇ? ಈ ಕೆಂಪಿನ ಸಿದ್ಧಬಸವ ಸ್ವಾಮಿಗಳು ಕೆಳದಿರಾಜನ ಆಶ್ರಯವನ್ನು ಸಂಪಾದಿಸಿದಂತೆ ಗುರುಸಿದ್ಧ ಸ್ವಾಮಿಗಳಾದರೂ ಚಿತ್ರದುರ್ಗದ ಪಾಳಯಗಾರನನ್ನೇ ಆಶ್ರಯಿಸಿಕೊಂಡು ಕೂತರು. ಪ್ರಭುಸ್ವಾಮಿಗಳು ಮಾಡಿದಂತೆಯಾಗಲೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಮಾಡಿದಂತೆಯಾಗಲೀ ಇಡೀ ಹಿಂದುಸ್ಥಾನದ ಸಂಚಾರವನ್ನು ಮಾಡದೆ ಬರೀ ಕರ್ಣಾಟಕದಲ್ಲಿ ಮಾತ್ರ ಸಂಚರಿಸಿದಂತೆ ತೋರುತ್ತದೆ. ಅದರಲ್ಲೂ ದಕ್ಷಿಣದಲ್ಲಿ ಹಾಗಲವಾಡಿ ಮೈಸೂರು ಕಡೆಗೆ ಮತ್ತು ಉತ್ತರದಲ್ಲಿ ಒಂಟಮೂರಿ ಕಡೆಗೆ ಸಹಾ ಸಂಪಾದನಾ ಸಮಯದವರು ಪೂರ್ವದಲ್ಲಿ ಗದುಗಿನ ಕಡೆಗೆ ಚೀಲಾಳ ಸಮಯದವರು ಪ್ರಬಲರಾಗಿರುವಾಗ ಮಧ್ಯ ಕರ್ಣಾಟಕದ ಒಂದು ಮೂಲೆಯಲ್ಲಿ ಇವರೇನು ಜಗದುದ್ಧಾರ ಮಾಡುವವರು? ಹೀಗಾಗಿ ವೀರಶೈವ ಸಮಾಜವು ಮೊದಲಿಗಿಂತ ಅವನತಿಸ್ಥಿತಿಗೆ ಬರುವುದಕ್ಕೆ ಕಾರ

ಣವಾಯಿತೆಂದು ಯಾರಿಗೆ ತಾನೇ ದುಃಖವು ಬರಲಿಕ್ಕಿಲ್ಲ? ಆ ಕಾಲದ ಯಾವುದೇ ಸಮಯದ ಸ್ವಾಮಿಗಳು ತಮ್ಮ ಮಠದ ಖರ್ಚಿಗೆ ತಕ್ಕಷ್ಟು ದೊರಕಿದರೆ ಸಾಕೆಂಬ ಯೋಚನೆ ಯುಳ್ಳವರಾಗಿ ಕಾಲ ಕಳೆದರೇ ಹೊರತು ತಮ್ಮ ದೃಷ್ಟಿಯನ್ನು ಇಡೀ ಭರತಖಂಡದ ವೀರಶೈವರ ಮೇಲ್ಮೆಗಾಗಿ ಉಪಯೋಗಿಸಲಿಲ್ಲವೆಂದು ನಿರ್ವಿವಾದವಾಗಿ ಹೇಳಬಹುದು. ಈ ಸ್ಥಿತಿಯು ಸುಮಾರು ಕ್ರಿ. ಶ. ೧೬೫೦ರಿಂದ ಇಂದಿನ ವರೆವಿಗೂ ಸುಮಾರು ಮುನ್ನೂರು ವರ್ಷಗಳಕಾಲ ಅವ್ಯಾಹತವಾಗಿ ನಡೆದಿರುವಲ್ಲಿ ವೀರಶೈವರು ಪಾತಾಳಕ್ಕೆ ಮೆಟ್ಟಲ್ಪಡದೆ ಇರುವರೇ! ಈಗ ಸುಮಾರು ೧೫೦ ವರ್ಷಗಳಹಿಂದೆ ಜಡೆಯುದ ಸಂಸ್ಥಾನ ಮಠದ ಅಧಿಕಾರದಲ್ಲಿ ಇದ್ದ ಸಿದ್ಧಬಸವ ಸ್ವಾಮಿಗಳಿಗೆ ಸಿದ್ಧಬಸಯ್ಯ ಜಂಗಮ ಎಂತ ಪೇಷ್ವೆ ಸರಕಾರದವರು ಸನ್ನದನ್ನು ಕೊಟ್ಟಿರುತ್ತಾರೆ ಇದೊಂದು ಸಣ್ಣ ಮಠವೆಂದು ಆ ರಾಜನು ತಿಳಿದುದರಿಂದಲೇ ಅಲ್ಲವೇ ಹೀಗಾದುದು? ಹಿಂದಿನದು ಹಾಗಿರಲಿ. ಈಗ ನಡೆಯುವುದನ್ನೇ ನೋಡಿರಿ ಈಗ ಕೆಲವರು ಗುರುವರ್ಗದವರು ವೀರಶೈವರ ಎಂಟು ಆವರಣಗಳಲ್ಲಿ ಇರುವ ಜಂಗಮ ಎಂಬುವವರು ನಮ್ಮ ಗುರುವರ್ಗದ ಚರಪಟ್ಟದವರಾಗಿದ್ದಾರೆ, ಅಲ್ಲಮ ಪ್ರಭುವೇ ಆಗಲೀ ಅವರ ಅನುಯಾಯಿಗಳೇ ಆಗಲೀ ಜಂಗಮರಲ್ಲ, ಎಂದು ಪತ್ರಿಕೆಯಲ್ಲಿ ಪ್ರಕಟಿಸಿದರೆ ಅದನ್ನು ಖಂಡಿಸಿ ಅಷ್ಟಾವರಣದಲ್ಲಿ ಹೇಳಲ್ಪಟ್ಟ ಜಂಗಮರು ನಾವೇ ಎಂದು ಹೇಳುವವರು ವೀರಶೈವರಲ್ಲಿ ಯಾವ ಸಮುಯದವರು ಇದ್ದಾರೆ? ಯಾವ ಸಮುಯದ ಯಾವ ಮಹಾಸ್ವಾಮಿಗಳು ಈ ವಿಷಯದಲ್ಲಿ ಮುಂದೆ ಬಂದು ನಿಂತುಕೊಂಡಿದ್ದಾರೆ ತೋರಿಸಲಿ. ಇದೆಲ್ಲವೂ ಏಕೆ? ತಮ್ಮ ತಮ್ಮ ಒಡಕುಗಳನ್ನು ತಾವು ಮುಚ್ಚಿಕೊಂಡರೆ ಸಾಕೆಂಬ ಇವರ ಸಂಕುಚಿತ ಭಾವವೇ ಇವರನ್ನು ಮೂಲೆಗೊತ್ತುತ್ತಿರುವುದು.?

ಇವರು ಶಿವಪೂಜೆ ಮಾಡುವಾಗ ಒಬ್ಬರನ್ನೊಬ್ಬರು ನೋಡಬಾರದೆಂದು ತೆರೆ (ಫರದೆ) ಗಳನ್ನು ಹಾಕಿಕೊಳ್ಳುವ ಪದ್ಧತಿಯು ಇಸಳೂರಿನಲ್ಲಿ ಪಂಚಹತ್ಯೆಯಾದ ಮೇಲೆ ಬಂದುದೆಂದು ತಿಳಿಯಬೇಕಾಗಿದೆ ಈಗಲೂ ಹೀಗೆ ತೆರೆಗಳನ್ನು ಹಾಕಿಕೊಂಡು ಕೂಡುವವರು ಇಡೀ ಸಮಾಜವೇ ಒಂದು ಎಂದು ಭಾವನೆ ಮಾಡುವುದಕ್ಕೆ ಇನ್ನೂ ಎಷ್ಟು ಶತಮಾನಬೇಕೋ! ಇಂತಹ ಸ್ಥಿತಿಯನ್ನು ನೋಡಿ ಯಾವ ವೀರಶೈವನ ಹೃದಯವು ಕರಗದೆ ಇದ್ದೀತು!

ಮೇಲೆ ಕಂಡ ವಿಷಯಗಳನ್ನು ಯೋಚಿಸಿದರೆ 'ಸಮಯ' ಎಂಬದಾಗಿ ವಿಂಗಡವಾಗಿರುವ ಶೂನ್ಯ ಪೀಠದ ಸಂಬಂಧಿಗಳಾದ ಜಂಗಮ ವರ್ಗವು ತಮ್ಮ ತಮ್ಮಲ್ಲಿ ಈ 'ಸಮಯ' ಎಂಬ ಭೇದಗಳನ್ನು ಜಗಳದಿಂದ ಮಾಡಿಕೊಂಡಿರುವರೇ ಹೊರತು ಯಾವ ಗುರುಗಳಾಗಲೀ ಪೂರ್ವಿಕರಾಗಲೀ ಸಂತೋಷದಿಂದ ಸಮಯಗಳನ್ನು ಏರ್ಪಡಿಸಿಕೊಟ್ಟಿಲ್ಲವೆಂಬುದು ಗೊತ್ತಾಗುತ್ತದೆ. ಈಚೆಗೆ ಪ್ರಸಿದ್ಧರಾಗಿ ಬಾಳಿದ ಮೈಸೂರಿನ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರಲ್ಲಿಗೆ ಹೋಗಿ ಬಂದ ನಿ. ಶ್ರೀ ಮುಳಗುಂದ ಮಹಂತಸ್ವಾಮಿಗಳವರು ಸಮಯ ಭೇದವೆಂಬುದು ವ್ಯರ್ಥವೆಂದೂ ತಾವು ಶಿವ ಸಮಯದವರೆಂದೂ ಪದಗಳನ್ನು ಹಾಡಿಕೊಂಡಿದ್ದಾರೆ.

ಪ್ರಸಾದಸ್ವಾಮಿಗಳವರ ಸಾಂಪ್ರದಾಯಕರಾದ ಅವಿರಳ ಪರಂಜ್ಯೋತಿ ಸ್ವರೂಪಾಯಮಾನ ನಿರಂಜನ ಜಂಗಮ ಹಾಲವರ್ತಿ ಚನ್ನವೀರ ದೇಶಿಕೇಂದ್ರನ ಕೃಪಾಬಲದಿಂ ಶಾಸನ ಪಠಿ ಪುಲಿಗೆರೆಯವರ ಸೋಮಾರಾಧ್ಯರ ಶಾಂತವೀರ ಗುರುವರೇಣ್ಯನು (ಸುಮಾರು ೧೧೦೦ ವರ್ಷಗಳ ಹಿಂದೆಯೇ) 'ಸಮಯ' ಎಂದರೆ ದೀಪದ ಕಂಭ ಎಂತ ಅರ್ಥ ಮಾಡಿಕೊಂಡು ಲೋಹದ ಸಮಯ ಕಂಚಿನ ಸಮಯ ಮರದ ಸಮಯ ಮುಂತಾದವುಗಳ ಮೇಲೆ ಕಾಣುವ ಜ್ಯೋತಿ ಒಂದೇ ಹೇಗೆ ಮುಖ್ಯವಾಗಿಪ್ಪುದೋ ಹಾಗೆ ಮುರಿಗಿ ಸಮಯ ಚೀಲಾಳ ಸಮಯ ಕುಮಾರಸಮಯ ಕೆಂಪಿನ ಸಮಯ ಮುಂತಾದ ಅನಂತ ಸಮಯಗಳೊಳಗೆ ಭಕ್ತಿ ಜ್ಞಾನ ವೈರಾಗ್ಯವನುಳ್ಳ ನಿರಂಜನ ಜಂಗಮವು ಯಾರು ಬಂದರೂ ಅವರೇ ಕರ್ತರೆಂದು ಅವರ ಕರುಣ ಪ್ರಸಾದವ ಭಕ್ತರು ಪಡೆಯಬೇಕು ಎಂದು ಹೇಳಿದ್ದಾರೆ.

ಆದುದರಿಂದ ಶೂನ್ಯಪೀಠಾನುಯಾಯಿಗಳಾದ ಚರಪಟ್ಟಾಧಿಕಾರಿಗಳಾದ ಜಂಗಮರು ಈಗ 'ಸಮಯ' ಎಂಬ ಭೇದವನ್ನು ಸುಮ್ಮನೆ ಬಿಟ್ಟು ಬಿಡುವುದೇ ಅನುಕೂಲ. ಜನ್ಮ ಜನ್ಮಕ್ಕೆ ಹೊಸ ಅವತಾರಗಳಾಗುವ ವೀರಶೈವರು ಮುನ್ನೂರು ವರ್ಷಗಳಿಂದ ಬಂದಿರುವ ಹಿಂದಿನ ಒಡಕನ್ನು ತಮ್ಮ ಪರಂಪರೆಯಲ್ಲಿ ಭಾವಿಸಿ ನಡಸುತ್ತಿರುವುದೆಂದರೆ ಎಷ್ಟು ಹೀನವಾದ ಕೆಲಸ? ಒಬ್ಬ ಚಿಕ್ಕ ಬಾಲಕನು ಮತ್ತೊಬ್ಬನೊಡನೆ ಜಗಳ ಮಾಡಿ ಒಂದು ರಾತ್ರಿ ಮಲಗಿ ಮಾರನೆಯ ಬೆಳಿಗ್ಗೆ ಎದ್ದ ಮೇಲೆ ಪುನಃ ಹೊಸಬನಾಗಿ ಅವನ ಜೊತೆಗೆ ಹೇಗೆ ಆಡಲಿಕ್ಕೆ ಕೂಡುವನೋ ಹಾ

ಗೆ ವೀರಶೈವರಿರಬೇಕಲ್ಲವೇ ? ಒಬ್ಬರು ಮತ್ತೊಬ್ಬರಿಗೆ ದ್ರೋಹ ಮಾಡಿದರೆ ಸರ್ವರೂ ಶಿವರೂಪಿಗಳಾದುದರಿಂದ ಶಿವನಿಗೆ ದ್ರೋಹ ಮಾಡಿದಂತೆ ಎಂದು ಪಾರಮೇಶ್ವರಾಗಮವು ಬೋಧಿಸುವುದಿಲ್ಲವೇ ?

ಒಂದು ಬೀಜದಿಂದ ಎಲೆಗಳು ಬೇರು ಕಾಂಡ ಹೂವು ಮೊದಲಾದವುಗಳಾಗಿ ಕೊನೆಗೆ ಅವುಗಳಿಂದ ಮೊದಲಿನಂತೆ ಬೀಜವೇ ಹೇಗೆ ಆಗುವುದೋ ಹಾಗೆ ಒಂದೇ ಬುಡದಿಂದ ಶಾಖೆಗಳಾಗಿ ಹರಡಿದ ಈ ಸಮಯ ಭೇದಗಳು ಪುನಃ ಒಂದೇ ಬುಡವಾಗಿ ಪರಿಣಮಿಸುವುದು ಬಹಳ ಒಳ್ಳೆಯದು. ಪ್ರತಿಯೊಬ್ಬನೂ ಸ್ವತಂತ್ರನಾಗಿರಬೇಕೆಂಬುವಷ್ಟು ನಾಗರಿಕತೆಯು ಕಾಲ ಬಂದಿರತಕ್ಕ ವೇಳೆಯಲ್ಲಿಯೂ ಕೂಡಾ ಈ ಜಂಗಮರು ತಮ್ಮ ಪೂರ್ವ ಶತಮಾನವನ್ನೇ ಅನುಸರಿಸಿ ನಡೆಯಬೇಕೆಂಬುದು ಎಷ್ಟು ಅನಾಗರಿಕತೆಯ ಕೆಲಸ.

ವೀರಶೈವ ಮಹಾಸಭೆ ಉದಯವಾಗಿ ೩೫ ವರ್ಷಗಳಾದಾಗ್ಯೂ ಆ ಮಹಾಸಭೆಯಲ್ಲಿ ತಮ್ಮ ಜಂಗಮತ್ವದ ನಿಜತ್ವವನ್ನು ಸ್ಥಾಪಿಸುವುದಕ್ಕೇ ಹೋಗದಿದ್ದ ಈ ಶೂನ್ಯ ಪೀಠದ ಪರಂಪರೆಯ ಸೋಮಾರಿತನವು ಎಷ್ಟು ಮಟ್ಟಿನದಿರಬಹುದು?

ಹೀಗೆ ತಮ್ಮ ನಿಜತ್ವವನ್ನೇ ತಾವು ತೋರಿಸಲಾರದವರು ಇಡೀ ಸಮಾಜದ ಪ್ರಗತಿಯನ್ನು ಚಿಂತಿಸುವುದೆತ್ತ? ನಡಸುವದೆತ್ತ? ಹೀಗೆ ವೀರಶೈವರ ಪ್ರಗತಿಗೆ ಮೂಲ ಕಾರಣರಾಗಿರುವವರೇ ಭೇದಗಳನ್ನು ಮಾಡಿಕೊಂಡಿರುವಾಗ ಭಕ್ತರಲ್ಲಿ ಒಡಕುಗಳಾಗುವುದರಲ್ಲಿ ಕೊರತೆ ಏನು ? ಒಬ್ಬರು ಮುರುಗಾರಾಜೇಂದ್ರ ಸ್ವಾಮಿಗಳೆಂದು ಬರೆದರೆ ಮತ್ತೊಬ್ಬರು ಕುಮಾರರಾಜೇಂದ್ರ ಸ್ವಾಮಿಗಳೆಂದು ಒರೆವರು. ನಾನು ಮುರುಗಾ ಸಮಯದ ಭಕ್ತ, ನಾನು ಕುಮಾರ ಸಮಯದ ಭಕ್ತ ಎನ್ನುವರು ಅಯ್ಯೋ ಸಮಯವೇ ?

ಈ ಸಮಯಗಳನ್ನು ಸ್ವಾಮಿಗಳಾಗಲೀ ಭಕ್ತರಾಗಲೀ ಈಗಲೇ ಅಳಿಯದಿದ್ದರೆ ವೀರಶೈವರಿಗೆ ಸುಖವಿಲ್ಲ. ವೀರಶೈವರ ಪ್ರಗತಿಗೆ ಇವು ದೊಡ್ಡ ವಿಘ್ನವೆಂದೇ ತಿಳಿಯಬೇಕು. ಅದುದರಿಂದ ಇವೆಲ್ಲವುಗಳನ್ನು ಕಳೆದು ಎಲ್ಲ ಸಮಯದವರೂ ಒಂದೇ ಕಡೆ ಕೂಡಿ ಒಂದು ಸಭೆಯನ್ನು ಮಾಡಿ ಸದ್ಯದ ಕಾಲಸ್ಥಿತಿಗನುಸಾರವಾಗಿ ತಮ್ಮ ಮುಂದಿನ ಕಾರ್ಯಗಳನ್ನು ಗೊತ್ತುಮಾಡಿಕೊಳ್ಳುವ ಕಾಲವಿದು. ಈ ಕಾರ್ಯವು ಬೇಗನೆ ನಡೆಯಲಿ ಎಂದು ಮಹಾದೇವನನ್ನು ಪ್ರಾರ್ಥಿಸೋಣ.

ಶ್ರೀ ಮದನಾದಿ ಅಲ್ಲಮಪ್ರಭು.

ವೇ. ಮೂ. ಬುದ್ಧಯ್ಯಸ್ವಾಮಿ ಪುರಾಣಿಕ ಇವರು ' ಶ್ರೀ ಮನ್ನಿ ರಂಜನ ಜಗದ್ಗುರು ಶ್ರೀ ಮದನಾದಿ ಅಲ್ಲಮಪ್ರಭು ' ಎಂಬ ಪುಸ್ತಕ ವನ್ನು ರಚಿಸಿರುತ್ತಾರೆ. ಇದರಲ್ಲಿ ಶೂನ್ಯಪೀಠದ ಅಧಿಕಾರದಲ್ಲಿದ್ದ ಕೆಲವರು ಸ್ವಾಮಿಗಳ ವಿಷಯದ ಕಟ್ಟು (ಕಲ್ಪಿತ) ಕಥೆಗಳನ್ನು ಬರೆದಿರುತ್ತಾರೆ. ಅವುಗಳ ವಿಮರ್ಶೆಯು ಹೀಗೆ ಇದೆ:--

೧ ನೆಯ ಕಥೆ.

ಕಟ್ಟಿಗೆಹಳ್ಳಿ ಸ್ವಾಮಿಗಳು ೧೭೩೯ ರಲ್ಲಿ ಶಿವಾಧೀನರಾದರೆಂದು (ಒಪ್ಪೋಲೆಯಲ್ಲಿ ೧೨೭ನೆಯ ಪುಟ) ಹೇಳಿದ್ದಾರೆ ಇದು ಸರಿಯಲ್ಲ. ಇವರು ೫೦ ವರ್ಷ ಶೂನ್ಯಸಿಂಹಾಸನದ ಅಧಿಕಾರದಲ್ಲಿ ಇದ್ದರು. ಇವರ ಕಾಲವು ಸು.ಕ್ರಿ. ೧೬೩೦-೧೬೮೦ ಎಂದು ಗೊತ್ತಾಗುತ್ತದೆ. (ಕಾಲ ನಿರ್ಣಯದ ವಿವರ ನೋಡಿರಿ) ಇವರು ಮಹಂತಸ್ವಾಮಿ ಎಂಬುವರಿಗೆ ಶಿವಾನುಭಾವ ಚರಂತಿಕೆಯನ್ನು ಕೊಟ್ಟರೆಂದೂ ಮುರುಗೇಂದ್ರ ಸ್ವಾಮಿ ಗಳಿಗೆ ಕೊಡಲಿಲ್ಲವೆಂದೂ ಹೇಳುವುದು ಅಸಂಭವ. ಮುರುಗೇಂದ್ರಸ್ವಾ ಮಿಗಳು ಸಿಕ್ಕಾ ಶೈಲ ತಂದ ಮೇಲೆ ನೋಟದ ಸಿದ್ಧಲಿಂಗ ಸ್ವಾಮಿ ಗಳವರಿಂದ ಶಿಖಾಪಟ್ಟದ ಸಮಾರಂಭವು ಆಚರಿಸಲ್ಪಟ್ಟಿರುವುದರಿಂದ ಶಿವಾನುಭಾವ ಚರಂತಿಕೆ ಪಟ್ಟವನ್ನು ಮುರುಗೇಂದ್ರಸ್ವಾಮಿಗಳು ಕೇಳು ವುದಕ್ಕೇ ಕಾರಣವಿಲ್ಲ. ಮಹಂತಸ್ವಾಮಿ ಎಂಬುವವರು ಮುರುಗೇ ಶನ ಸ್ತೋತ್ರ ಮಾಡಿರುತ್ತಾರೆ. ಮಹಂತಸ್ವಾಮಿಗಳು ಅಧಿಕಾರಿಗ ಳಾಗಿದ್ದು ಅವರು ಅಧಿಕಾರದಲ್ಲಿಲ್ಲದಿದ್ದರೆ ಸ್ತುತಿಸುವುದೆಂತು ? ಮಹಂ ತಸ್ವಾಮಿಯವರ ಗ್ರಂಥದಲ್ಲಿ ತಾವು ಅಧಿಕಾರ ಹೊಂದಿದಂತೆ ಗೊತ್ತಾ ಗುವುದಿಲ್ಲ. ಇವರು ತಮ್ಮ ಪೂರ್ವದಲ್ಲಿ ಶೂನ್ಯಪೀಠದ ಒಬ್ಬರೇ ಒಬ್ಬ ರಾಗಿದ್ದ ಗುರುಗಳಿಂದ (ಕಟ್ಟಿಗೆಹಳ್ಳಿ ಸ್ವಾಮಿಗಳಿಂದ) ಅಧಿಕಾರ ಪಡೆ ದ ಮೇಲೆ ಚೇಲಾಳ ಸಮಯಕ್ಕೆ ಮಾತ್ರ ಗುರುಗಳೆಂದೆನಿಸಿಕೊಳ್ಳಲಿಕ್ಕೆ ಎಂದೂ ಇಷ್ಟಪಡಲಾರರು.

ಇವರು ಲಿಂಗೈಕ್ಯರಾದ ಮೇಲೆ ಮಹಂತಸ್ವಾಮಿಗಳು ಅರ್ಧನಾ ರೀಶ್ವರ ಸ್ವಾಮಿಗಳಿಗೆ ತಮ್ಮ ಚರಂತಿಕೆಯನ್ನು ಕೊಟ್ಟಿದ್ದು ಶಿವಾನು ಭಾವ ಚರಂತಿಕೆ ಆಗಬೇಕಾಗಿದ್ದಿತು. ಹಾಗಿಲ್ಲದೆ ಚೇಲಾಳ ಸಮಯ ದುದಾಗಿರುವುದರಿಂದ ಇವರು ಪ್ರತ್ಯೇಕವಾಗಿದ್ದರು ಎಂಬುದು ಸ್ಪಷ್ಟ ವಾಗುತ್ತದೆ. ಈ ಮಹಂತಸ್ವಾಮಿಗಳು ತಾವು ರಹಳ್ಳಿಯಲ್ಲಿ ಸಮಾ

ಧಿಕ್ಕರಾದರೆಂದು ಒಂದು ಕಡೆ (ಪುಟ ೧.೭) ಹಂಪಸಾಗರದಲ್ಲಿ ಸಮಾಧಿಸ್ಥರಾದರೆಂದು ಒಂದು ಕಡೆ (ಪುಟ ೧೫೮) ಹೂವಿನಹಡಗಲಿ ತಾ॥ ಬಾಚನಹಳ್ಳಿಯಲ್ಲಿ ಸಮಾಧಿ ಎಂದು ಒಂದು ಕಡೆ (ಪುಟ ೧೧೩) ಹೀಗೆ ವ್ಯತ್ಯಾಸಗಳಿರುತ್ತವೆ ಒಟ್ಟಿನಲ್ಲಿ ಇದು ಗದಗಿನ ಮಠವನ್ನೇ ಮುಖ್ಯವನ್ನಾಗಿ ಮಾಡುವುದಕ್ಕೆ ಹುಟ್ಟಿದ ಕಟ್ಟುಕಥೆ ಎಂದು ತೋರುತ್ತದೆ· ಬಹಳ ಮಾಡಿ ಈ ಸಂಗತಿಯು ಕಟ್ಟಿಗಿಹಳ್ಳಿ ಸ್ವಾಮಿಗಳು ಎಂದರೆ ಸಿದ್ಧವೀರಸ್ವಾಮಿಗಳ ಬಳಿ ಇದ್ದ ರಾಯಚೋಟಿ ಸ್ವಾಮಿಗಳು ಮತ್ತು ಚಿತ್ರದುರ್ಗದ ಗುರುಸಿದ್ಧಸ್ವಾಮಿಗಳು ಇವರ ವಿಷಯವಾಗಿರಬಹುದು ಈ ರಾಯಚೋಟಿ ಸ್ವಾಮಿಗಳಿಗಾದರೂ ಶೂನ್ಯ ಪೀಠದ ಅಧಿಕಾರವಿರಲಿಲ್ಲ.

೨ ನೆಯ ಕಥೆ

ಕಟ್ಟಿಗೆಹಳ್ಳಿ ಸ್ವಾಮಿಗಳು ಇದ್ದ ತಿಳವಳ್ಳಿಯಿಂದ ಮುರುಗೇಂದ್ರ ಸ್ವಾಮಿಗಳು ದೆಹಲಿಗೆ ಹೋಗಬೇಕಾದರೆ ಮಧ್ಯೆ ಚಿತ್ರದುರ್ಗವಾಗಲೀ ಬೇದಕೆರೆಯಾಗಲೀ ಬರುವುದಿಲ್ಲ. ಈ ಮುರುಗೇಂದ್ರ ಸ್ವಾಮಿಗಳು ಭವಿ ಜನರ ಸಂಗಡ ಸಾಮರಸ್ಯ ಮಾಡಿದವನನ್ನು (ಹೊಲತಿಯ ಸಂಗದವನನ್ನು) ಶುದ್ಧಗೊಳಿಸಲೂ ಇಲ್ಲ. ಈ ದೆಸೆಯಿಂದ ನೋಡ ಸಿದ್ಧಲಿಂಗಸ್ವಾಮಿಗಳಿಗೂ ಇವರಿಗೂ ವೈಮನಸ್ಯವೂ ಬಂದಿರಲಿಲ್ಲ. ಇವೆಲ್ಲಾ ನಿರಂಜನ ವಂಶ ರತ್ನಾಕರದ ೨ ಭಾಗಗಳಿಂದ ಸ್ಪಷ್ಟವಾಗುತ್ತವೆ. ಬೇದಕೆರೆ ನಾಯಕನಿಗೆ ಮುರುಗೇಂದ್ರ ಸ್ವಾಮಿಗಳು ಆಶೀರ್ವಾದ ಮಾಡಲಿಲ್ಲ ಭರಮಪ್ಪನಾಯಕನಿಗೆ ಮಾಡಿದರೆಂದು ' ಚಿತ್ರದುರ್ಗದ ಪಾಳಯಗಾರರು ' ಎಂಬ ಪುಸ್ತಕವು ಹೇಳುತ್ತದೆ ಈ ಕಟ್ಟುಕಥೆಯು ಮುರುಗೇಂದ್ರಸ್ವಾಮಿಗಳ ಪ್ರತಿಷ್ಠೆಯನ್ನು ಕಡಿಮೆ ಮಾಡಬೇಕೆಂದೇ ಹುಟ್ಟಿದುದಾಗಿದೆ.

೩ ನೆಯ ಕಥೆ

ಈ ಕಥೆಯಲ್ಲಿ ಕಟ್ಟಿಗೆಹಳ್ಳಿ ಸ್ವಾಮಿಗಳ ಬಳಿಯಲ್ಲಿ ಇದ್ದ ಶಾಂತವೀರ ದೇಶಿಕರು ಎಂಬುವರನ್ನು ಮುರಗೇಂದ್ರಸ್ವಾಮಿಗಳು ಎಂಬ ಹೆಸರಿನಿಂದ ಕರೆಯುತ್ತಿದ್ದರು ಇಷ್ಟು ವಿಷಯ ನಿಜ. ಈ ಮುರುಗೇಂದ್ರ ಸ್ವಾಮಿಗಳಿಗೂ ಸಂಪಾದನೆಯ ಚನ್ನಸಂಜೀದೇವರಿಗೂ ಯಾವ ಸಂಬಂಧವೂ ಇಲ್ಲ ಹೀಗೆ ಸಂಬಂಧವಿದ್ದಂತೆ ಯಾವ ಗ್ರಂಥವೂ ಹೇಳುವುದಿಲ್ಲ. ಮತ್ತು ಇವರಿವರ ವೈಮನಸ್ಸಿಗೆ ಯಾವ ಕಾರಣವೂ ಇಲ್ಲ.

ಆದರೆ ಶಾಂತವೀರ ಸ್ವಾಮಿಗಳು ಎಂಬ ನಾಮಾಂತರವುಳ್ಳ ಒಂದನೆಯ ಮುರುಗೇಂದ್ರ ಸ್ವಾಮಿಗಳಿಗೆ ಮಹಂತಸ್ವಾಮಿ ಎಂಬುವರು ಶಿಷ್ಯರಾಗಿದ್ದರೆಂದು ಈ ಕಥೆಯು ಒಪ್ಪುತ್ತದೆ. ಇದೇ ನಿಜಾಂಶ. (ಒಂದನೆಯ ಕಥೆ ಸುಳ್ಳೆಂಬುದಕ್ಕೆ ಈ ಕಥೆಯೇ ಒಂದು ಸಾಕ್ಷಿ) ಮತ್ತು ಕ್ರಿ. ೧೪೯೩ ರಲ್ಲಿ ಇದ್ದ ಇಮ್ಮಡಿ ಚಿಕ್ಕ ಭೂಪಾಲಕನ ಆಶ್ರಯದಲ್ಲಿ ಪರ್ವತೇಂದ್ರ ಮೊದಲಾದವರು ಪ್ರಸಿದ್ಧರಾದರು ಎಂದು ಹೇಳುವುದೂ ಸರಿಯಾಗಿಲ್ಲ. ಪರ್ವತೇಂದ್ರರು ಚನ್ನ ನಂಜೇದೇವನ ತರುವಾಯದವರು. ಚನ್ನನಂಜೇದೇವರು ವೇ ಬುದ್ಧಯ್ಯನವರ ಗಣನೆಯ ಪ್ರಕಾರ ಕ್ರಿ. ಶ. ೧೭೨೫ ನೆಯ ಇಸವಿಯ ಕಟ್ಟಿಗೆಹಳ್ಳಿ ಸ್ವಾಮಿಗಳ ಮುಂದಿನವರಾಗಬೇಕಾಯಿತು ಹೀಗಾದರೆ ೧೪೯೩ ಎಂಬುದು ತಪ್ಪಾಗುತ್ತದೆ. ಆದುದರಿಂದ ಈ ಕಥೆಯು ಸಂಪಾದನಾ ಸಮಯದವರ ಪ್ರತಿಷ್ಠೆಗಾಗಿ ಹುಟ್ಟಿದುದು.

೪ನೆಯ ಕಥೆ.

'ಶಿವಾನುಭವ' ಮಾಸ ಪತ್ರದಲ್ಲಿ ಪ್ರಕಟಿಸಲ್ಪಟ್ಟ ನಿರಂಜನವಂಶ ರತ್ನಾಕರ ಪುಸ್ತಕದ ವಿಷಯವಾಗಿ ಹೇಳಿರತಕ್ಕ ಕೆಲವು ಅಭಿಪ್ರಾಯಗಳು ಸರಿಯಾಗಿಲ್ಲವೆಂದು ಆಕ್ಷೇಪಿಸಿ ಮುರುಘರಾಜೇಂದ್ರ ಸ್ವಾಮಿಗಳು ನೊಂಡ ಸಿದ್ಧಲಿಂಗ ಸ್ವಾಮಿಗಳಿಗೆ "ತಮ್ಮ ಶಿವಾನುಭಾವ ಚರಂತಿಕೆಯನ್ನು ನಮ್ಮ ಸ್ವಾಧೀನದಲ್ಲಿ ಕೊಟ್ಟಿದ್ದಾದರೆ ಆದರಂತೆ ನಾವು ಮುಂದೆ ನಡೆಸುವೆವು" ಎಂದು ಹೇಳಿದರು ಎಂಬದಾಗಿ ಕಥೆಯನ್ನು ಸಂಪಡಿಸಿರುತ್ತಾರೆ ಇದೂ ಒಪ್ಪತಕ್ಕ ಮಾತಲ್ಲ ಏಕೆಂದರೆ ಮುರುಗೇಂದ್ರ ಸ್ವಾಮಿಗಳೂ ಕುಮಾರಪ್ಪನವರೂ ಸಹಾ ಚಿತ್ರದುರ್ಗದಲ್ಲಿದ್ದರೆಂದು ಪಟ್ಟಿವಲ್ಲರಿಯು ಒಪ್ಪುತ್ತದೆ. ಒಂದು ವೇಳೆ ಕುಮಾರಪ್ಪನವರು ಅಧಿಕಾರದಲ್ಲಿ ಇರಲಿಲ್ಲವೆಂದು ಹೇಳುವುದಾದರೆ ಮುಂದೆ ಶಾ. ಶಕೆ ೧೬೮೧ರಲ್ಲಿ ವೀರಶೈವ ಸಮಾಜದವರು ವ್ಯಾಜ್ಯ ತೀರಿಸಲು ಒಂದು ಕಡೆ ಸೇರುವ ಪ್ರಸಂಗವು ಸಂಭವಿಸುತ್ತಿರಲಿಲ್ಲ. ಸಧ್ಯ ಪುಸ್ತಕವನ್ನು ೧ನೆಯ ಭಾಗವಾಗಿ ತಿಳಿದಿರುವ ಈ ೨ನೆಯ ಭಾಗವೂ ಆದರಂತೆಯೇ ಹೇಳುತ್ತದೆ. ಇದಕ್ಕೆ ತಕ್ಕ ಪ್ರಮಾಣಗಳನ್ನೂ ಅಲ್ಲಲ್ಲಿ ಕೊಟ್ಟಿರುತ್ತದೆ ಆದುದರಿಂದ ೧ನೆಯ ಭಾಗದ ಈ ವಿಷಯವೂ ಸರಿಯಾದುದೆಂದೇ ತಿಳಿಯಬೇಕು.

೫ ನೆಯ ಕಥೆ

ಸದ್ಧರ್ಮ ದೀಪಿಕೆಯಲ್ಲಿ ಪ್ರಕಟಿಸಿದ ವಿಷಯ ಎಂದರೆ ಸಿ. ಜಿ. ಚನ್ನಬಸವೇಶ್ವರರು ಚರಂತಿಕೆ ಪುಸ್ತಕವನ್ನು ಮಲ್ಲೂಖಾನನ ವಶಕ್ಕೆ ಸಿಕ್ಕಾ ಶೈಲ ಕೊಟ್ಟಂತೆ ಏಕೆ ಕೊಡಲಿಲ್ಲ ಎಂದು ಆಕ್ಷೇಪಿಸಿರುತ್ತಾರೆ. ಇದೊಂದು ಪ್ರತಿಷ್ಠೆಗಾಗಲೀ ವಂಚನೆಗಾಗಲೀ ಮೂಲ ಪ್ರತಿಯಲ್ಲಿ ಬರೆದುದಲ್ಲ. ಚನ್ನಬಸವೇಶ್ವರರಿಂದ ಯಾವ ರೂಪದಲ್ಲಿಯಾದರೂ ಮಲ್ಲೂಖಾನನ ವಶಕ್ಕೆ ಸಿಕ್ಕಾ ಶೈಲ ಹೋಗಿರಬಹುದು. ಅದನ್ನು ಅವರೇ ಕೊಟ್ಟರೆಂದು ಹೇಳಿದುದು ದೊಡ್ಡ ತಪ್ಪೆನಿಸಲಾರದು. ಬೇಹದ ಪ್ರತಿಯಲ್ಲಿ ಇದ್ದಂತೆ ಪ್ರಕಟವಾದುದರಲ್ಲಿ ಕೆಲವಂಶಗಳು ನಿಜವೆಂದು ನಾವೂ ಒಪ್ಪುವುದಿಲ್ಲ. ಇದಕ್ಕಾಗಿಯೇ ಈ ಮುನ್ನುಡಿಯನ್ನು ಬರೆಯಬೇಕಾಯಿತು. ಆದರೆ ಅದರಲ್ಲಿನ ವಿಷಯಗಳು ಬಹು ಮಟ್ಟಿಗೆ ಸತ್ಯಾಂಶವನ್ನೊಳಗೊಂಡಿವೆ ಎಂದು ನಂಬಲಿಕ್ಕೆ ಈಗಿನ ರೂಢಿಯೂ ಆಯಾ ಸ್ಥಳದ ಅಂಶಗಳೂ ಸಾಕ್ಷಿಯಾಗಿವೆ. ಇದರೊಳಗಿನ ಹಳೇಬೀಡು ಬಳಕೆ ಮೊದಲಾದ ವಿಷಯಗಳು ಮುಂದೆ ವಿಮರ್ಶಿಸಲ್ಪಡುವುವು.

೬ ನೆಯ ಕಥೆ

ಕೆಂಪಿನ ಸಮಯವೇ ಮುಂತಾಗಿ ೫ ಸಮಯಗಳು ಜಗಳದಿಂದ ಆದುವು ಎಂದು ಈ ಪುಸ್ತಕದಲ್ಲಿ ಬರೆದಿರುವುದಕ್ಕೆ ಆಕ್ಷೇಪವೇನೂ ಮಾಡದೆ ಅದನ್ನೇ ಕಥೆಯಾಗಿ ಬರೆದಿರುತ್ತಾರೆ.

೭ ನೆಯ ಕಥೆ

ಮದಕರಿನಾಯಕನು ಚೀಲಾಳ ಬುಡಕಟ್ಟಿನ ತೋಟಪ್ಪನವರನ್ನು ಚಿತ್ರದುರ್ಗದ ಮಠದಿಂದ ಹೊರಗೆ ಹಾಕಿದನೆಂದು ಬರೆದಿರುತ್ತಾರೆ. ೧೬೮೯ ರಿಂದ ೧೭೨೦ ರ ವರೆಗೆ ಚಿತ್ರದುರ್ಗದ ಪಾಳಯಗಾರನಾದ ಬರಮಪ್ಪನಾಯಕನ ಕಾಲದಲ್ಲಿ (ಸುಮಾರು ೧೭೦೮ರಲ್ಲಿ) ಈ ಕೆಲಸವು ನಡೆದಂತೆ ನಿಶ್ಚಿತವಾಗಿರುತ್ತದೆ. ಏಕೆಂದರೆ ೧೭೨೦-೪೮ರ ವರೆಗೆ ಇದ್ದ ಹಿರೀ ಮದಕರಿನಾಯಕನ ಜೊತೆಗೆ ಯುದ್ಧ ಮಾಡಿದ ಹರಪನಹಳ್ಳಿ ಚಂದ್ರಶೇಖರ ರಾಜನು ಈ ತೋಟಪ್ಪನವರಿಗೆ ಆಶ್ರಯ ಕೊಟ್ಟನು. (೨ ಪು. ೭೯) ಈ ಚಂದ್ರಶೇಖರರಾಜನೇ ಸೋಮಶೇಖರರಾಯನೆಂದು ತಿಳಿಯಲನುಮಾನವೇನೂ ಇಲ್ಲ. (ಚಿತ್ರದುರ್ಗದ ಪಾಳಯಗಾರರು ಎಂಬ ಗ್ರಂಥವನ್ನು ನೋಡಿರಿ.)

೮ ನೆಯ ಕಥೆ

ಸಂಪಾದನೆಯು ಸಿದ್ಧವೀರಯ್ಯನವರನ್ನು ಹೊರಗೆ ಹಾಕಿದರು ಎಂಬುದು ಸರಿಯಲ್ಲ ಎಂದು ತೋರಿಸಲಿಕ್ಕೆ ಹೋಗಿದ್ದಾರೆ. ಇದೂ ಸಿದ್ಧಿಯಾಗಿಲ್ಲ ಈ ಮುಂಚೆಯೇ ಈ ವಿಷಯದಲ್ಲಿ ವಿವರವಾಗಿ ವಿಮರ್ಶೆ ಮಾಡಿದೆ.

ಈ ಪುಸ್ತಕದ ಮೇಲಿನ ಆಕ್ಷೇಪಣೆಗಳು.

ಶ್ರೀ....ಅಲ್ಲಮಪ್ರಭು ಪುಸ್ತಕದ ೧೩೫—೧೪೧ ಪುಟಗಳಲ್ಲಿ ಈ ನಿರಂಜನವಂಶ ರತ್ನಾಕರ ೨ ನೆಯ ಭಾಗದ ಕೆಲವು ವಿಷಯಗಳನ್ನು ಆಕ್ಷೇಪಿಸಿರುತ್ತಾರೆ ಇದಕ್ಕೆ ಉತ್ತರ.

ಶಾ. ಶ. ೧೫೮೦ ವಿಳಂಬಿ ಸಂವತ್ಸರದಲ್ಲಿ ಚೈತ್ರ ಶು॥ ೨ ದಿವಸ ಹಳೇಬೀಡ ಕಲ್ಲುಮಠದ ಚನ್ನವೀರಯ್ಯನ ಕಡೆಯಿಂದ ೫೦೦ ವರಹ ಕಾಣಿಕೆ ತೆಗೆದುಕೊಂಡು ಆತನನ್ನು ಶುದ್ಧಮಾಡಿದರು (ನಿ. ವ. ರ. ೨ ಪು ೨೨) ಈ ಕಾಲವು ತಪ್ಪು ಎಂದು ಹೇಳುತ್ತಾರೆ. ಈ ಚನ್ನವೀರಯ್ಯನನ್ನು ಶುದ್ಧ ಮಾಡಿದ್ದರ ಜಗಳವು ೧೬೪೧ ವಿಕಾರಿ ಸಂವತ್ಸರದಲ್ಲಿ ತೀರ್ಮಾನವಾಯಿತೆಂದು ಇದೇ ಹೊತ್ತಗೆಯ ೬೪ನೆಯ ಪುಟದಲ್ಲಿ ಬರೆಯಲ್ಪಟ್ಟಿದೆ. ೧೫೮೦ ವಿಳಂಬಿಯಲ್ಲಿ ನಡೆದ ಕೆಲಸದ ತೀರ್ಮಾನವು ೬೧ ವರ್ಷವಾದ ಮೇಲೆ ವಿಕಾರಿಯಲ್ಲಿ ಆಯಿತೆಂದೂ ನಂಬಲಿಕ್ಕೆ ಬರುವುದಿಲ್ಲ. ಮ॥ ರಾ॥ ಎಮ್. ಎಸ್. ಪುಟ್ಟಣ್ಣ ಬಿ. ಎ. ಎಂಬುವರು ರಚಿಸಿದ 'ಚಿತ್ರದುರ್ಗದ ಪಾಳಯಗಾರರು' ಎಂಬ ಪುಸ್ತಕದಲ್ಲಿ ೧೬೩೯ ಹೇವಿಳಂಬಿ ಸಂವತ್ಸರದಲ್ಲಿ ಚಿತ್ರದುರ್ಗದ ಮೇಲುಮಠವಾಯಿತೆಂದು ಬರೆದಿರುವುದರಿಂದ ಆ ಸಂವತ್ಸರದಲ್ಲಿಯೇ (ಕ್ರಿ.೧೭೧೭) ಇಮ್ಮಡಿ ಗುರುಸಿದ್ಧಸ್ವಾಮಿಗಳ ಪಟ್ಟವೂ ನಡೆದಿದೆ ಎಂದು ನಂಬಲವಕಾಶವಿರುವುದರಿಂದ ೧೬೪೦ ನೆಯ ವಿಳಂಬಿ ಸಂವತ್ಸರದಲ್ಲಿ ಚನ್ನವೀರಯ್ಯನನ್ನು ಶುದ್ಧ ಮಾಡಿದರು ಎಂದು ತಿಳಿಯಬೇಕು. ಇಲ್ಲಿ ಸಂಖ್ಯೆಯು ೬೦ ವರ್ಷ ಹಿಂದೆ ತಪ್ಪಾಗಿ ಬಿದ್ದಿದೆ. ಇವರು ಇಮ್ಮಡಿ ಗುರುಸಿದ್ಧಸ್ವಾಮಿಗಳ ಕಾಲವು ಕ್ರಿ. ಶ. ೧೭೩೫ ಆಗಿರಬಹುದೆಂದು (ಶ್ರೀ....ಅಲ್ಲಮಪ್ರಭು ಪು. ೧೪೦) ಬರೆದಿರುವುದೂ ಸರಿಯಲ್ಲ. ಗುರುಸಿದ್ಧಸ್ವಾಮಿಗಳು ರಚಿಸಿದ ಹಾಲಾಸ್ಯ ಪುರಾಣ (ಕನ್ನಡ ಪದ್ಯರೂಪವಾದುದು) ೧೬೪೨ ನೆಯ ಶಾರ್ವರಿ ಸಂವತ್ಸರದಲ್ಲಿ ಮುಗಿಯಿತು ಎಂಬ ಓಲೆಯ

೧೦ ಪ್ರತಿಯ ದಾಖಲೆ ಇದೆ. ಇದಲ್ಲದೆ ಶಾ. ೧೬೪೧ನೆಯ ವಿಕಾರಿ ಸಂವತ್ಸರದಲ್ಲಿ ಜಗಳದ ತೀರ್ಮಾನವು ನಡೆದಂತೆ ಬಹಳ ದಾಖಲೆಗಳಿವೆ ಇವುಗಳನ್ನೆಲ್ಲಾ ತಿಳಿದು ಮುರುಗಾಸ್ವಾಮಿಗಳು ಅವರ ಕಾಲದ ದೆಹಲಿ ಪಾದಷಹನಾದ ಔರಂಗಜೇಬನಿಂದ ಸಿಕ್ಕಾ ಶೈಲ ಪಡೆದುಕೊಂಡು ಬಂದ ರೆಂದೂ ಸುಮಾರು ಕ್ರಿ. ಶ. ೧೬೭೦–೧೭೧೭ ರ ವರೆಗೆ ಶೂನ್ಯ ಪೀಠಾಧಿ ಕಾರಿಗಳಾಗಿದ್ದರೆಂದೂ ನಂಬಲಾಗಿದೆ. ಈ ದೆಸೆಯಿಂದ ಗುರುಸಿದ್ಧ ಸ್ವಾಮಿಗಳು ೧೭೧೭ ರಿಂದ ಶೂನ್ಯಪೀಠಾಧಿಕಾರಿಗಳಾಗಿದ್ದರೆಂಬ ಸಂಗ ತಿಯಲ್ಲಿ ಅನುಮಾನ ಮಾಡಬೇಕಾದುದೇನೂ ಇಲ್ಲ. ಅವರು ೩–೪ ವರ್ಷ ಮಾತ್ರವೇ ಪೀಠಾಧಿಕಾರಿಗಳಾಗಿದ್ದರೆಂದು ತೋರುತ್ತದೆ. ಏಕೆಂದರೆ ಅವರ ಕಾಲದವನಾದ ಹರಪನಹಳ್ಳಿ ಸೋಮಶೇಖರ ರಾಜನಲ್ಲಿಗೆ ೩ನೆಯ ಪಟ್ಟದ ನಿ. ಜ. ಸೋದೆ ಚನ್ನಬಸವಸ್ವಾಮಿಗಳು ಹೋಗಿರುತ್ತಾರೆ.

ವೇ. ಮೂ. ಬುದ್ಧಯ್ಯನವರು ಜನರ ಕಟ್ಟುಕಥೆಗಳನ್ನು ನಂಬಿ ಇಮ್ಮಡಿ ಮುರುಗಾರಾಜೇಂದ್ರ ಸ್ವಾಮಿಗಳಿಗೆ ೧೭೨೦ ರಲ್ಲಿ ಶಿವಾನು ಭವ ಚರಂತಿಕೆ ಪಟ್ಟವನ್ನು ಕೊಡಬೇಕೆಂದು ಕಟ್ಟಿಗೆಹಳ್ಳಿ ಸ್ವಾಮಿಗಳು ನಿಶ್ಚಯಿಸಿದರೆಂದು ಹೇಳುವುದು ಸರಿಯಲ್ಲ. (ಶ್ರೀ... ಅಲ್ಲಮಪ್ರಭು ಪು. ೧೨೩) ನಿ. ಜ. ಒಂದನೆಯ ಮುರುಗೇಂದ್ರಸ್ವಾಮಿಗಳಾದ ಶಾಂತವೀರ ಸ್ವಾಮಿಗಳಿಗೆ ಶಿಖಾಪಟ್ಟವಾಗಿರುವುದೆಂಬ ಅಂಶವು ಪ್ರಸಿದ್ಧವಾಗಿ ಇದೆ. ಅವರ ತರುವಾಯ ಗುರುಸಿದ್ಧ ಸ್ವಾಮಿಗಳಿಗೆ ಪಟ್ಟವಾದುದರಿಂದ ಇಮ್ಮಡಿ (೨ನೆಯ) ಮುರುಗೇಂದ್ರ ಸ್ವಾಮಿಗಳು ಎಂಬ ಹೆಸರು ಇವರಿಗೆ ಬಂದಿತು. ಇವರಿಗೆ ಶಿವಾನುಭಾವ ಪಟ್ಟವನ್ನು ಕೊಡಬೇ ಕೆಂದು ೧೭೨೦ ರಲ್ಲಿ ಕಟ್ಟಿಗೆಹಳ್ಳಿ ಸ್ವಾಮಿಗಳು ನಿಶ್ಚಯಿಸಲಿಕ್ಕೆ ಕಾರ ಣವೇ ಇಲ್ಲ. ಆಗ ಅವರು ಇರಲೂ ಇಲ್ಲ. ಪ್ರಸಿದ್ಧರಾದ ಕಟ್ಟಿಗೆ ಹಳ್ಳಿ ಸ್ವಾಮಿಗಳು ಎಂದರೆ ಸಿದ್ಧವೀರಸ್ವಾಮಿಗಳು. ಈ ಹೆಸರಿನವರೇ ಅವರೆಂಬುದಕ್ಕೆ ನಿರಂಜನವಂಶ ರತ್ನಾಕರ ೧ (ಪುಟ ೪೫ ನೋಡಿರಿ) ಒಪ್ಪುವುದಲ್ಲದೆ ಅವರ ಹೆಸರನ್ನು ನಮೂದಿಸಿದ ಎಂದರೆ ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳು ಸೇರಿಸಿದ ಏಕೋತ್ತರ ಶತಸ್ಥಲಸಾರ ಎಂಬ ಒಂದು ಕೈ ಬರಹದ ಗ್ರಂಥವೂ ದೊರೆಯುತ್ತದೆ. ಈ ಹೊತ್ತ ಗೆಯ ಪುಟ ೩ ರಲ್ಲಿಯೂ "ಕಾಷ್ಠಪುರ ಸಿದ್ಧವೀರ ಸ್ವಾಮಿಗಳವರ" ಎಂದಿದೆ. ಇವರು ಸು. ೧೬೭೦ ರೊಳಗೆ ಲಿಂಗೈಕ್ಯರಾದರು. ಎಂದರೆ

ಔರಂಗಜೇಬನ ಆಸ್ಥಾನಕ್ಕೆ ಹೋಗಿದ್ದ ಮತ್ತು ದೆಹಲಿಯಲ್ಲಿಯೇ ಶಿಖಾ ಪಟ್ಟವನ್ನು ಪಡೆದ ೧ನೆಯ ಮುರುಗೇಂದ್ರಸ್ವಾಮಿಗಳು ವಾಪಸು ಬರುವುದರೊಳಗಾಗಿ ಲಿಂಗೈಕ್ಯರಾಗಿದ್ದರೆಂದು ಗೊತ್ತಾಗುತ್ತದೆ. (ಈ ಸಿದ್ಧವೀರಸ್ವಾಮಿಗಳೇ ಶಿವಾನುಭಾವ ಪಟ್ಟವನ್ನು ನೋಡ ಸಿದ್ಧಲಿಂಗ ಸ್ವಾಮಿಗಳಿಗೆ ಮಾಡಿದವರು.)

ಸುಮಾರು ೧೬೩೦-೪೦ ರ ವರೆಗೆ ಅಧಿಕಾರದಲ್ಲಿ ಇದ್ದಿರಬಹುದಾದ ಈ ಕಟ್ಟಿಗೆಹಳ್ಳಿ ಸ್ವಾಮಿಗಳಿಗೆ ರಾಚೋಟಿಸ್ವಾಮಿಗಳು ಶಿಷ್ಯ (ಮರಿ) ಆಗಿದ್ದಂತೆ ತೋರುತ್ತದೆ ಚಿತ್ರದುರ್ಗದಿಂದ ಹರಪನಹಳ್ಳಿ ಶೀಮೊಗೆ ಹೋದ ಚೀಲಾಳಪ್ಪನವರು ಈ ರಾಯಚೂಟಿ ಸ್ವಾಮಿಗಳನ್ನೇ ಹಿಂಬಾಲಿಸಿ ಇರಬಹುದು. ಈ ರಾಚೋಟಿಸ್ವಾಮಿಗಳು ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳಲ್ಲಿ ಇದ್ದುದರ ಗೌರವಕ್ಕಾಗಿಯೇ ಮತ್ತು ೧ ನೆಯ ಮುರುಗೇಂದ್ರಸ್ವಾಮಿಗಳ ಸಹಪಾಠಿಗಳಾಗಿ ಸಹವರ್ತನದಲ್ಲಿ ಇದ್ದುದಕ್ಕಾಗಿಯೇ ಇವರ ಸಹವಾಸವನ್ನಪೇಕ್ಷಿಸಿ ಇವರ ಬರುವಿಕೆಯನ್ನು ೨ನೆಯವರಾದ ಗುರುಸಿದ್ಧಸ್ವಾಮಿಗಳು ನಿರೀಕ್ಷಿಸಿರಬಹುದು. ಈ ರಾಚೋಟಿಸ್ವಾಮಿಗಳು ಅವರಲ್ಲಿಗೆ ಹೋಗದಿರಬಹುದು.

ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳ ಕಾಲ ಕ್ರಿ.ಶ. ೧೬೭೫ ಎಂದು ವೇ. ಬುದ್ಧಯ್ಯನವರು ಮೊದಲು ಒಪ್ಪಿದ್ದಾರೆ. (ಶ್ರೀ ಅ. ಪ್ರ. ೧೨೭) ಆದರೆ ಒಪ್ಪೋಲೆಯಲ್ಲಿ ೧೭೨೫ ಇರಬೇಕೆಂದು ತಿದ್ದಿದ್ದಾರೆ. ಮುರಿಗೆಯಸ್ವಾಮಿಗಳು ಚಿತ್ರದುರ್ಗದ ಪಾಳಯಗಾರ ಬರಮಪ್ಪನಾಯಕನು ಸ್ವರ್ಗಸ್ಥನಾಗುವುದಕ್ಕೆ ಮುಂಚೆ ಲಿಂಗೈಕ್ಯರಾದರೆಂದು ಗೊತ್ತಾಗಿದೆ. (ನಿ. ಮಂ. ರ. ೭ ಪುಟ ೧೭) ಈ ಬರಮಪ್ಪನಾಯಕನು ೧೭೭೦ ರಲ್ಲಿ ಸ್ವರ್ಗಸ್ಥನಾದನೆಂದು ತಿಳಿದಿರುವಲ್ಲಿ ಅತನ ಹಿಂದಿನ ಕಟ್ಟಿಗೆಹಳ್ಳಿ ಸ್ವಾಮಿಗಳು ೧೭೭೫ ಎಂದು ಹೇಳುವುದು ಅಸಂಗತ.

ಸದರೀ ಬುದ್ಧಯ್ಯನವರು ಹಳೇಬೀಡಿನ ಕಲ್ಲುಮಠವನ್ನು ವಿರಕ್ತ ಮಠ ಎಂದು ಭಾವಿಸಿ ಅಲ್ಲಿ ಯಾವ ಸಮಯದ ಮಠವೂ ಇರಲಿಲ್ಲ ಎಂದು ಬರೆಯುತ್ತಾರೆ. ಹಳೇಬೀಡ ಕಲ್ಲುಮಠವು ಗುರುವರ್ಗದ ಪಟ್ಟದ ಮಠ ಇದರಲ್ಲಿ ನ್ಯೂನತೆ ಕಂಡು ಬಂದದ್ದಕ್ಕೆ ಬಹಿಷ್ಕಾರ ಕೊಟ್ಟಿರುತ್ತಾರೆ. ಕಟ್ಟಿಹಳ್ಳಿ ಪಟ್ಟದ ಸ್ವಾಮಿಗಳು ಮೂರ್ತಿ ಪೂಜೆ ಮಾಡಿದುದಕ್ಕೆ ಚಿತ್ರದುರ್ಗದ ಜಗದ್ಗುರುಗಳು ಅವರಿಗೆ ಶಿಕ್ಷಿಸಿರುತ್ತಾರೆ. (ಪಟ್ಟವಲ್ಲರಿ ನೋಡಿರಿ) ಹೀಗೆ ಗುರುವರ್ಗದ ಪಟ್ಟದ

ಮಠಗಳ ಮೇಲೆ ಅಧಿಕಾರ ನಡಸುವುದು ಪೂರ್ವದಿಂದಲೂ ರೂಢಿಯಾಗಿ ಬಂದಿದೆ. ಈಗ ಹಳೇಬೀಡಿನಲ್ಲಿ ಗುರುವರ್ಗದ ಕಲ್ಮಠವಿದ್ದು ಅದರಲ್ಲಿ ಈ ವಿಷಯ ನಡೆದಿರುವುದು ಆ ಸ್ಥಳದಲ್ಲಿ ಜನಜನಿತವಾಗಿದೆ.

‘ ತೇರದಾಳದಲ್ಲಿ ಶ್ರೀ ಪ್ರಭುದೇವರ ಐಕ್ಯ ’ ಎಂಬ ಲೇಖನ

ವೇ. ಮೂ. ಬುದ್ಧಯ್ಯನವರು ಶಿವಾನುಭವ ವರ್ಷ ೧೦ ಸಂಚಿಕೆ ೪ ರಲ್ಲಿ ‘ ತೇರದಾಳದಲ್ಲಿ ಶ್ರೀ ಪ್ರಭುದೇವರ ಐಕ್ಯ ’ ಎಂಬುದಾಗಿ ಒಂದು ಲೇಖನವನ್ನು ಕೊಟ್ಟಿರುತ್ತಾರೆ. ಮಗಿಯು ಪ್ರಭುವಿಗೆ ಅಲ್ಲಮಪ್ರಭುವಿನ ಚಾರಿತ್ರಿಕ ರೂಪವಾದ ಕೆಲಸಗಳನ್ನು ಹೇಳಿ ವರ್ಣನೆ ಮಾಡಿರುವುದರಿಂದ ಮಗೇಶ ಎಂಬ ಬಸವಪ್ರಭುವೇ ಅಲ್ಲಮಪ್ರಭುವೆಂದು ಈ ಲೇಖನದಲ್ಲಿ ತೋರಿಸಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದಿಲಿಂಗನ ಗುರುವು ಅಲ್ಲಮಪ್ರಭುವೆಂದು ಸ್ಪಷ್ಟವಾಗಿ ಅವರೇ ಒಪ್ಪಿಕೊಂಡಿರುತ್ತಾರೆ. ೧ ನೆಯ ಪೃಷ್ಠದಲ್ಲಿ ಬಸವಪ್ರಭು ಸ್ವಾಮಿಗಳ ಕರಮಾಯದ ನಿರಂಜನ ಪೀಠದ ಅಧಿಕಾರಿಗಳು (೧೨) ಆದಿಲಿಂಗಸ್ವಾಮಿಗಳು ಎಂದು ಗೊತ್ತಾಗಿದೆ ಈ ಬಸವಪ್ರಭು ಸ್ವಾಮಿಗಳಿಗೇನೇ ಅಲ್ಲಮಪ್ರಭುವಿನ ಅವತಾರವೆಂದು ಭಾವಿಸಿ ಅಲ್ಲಮಪ್ರಭುವಿನ ಐತಿಹಾಸಿಕ ವಿಷಯಗಳನ್ನು ಹೇಳಿ ವರ್ಣನೆ ಮಾಡಿರುತ್ತಾರೆ. ಇಂಥ ಸಂಭವಗಳು ಎಂದರೆ ಶಿವರೂಪರಾದವರಿಗೆ ‘ ಪಾರ್ವತೀಪತಿ ’ ‘ ಕೈಲಾಸದ ಶಂಕರ ’ ಎಂದು ಕರೆದಿರುವುದೇ ಮೊದಲಾದ ಪ್ರಮಾಣಗಳು ಸಿಕ್ಕುವುದರಿಂದ ತೇರದಾಳದಲ್ಲಿದ್ದವರು ಬಸವಪ್ರಭುವೇ ಹೊರತು ಇತಿಹಾಸ ರೂಪದಲ್ಲಿನ ಕಲ್ಯಾಣದ ಶೂನ್ಯ ಪೀಠಾರೋಹಣ ಮಾಡಿದ ಅಲ್ಲಮಪ್ರಭುವಲ್ಲ ಎಂದು ಅಡ್ಡಿಯಿಲ್ಲದೆ ಗೊತ್ತುಮಾಡಲಿಕ್ಕೆ ಬರುತ್ತದೆ.

ಕರಿಕಾಲಚೋಳಗೆ ಒಲಿದ ದೇವನು ಅಲ್ಲಮಪ್ರಭುವೆಂದು ಶ್ರೀ ಚನ್ನಪ್ಪ ಕವಿಯು ವರ್ಣಿಸಿರುವುದರಲ್ಲಿ ಬಸವಪ್ರಭುವಿನ ಕಾಲಕ್ಕೆ ಅಥವಾ ವೇ. ಬುದ್ಧಯ್ಯನವರು ಒಪ್ಪುವಂತೆ ಬಸವಪ್ರಭುವಿನ ಮುಂದಿನ ಅಧಿಕಾರಿಗಳಾದ ಆದಿಲಿಂಗೇಶ್ವರನ ಕಾಲಕ್ಕೆ ಕರಿಕಾಲಚೋಳನಿದ್ದನೆಂಬುದು ಯಾವ ಇತಿಹಾಸದಿಂದಲೂ ಸಿದ್ಧವಾಗುವುದಿಲ್ಲ.

ಶ್ರೀ....ಅಲ್ಲಮಪ್ರಭು ಎಂಬ ಪುಸ್ತಕದಲ್ಲಿ ಇಬ್ಬರು ಚನ್ನಪ್ಪ ಕವಿಗಳು ಉಂಟೆಂದು ಹೇಳಿರುತ್ತಾರೆ. ಇವರಲ್ಲಿ ೧ ನೆಯ ಚನ್ನಪ್ಪನು ಪ್ರಭುದೇವರ ಸಂಗಡ ತೇರದಾಳಕ್ಕೆ ಬಂದಿದ್ದನೆಂದೂ ನಿಡುಗಲ್ಲು ಎಂಬುದು

ರಾಜರ ಸ್ಥಾನವಿದ್ದಂತೆ ಕಂಡುಬಂದಿರುವುದರಿಂದ ಶ್ರೀ ಪ್ರಭುದೇವರು ಚನ್ನಪ್ಪನೊಡನೆ ನಿಡುಗಲ್ಲಿಗೆ ದಯಮಾಡಿಸಿದ್ದು ಸಹಜವೆನಿಸುತ್ತದೆ (ಪುಟ ೧೫೦—೧೫೧) ಎಂದೂ ಪ್ರಭುದೇವರು ತಮ್ಮ ನಿರ್ವಾಣ ಸಮಯದಲ್ಲಿ ಈ ಚನ್ನಪ್ಪನ ಇಬ್ಬರು ಮಕ್ಕಳ ತಲೆಯ ಮೇಲೆ ಹಸ್ತವನ್ನಿಟ್ಟರೆಂದೂ ಬರೆದಿರುತ್ತಾರೆ.

ನಿಡುಗಲ್ ಚನ್ನಪ್ಪನು ರಚಿಸಿದ 'ಶರಣಲೀಲಾಮೃತ' ಎಂಬ ಗ್ರಂಥವಿದೆ. ಇದರಲ್ಲಿ ೧೧ನೆಯ ಸಂಧಿಯಲ್ಲಿ ನಿಡುಗಲ್ಲಿನಲ್ಲಿ ಇದನ್ನು ರಚಿಸಿದೆನೆಂದು ತಾನೇ ಹೇಳಿಕೊಂಡಿದ್ದಾನೆ. ಮತ್ತು ಷಾಹಿ ರುದ್ರಮಾಂ ಗುರು ಷಾಹಿ ಎಂದು ರುದ್ರಮುನಿ ಗುರುವನ್ನು ಸ್ತೋತ್ರ ಮಾಡಿದ್ದಾನೆ. ಚಾಮರಸನನ್ನೂ ಸ್ತೋತ್ರ ಮಾಡಿರುವುದರಿಂದ ಈತನ ಕಾಲವು ಸು. ೧೫೭೦, ಇದರಿಂದ ಈತನು ಬಸವಪ್ರಭು ಸ್ವಾಮಿಗಳೊಡನೆ ತೇರದಾಳಕ್ಕೆ ಬಂದಿದ್ದನೆಂದು ನಿಶ್ಚಿತವಾಗುತ್ತದೆ. ಈತನಲ್ಲದೆ ಮತ್ತೊಬ್ಬರು ನಿಡುಗಲ್ ಚನ್ನಪ್ಪನವರಿದ್ದರೆಂದು ಇತಿಹಾಸ ದೃಷ್ಟಿಯಿಂದ ಸಿದ್ಧಪಡಿಸುವುದಕ್ಕೆ ತಕ್ಕ ಆಧಾರಗಳಿಲ್ಲ. ನಿ ಜ ಶ್ರೀ....ಅಲ್ಲಮಪ್ರಭುವು ಬಹು ಪೂರ್ವ ಕಾಲದವನೆಂದು ಇದರಲ್ಲಿ ಹೇಳಿರುವ ವಿಷಯಕ್ಕೆ ಈಗ ವಿಮರ್ಶೆಗೆ ಹೋಗುವಂತಿಲ್ಲವಾದರೂ ಈ ಪ್ರಭುವು ನಿಡುಗಲ್ ಚನ್ನಪ್ಪನ ಸಹವರ್ತಿಯಾಗಿ ತೇರದಾಳದಲ್ಲಿದ್ದನೆಂದು ಹೇಳುವುದು ಸರ್ವಥಾ ಒಪ್ಪತಕ್ಕ ಮಾತಲ್ಲ. ಈ ವಿಷಯವನ್ನು ಮ. ರಾ. ಶ್ರೀನಿವಾಸಮೂರ್ತಿಗಳೂ ರಾ. ಸಾ. ಹಲಕಟ್ಟಿಯವರೂ ಒರೆದಾಗ್ಯೂ ಮತ್ತೆ ಮೊದಲಿನಂತೆಯೇ ದೃಢಪಡಿಸಲಿಕ್ಕೆ ಹೋಗಿದ್ದಾರೆ. ಇನ್ನು ಮುಂದೆ ಇವರು ಬರೆವುದಾದರೆ ನಿಜಾಂಶವನ್ನು ವಿವರವಾಗಿ ಹೊರಗೆಡವಲಿಕ್ಕೆ ನಮ್ಮ ಲೇಖನಿಯು ಬಿಗಿಯಾಗಿ (Firm) ಇದೆ.

ವೇ. ಬುದ್ಧಯ್ಯನವರ ಸಮಾಧಾನದ ಕೊನೆಯ ಮಾತು.

ಜನರು ಹೇಳತಕ್ಕ ಕಟ್ಟುಕಥೆಗಳು ಮೂರರ ಜೊತೆಯಲ್ಲಿ ನಿರಂಜನವಂಶ ರತ್ನಾಕರ ಮೊದಲನೆಯ ಭಾಗ ಮತ್ತು ಈ ಎರಡನೆಯ ಭಾಗದ ವಿಷಯಗಳನ್ನೂ ವೇ. ಬುದ್ಧಯ್ಯನವರು ಸೇರಿಸಿಕೊಂಡಿರುತ್ತಾರೆ. ಇದು ಸರಿಯಲ್ಲ ಜನರಾಡುವ ಕಟ್ಟುಕಥೆಯ ಮಾತುಗಳು ಬರಹವಿಲ್ಲದವುಗಳು. ಈ ನಿರಂಜನವಂಶ ರತ್ನಾಕರದ ಎರಡು ಭಾಗಗಳ ವಿಷಯಗಳೂ ಒಂದನ್ನೊಂದು ಹೋಲುತ್ತಾ ಪರಂಪರೆಯಾಗಿ ನಡೆದ ವಿಷಯಗಳನ್ನು ತಿಳಿಸುತ್ತಾ ಬಂದಿರುತ್ತವೆ. ಸಾಧಾರಣವಾಗಿ

ಇದನ್ನು ಬರೆದವರು ಶಿಖಾಪಟ್ಟ ಶಿವಾನುಭಾವಪಟ್ಟದ ಪರಂಪರೆಗಳನ್ನು ಬಲ್ಲವರೂ ಆ ಕಡೆ ಈ ಕಡೆ ಇಬ್ಬರಿಗೂ ಬೇಕಾದವರೂ ಆಗಿ ಇದ್ದು ವಿಷಯಗಳನ್ನು ಸಂಗ್ರಹಿಸಿದವರಾಗಿರುತ್ತಾರೆ, ಇಲ್ಲದಿದ್ದರೆ ಮುರಗಾಸ್ವಾಮಿಗಳು ಕೊಟ್ಟ ಚರಂತಿಕೆಗಳು ನೋಟದ ಸಿದ್ಧಲಿಂಗಸ್ವಾಮಿಗಳು ಕೊಟ್ಟ ಚರಂತಿಕೆಗಳು ಮುಂತಾದ ವಿಷಯಗಳು ಈಗಿನವರು ಅಹುದೆಂದು ಒಪ್ಪುವಂತೆ ಬರೆಯಲ್ಪಡಲವಕಾಶವಾಗುತ್ತಲಿರಲಿಲ್ಲ. ಮೇಲಾಗಿ ಈ ಪಟ್ಟದವರು ಶೂನ್ಯ ಪೀಠದ ಅಧಿಕಾರವನ್ನು ನಡಸಿದ ಮತ್ತು ರಾಜರುಗಳಿಂದಲೂ ಸಮಾಜದಿಂದಲೂ ಸನ್ಮಾನಿತರಾಗಿ ದೇಶಮಧ್ಯದಲ್ಲಿ ಸಂಚರಿಸಿದ, ೭೦ ಬಿರುದುಗಳಿಂದ ಮೆರವಣಿಗೆ ಹೊಂದಿದ ಉದಾಹರಣೆಗಳು ಬೇಕಾದಷ್ಟು ದೊರೆಯುತ್ತವೆ. ಸಿಕ್ಕ ಶೈಲಗಳು ಜೀರೆ ಹೆಗ್ಗುರತಾಗಿವೆ. ಶಿಖಾ ಪಟ್ಟದವರು ತಮ್ಮ ಚರಂತಿಕೆಯನ್ನು ಕೊಡುವಾಗ ಚನ್ನಬಸವ ಪುರಾಣ ಮೊದಲಾದ ಹೊತ್ತಗೆಯನ್ನು ಕೊಟ್ಟರೆ ಶಿವಾನುಭಾವ ಪಟ್ಟದವರು ಪ್ರಭುದೇವರ ಮಂತ್ರಗೋಪ್ಯ ಮೊದಲಾದವುಗಳನ್ನು ಕೊಡುವ ಪದ್ಧತಿ ಇದೆ. ಹೀಗೆ ಅಧಿಕಾರವನ್ನು ನಡಸುತ್ತಿದ್ದರೆಂಬ ಪ್ರಖ್ಯಾತಿಯುಳ್ಳವರಿಗೇನೇ ಜಗದ್ಗುರುತ್ವವು ಯಾರದು ಸರಿಯಾದುದು ಎಂಬುದನ್ನು ಹೇಳಲಿಕ್ಕೆ ಸಮಾಜವು ಸಿದ್ಧವಾಗಿಲ್ಲದಿರುವಾಗ ಈ ವೇ. ಬುದ್ಧಯ್ಯನವರು ಹೇಳುವಂತೆ ಯಾವುದೊಂದು ಬಹಿಹವೂ ಇಲ್ಲದೆ ಅಧಿಕಾರವನ್ನೂ ನಡಸದೆ ಕಟ್ಟುಕಥೆಯಿಂದ ಕಲ್ಪಿಸಿಕೊಂಡ ಪ್ರಕಾರ ಇರುವ ತೇರದಾಳು ಮಠಕ್ಕೆ ಅಧಿಕಾರಿಗಳಾದವರನ್ನು ಜಗದ್ಗುರುಗಳೆಂದು ಎಲ್ಲರೂ ನಂಬಬೇಕೆಂದು ಹೇಳುತ್ತಿರುವ ಮಾತು 'ಮಹಾಗಜಾಃ ಪಲಾಯಂತೇ ಮಶಕಾನಾಂತು ಕಾ ಕಥಾ'(ದೊಡ್ಡ ಆನೆಗಳೇ ಓಡಿಸಲ್ಪಡುವಾಗ ಸೊಣಗಳ ಪಾಡೇನು) ಎಂಬ ಗಾದೆಗೆ ಸರಿಯಾಗಿದೆ. ಈ ನಿರಂಜನವಂಶ ರತ್ನಾಕರದ ಎರಡು ಭಾಗಗಳಲ್ಲಿ ಹೇಳಲ್ಪಟ್ಟ ವಿಷಯಗಳು ಬಹು ಮಟ್ಟಿಗೆ ಚರಿತ್ರೆ ರೂಪವಾಗಿಯೇ ಇರುವವೆಂದು ನಂಬಲನುಮಾನವೇನೂ ಇಲ್ಲ (ಇವಲ್ಲದೆ ಒಂದೊಂದು ಸಮುಯದವರು ತಮ್ಮ ಪ್ರತಿಷ್ಠೆಗಾಗಿ ತಾವು ಹೆಚ್ಚಿನವರೆಂದು ತೋರಿಸುವಂತೆ ಬರೆದುಕೊಂಡ ಕೆಲ ವಿಷಯುಗಳುಳ್ಳ ಬರಹ ಪ್ರತಿಗಳು ಓಲೆಯ ಪ್ರತಿ ಸಹಾ ಸಿಕ್ಕಿರುತ್ತವೆ ಅವು ಪಕ್ಷಪಾತದ ಬರೆವಣಿಗೆಗಳೆಂದೂ ನಿಜವಲ್ಲದ ಅಂಶಗಳೆಂದೂ ತಿಳಿದು ಬಂದುದರಿಂದ ಅವುಗಳನ್ನು ಮುದ್ರಿಸುವ ಗೋಜಿಗೆ ಹೋಗಿಲ್ಲ ಪ್ರಕಾಶಕ)

ನಿರಂಜನವಂಶ ರತ್ನಾಕರ.

೨ ನೆಯ ಭಾಗ.

ಶ್ರೀಮನ್‌ನೃಪ ಶಾಲಿವಾಹನ ಶಕ ವರುಷ ಏಳುನೂರ ಏಳನೆಯ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ ೧೧ ಮಂಗಳವಾರ ಉದಯ ೨೫ ಗಳಿಗೆ ವೇಳೆಯಲ್ಲಿ ಶ್ರೀ ಬಸವರಾಜೇಂದ್ರರು ಕಲ್ಯಾಣಪುರವಂ ಬಿಟ್ಟು - ಕೃಷ್ಣಾ ಮಲಾಪಹಾರಿ ಈ ಎರಡು ನದಿಗಳು ಸಂಗಮವಾದ ಕಪ್ಪಡಿ ಸಂಗಮ ಕ್ಷೇತ್ರದ ಶ್ರೀ ಸಂಗಮೇಶ್ವರ ಲಿಂಗದಲ್ಲಿ ನಿರಂಜನ ಜಂಗಮ ಮುಖದಿಂದ ಐಕ್ಯರಾದರು.

ಈ ಶ್ರೀ ಬಸವೇಶ್ವರನ ಭಕ್ತಿಗೋಸ್ಕರವಾಗಿ ಶ್ರೀಮನ್ಮಹಾ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು ಸೊನ್ನಲಿಗೆಯಿಂದ ಸಿದ್ಧರಾಮೇಶ್ವರ ದೇವರು ಸಮೇತವಾಗಿ ಶ್ರೀಮತ್ ಕಲ್ಯಾಣ ನಗರಕ್ಕೆ ಚಿತ್ತೈಸಿ ಅಲ್ಲಿರ್ದ ಬಸವೇಶ್ವರ ಮುಂತಾದ ಲಕ್ಷದ ಮೇಲೆ ತೊಂಭತ್ತಾರುಸಾವಿರ ಜಂಗಮಕ್ಕೆ ಗುರುಗಳಾಗಿ ಸಕಲ ಪ್ರಮಥರಿಂದ ಪೂಜೆಯನ್ನು ಕೈಕೊಂಡು ಶೂನ್ಯಸಿಂಹಾಸನವನ್ನು ಏರಿ ಆ ಮೇಲೆ ಸವಾಲಕ್ಷ ಪರ್ವತದಲ್ಲಿ ಇದ್ದ ಮುನಿಗಳಿಗೆ ಮೋಕ್ಷ ಮಾರ್ಗವನ್ನು ಇತ್ತು ಆ ಬಳಿಕ ಕಂಚಿ ಕಾಳಹಸ್ತಿ ಪೊನ್ನಾಂಬಲ ಮುಂತಾದ ಸಕಲ ಕ್ಷೇತ್ರಗಳ ನೋಡುತ ೧೨ ವರುಷ ದೇಶಾಟನವನ್ನು ಗೈದು ಆನಂತರ ಕಲ್ಯಾಣಪುರದಲ್ಲಿ ಇರ್ದ ಶ್ರೀ ಬಸವೇಶ್ವರ ಮುಂತಾದ ಸಕಲ ಪ್ರಮಥರಿಗೆ ನಿಜ ಲಿಂಗೈಕ್ಯ ಭಾವವನ್ನು ತೋರಿ ಶ್ರೀಶೈಲ ಪರ್ವತದ ಕದಳಿ ಬನದಲ್ಲಿ ನಿರ್ವಯಲಾದರು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಅಲ್ಲಮಪ್ರಭು ಶ್ರೀ ಚನ್ನಬಸವರಾಜೇಂದ್ರರ ಬಳಿವಿಡಿದು ಬಂದ ಗುರು ಪರಂಪರೆಯಾದ ಶಿವಾನುಭಾವ ಚರಂತಿಗೆ ಪಟ್ಟವಾಗುತ ಬಂದ ಗುರುಗಳ ವಿವರ:—

ಮೂರುಸಾವಿರ ವಿರಕ್ತರಿಗೂ ಏಳುನೂರು ಚರಮೂರ್ತಿಗಳಿಗೂ ಮೇಲೆ ಹೇಳಿದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಅಲ್ಲಮಪ್ರಭು ಚನ್ನಬಸವರಾಜೇಂದ್ರರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಕಾರಣ ಕರ್ತರಾದ ಶ್ರೀ ಸೊನ್ನಲಾಪುರದ ಸಿದ್ಧರಾಮೇಶ್ವರ ಸ್ವಾಮಿಗಳವರ ತರುವಾಯದಲ್ಲಿ ದಕ್ಷಿಣ ದಿಗ್ಭಾಗ ಕರ್ನಾಟಕದೇಶ ಮೈಸೂರು ರಾಜಧಾನಿಗೆ ಸೇರುಪಟ್ಟ ಕಾವೇರಿ ತೀರದ ಪ್ರಾಂತದಲ್ಲಿ ಇರುವ ಐವಳ್ಳಿ ಮಠಾ

ಧೀಶ್ವರನಾದ ಪಂಚಮಗಣನಾಥನ ವಂಶಜರಾದ ವಾಣಿಜರೆಂಬ ಹರದ ರಿಂದ ನಿರ್ಮಿತವಾದ ವಾಣಿಜ್ಯಪುರವೆಂಬ ಹರದನಹಳ್ಳಿ ದೇವಭಕ್ತರ ಭಕ್ತಿಯಲ್ಲಿ ಇರ್ದ ವಾಣಿಜ್ಯಪುರ ಶೂನ್ಯಸಿಂಹಾಸನಕ್ಕೆ ಕಾರಣಕರ್ತೃ ಗಳಾದ ಶಿವಾನುಭಾವ ಚರಂತಿಗೆ ಪಟ್ಟದ ಅನಾದಿಗಣನಾಥ, ಇವರಿಂದ ಆದಿಗಣವರ, ಇವರಿಂದ ನಿರ್ಮಾಯ ಗಣನಾಥ, ಇವರ ಶಿಷ್ಯ ನಿರಂ ಜನ ಸ್ವಾಮಿಗಳು, ಇವರಿಂದ ಜ್ಞಾನಾನಂದರೆಂಬ ಚರಮೂರ್ತಿಗಳು, ಇವರ ತರುವಾಯ ಆತ್ಮಗಣವರರು, ಇವರಿಂದ ಅಧ್ಯಾತ್ಮರೆಂಬ ಸ್ವಾ ಮಿಗಳು, ಇವರಿಂದ ರುದ್ರಮುನಿ ಸ್ವಾಮಿಗಳು, ಇವರ ತರುವಾಯ ಬಸವಪ್ರಭು ಸ್ವಾಮಿಗಳು, ಇವರಿಂದ ಆದಿಲಿಂಗ ಸ್ವಾಮಿಗಳು, ಇವರ ಪಶ್ಚಾತ್ ಚನ್ನವೀರರಾಜೇಂದ್ರರು, ಇವರಿಂದ ಗೋಸಲ ಯತೀಶ್ವರ ಸ್ವಾಮಿಗಳು, ಇವರಿಂದ ಶಂಕರಾಚಾರ್ಯ ಸ್ವಾಮಿಗಳು, ಇವರ ತರು ವಾಯ ದಿವ್ಯಲಿಂಗ ಸ್ವಾಮಿಗಳು, ಇವರ ಶಿಷ್ಯರು ಗೋಸಲ ಶ್ರೀ ಚನ್ನ ಬಸವರಾಜೇಂದ್ರರು, ಇವರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಕರ್ತೃ ಗಳಾದ ಶ್ರೀ ತೋಂಟದ ಸಿದ್ಧಲಿಂಗ ದೇಶಿಕೇಂದ್ರರು, ಇವರಿಂದ ನಿರ ಕ್ಷರ ಬೋಳು ಬಸವೇಶ್ವರ ಸ್ವಾಮಿಗಳು, ಇವರಿಂದ ಗುಮ್ಮಳಾಪುರದ ಗಡ್ಡದ ಸಿದ್ಧವೀರಣ್ಣ ಸ್ವಾಮಿಗಳು, ಇವರ ತರುವಾಯ ಗೂಳೂರ ಗುರುಸಿದ್ಧರಾಜೇಂದ್ರರು, ಇವರಿಂದ ಗಗನದಾರ್ಯಸ್ವಾಮಿಗಳು, ಇವರ ಶಿಷ್ಯರು ಶ್ರೀ ಕಟ್ಟಿಗಿಹಳ್ಳಿ ಸಿದ್ಧವೀರ ಸ್ವಾಮಿಗಳು ಇವರು.

ಶಿ ಖಾ ಪ ಟ್ಟ ವಿ ಲ್ಲ ದೆ

ಶ್ರೀ ಚ ನ್ನ ಬ ಸ ವ ರಾ ಜೇಂ ದ್ರ ರು ಶ್ರೀ ಸಿದ್ಧರಾಮೇಶ್ವರ ಸ್ವಾಮಿ ಗಳವರಿಗೆ ಅಲ್ಲಮಪ್ರಭು ಸ್ವಾಮಿಗಳವರ ಸೂತ್ರವಿಡಿದು ಬೋಧಿಸಿದ ಕರಣಹಸುಗೆ ವಿಶ್ರಾಂತ್ರರ್ಪಣ ಸ್ಥಲ ಪ್ರಭುದೇವರ ಮಂತ್ರಗೋಪ್ಯ ಅಕ್ಕ ಗಳ ಸೃಷ್ಟಿ ವಚನಗಳೆಂಬ ಸರ್ವ ಪ್ರಮಥರು ನಿರೂಪಿಸಿದ ಶಿವಾನುಭಾವ ಪುಸ್ತಕದ ಸೂತ್ರವಿಡಿದುನಡೆದುಬಂದಶಿವಾನುಭಾವಚರಂತಿಗೆ ಪಟ್ಟದವರು ಈ ಶ್ರೀ ಕಟ್ಟಿಗಿಹಳ್ಳಿ ಸ್ವಾಮಿಗಳು. ಮೂರುಸಾವಿರ ಷಟ್‌ಸ್ಥಲ ಬ್ರಹ್ಮಿಗ ಳಾದ ವಿರಕ್ತರಿಗೂ ಶ್ರೀ ತೋಂಟದಾರ್ಯ ಸ್ವಾಮಿಗಳವರು ನಿರೂಪಿ ಸಿದ ಸಿದ್ಧೇಶ್ವರ ವಚನ ಸಿದ್ಧೇಶ್ವರ ಪುರಾಣ ಪ್ರಭುದೇವರು ನಿರೂಪಿ ಸಿದ ಗುಹೇಶ್ವರ ವಚನ ಪ್ರಭುದೇವರ ಪುರಾಣ ಬಸವ ಚನ್ನಬಸವ ರಾಜೇಂದ್ರರು ನಿರೂಪಿಸಿದ ಸಂಬಂಧದ ವಚನ ಬಸವ ಚನ್ನಬಸವ

ಪುರಾಣಗಳು ಮುಂತಾದ ಈ ಪುಸ್ತಕಗಳ ಸೂತ್ರವಿಡಿದು ಬಂದ ಏಳುನೂರು ಬುಡಕಟ್ಟಿನ ಚರಮೂರ್ತಿಗಳು ಮೊದಲಾದವರಿಗೂ ಪಂಚಾಚಾರ್ಯ ಸೂತ್ರವಿಡಿದು ಬಂದ ದೇವ ಭಕ್ತರಿಗೂ ಗುರುಗಳಾದ ಈ ಶ್ರೀ ಕಟ್ಟಿಗಿಹಳ್ಳಿ ಸ್ವಾಮಿಗಳವರ ತರುವಾಯದಲ್ಲಿ

ಇವರು ಸಾಕಿದ ಮರಿಗಳಾದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು, ಶ್ರೀ ನೋಡ ಸಿದ್ಧಲಿಂಗ ದೇಶಿಕೇಂದ್ರ ಸ್ವಾಮಿಗಳು, ಈ ಉಭಯ ಸ್ವಾಮಿಗಳೂ ತಮ್ಮ ಗುರುಗಳ ಆಜ್ಞಾ ಪ್ರಕಾರ ಡಿಳ್ಳಿ ತಕ್ತಕ್ಕೆ ಅಧಿಪತಿ ಆಗುವೆ ಎಂದು ಕಲ್ಯಾಣದಿಂದ ಉಳವಿಗೆ ಸಕಲ ಪ್ರಮಥ ಗಣ ಸಮೂಹದೊಡನೆ ಶ್ರೀ ಚನ್ನಬಸವರಾಜೇಂದ್ರ ಸ್ವಾಮಿಗಳು ದಯಮಾಡಿಸುವಾಗ್ಯೆ ಆಶೀರ್ವಾದವನ್ನು ಮಾಡಿದ ಮಲ್ಲೂಖಾನನ ವಶದಲ್ಲಿ ಇದ್ದ ಶಿಖಾ (ಸಿಕ್ಕಾ!) ಶೈಲ ಶೂನ್ಯ ಪೀಠ ಈ ಮೂರು ವಸ್ತುಗಳನ್ನು ಡಿಳ್ಳಿಯಿಂದ ಸತ್ತ ಆನೆಯನ್ನು ಎಬ್ಬಿಸಿ ಪವಾಡವನ್ನು ಗೆಲಿದು ತಂದ ತರುವಾಯದಲ್ಲಿ ಮಹಾರಾಜಶ್ರೀ ಕಟ್ಟಿಗಿಹಳ್ಳಿ ಸ್ವಾಮಿಗಳವರ ಈಚೆಗೆ ಇವರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ರಾ॥ ನೋಡಸಿದ್ಧಲಿಂಗ ಸ್ವಾಮಿಗಳವರೇ ಕರ್ತೃಗಳಾದರು. ಸದರಿ ಡಿಳ್ಳಿಯಿಂದ ತಂದ ಶಿಖಾ ಶೈಲ (ರೂಪ?) ವಾದ ಶಿಖಾ ಪಟ್ಟಕ್ಕೆ ರಾ॥ ಮುರುಘರಾಜೇಂದ್ರ ಸ್ವಾಮಿಗಳವರೇ ಕರ್ತೃಗಳು ಆದರು.

ಆ ಮೇಲೆ ಸದರಿ ಸಕಲ ವಿರಕ್ತ ಮೂರ್ತಿಗಳಿಗೂ ಸಕಲ ಬುಡಕಟ್ಟಿನ ಚರಮೂರ್ತಿಗಳಿಗೂ ಸಕಲ ಸಿಂಹಾಸನದ ಅಧಿಪತಿಗಳಾದ ಪಟ್ಟ ಚರಂತಿಗೆ ಸೂತ್ರಿಕರಾದ ದೇವಭಕ್ತರಿಗೂ ಗುರುಗಳಾಗಿ ಶ್ರೀಮತ್ಪರಶಿವ ಸ್ವರೂಪ ಅಲ್ಲಮ ಪ್ರಭುಸ್ವಾಮ್ಯನ್ವಯ ಸಂಜನಿತರಾದ ನಿರಾಭಾರ ವಿಶೇಷ ಸಾಮಾನ್ಯ ಶ್ರೀ ಮದ್ವೀರಶೈವ ಸಿದ್ಧಾಂತ ಸಕಲ ವಿರಕ್ತಾಧಿಪ ಪರಮ ಷಟುಸ್ಥಲ ಸ್ಥಾಪನಾಚಾರ್ಯ ವರ್ಯರಾದ ಶ್ರೀ ಮುದ್ರಾಪುರಾಧೀಶ ದ್ರಾಕ್ಷಾರಾಮಕ್ಷೇತ್ರ ರಾಮನಾಥ ಲಿಂಗೋದ್ಭವ ನಿರ್ಮಿತರಾದ ಶ್ರೀಮತ್ಕಲ್ಯಾಣ ಭೂಮಧ್ಯ ದೇಶಾಂತರಾಳ ಪರಿಶೋಭಿತ ಶ್ರೀ ಮತ್ಪ್ರಭು ಪಂಡಿತೋರ್ಧ್ವ ಹೃದಯಾತ್ಮಕ ಸಂಜನಿತರಾದ ಸಕಲ ಸಿಂಹಾಸನಾಧಿಪ ಶ್ರೀಮದ್ ದ್ವಾರಾವತಿ ಜಟಾಪುರ ಶೂನ್ಯ ಸಿಂಹಾಸನಾಧೀಶ್ವರ ಕಾಷ್ಠ ಪುರ ಸಿದ್ಧವೀರ ಸ್ವಾಮಿಗಳವರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ

ಕರ್ತೃಗಳಾದ ನೋಡಸಿದ್ಧಲಿಂಗ ದೇಶಿಕೇಂದ್ರರವರ ಕರಕಂಜೋದ್ಭವ
ರಾದ ವಾಚ್ಯದ ಕುಮಾರಾಖ್ಯ ಸ್ವಾಮಿಗಳವರ ಶಿವಾನುಭಾವ ಚರಂತಿಗ
ಪಟ್ಟಕ್ಕೆ ಅಧಿಪತಿಗಳಾದ ಶ್ರೀ ಕುಮಾರ ಕೆಂಪಿನ ಸಿದ್ಧವೃಷಭೇಂದ್ರ
ಸ್ವಾಮಿಗಳವರ ಗುರುಗಳಾದ ಸದರೀ ಶ್ರೀ ಕುಮಾರ ಸ್ವಾಮಿಗಳೂ
ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠದಲ್ಲಿ ರಾ॥ ಮುರುಘಾ ಸ್ವಾಮಿಗಳೂ
ಈ ಉಭಯ ಮಹಾಸ್ವಾಮಿಗಳೂ ಕೂಡಿ ಲಿಂಗಪೂಜಾ ಜಂಗಮ ದಾಸೋ
ಹದಿಂದ ಗಣಸಮೂಹದೊಡನೆ ಇರುವಲ್ಲಿ

ಆ ವೇಳೆಯಲ್ಲಿ ದಸರಾ
(ಮಹಾನವಮಿ = ವಿಜಯದಶಮಿ) ಉತ್ಸಹವು ಬರಲು ಆ ಚಿನ್ಮೂಲಾ
ದ್ರಿ ಎಂಬ ಚಿತ್ರಕಲ್ಲದುರ್ಗದ ರಾಜನಾದ ಚಂದ್ರಮೌಳಿ ಅರಸನ ಮಗ
ನಾದ ಬಿಚ್ಚುಗತ್ತಿಯ ಭರಮನಾಯಕನೆಂಬ ದೊರೆಗಳು ಮುಂತಾದ ಆ
ಸ್ಥಲದ ದೇವಭಕ್ತರು ಸದರಿ ಉತ್ಸಹದ ದಶೆಯಿಂದ ಮಃ॥ ರಾ॥ ಉಭ
ಯ ಸ್ವಾಮಿಗಳವರ ಆಜ್ಞಾ ಪ್ರಕಾರ ಸಕಲ ದೇಶಗಳಲ್ಲಿ ಇರುವ
ಪೇಟೆ ಮನೆ ದೇವ ಭಕ್ತರುಗಳಿಗೆ ಆಶೀರ್ವಾದ ನಿರೂಪಗಳ ಬರಸಿ ಕಳು
ಹಿಸಲು ಅಪ್ಪಣೆ ಪ್ರಕಾರ ಸನ್ನಿಧಿಗೆ ಗುರುಚರಮೂರ್ತಿಗಳು ಮುಂತಾದ
ದೇವ ಭಕ್ತರು ಹಾಜರಾಗಿ ಉಭಯ ಸ್ವಾಮಿಗಳವರನ್ನು ಶೂನ್ಯ
ಸಿಂಹಾಸನರೂಢರನ್ನು ಮಾಡಿಸಿ ೭೨ ಬಿರುದುಗಳಿಂದ ಉತ್ಸಹಂಗೊಳಿ
ಸಲು ಈ ಸನ್ನಿಧಿಗೆ ಹಾಜರಾದ ಆಜ್ಞಾಧಾರಕರಾದ ಪ್ರಭು ಸ್ವಾಮಿ
ಗಳವರ ಸೂತ್ರಕ್ಕೆ ಸೇರುಪಟ್ಟ ಸಕಲ ಬುಡಕಟ್ಟಿನ ಚರಮೂರ್ತಿಗಳು,
ಷಟುಸ್ಥಲ ಬ್ರಹ್ಮಿಗಳಾಡ ವಿರಕ್ತರು, ಇವರುಗಳ ವಿವರವು:—

ಲೋಚನ ಬುಡಕಟ್ಟಿನ ಗುರುಬಸವಪ್ಪನವರಿಗೆ ಸೇರಿದ ಚರಮೂ
ರ್ತಿಗಳು ೭೫, ಸಣ್ಣ ಬರಹದ ಬುಡಕಟ್ಟಿನ ಚನ್ನವೀರಪ್ಪನವರ ಬಗೆ
ಚರಮೂರ್ತಿಗಳು ೪೦, ಮೂರುಸಾವಿರದ ಬುಡಕಟ್ಟಿನ ಚನ್ನವೀರಪ್ಪ
ನವರು ಸಿದ್ಧರಾಮಪ್ಪನವರ ಬಗೆ ಚರಮೂರ್ತಿಗಳು ೨೭, ಸುಲೇಗಾವಿ
ಬುಡಕಟ್ಟಿನ ಸಂಗನಬಸವಪ್ಪನವರ ಬಗೆ ಚರಮೂರ್ತಿಗಳು ೨೫, ಕಡಕಡ
ಬುಡಕಟ್ಟಿನ ಗುರುನಂಜಪ್ಪನವರ ಬಗೆ ಚರಮೂರ್ತಿಗಳು ೨೫, ಕಸೂತಿ
ಬುಡಕಟ್ಟಿನ ಅದೃಶ್ಯಪ್ಪನವರ ಬಗೆ ಚರಮೂರ್ತಿಗಳು ೨೫, ಅರುಣಾ
ಚಲದ ಬುಡಕಟ್ಟಿನ ಸಿದ್ಧಬಸವಪ್ಪನವರ ಬಗೆ ಚರಮೂರ್ತಿಗಳು ೨೫,
ಮುತ್ತಿನಕಂತೆ ಬುಡಕಟ್ಟಿನಬಸವಲಿಂಗಪ್ಪನವರಬಗೆ ಚರಮೂರ್ತಿಗಳು ೧೫

ಎಂಟೆತ್ತಿನ ಬುಡಕಟ್ಟಿಗೆ ಸೇರಿದ ಸಿದ್ಧಲಿಂಗಪ್ಪನವರ ಬಗೆ ಚರಮೂರ್ತಿಗಳು ೨೦, ನೈಘಂಟಿನ ಬುಡಕಟ್ಟಿನ ಚಂದ್ರಶೇಖರಪ್ಪನವರ ಬಗೆ ಚರಮೂರ್ತಿಗಳು ೨೫, ಜ್ವಲತ್ಕಂಥಾ ಬುಡಕಟ್ಟಿನ ಲಲಾಟಾಕ್ಷಪ್ಪನವರ ಬಗೆ ಚರಮೂರ್ತಿಗಳು ೧೫, ಕೊಡಲಿಕಡ ಬುಡಕಟ್ಟಿನ ಸೋಮಪ್ಪನವರ ಬಗೆ ಚರಮೂರ್ತಿಗಳು ೧೦, ಬಸವಾಪಟ್ಟಣದ ಪಚ್ಚೆಕಂತೆ ಬುಡಕಟ್ಟಿನ ಶಿವಲಿಂಗಪ್ಪನವರ ಬಗೆ ಚರಮೂರ್ತಿಗಳು ೧೦, ಕಲ್ಯಾಣ ಬುಡಕಟ್ಟಿನ ಸಿದ್ಧಮಲ್ಲಪ್ಪನವರ ಬಗೆ ಚರಮೂರ್ತಿಗಳು ೧೫, ಸೋಲೂರು ಬುಡಕಟ್ಟಿನ ಮಹಂತಪ್ಪನವರ ಬಗೆ ಚರಮೂರ್ತಿಗಳು ೩೦, ಒಪ್ಪತ್ತಿನ ಬುಡಕಟ್ಟಿನ ಚರಮೂರ್ತಿಗಳು ಗುರುಸಂಗಪ್ಪನವರ ಬಗೆ ಚರಮೂರ್ತಿಗಳೂ ೩೦, ಬೆಳ್ಳಿಕಣ್ಣಿನ ಬುಡಕಟ್ಟಿನ ಚನ್ನಬಸವಪ್ಪನವರ ಬಗೆ ಚರಮೂರ್ತಿಗಳು ೨೫, ಹಂಡರಂಗಿ ಬುಡಕಟ್ಟಿನ ಪ್ರಭವಪ್ಪನವರ ಬಗೆ ಚರಮೂರ್ತಿಗಳು ೨೫, ಕೋಟಿಕಲ್ಲು ಬುಡಕಟ್ಟಿನ ನಂಜುಂಡಪ್ಪನವರ ಬಗೆ ಚರಮೂರ್ತಿಗಳು ೨೫, ಕಡ್ಲಿಕಡಿ ಬುಡಕಟ್ಟಿನ ಗುರುಸಿದ್ಧಪ್ಪನವರ ಬಗೆ ಚರಮೂರ್ತಿಗಳು ೨೫, ಬಂಗಾಳಿ ಬುಡಕಟ್ಟಿನ ಷಣ್ಮುಖಪ್ಪನವರ ಬಗೆ ಚರಮೂರ್ತಿಗಳು ೧೫, ಕಾಸಿಗಾವಿ ಬುಡಕಟ್ಟಿನ ಶಿವನಾಗಭೂಷಣಪ್ಪನವರ ಬಗೆ ಚರಮೂರ್ತಿಗಳು ೧೫, ವಾಚ್ಯದ ಬಸವಲಿಂಗಪ್ಪನವರು ಚನ್ನವೀರಪ್ಪನವರ ಬಗೆ ಚರಮೂರ್ತಿಗಳು ೨೫, ದೇವದುರ್ಗದ ಬುಡಕಟ್ಟಿನ ಗುರುಶಾಂತಪ್ಪನವರ ಬಗೆ ಚರಮೂರ್ತಿಗಳು ೧೦, ಪುಕ್ಕಳ ಬುಡಕಟ್ಟಿನ ಮುರುಗಪ್ಪನವರ ಬಗೆ ಚರಮೂರ್ತಿಗಳು ೧೫, ನೋಡ ಬುಡಕಟ್ಟಿನ ಶಾಂತವೀರಪ್ಪನವರ ಬಗೆ ಚರಮೂರ್ತಿಗಳು ೧೫, ಜೇವರಿಗೆ ಬುಡಕಟ್ಟಿನ ಮಹಾದೇವಪ್ಪನವರ ಬಗೆ ಚರಮೂರ್ತಿಗಳು ೧೦, ವಿಜಾಪುರದ ಬುಡಕಟ್ಟಿನ ಮಹಾಲಿಂಗಪ್ಪನವರ ಬಗೆ ಚರಮೂರ್ತಿಗಳು ೨೫, ಮಳೆಬಗೆ ಬುಡಕಟ್ಟಿನ ಗುರುಲಿಂಗಪ್ಪನವರ ಬಗೆ ಚರಮೂರ್ತಿಗಳು ೨೫, ಸಾವಳಿಗಿ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ ಚರಮೂರ್ತಿಗಳು ೫, ಕಲುಬುರಗಿ ಬುಡಕಟ್ಟಿನ ರೇವಣಸಿದ್ಧಪ್ಪನವರಬಗೆ ಚರಮೂರ್ತಿಗಳು ೧೫, ಗಂಗಾಜಲದಬುಡಕಟ್ಟಿನ ಚರಲಿಂಗಪ್ಪನವರ ಬಗೆ ಚರಮೂರ್ತಿಗಳು ೧೫, ಗಗರಿಕಡಿ (ಗಗ್ಗರಿಕಡ್ಡಿ!) ಬುಡಕಟ್ಟಿನ ನೀಲಕಂಠಪ್ಪನವರ ಬಗೆ ಚರಮೂರ್ತಿಗಳು ೫, ಬಿಸಿಅಗ್ಗಣಿ ಬುಡಕಟ್ಟಿನ ಚನ್ನಬಸವಪ್ಪನವರ ಬಗೆ ಚರಮೂರ್ತಿಗಳು ೮, ಬಾಂಡೇದಬುಡಕಟ್ಟಿನ ಸೋದೆ ಚನ್ನಬಸವಪ್ಪನವರ ಬಗೆ ಚರಮೂರ್ತಿಗಳು ೯,

ಲೀಲಾಖ್ಯದ ಬುಡಕಟ್ಟಿನ ಮಡಿವಾಳಪ್ಪನವರ ಬಗೆ ಚರಮೂರ್ತಿಗಳು ೧೫, ಶಿವಪೂಜಾ ಬುಡಕಟ್ಟಿನ ಮುದ್ದುವೀರಪ್ಪನವರ ಬಗೆ ಚರಮೂರ್ತಿಗಳು ೨೦, ಕೊಡೆ ಬುಡಕಟ್ಟಿನ ಮುರುಳುಸಿದ್ಧಪ್ಪನವರ ಬಗೆ ಚರಮೂರ್ತಿಗಳು ೫, ಚೀಲಾಳ ಬುಡಕಟ್ಟಿನ ತೋಟಪ್ಪನವರ ಬಗೆ ಚರಮೂರ್ತಿಗಳು ೧೨, ಕೌದಿಕಂತೆ ಬುಡಕಟ್ಟಿನ ಮಹಂತಪ್ಪನವರ ಬಗೆ ಚರಮೂರ್ತಿಗಳು ೧೦, ವ್ಯಾಕರಣದ ಬುಡಕಟ್ಟಿನ ಮಲ್ಲಿಕಾರ್ಜುನಪ್ಪನವರ ಬಗೆ ಚರಮೂರ್ತಿಗಳು ೩೭, ಟೀಕಿನ ಬುಡಕಟ್ಟಿನ ಚರಮೂರ್ತಿಗಳು ಕರಿಬಸವಪ್ಪನವರ ಬಗೆ ಚರಮೂರ್ತಿಗಳು ೮, ಉದ್ಧರಣೆ ಗುರುಶಾಂತಪ್ಪನವರ ಬಗೆ ಚರಮೂರ್ತಿಗಳು ೧೦, ಬಳ್ಳಾರಿ ಬುಡಕಟ್ಟಿನ ಶಾಂತವೀರಪ್ಪನವರ ಬಗೆ ಚರಮೂರ್ತಿಗಳು ೧೫, ಚಿತ್ರಿಗಿ ಬುಡಕಟ್ಟಿನ ಗುರುಲಿಂಗಪ್ಪನವರ ಬಗೆ ಚರಮೂರ್ತಿಗಳು ೧೦, ಆದವಾನಿ ಬುಡಕಟ್ಟಿನ ನೀಲಕಂಠಪ್ಪನವರ ಬಗೆ ಚರಮೂರ್ತಿಗಳು ೮, ಕಡಲಿ ಬರಹದ ಶಿವಬಸವಪ್ಪನವರ ಬಗೆ ಚರಮೂರ್ತಿಗಳು ೫, ತಾಳವೋಲೆ ಬುಡಕಟ್ಟಿನ ಅನ್ನದಾನಪ್ಪನವರ ಬಗೆ ಚರಮೂರ್ತಿಗಳು ೨೫, ಗದಗಿನ ಬುಡಕಟ್ಟಿನ ಚರಮೂರ್ತಿಗಳು ಟೊಪ್ಪಿಗಿ ಸಿದ್ಧಲಿಂಗಪ್ಪನವರ ಬಗೆ ಚರಮೂರ್ತಿಗಳು ೧೫, (ಇವರು ಬಟ್ಟಲುಕೊಟ್ಟ ವಿರಕ್ತರು ೧೦೩), ಕೆಂಪಿನ ಬುಡಕಟ್ಟಿನ ನೋಡ ಸಿದ್ಧಲಿಂಗಸ್ವಾಮಿಗಳವರ ಸಂಬಂಧದ ಶಿವಲಿಂಗಪ್ಪನವರ ಬಗೆ ಚರಮೂರ್ತಿಗಳು ೨, ರುದ್ರಾಕ್ಷಿ ಬುಡಕಟ್ಟಿನ ಚನ್ನನಂಜಯ್ಯನವರ ಬಗೆ ಚರಮೂರ್ತಿಗಳು ೮, ಹುಕ್ಕೇರಿ ಬುಡಕಟ್ಟಿನ ಬಡ ಗುರುಸಿದ್ಧಪ್ಪನವರ ಬಗೆ ಚರಮೂರ್ತಿಗಳು ೮, ಉಪ್ಪಿನ-ಬೆಟಗೇರಿ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ ಚರಮೂರ್ತಿಗಳು ೨, ಕ್ರಿಯಾಮೂರ್ತಿಗಳಾದ ವಿರಕ್ತರು ಹಾವೇರಿಪುರದ ಜಡೇಪ ಚನ್ನವೀರಪ್ಪನವರು, ಗರಗದ ವಿರೂಪಾಕ್ಷಪ್ಪನವರು, ಸಿಗ್ಗಾವಿ ಸಂಗನಬಸವಪ್ಪನವರು, ಬೊಮ್ಮನಹಳ್ಳಿ ಪರದೇಶಪ್ಪನವರು ಮೊದಲಾದ ೩೦ ಪರದೇಶಿಗಳು, ದಾಬಳಿ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ ಚರಮೂರ್ತಿಗಳು ೫, ಅಷ್ಟಗಿ ಪುರಾಣದ ಬುಡಕಟ್ಟಿನ ಶಿವಲಿಂಗಪ್ಪನವರ ಬಗೆ ಚರಮೂರ್ತಿಗಳು ೬, ಸಿವ್ಮೋಹಿ(ಶಿವಮೋಹಿ)ಬುಡಕಟ್ಟಿನ ಸಿದ್ಧರಾಮಪ್ಪನವರಬಗೆಚರಮೂರ್ತಿಗಳು ೬, ಹೊಟ್ಟಿ ಬುಡಕಟ್ಟಿನ ಮಹಾಂತಪ್ಪನವರ ಬಗೆ ಚರಮೂರ್ತಿಗಳು ೫, ಗುಡ್ಡದ ಬುಡಕಟ್ಟಿನ ಮಹಂತದೇವರ ಬಗೆ ಚರಮೂರ್ತಿಗಳು ೮, ಜಮಖಂಡಿ ಬುಡಕಟ್ಟಿನ ಬಸವಪ್ರಭವಪ್ಪನವರ ಬಗೆ ಚರಮೂರ್ತಿಗಳು ೫,

ಪ್ರಭುಟೇಕಿನ ಬುಡಕಟ್ಟಿನ ಕಡಕೊಳ್ಳದ ಶಾಂತಲಿಂಗಪ್ಪನವರ ಬಗೆ ಚರ ಮೂರ್ತಿಗಳು ೪, ಗೋಕಾವಿ ಬುಡಕಟ್ಟಿನ ಸಿದ್ಧಲಿಂಗಪ್ಪನವರ ಬಗೆ ಚರ ಮೂರ್ತಿಗಳು ೬, ೯೪ಗಿ (ಗಳಿಗೆ?) ಬುಡಕಟ್ಟಿನ ಹುಬ್ಬಳ್ಳಿ ರುದ್ರಯ್ಯನವರ ಬಗೆ ಪರದೇಶಿಗಳು ೩, ಬೈತಲೆಯ ಬಸಲಿಂಗಪ್ಪನವರ ಹಿಡಿದು ೬೦ ವಿರಕ್ತರು, ಕಲ್ಯಾಣ ಸೀಮೆ ಹುಮನಾಬಾದಿ ಪ್ರಾಂತದ ಹುಲಿಕುಂಟಿಮಠದ ಕೆಂಪಿನ ಬುಡಕಟ್ಟಿನ ಸಂಗನಬಸವಪ್ಪನವರ ಬಗೆ ಚರಮೂರ್ತಿಗಳು ೧೮, ತುಮಕೂರ ಸೋಮೋಕಟ್ಟಿ ಬುಡಕಟ್ಟಿನ ಚನ್ನಬಸವಪ್ಪನವರ ಬಗೆ ಚರ ಮೂರ್ತಿಗಳು ೧೦, ಗುಳೇದಗುಡ್ಡದ ಗದ್ದಕಟ್ಟಿನ ಬುಡಕಟ್ಟಿನ ಗುರುಬಸವ ದೇವರ ಬಗೆ ಚರಮೂರ್ತಿಗಳು ೫, ಗೂಳಿಕೊಂಡಯ್ಯಗಳ(ಕೊಂಡಗೂಳಿ?) ಬುಡಕಟ್ಟಿನ ರುದ್ರಪ್ಪನವರಬಗೆ ಚರಮೂರ್ತಿಗಳು ೫, ಆಯಕಟ್ಟಿನ ಬುಡ ಕಟ್ಟಿನ ಸಿದ್ಧಲಿಂಗಯ್ಯನವರ ಬಗೆ ಚರಮೂರ್ತಿಗಳು ೬. ಈ ಕೂಡಿದ ಏಳುನೂರ ಎಪ್ಪತ್ತು ಬುಡಕಟ್ಟಿನ ಚರಮೂರ್ತಿಗಳ ಪೈಕಿ (ಇದರಲ್ಲಿ ಮೇಲುಗಡೆ ಮೂರುಸಾವಿರದ ಬುಡಕಟ್ಟಿನ ....ಚರಮೂರ್ತಿಗಳ ಸಂಖ್ಯೆ ೨೫ ರ ಬದಲಾಗಿ ೨೭ ಎಂದು ತಪ್ಪು ಬಿದ್ದಿದೆ.)

ಮ॥ ರಾ॥ ರಾ॥

ಶ್ರೀ ಕಟ್ಟಿಗಿಹಳ್ಳಿ ಸ್ವಾಮಿಗಳವರ ಕಾಲದಲ್ಲಿ ಸನ್ನಿಧಿಯಲ್ಲಿ ಇದ್ದ ಸಂಪಾದನೆಯ ಬುಡಕಟ್ಟಿನ ಸಿದ್ಧವೀರಪ್ಪನವರೆಂಬ ಚರಮೂರ್ತಿಗಳು ಇಸರಿಗೆ ಅಷ್ಟಾವರಣದಲ್ಲಿ ದೃಢವಿಲ್ಲದ ಕಾರಣ ಇಷ್ಟಲಿಂಗದ ಗೋಳಕ(ಬಾಣ)ಸಡಲಿತು. ಇದನ್ನು ಸನ್ನಿಧಿಗೆ ಅರಿಕೆ ಮಾಡಿಕೊಂಡಲ್ಲಿ ಕಂಥೆ ಬಲಿಸಿ ಧರಿಸಿಕೋ ಎಂತ ಅಪ್ಪಣೆ ಕೊಟ್ಟ ಪ್ರಕಾರ ಎರಡು ಮೂರಾವರ್ತಿ ಕಂಥೆ ಬಲಿಸಿಕೊಂಡು ಧರಿಸಿಕೊಂಡಾಗ್ಯೂ ನಿಲ್ಲದೆ ಹೋದ್ದರಿಂದ ಈ ವಿವರವನ್ನು ಸಿದ್ಧವೀರಪ್ಪನವರು ಅರಿಕೆ ಮಾಡಿಕೊಂಡದ್ದರಿಂದ ಸನ್ನಿಧಿಗೆ ಆಗ್ರಹ ಹುಟ್ಟಿ ಆ ಸಿದ್ಧವೀರಯ್ಯನವರ ಕೊರಳಿಗೆ ವಸ್ತ್ರವ ಹಾಕಿಸಿ ಸಭಾ ಮಧ್ಯದಿ ಹೊರಗೆ ಹಾಕಿಸಿದ ಕಾರಣ,

ಆ ಸಿದ್ಧವೀರಯ್ಯನವರು ಸನ್ನಿಧಿಗೆ ತಿರುಗಿ ಬಿದ್ದು ಮೈಸೂರು ಸೀಮೆಯಲ್ಲಿ ರಾಮಾನುಜರು ಹತ್ತಿ ಬಣಜಿಗರು ಆದಿ ಬಣಜಿಗರು ತಿಗಳರು ಹಂಡೆರಾವುತರು ಜೀರರು ಈ ಪ್ರಕಾರ ಸವರಿ ಜನರನ್ನು ಕೂಡಿಕೊಂಡು ಶಾಸ್ತ್ರಮುಖದಿಂದ ತರ್ಕವ ಮಾಡಲು ಸನ್ನಿಧಾನವು ಇವರುಗಳನ್ನು ಶಾಸ್ತ್ರಗಳಿಂದ ಗೆದಿಯಲು (ಗೆಲ್ಲಲು) ಈ ವರ್ತಮಾನವನ್ನು ಮೈಸೂರು ಸಂಸ್ಥಾನದ ದೊರೆಗಳು ಕೇಳಿ ೭೨ ಬಿರು

ದುಗಳೊಡನೆ ಉತ್ಸಹಂಗೊಳಿಸಿ ಸನ್ನಿಧಾನಕ್ಕೆ ಮಾನ ಸನ್ಮಾನಂಗಳನ್ನು ಮಾಡಿ ಕಳುಹಿಸಲು

ಇತ್ತ ತಿರುಗಿ ಬಿದ್ದ ಕೆಲವು ಜನಗಳು ಸನ್ನಿಧಿಗೆ ಅಪರಾಧ ಕಾಣಿಕೆಯನ್ನು ಒಪ್ಪಿಸಿ ಆದಿ ಬಣಜಿಗರು ಲಿಂಗವಂತರೊಳಗಾದರು. ಕೆಲವರು ಬಹಿಷ್ಕಾರದೊಳಗಿದ್ದವರು ಭವಿಗಳಾದರು. ಹಂಡೆರಾವುತರು ಅಪರಾಧ ಕಾಣಿಕೆ ಒಪ್ಪಿಸಿದವರು ಲಿಂಗಾಯತ ಮತದೊಳಗೆ ಆದರು. ಕೊಡದವರು ಭವಿಗಳಾದರು. ಜೀರರಾದ ಶೈವರು ಅಪರಾಧ ಕಾಣಿಕೆ ಒಪ್ಪಿಸಿದವರು ಲಿಂಗಾಯತರೊಳಗೆ ಬಂದರು. ಉಳಿದವರು ಭವಿಗಳಾದರು. ಹತ್ತಿ ಬಣಜಿಗರಾದ ತೆಲಗು ಬಣಜಿಗರು ಬಹಿಷ್ಕಾರದಲ್ಲೇ ಇದ್ದ ಕಾರಣ (ಅಪರಾಧ ಕಾಣಿಕೆ ಒಪ್ಪಿಸಿ ದೀಕ್ಷೆ ಹೊಂದದೆ ಇದ್ದ ಕಾರಣ?) ಅವರು ಲಿಂಗಾಯತ ಮತವನ್ನು ಬಿಟ್ಟು ವೈಷ್ಣವ ಮತಕ್ಕೆ ಹೊಂದಿದರು. ತಿಗಳರೂ ಸದರಿ ಪ್ರಕಾರವೇ ಆದರು.

ಸದರಿ ಸಂಪಾದನೆಯ ಸಿದ್ಧವೀರಪ್ಪನವರು ಗುರು ದ್ರೋಹಕ್ಕೆ ಪಾತ್ರರಾದ್ದರಿಂದ ಇವರು ಹಾಗಲವಾಡಿ ಸಂಸ್ಥಾನದ ದೊರೆಗಳನ್ನು ಭಕ್ತನ ಮಾಡಿಕೊಂಡು ಮಠಮಾನ್ಯಗಳನ್ನು ಮಾಡಿಕೊಂಡು ನಿಂತರು. ಆಗ್ಯೆ ಸಂಪಾದನೆಯ ಬುಡಕಟ್ಟಿನ ಚರಮೂರ್ತಿಗಳು ೧೦ ಸಹವಾಗಿ ಈ ಸಮಯ ಭೇದವಾಯಿತು. (ಇದು ಜಗಳದಿಂದ ಆದ ಮೊದಲನೆಯ ಸಮಯ.)

ಇವರು ಹೋಗಲಾಗಿ ಇನ್ನು ಉಳಿದ ಸದರಿ ಕೆಂಪಿನ ಬುಡಕಟ್ಟಿನ ಸಂಗನಬಸವಪ್ಪನವರು ಸೋಮೆಕಟ್ಟೆ ಬುಡಕಟ್ಟಿನ ಚನ್ನಬಸವಪ್ಪನವರು ಗದ್ದೆಕಟ್ಟಿನ ಬುಡಕಟ್ಟಿನ ಗುರುಬಸವಪ್ಪನವರು ಗೂಳಿಕೊಂಡಯ್ಯನವರ ಬುಡಕಟ್ಟಿನ ರುದ್ರಪ್ಪನವರು ಆಯಕಟ್ಟಿನ ಬುಡಕಟ್ಟಿನ ಸಿದ್ಧಲಿಂಗಪ್ಪನವರು ಈ ೫ ಬುಡಕಟ್ಟಿನ ಚರಮೂರ್ತಿಗಳು,

ಸದರಿ ಮಹಾನವಮಿಯಲ್ಲಿ ಸಭಾ ಮಧ್ಯದೊಳಗೆ ಸದರಿ ಉಭಯ ಸ್ವಾಮಿಗಳು ಶೂನ್ಯಸಿಂಹಾಸನ ರೂಢರಾಗಿ ೭೨ ಬಿರುದುಗಳಿಂದ ಉತ್ಸಹಂಗಳಾದದ್ದು ನೋಡಿ ಸೈರಿಸಲಾರದೆ ಈ ಐವರೂ ಬಂದ ದೇವಭಕ್ತರ ಮುಂದೆ ಮಾತಾಡಿದ್ದು ಏನೆಂದರೆ:—

ರಾ॥ ಮುರುಗಾ ಸ್ವಾಮಿಗಳು ತಾವು ಶಿಖಾಪಟ್ಟದವರು ಇದ್ದು ನಮ್ಮ ಸಮಾನಸ್ಕಂದರಾದ ಕುಮಾರಸ್ವಾಮಿಗಳವರನ್ನು ತಮ್ಮ ಸರಿಯಾಗಿ ಶೂನ್ಯ ಸಿಂಹಾಸನದ ಮೇಲೆ ಮೂರ್ತವ ಮಾಡಿಸಿಕೊಂಡು ಸರಿಯಾಗಿ ೭೨ ಬಿರುದುಗಳಿಂದ ಉತ್ಸಹವಾಗಿ ಸಮ ಮರ್ಯಾದೆಯನ್ನು ಕೊಟ್ಟ ಬಳಿಕ ಅವರಂತೆ ನಮಗೆ ಏಕೆ ಸಮ ಮರ್ಯಾದೆ ಕೊಡಬಾರದು? ನಾವು ಸಮಸ್ತ ಚರಮೂರ್ತಿಗಳು ರಾ॥ ಕುಮಾರಸ್ವಾಮಿಗಳಿಗೆ ಸಾಷ್ಟಾಂಗವನ್ನು ಹಾಕಿದರೆ ತಾವು ಏಕೆ ನಮ್ಮ ಸಮಸ್ತ ಚರಮೂರ್ತಿಗಳಿಗೆ ಸಾಷ್ಟಾಂಗವನ್ನು ಹಾಕಬಾರದು? ಎಂತ ದುರಹಮ್ಮತ್ತಿನ ಮಾತು ಆಡಿದ್ದರಿಂದ ಆ ೫ ಚರಮೂರ್ತಿಗಳಿಗೆ ಉಳಿದ ಸಮಸ್ತ ಗುರುಚರಮೂರ್ತಿಗಳು ಹೇಳಿದ್ದು :—

ಶಾಲಿವಾಹನ ಶಕ ಏಳನೂರ ಏಳನೆಯ ರಕ್ತಾಕ್ಷಿನಾಮ ಸಂವತ್ಸರದಲ್ಲಿ ರಾ॥ ಬಸವರಾಜೇಂದ್ರರು ರಾ॥ ಪ್ರಭುಸ್ವಾಮಿಗಳು ನಿರ್ವಯಲಾದ ಬಳಿಕ ಇತ್ತ ರಾ॥ ಪ್ರಭುಸ್ವಾಮಿಗಳ ತರುವಾಯದಲ್ಲಿ, ಏಕೋತ್ತರ ಬಗೆ, ಮೂಲ ಪ್ರಣವ, ಅನಿಮಿಷ ಗೋತ್ರ, ನಿರಂಜನ ಸೂತ್ರ, ಶೂನ್ಯ ಸಿಂಹಾಸನ, ಶೂನ್ಯ ಕಲಶ, ಬಿಲ್ವ ವೃಕ್ಷ, ನಿರಂಜನ ಪಾದೋದಕಗಂಗೆ, ಏಕ ಕಣ್ಣಿನ ದಂಡಾಗ್ರ, ಕಾವಿಕಾಷಾಯಾಂಬರ, ಶೂನ್ಯ ಖರ್ಪರ, ತೋಳಿಗಾಧಾರಭಸ್ಮಗುಟಿಕ, ಶಿವಾನುಭಾವ ಪುಸ್ತಕ, ಗೋಹೆ (ಗೋವೆ?) ಕ್ಷೇತ್ರ, ಲಿಂಗೈಕ್ಯಾಶ್ರಮ, ಗುಹೇಶ್ವರ ಲಿಂಗ, ಗಾಯತ್ರಿ ವೇದ ಮೊದಲಾದವು, ಇವುಗಳಿಗೆ ಶ್ರೀ ಚನ್ನಬಸವರಾಜೇಂದ್ರರು ಕಾರಣ ಕರ್ತರಾಗಿ ೧೨ ಸಾವಿರ ಷಟುಸ್ಥಲ ಬ್ರಹ್ಮಗಳು ಮುಂತಾದ ಸಕಲ ಪ್ರಮಥರಿಗೆ ಗುರುಗಳಾಗಿ ಷಟುಸ್ಥಲ ಜ್ಞಾನೋಪದೇಶವನ್ನು ಮಾಡುತ್ತ ಕಲ್ಯಾಣದಲ್ಲಿ ಮೂರು ಲಕ್ಷ ದಂಡಿಗೆ ಅಧಿಪತಿಯಾದ ಬಿಜ್ಜರಸನಿಗೆ ಪ್ರಧಾನಿಯಾಗಿ ಅನೇಕ ಮಹಿಮೆಗಳ ತೋರುತ್ತ ದಿನಚರಿ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮಕ್ಕೆ ಬೇಡಿದ ಇಷ್ಟವನ್ನು ಕೊಟ್ಟು ತೃಪ್ತಿಗೊಳಿಸುತ್ತ ಸಮಸ್ತರಿಗೆ ಗುರುಗಳಾಗಿ ೭೨ ಬಿರುದುಗಳಿಂದ ಉತ್ಸಹಂಗೊಳುತ್ತ ಇರುವಲ್ಲಿ ಕಾಲಕ್ಕೆ ಸರಿಯಾಗಿ ಬಿಜ್ಜಳರಸನಿಗೆ ದುರ್ಬುದ್ಧಿ ಹುಟ್ಟಿ ಹರಳಯ್ಯ ಮಧುವಯ್ಯಗಳ ಬೀಗತನದ ಕತ (ಕಾರಣ) ದಿಂದ ಎಳಹೂಟೆಯಿಂದ ಈ ಈರ್ವರನ್ನು ಎಳಸುವದನ್ನು ಜಗದೇವ ಮಲ್ಲಿಬೊಮ್ಮಯ್ಯಗಳು ಕಂಡು

ಶರಣ ದ್ರೋಹಿಯಾದ ಬಿಜ್ಜಳನ ಸಂಹರಿಸಲು ಈ ಕತದಿಂದ ಶ್ರೀ ಚನ್ನಬಸವದೇವರು ಸಕಲ ಪ್ರಮಥರು ಸಮೇತವಾಗಿ ಉಳವಿಗೆ ಚಿತ್ತೈಸುವಾಗ್ಯೆ ತಮ್ಮ ಯ ಗುರುಗಳಾದ ಅಲ್ಲಮಪ್ರಭುದೇವರ, ಮುಂದೆ ಕಾರಣಾರ್ಥ ಇರುವದರಿಂದ ಶಿಖಾ ಶೈಲ ಶೂನ್ಯಪೀಠ ಡಿಳ್ಳಿ ವಜೀರ ಮಲ್ಲೂಖಾನನ ವಶಕ್ಕೆ ಕೊಟ್ಟು, ಮುಂದೆ ನಿನಗೆ ಡಿಳ್ಳಿ ದವಲತು ಆಗುವದು, ಮುಂದೆ ನಮ್ಮ ವಂಶಿಕರು ಡಿಳ್ಳಿಗೆ ಬಂದು ನಿಮ್ಮ ಪಟ್ಟೆ ದಾನೆ ಮೃತವಾಗಲು ಎಬ್ಬಿಸುವರು, ಅವರಿಗೆ ಕೊಡುವದು, ಎಂತ ನಿರೂಪಿಸಿ ತಮ್ಮ ಯ ಶಿವಾನುಭಾವ ಚರಂತಿಗೆ ಪುಸ್ತಕವನ್ನು ಶ್ರೀ ಸೊನ್ನಲಿಗೆ ಸಿದ್ಧರಾಮೇಶ್ವರ ದೇವರು, ವಾಣಿಜ್ಯಪುರದ ಗೋಸಲೆಯ ಶ್ರೀ ಚನ್ನಬಸವೇಶ್ವರ ತೋಂಟದಾರ್ಯರ ಬಳಿವಿಡಿದು, ಪ್ರಭು ಚನ್ನಬಸವರಾಜೇಂದ್ರರ ಈಚೆಗೆ ಶಿಖಾ ಪಟ್ಟವಿಲ್ಲದೆ ಶ್ರೀ ಚನ್ನಬಸವರಾಜೇಂದ್ರರ ತರುವಾಯದಲ್ಲಿ ಇವರ ಶಿವಾನುಭಾವ ಪುಸ್ತಕದ ಸೂತ್ರವಿಡಿದು ಶಿವಾನುಭಾವ ಚರಂತಿಗೆ ಪಟ್ಟವು ಒಂದೇ ಇದ್ದು, ಶ್ರೀ ಸಿದ್ಧರಾಮ ಸ್ವಾಮಿಗಳವರ ಹಿಡಿದು ಶ್ರೀ ಕಟ್ಟಿಗೆಹಳ್ಳಿ ಸ್ವಾಮಿಗಳವರ ಆಖೈರು ವರೆವಿಗೂ ಇಪ್ಪತ್ತೆರಡು ಪಟ್ಟವು ಶಿಖಾ ಶೈಲವಿಲ್ಲದೆ ಶಿವಾನುಭಾವ ಚರಂತಿಗೆ ಪುಸ್ತಕದ ಸೂತ್ರಿಕರಾದ ಶ್ರೀ ಕಟ್ಟಿಗೆಹಳ್ಳಿ ಸ್ವಾಮಿಗಳವರ ತನಕ ನಡೆದು ಬಂದಿದೆ. ಇವರ ತರುವಾಯದಲ್ಲಿ ಶಿವಾನುಭಾವ ಚರಂತಿಗೆ ಪಟ್ಟವೆಂತಲೂ ಶಿಖಾ ಪಟ್ಟವೆಂತಲೂ ಈ ಪ್ರಕಾರ ಎರಡು ಪಟ್ಟವಾಗಿ ಸ್ವಾಮಿಗಳಾದ ಉಭಯತರೂ ಕಟ್ಟಿಗೆಹಳ್ಳಿ ಸ್ವಾಮಿಗಳವರ ತರುವಾಯದಲ್ಲಿ ಏಳುನೂರ ಎಪ್ಪತ್ತು ಬುಡಕಟ್ಟಿನ ಚರಮೂರ್ತಿಗಳಿಗೂ, ಮೂರು ಸಾವಿರ ವಿರಕ್ತರು ಮೊದಲಾದ ಪಂಚಾಚಾರ್ಯರು ಇವರ ಸೂತ್ರಿಕರಾದ ದೇವಭಕ್ತರಾದ ಸಕಲರಿಗೂ ಗುರುಗಳಾದ ಕಟ್ಟಿಗೆಹಳ್ಳಿ ಸ್ವಾಮಿಗಳವರ ಶಿವಾನುಭಾವ ಪುಸ್ತಕದ ಸೂತ್ರಿಕರಾದ ನೋಡ ಸಿದ್ಧಲಿಂಗಸ್ವಾಮಿಗಳವರ ತರುವಾಯದಲ್ಲಿ ಇವರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಅಧಿಪತಿಗಳು, ಶ್ರೀ ಕುಮಾರಸ್ವಾಮಿಗಳಾದ ಕಾರಣ ಇವರಿಗೆ ರಾ॥ ಮುರುಗಾ ಸ್ವಾಮಿಗಳವರು ಶಿಖಾಪಟ್ಟದವರಾದರೂ ಪಾರಂಪರ್ಯ ಶಿವಾನುಭಾವ ಚರಂತಿಗೆ ಪಟ್ಟವೇ ನಡೆದು ಬಂದ ಕಾರಣ ಸದರಿ ಮುರುಗಾಸ್ವಾಮಿಗಳವರು ಸಮ ಮರ್ಯಾದೆ ಕೊಟ್ಟದ್ದು ವಾಸ್ತವ್ಯವದೆ.

ಇದಕ್ಕೆ ನೀವು

೫ ಚರಮೂರ್ತಿಗಳು ಈ ಮರ್ಯಾದೆಯ ವಿಷಯದಲ್ಲಿ ದುರಹಮ್ಮತ್ತಿನ

ಮಾತುಗಳ ಬಳಸಬಾರದು, ಬಳಸಿದರೆ ಗುರುದ್ರೋಹ ಬರುತ್ತದೆ, ಆಡ ಕೂಡದು, ಎಂತ ಸಮಸ್ತ ಗುರು ಚರಮೂರ್ತಿಗಳು ಹೇಳಿದಲ್ಲಿ ಸದರಿ ೫ ಬುಡಕಟ್ಟಿನ ಚರಮೂರ್ತಿಗಳು ಕೇಳದೆ ಮತ್ತೂ ದುರಹಮ್ಮತ್ತಿನ ಮಾತು ಬಳಸಿದ್ದರಿಂದ ಈ ವರ್ತಮಾನವು ರಾ॥ ಉಭಯ ಸ್ವಾಮಿಗಳವರಿಗೆ ತಿಳಿದ ಕಾರಣ ಈ ೫ ಚರಮೂರ್ತಿಗಳನ್ನು ಸಭೆಯಿಂದ ಎಬ್ಬಿಸಿ ಮಠ ಬಿಟ್ಟು ಹೊರಗೆ ಹಾಕಿಸಲು,

ಈ ಸಮಾಚಾರವು ಚಿತ್ರಕಲ್ಲದುರ್ಗದ ದೊರೆಗಳಾದ ಬಿಚ್ಚುಗತ್ತಿ ಭರಮಣ್ಣನಾಯಕರಿಗೆ ತಿಳಿದು ಈ ೫ ಚರಮೂರ್ತಿಗಳನ್ನೂ ತನ್ನ ಸೀಮೆಯ ಬಿಟ್ಟು ಗಡೀಪಾರು ಮಾಡಿಸಿದನು. ಇದರಿಂದ ಈ ೫ ಬುಡಕಟ್ಟಿನ ಸಮಯಗಳು ಬೇರೆ ಆಗಿ ಮತ್ತು ಆ ಐವರೊಳಗೆ ತಾವು ಹೆಚ್ಚು ನಾವು ಹೆಚ್ಚು ಎಂತ ತಮ್ಮೊಳಗೆ ಸರಿಪಡದೆ ಕೆಂಪಿನ ಸಮಯ, ಸೋಮೆಕಟ್ಟೆ ಸಮಯ, ಗೂಳಿಕೊಂಡಯ್ಯಗಳ ಸಮಯ, ಗದ್ದಕಟ್ಟಿನ ಸಮಯ, ಆಯಕಟ್ಟಿನ ಸಮಯ, ಈ ಪ್ರಕಾರ ೫ ಸಮಯಗಳು ಭೇದವಾಗಿ, ಇವರ ಸೂತ್ರಕರ ಮಠಗಳು ಕಲ್ಯಾಣ ಸೀಮೆ, ಬಗ್ಗುಂಜಿ ಸೀಮೆ, ವಗೈರೆ ಸೀಮೆಗಳಲ್ಲಿ ಇದ್ದಾವೆ.

ರಾ॥ ಕುಮಾರಸ್ವಾಮಿಗಳು ಮೂಲ ಸೂತ್ರಿಕರು ಎಂಬುದಕ್ಕೆ ಈ ೫ ಸಮಯಗಳು ಭೇದವಾಗಿ ಇರುವದೇ ಸಾಕ್ಷಿಯು.

ಇತ್ತ ಚಿನ್ಮೂಲಾದ್ರಿ ಗುಡ್ಡದಲ್ಲಿ ಇರುವ ಮಠದಲ್ಲಿ ದಾಸೋಹದ ಖರ್ಚು ಬಹಳವಾದ್ದರಿಂದ ರಾ॥ ಉಭಯ ಸ್ವಾಮಿಗಳವರು ತಮ್ಮ ಗಣ ಸಮೂಹದಲ್ಲಿ ಇರುವ ಖಾಸ ಚರಮೂರ್ತಿಗಳ ಪೈಕಿ ರಾ॥ ಚೀಲಾಳ ಬುಡಕಟ್ಟಿನ ತೋಟಪ್ಪನವರಿಗೆ ಚರಸಮೇತವಾಗಿ ಭಿಕ್ಷಾಟಣಕ್ಕೆ ಹರಪನಹಳ್ಳಿ ಸೀಮೆಗೆ ಹೋಗಬೇಕೆಂತ ಅಪ್ಪಣೆ ಕೊಟ್ಟು ಕಳುಹಿಸಿ, ಇತ್ತ ಮ॥ ರಾ॥ ಉಭಯ ಸನ್ನಿಧಾನವೂ ಗುಡ್ಡದ ಮೇಲೆ ಇರಲಾರದೆ ಚಿತ್ರಕಲ್ಲದುರ್ಗದ ದೊರೆಗಳಾದ ಭರಮನಾಯಕರ ಸನ್ನಿಧಿಗೆ ಕರಸಿಕೊಂಡು ನಿನ್ನ ಪುರವಾದ ಚಿತ್ರದುರ್ಗದ ಕೋಟೆಗೆ ಒಂದು ಕೊಂಬಿನ ಕೂಗಿನ ದೂರದಲ್ಲಿ ನಮ್ಮ ಉಭಯತರಿಗೆ ನಿನ್ನ ಭಕ್ತಿಯಿಂದ ಒಂದು ಸ್ಥಳಕ್ಕೆ ಲಿಂಗಮುದ್ರೆ ಸ್ಥಾಪನವನ್ನು ಮಾಡಿಸಿ ಮಠವನ್ನು ಮಾಡಿಸಿಕೊಟ್ಟರೆ ಆ ಮಠದಲ್ಲಿ ಲಿಂಗಪೂಜಾ ಜಂಗಮ ದಾಸೋಹವನ್ನು ಮಾಡುತ್ತಾ ಗಣ ಸಮೂಹದೊಡನೆ ನಿನ್ನ ಭಕ್ತಿಯಲ್ಲಿ ಇರುತ್ತೇವೆ. ಇಲ್ಲವೇ ನಮ್ಮ

ಗುರುಗಳಾದ ರಾ॥ ಕಟ್ಟಿಗೆಹಳ್ಳಿ ಸ್ವಾಮಿಗಳವರ ಗದ್ದಿಗೆ ಇರುವ ತಿಳ್ಳ ವಳ್ಳಿ ಸ್ಥಳಕ್ಕೆ ಚಿತ್ತಯಿಸಿ ಆ ಸ್ಥಳದ ಭಕ್ತರ ಭಕ್ತಿಯಲ್ಲಿ ಇರುತ್ತೇವೆ, ಎಂದು ಅಪ್ಪಣೆ ಕೊಡಲು, ಇದ ಕೇಳಿ ಉಭಯ ಸ್ವಾಮಿಗಳವರ ರಾಜನು ಬಿಡಪೆ ಅಪ್ಪಣೆ ಪ್ರಕಾರ ತನ್ನ ಚಿತ್ರಕಲ್ಲದುರ್ಗದ ಸಮೀಪ ಕೊಂಬಿನ ಕೂಗಿನ ದೂರದಲ್ಲಿ ಒಂದು ಸ್ಥಳಕ್ಕೆ ಲಿಂಗಮುದ್ರೆ ಸ್ಥಾಪನ ವನ್ನು ಮಾಡಿಸಿ ಮೇಲುದುರ್ಗದಲ್ಲಿ ಮುನ್ನೂರ ಅರವತ್ತು ಅಂಕಣ ಕಲ್ಲ ಮಠವಿದ್ದಂತೆ ಕೆಳಗೂ ಅದರಂತೆ ಮುನ್ನೂರ ಅರುವತ್ತು ಅಂಕಣ ಕಲ್ಲುಮಠವನ್ನು ಕಟ್ಟಿಸಿ ಉಭಯ ಸ್ವಾಮಿಗಳವರಿಗೆ ನಮಸ್ಕರಿಸಲು ದೊರೆಗಳ ಭಕ್ತಿಯಲ್ಲಿ ಮೇಲುದುರ್ಗದ ಮಠದಲ್ಲಿ ಒಬ್ಬ ಚರಮೂರ್ತಿ ಗಳನ್ನು ಇಟ್ಟು ಉಭಯ ಸನ್ನಿಧಾನವೂ ತಮ್ಮ ಗಣ ಸಮೂಹದೊ ಡನೆ ಗುಡ್ಡದ ಕೆಳಗಿನ ಮಠಕ್ಕೆ ದಯಮಾಡಿಸಿ ಆ ಮಠದಲ್ಲಿ ಲಿಂಗ ಪೂಜಾ ಜಂಗಮ ದಾಸೋಹದೊಡನೆ ಇರುವಲ್ಲಿ

ಆಗ್ಯೆ ರಾ॥ ಸನ್ನಿಧಾನಕ್ಕೆ ಹಳೇಬೀಡ ಕಲ್ಲುಮಠದ ಕಲ್ಯಾಣಿಯು ಒಳಗಡೆ ಮಾದಿಗಿತ್ತಿ ತಿಮ್ಮಿಯ ಸಂಗ ಮಾಡಿದ ಕಾರಣ ರಾ॥ ಕಟ್ಟಿಗೆಹಳ್ಳಿ ಸ್ವಾಮಿಗಳು ಅವನ ಬಳಕೆ ಅವನ ಮನೆತನದವರ ಬಳಕೆ ಹಾಗೂ ಇವನ ಅಭಿಮಾನಿಗಳಾಗಿ ಸನ್ನಿ ಧಿಗೆ ಬಾರದೆ ಇದ್ದ ಆ ಊರ ಸೆಟ್ಟಿ ಪಟ್ಟಣಸೆಟ್ಟಿ ಗಣಾಚಾರಿ ಇವ ರನ್ನು ಸೂರ್ಯ ಚಂದ್ರರು ಇರುವ ವರೆಗೂ ಸಹ ಈ ಳ ಮನೆತನದವರ ಬಳಕೆ ಮಾಡಬಾರದೆಂದು ಆ ಊರು ಮುಂತಾದ ಆ ಸೀಮೆಗಳಲ್ಲಿ ಇರು ವ ದೇವಭಕ್ತರೂ ಸಹ ಬಳಕೆ ಮಾಡಬಾರದೆಂದು ಬಹಿಷ್ಕಾರವನ್ನು ಕೊಟ್ಟ ನಂತರ ರಾ॥ ಮುರುಗಾಸ್ವಾಮಿಗಳು ರಾ॥ ನೋಡ ಸಿದ್ಧಲಿಂಗ ಸ್ವಾಮಿಗಳು ಹಳೇಬೀಡ ಸಮೀಪವಾದ ಹಾರನಹಳ್ಳಿಗೆ ಭಿಕ್ಷಾಟಣಾರ್ಥ ವಾಗಿ ದಯಮಾಡಿಸಿದಾಗ್ಯೆ ಹಳೆಬೀಡ ಕಲ್ಲಮಠದ ಬಳಕೆ ಸ್ಥೂಲವಾಗಿ ಕಂಡದ್ದರಿಂದ ಆ ಊರಿಗೆ ದಯಮಾಡಿಸದೆ ಬಂದು

ಈಚೆಗೆ ಆ ಕಲ್ಯಾಣ ಯ್ಯನು ಮೃತವಾದ ಬಳಿಕ ಹಳೆಬೀಡ ಹಿರೇಮಠದ ರುದ್ರಪ್ಪನವರು ಆ ಊರಲ್ಲಿ ಬಹಿಷ್ಕಾರದಲ್ಲಿ ಇದ್ದ ಸೆಟ್ಟಿ ಪಟ್ಟಣಸೆಟ್ಟಿ ಗಣಾಚಾರಿ ಈ ಮೂರು ಮನೆಯವರು ಉಳಿದವರು ಹೋಗಲಾಗಿ ಮಿಕ್ಕ ಸಮಸ್ತ ಸೆಟ್ಟರು ದೈವದವರು ಸಹವಾಗಿ ದುರ್ಗದ ಸನ್ನಿಧಿಗೆ ಬಂದು ಸಾಷ್ಟಾಂಗ ಪ್ರಣುತ ರಾಗಿ ಸಮಸ್ತರೂ ಹಳೆಬೀಡ ಕಲ್ಲುಮಠದ ಕಲ್ಯಾಣಿಯು ಸತ್ತನು, ಅವನ

ಮಗ ಚನ್ನವೀರಯ್ಯನನ್ನು ಶಿವಾಚಾರ ಬಳಕೆಯಲ್ಲಿ ರಾ|| ಉಭಯ ಸ್ವಾಮಿಗಳವರೂ ತೆಗೆದುಕೊಂಡು ಉದ್ಧಾರ ಮಾಡಬೇಕೆಂದು ಅರಿಕೆ ಮಾಡಿಕೊಳ್ಳಲು, ಇದನ್ನು ಸನ್ನಿಧಿಯಲ್ಲಿ ಇರುವ ಗುರು ಚರಮೂರ್ತಿಗಳು ಮೊದಲಾದ ದೇವ ಭಕ್ತರನ್ನು ಮುಂತಿಟ್ಟುಕೊಂಡು

ರಾ|| ಮುರುಗಾಸ್ವಾಮಿಗಳು ರಾ|| ಕುಮಾರಸ್ವಾಮಿಗಳು ಹಳೆಬೀಡ ಹಿರೇಮಠದ ರುದ್ರದೇವರು ಮೊದಲಾದ ದೇವ ಭಕ್ತರನ್ನು ಸದರಿ ಕಲ್ಯಾಣಯ್ಯನ ಪೂರ್ವ ವೃತ್ತಾಂತವೇನೆಂದು ಕೇಳಲು ಸಮಸ್ತರೂ ಅರಿಕೆ ಮಾಡಿಕೊಂಡಸ್ತು ಏನೆಂದರೆ,

ಹಳೆಬೀಡ ಅರಸಿನಕಲ್ಲಮಠದ ಕಲ್ಯಾಣಿಎಂಬ ಹುಡುಗನು ಮಾದಿಗರ ತಿಮ್ಮಿಯ ಸಂಗವ ಮಾಡುತ್ತಿರ್ದನು. ಅದನ್ನು ಅಂದಲೆಯ ಹುಚ್ಚಯ್ಯನವರು ಕಂಡು ಆಕೆಯ ಮುಡಿ ಚೌರಿಯನು ಅವನ ತಲೆ ಜುಟ್ಟವನು ಕೊಯಿದು ಎರಡನೂ ತನ್ನ ಬಲಪಾದಕ್ಕೆ ಕಟ್ಟಿಕೊಂಡು ಗುಲ್ಲ ಮಾಡುತ್ತ ಕೆಲ ಬಲದಲ್ಲಿ ಇದ್ದವರಿಗೆ ತೋರುತ್ತ ಊರ ಒಳಯಕ್ಕೆ ಹೋಗಿ ಮುಪ್ಪಿನಯ್ಯನೆಂಬ ಶಿವಭಕ್ತನೊಡನೆ ಹೇಳಲು ಆ ಶಿವಭಕ್ತನು ಇದು ಹೌದೋ ಅಲ್ಲವೋ ಎಂದು ವರದಃ? ಕಟ್ಟಿ ವಿಚಾರಿಸಿ ಆ ಮೇಲೆ ಅಹಃದು ಮಾಡಿ ಅವರ ಮನೆಗೆ ಹೇಳಿಸಿದನು. ಅಲ್ಲಿದ್ದ ಪಾರುಪತ್ಯಗಾರ ನರಸಪ್ಪಯ್ಯನೆಂಬ ಬ್ರಾಹ್ಮಣನು ವಿಚಾರಿಸಿ ಕಾವಲ ಮಾಡಿಸಿದನು. ಆ ಕಾವಲೊಳಗೆ ಕಲ್ಯಾಣಿಯು ತಾನು ಮಾದಿಗಿತ್ತಿ ಸಂಗ ಮಾಡಿದ್ದು ಕಂಡವರಾರು ಕೇಳಿದವರಾರು ಎಂದು ಆಡಿಕೊಳ್ಳುತ್ತಾ ಇದ್ದನು. ಮತ್ತೆ ಮೂರು ದಿವಸದ ಮೇಲೆ ಆ ಪಟ್ಟಣದಲ್ಲಿ ಇದ್ದ ಸಮಸ್ತ ಪ್ರಜೆಗಳನ್ನೂ ಹೆಬ್ಬಾಗಲ ಚಾವಡಿಯಲ್ಲಿ ಕೂಡಿಸಿಕೊಂಡು ಕುಳಿತು ಸಕಲರ ಮುಂದೆ ಕಲ್ಯಾಣಿಯ ಕೂಡಿಸಿ ಆ ಮಾದಿಗರ ತಿಮ್ಮಿಯ ಕರೆತರಿಸಿ ಏಳು ಮಂಡಲವ ಬರಸಿ ಅದರೊಳಗೆ ಆಕೆಯನಿರಿಸಿ ಮೂರಿಯ ಪ್ರಸಾದ ಸನ್ನುತರಿಸಿ ಅವಳ ತಲೆಯ ಮೇಲೆ ಹಾರಿಸಿ ಆ ಮೇಲೆ ಈ ಜಂಗಮನಿಗೂ ನಿನಗೂ ಸಂಗತಿವುಂಟೇ? ಸುಮ್ಮನೆ ವ್ಯರ್ಥವಾಗಿ ಈ ಜಂಗಮನ ಕೆಡಿಸಬೇಡ ಮೂರು ವೇಳೆಗೂ ಸತ್ಯ ಸತ್ಯವಾಗಿ ನುಡಿ ಎಂದು ಪಾರುಪತ್ಯಗಾರ ಮುಂತಾದ ಸಮಸ್ತರೂ ವಿಚಾರಿಸಿದಲ್ಲಿ ಆ ಹೆಂಗಸು ಮೂರು ವೇಳೆಗೂ ನನಗೂ ಅವನಿಗೂ ಸಂಗತಿ ಉಂಟೆಂದು

ಸತ್ಯವಾಗಿ ಹೇಳಿದಳು. ಆ ಮೇಲೆ ಅಲ್ಲಿದ್ದವರೆಲ್ಲರೂ ಆ ಕಲ್ಯಾಣಿ ಹುಡುಗನ ಮುಖವ ನೋಡಿ, ಏನೆಂದು ನುಡಿಸಿದಲ್ಲಿ ಮಾತಿಲ್ಲದೆ ತಲೆಯತಗ್ಗಿಸಿದನು. ಇದ ಕಂಡು ಸ್ಥಲ ಪರಸ್ಥಲದ ಪ್ರಜೆಗಳು ಸಹ ಈ ಜಂಗಮನಿಗೂ ಮಾದಿಗರ ತಿಮ್ಮಿಗೂ ಸಂಗತಿ ಉಂಟೆಂದು ನುಡಿದರು. ಅನಂತರ ಪಾರುಪತ್ಯಗಾರನು ಕಲ್ಯಾಣಿಗೆ ಕಾವಲ ಮಾಡಿಸಿ ಇವನು, ಇವನ ಬಾಬತು ವಿಚಾರದ ಕಾಗದ ಪತ್ರ, ಮಾದಿಗಿತ್ತಿ ಸಹವಾಗಿ ಬೇಲೂರಿಗೆ ಕಳುಹಿಸಲು, ಅಲ್ಲಿಯ ಅಧಿಕಾರಸ್ಥ ಸಿದ್ಧರಾಜಯ್ಯನೆಂಬ ಗುರಿಕಾರನು ಆ ಸ್ಥಲದ ದೇವ ಭಕ್ತರು ಮುಂತಾದ ಸಕಲ ಪ್ರಜೆಗಳ ಮುಂತಿಟ್ಟುಕೊಂಡು ಆ ಕಲ್ಯಾಣಿಯ ವಿಷಯವಾಗಿ ಹಳೇಬೀಡಲ್ಲಿ ನಡೆದ ಮರ್ಯಾದೆಯಲ್ಲಿ ಮಾದಿಗಿತ್ತಿಯನ್ನು ಮಂಡಲದೊಳಗೆ ಕೂಡಿಸಿ ಕೇಳಲು, ಅಲ್ಲಿಯೂ ಸತ್ಯವಾಗಿ ಈ ಜಂಗಮನಿಗೂ ನನಗೂ ಸಂಗತಿ ಉಂಟೆಂದು ನುಡಿದಳು. ಇವುಗಳನ್ನು ವಿಚಾರಿಸಿದ ಬಳಿಕ ಆ ಕಲ್ಯಾಣಯ್ಯನ ಕರೆದು ಈ ಹೆಂಗಸಿನಮಾತು ಹಾಗೆ ಇರಲಿ, ನೀನು ಭಾ'ವೆ'(ವಿ?) ಪ್ರಮಾಣಕ್ಕೆ ನಿಲ್ಲುತ್ತೀಯಾ ಎಂದು ಕೇಳಲು ಅಲ್ಲಿಯೂ ನಿಲ್ಲಲಿಲ್ಲ. ಇದು ಕಂಡು ಸಮಸ್ತ ಪ್ರಜೆಗಳೂ ಈ ಜಂಗಮನಲ್ಲಿ ಕಳಂಕು ಉಂಟೆಂದು ನುಡಿದು ಆ ಕಲ್ಯಾಣಿಗೆ ಮುನ್ನೂರು ಮೂವತ್ತು ವರಹವನ್ನು ದಂಡ ಕಟ್ಟಿ ತೆಗೆದುಕೊಂಡರು. ಆ ಮೇಲೆ ಹಳೇಬೀಡೊಳಗೆ ಮಹಂತಿನ ಕೂಡಿದ ಸಿದ್ಧರಾಮದೇವರು ತಮ್ಮಡಿ ಚನ್ನವೀರಪ್ಪ ಪಂತಗಾರ ಕಾಳನೆಂಬ ಚಲವಾದಿ ಈ ಮೂವರೂ ಕೂಡಿ ಈ ಕಲ್ಯಾಣಿ ಹುಡುಗನು ದೇವಲೋಕಕ್ಕೂ ಮರ್ತ್ಯಲೋಕಕ್ಕೂ ಹೊರಗೆಂದು ಆ ಊರ ಸಂತೆಯಲ್ಲಿ ನಾಪವೇರಿಸಿದರು, ಆ ಬಳಿಕ ಸಮಸ್ತರೂ ಆ ಕಲ್ಯಾಣಯ್ಯನು ನಮಗೆ ಗುರುವಲ್ಲ, ನಾವು ಅವನಿಗೆ ಶಿಷ್ಯರುಗಳಲ್ಲವೆಂದು ಅವನನ್ನು ಬಿಟ್ಟು ಆ ಕಲ್ಲುಮಠದ ಗುರುಗದ್ದಿಗೆಗೆ ಕರ್ತರಾದ ಬೋಳದೇವರ ಕಲ್ಯಾಣದೇವರಿಗೆ ಶಿಷ್ಯರಾದರು. ಈ ಪ್ರಕಾರ ಹಳೆಬೀಡ ಸ್ಥಳದ ವಿರಕ್ತಮಠವಲ್ಲಿ ಬಂದು ಇರ್ದ ರಾ॥ ಕಟ್ಟಿಗೆಹಳ್ಳಿ ಸ್ವಾಮಿಗಳು ಮತ್ತು ನೋಡ ಸಿದ್ಧಲಿಂಗಸ್ವಾಮಿಗಳವರಿಗೆ ಹಳೆಬೀಡ ದೇವಭಕ್ತರು ಅರಿಕೆ ಮಾಡಿಕೊಳ್ಳಲು, ಇದ ಕೇಳಿ ಮ॥ ರಾ॥ ಉಭಯ ಸ್ವಾಮಿಗಳೂ ಇದು ಸ್ಥೂಲ ಕಾಣಿಸುತ್ತದೆ ಎಂದು ಆ ಸಭೆಯಲ್ಲಿ ಕಲ್ಲುಮಠದ ಕಲ್ಯಾಣಿಯ ತಂದೆಯಾದ ಬಸವಪ್ಪದೇವರನ್ನು ಕರಸಿ ನಿನ್ನ ಮಗನಾದ ಕಲ್ಯಾಣಿ ಹುಡುಗನ ಬಿಟ್ಟು ನಿನ್ನ ಶಿಷ್ಯರಾದ ಭಕ್ತಗಣಂಗಳಲ್ಲಿ ಒಂದು ಶಿಶುವ

ತ್ರಿಗೆದುಕೊಂಡು ಪಟ್ಟಗಟ್ಟಿ ದೇವ ಭಕ್ತರುಗಳಲ್ಲಿ ಸಮರಸವಾಗಿ ಇರುವ
ದೆಂದು ಸ್ವಾಮಿಗಳವರು ಅಪ್ಪಣೆ ಕೊಡಲು, ಇದಕ್ಕೆ ಇರುವವನೊಬ್ಬಮಗ,
ಇವನ ಬಿಡಲಾರೆನೆಂದು ಹೇಳಿಕೊಂಡದ್ದರಿಂದ ಆ ಬಸವಪ್ಪದೇವರನ್ನು ಕೊ
ರಳಿಗೆ ವಸ್ತ್ರ ಹಾಕಿಸಿ ಸಭೆಯಿಂದ ಹೊರಗೆ ಹಾಕಿಸಿದರು. ಆ ಮೇಲೆ
ಸಮಸ್ತ ಹಳೇಬೀಡ ದೇವ ಭಕ್ತರು ನಮ್ಮ ಎದ್ದ ಲಿಂಗ
ಬಿದ್ದ ಲೀಂಗಕ್ಕೆ (ಹುಟ್ಟಿದವರು ಸತ್ತವರಿಗೆ?) ಹ್ಯಾಗೆ?
ಎಂದು ಸನ್ನಿಧಿಗೆ 'ಅಂಕೆ ಮಾಡಿಕೊಳ್ಳಲು ಉಭಯ ಸ್ವಾಮಿ
ಗಳೂ ಅದಕ್ಕೆ ಎಲ್ಲಕ್ಕೂ ಪುಷ್ಪಗಿರಿ ಪಟ್ಟದದೇವರನ್ನು ಕರ್ತನನ್ನು ಮಾಡಿ
ಆ ದೇವ ಭಕ್ತರುಗಳ ಕೈಯಲ್ಲಿ ಕೊಟ್ಟು ಉಭಯ ಸನ್ನಿಧಾನವೂ
ನಮ್ಮೂರ ವಿರಕ್ತ ಮಠದಲ್ಲಿ ಮೂರು ತಿಂಗಳು ಇದ್ದು ಚಿತ್ತೈಸಿದರು.
ಆ ಬಳಿಕ ರಾ|| ಮುರುಗಾ ಸ್ವಾಮಿಗಳು ಹಾರನಹಳ್ಳಿಗೆ ಚಿತ್ತೈಸಿದಲ್ಲಿ
ಹಳೆಬೀಡ ದೇವ ಭಕ್ತರು ಬಿನ್ನಹಕ್ಕೆ ಹೋದಲ್ಲಿ ಸ್ವಾಮಿಗಳವರು ಆ
ಬಿನ್ನಹವನ್ನು ಒಪ್ಪಿಕೊಳ್ಳುವಾಗ್ಯೆ ದೇವಭಕ್ತರನ್ನು ಕಲ್ಯಾಣಿಯ ಪೂರ್ವೋ
ತ್ತರವನ್ನು ವಿಚಾರಿಸಿದಲ್ಲಿ ಸ್ಥೂಲವಾದ್ದರಿಂದ ಕಲ್ಲುಮಠದವರು ಇವರ
ಬಳಕೆ ಮಾಡಿದವರ ಬಳಕೆ ಮಾಡಿದವರ ಸಹ ಸೂರ್ಯ ಚಂದ್ರರು
ಇರುವ ವರೆವಿಗೂ ಬಳಕೆ ಮಾಡಲಾಗದೆಂದು ಹಳೆಬೀಡು ಮುಂತಾದ ಆ
ಸೀಮೆ ದೇವ ಭಕ್ತರಿಗೆ ಹಿಂದೆ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳವರು ಮತ್ತು
ಸೋಡ ಸಿದ್ಧಲಿಂಗ ಸ್ವಾಮಿಗಳವರು ಜಾಹೀರು ನಿರೂಪು ಕೊಟ್ಟ ಪ್ರಕಾರ
ರಾ|| ಮುರುಗಾಸ್ವಾಮಿಗಳವರೂ ಕೊಟ್ಟರು. ಅಂದಿನ ಲಾಗಾಯಿತು
ಕಲ್ಲುಮಠದ ಬಳಕೆ ನಿಂತಿತು.

ಈಗ ಕಲ್ಲುಮಠದ ಬಸವದೇ
ವರು ಇವರ ಮಗ ಕಲ್ಯಾಣಯ್ಯನು ಈ ಹೊಲೆ ಬಳಿಕೆ ಮಾಡಿದ ಕು
ಟುಂಬದವರು ಸಹಾ ಸತ್ತು ಆ ಕುಟುಂಬದ ಪೈಕಿ ಕಲ್ಯಾಣಯ್ಯನ ಮಗ
ಚನ್ನವೀರಯ್ಯ ಈತನ ಹೆಂಡತಿ ಇಷ್ಟು ಜನರು ಇದ್ದಾರೆ. ಸ್ವಾಮಿ
ಗಳವರ ಪಾದವು ಇವರ ಕಡೆಯಿಂದ ಒಂದು ಸಾವಿರ ವರಹ ಕಾಣಿಕೆ
ತೆಗೆದುಕೊಂಡು ಶಿವಾಚಾರ ಬಳಕೆಯಲ್ಲಿ ತೆಗೆದುಕೊಳ್ಳಬೇಕೆಂತ ಸರ್ವರೂ
ಅಂಕೆ ಮಾಡಿಕೊಳ್ಳಲು

ಇದನ್ನು ಸನ್ನಿಧಾನದಲ್ಲಿ ಇರುವ ಗುರು ಚರ
ಮೂರ್ತಿಗಳು ಮೊದಲಾದ ಸಮಸ್ತ ದೇವ ಭಕ್ತರ ಮುಂತಿಟ್ಟುಕೊಂಡು

ರಾ॥ ಮುರುಗಾಸ್ವಾಮಿಗಳು ರಾ॥ ಕುಮಾರಸ್ವಾಮಿಗಳು ಸಹಾ ಹಳೆಬೀಡ ಆಚಾರ ಬಾಬತು ಸಮಸ್ತ ಕಾಗದ ಪತ್ರಗಳನ್ನು ನೋಡಿ ಆ ಹಳೆಬೀಡ ರುದ್ರದೇವರು ಮುಂತಾದ ಸಮಸ್ತರಿಗೆ ಅಪ್ಪಣೆ ಆದದ್ದು ಏನೆಂದರೆ

ಈ ಕಲ್ಯಾಣಿಯ ಮಗ ಚನ್ನವೀರಯ್ಯನು ಹೊಲೆ ಬಳಕೆಯಲ್ಲಿ ಕಲ್ಯಾಣಿ ಮಿಶ್ರವಾದ ಮೇಲೆ ಹುಟ್ಟಿದವನೋ ಮಿಶ್ರವಿಲ್ಲದೆ ಮುಂದೆ ಹುಟ್ಟಿದವನೋ ವಾಸ್ತವ್ಯವಾಗಿ ಹೇಳಬೇಕೆಂದು ಅಪ್ಪಣೆ ಆಗಲು; ಆದಕ್ಕೆ ಸರ್ವರೂ ಕಲ್ಯಾಣಿಯು ಕೆಟ್ಟ ಮೇಲೆ ಹುಟ್ಟಿದವನೆಂದು ಅಂಕೆ ಮಾಡಿಕೊಂಡದ್ದರಿಂದ ಉಭಯ ಸ್ವಾಮಿ ಪಾದವೂ ಸನ್ನಿಧಿಯಲ್ಲಿ ಇದ್ದ ಸಮಸ್ತ ಗುರು ಚರಮೂರ್ತಿಗಳು ಮೊದಲಾದ ದೇವ ಭಕ್ತರೂ ಸಹವಾಗಿ ಕೆಟ್ಟವನ ಹೊಟ್ಟೆಯಲ್ಲಿ ಹುಟ್ಟಿದವನ ಕೂಡುವರೆ ಆಗದು ಎಂದು ನಿರ್ಣಯಿಸಿ ಆ ಮೇಲೆ ಸ್ವಾಮಿಗಳವರು ಹಿಂದೆ ಕಟ್ಟಿಗೆಹಳ್ಳಿ ಸ್ವಾಮಿಗಳು ಮುರುಗಾ ಸ್ವಾಮಿಗಳು ನೋಡ ಸಿದ್ಧಲಿಂಗ ಸ್ವಾಮಿಗಳವರು ಹೊಲೆ ಬಳಕೆವುಳ್ಳ ಹಳೆಬೀಡ ಕಲ್ಲುಮಠದವರ ಬಳಕೆ ಮಾಡದಂತೆ ಹಳೆಬೀಡ ಮೊದಲಾದ ಆ ಸೀಮೆ ದೇವ ಭಕ್ತರಿಗೆ ಜಾಹೀರು ನಿರೂಪು ಕೊಟ್ಟಂತೆ ರಾ॥ ಮುರುಗಾಸ್ವಾಮಿಗಳು ರಾ॥ ಕುಮಾರಸ್ವಾಮಿಗಳವರು ಈ ಉಭಯ ಸ್ವಾಮಿಗಳವರು ಈ ಹಳೆಬೀಡ ಕಲ್ಲುಮಠದ ಚನ್ನವೀರಯ್ಯನು ಕೆಟ್ಟವನ ಹೊಟ್ಟೆಯಲ್ಲಿ ಹುಟ್ಟಿದವನಾದ ಕಾರಣ ಈ ಚನ್ನವೀರಯ್ಯನ ಬಳಕೆ ಸೂರ್ಯ ಚಂದ್ರರು ಇರುವ ವರೆಗೂ ಮಾಡಬಾರದೆಂದು ಜಾಹೀರು ನಿರೂಪು ಕೊಟ್ಟ ಸನ್ನಿಧಾನವು ಹಳೇಬೀಡವರಿಗೆ ಅಪ್ಪಣೆ ಕೊಟ್ಟ ಕಳುಹಿಸಿಕೊಟ್ಟರು. ಆ ಮೇಲೆ ಹಳೆಬೀಡು ಮುಂತಾದ ಸೀಮೆಗಳಲ್ಲಿ ಸದರಿ ಚನ್ನವೀರಯ್ಯನ ಬಳಕೆ ನಿಂತಿತು.

ಆ ಮೇಲೆ ರಾ॥ ಮುರುಗಾಸ್ವಾಮಿಗಳವರು ಚಿತ್ರಕಲ್ಲದುರ್ಗದ ಮಠದಲ್ಲಿ ದಾಸೋಹದ ಖರ್ಚು ಬಹಳವಾದ್ದರಿಂದ ರಾ॥ ಕುಮಾರಸ್ವಾಮಿಗಳವರಿಗೆ ಅಪ್ಪಣೆ ಕೊಟ್ಟದ್ದು ಏನೆಂದರೆ :—

ದೇಶ ಮಧ್ಯದಲ್ಲಿ ಇರುವ ನಮ್ಮ ಸೂತ್ರಕರಾದ ಷಟುಸ್ಥಲ ಸಂಬಂಧವಾದ ಮಠಗಳಲ್ಲಿ ಚರಂತಿಗೆ ಆದರೆ ಒಂದು ನೂರು ರೂಪಾಯಿ, ಸ್ಥಲ ಕೂಡಿದರೆ ೫೦ ರೂಪಾಯಿ, ಹಾಗೂ ದೇಶ ಮಧ್ಯದಲ್ಲಿ ಇರುವ ಪೇಟಿ ಮನೆಗಳಲ್ಲಿ ಇರುವ ದೇವ ಭಕ್ತರು

ದರ ವರುಷ ನಮ್ಮ ಸನ್ನಿಧಾನಕ್ಕೆ ದೀಪಾರಾಧನೆ ಕಾಣಿಕೆ ರುಸುಮು ವಗ್ಯೈರೆ ಕೊಡುವಂತೆ ಗೊತ್ತುಮಾಡುವದಕ್ಕೆ ನಾವು ದೇಶಮಧ್ಯಗಳಲ್ಲಿ ದಯಮಾಡಿಸಬೇಕು ಆದರೆ ನಮಗೆ ವೃದ್ಧಾಪ್ಯವು ಪ್ರಾಪ್ತವಾಗಿದೆ. ನೀವು ೭೨ ಬಿರುದುಗಳೊಡನೆ ದಯಮಾಡಿಸಿ ಸದರಿ ಪ್ರಕಾರ ಕಾರ್ಯ ಮು ಮಾಡಿಕೊಂಡು ಬರಬೇಕೆಂದು ಅಪ್ಪಣೆಯನ್ನು ಕೊಟ್ಟು ಸಕಲ ಬಿರುದುಗಳಿಂದ ಗಣಸಮೂಹದೊಡನೆ ರಾ॥ ಕುಮಾರಸ್ವಾಮಿಗಳವರನ್ನು ದೇಶಾಟನಕ್ಕೆ ಮುರುಗಾಸ್ವಾಮಿಗಳವರು ಕಳುಹಿಸಿಕೊಟ್ಟು

ಆ ಬಳಿಕ ರಾ॥ ಮುರುಗಾ ಸ್ವಾಮಿಗಳವರಿಗೆ ಅಂತ್ಯ ಕಾಲವು ಒದಗಿದ್ದರಿಂದ ಚಿತ್ರಕಲ್ಲದುರ್ಗದ ದೊರೆಗಳಾದ ಬಿಚ್ಚುಗತ್ತಿ ಭರಮನಾಯಕರು ಮುಂತಾದ ದೇವ ಭಕ್ತರನ್ನು ಕರೆಯಿಸಿಕೊಂಡು ಅವರ ಸಮ್ಷಮದಲ್ಲಿ ತಮ್ಮ ಸನ್ನಿಧಿಯಲ್ಲಿ ಇರುವ ಖಾಸ ಚರಮೂರ್ತಿಗಳಾದ ರುದ್ರಪ್ಪನವರನ್ನು ಕರೆಯಿಸಿಕೊಂಡು ಅವರಿಗೆ ಇಮ್ಮಡಿ ಗುರುಸಿದ್ಧಸ್ವಾಮಿಗಳೆಂಬ ಅಭಿಧಾನವನ್ನು ಇಟ್ಟು ತಮ್ಮಯ ಶಿಖಾಪಟ್ಟವನ್ನು ಮಾಡಿ ಅವರಿಗೆ ನೀವು ನಮ್ಮಂತೆ ರಾ॥ ಕುಮಾರಸ್ವಾಮಿಗಳವರಿಗೆ ಸಮ ಮರ್ರ್ಯಾದೆಯನ್ನು ಕೊಟ್ಟು ಭೇದವಿಲ್ಲದೆ ನಾವೂ ಅವರೂ ಇದ್ದಂತೆ ಈ ಮಠದ ಅಭಿಮಾನವನ್ನು ನಡೆಯಿಸಿಕೊಂಡು ಬರಬೇಕು. ಏನು ಕಾರಣವೆಂದರೆ ಪೂರ್ವದಿಂದ ಸಮಸ್ತ ಗುರು ಚರಮೂರ್ತಿಗಳಿಗೂ ವಿರಕ್ತರು ಮೊದಲಾದ ಸಕಲ ಸಿಂಹಾಸನದ ಸೂತ್ರಿಕರಾದ ದೇವ ಭಕ್ತರಿಗೂ ಗುರುಗಳಾದ ಶಿವಾನುಭಾವ ಪುಸ್ತಕದ ಸೂತ್ರಿಕರಾದ ಕಟ್ಟಿಗೆಹಳ್ಳಿ ಸ್ವಾಮಿಗಳವರ ತರುವಾಯದ ನೋಡ ಸಿದ್ಧಲಿಂಗ ದೇಶಿಕೇಂದ್ರರವರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಅಧಿಪತಿಗಳಾದವರು ಕುಮಾರಸ್ವಾಮಿಗಳು. ಆದ್ದರಿಂದ ನಾವು ಶಿಖಾಪಟ್ಟದವರು ಆದಾಗ್ಯೂ ಅವರಿಗೆ ಸಮ ಮರ್ರ್ಯಾದೆ ಕೊಟ್ಟು ಅವರನ್ನು ನಮ್ಮಂತೆ ಗುರುಗಳಾಗಿ ಕಂಡುಕೊಂಡು ಭೇದವಿಲ್ಲದೆ ವಿಹಿತವಾಗಿ ನಡಕೊಳ್ಳಬೇಕೆಂತ ಸದರಿ ಗುರುಸಿದ್ಧಸ್ವಾಮಿಗಳವರಿಂದ ಸಾಷ್ಟಾಂಗವನ್ನು ಹಾಕಿಸಿಕೊಂಡು, ಆ ಮೇಲೆ ಗುರುಸಿದ್ಧ ಸ್ವಾಮಿಗಳವರ ಸಿಂಹಾಸನಾರೂಢರನ್ನು ಮಾಡಿಸಿ ೭೨ ಬಿರುದುಗಳೊಡನೆ ಉತ್ಸಹವನ್ನು ಮಾಡಿಸಿ ಶಿವಾಧೀನವಾದರು.

ಇವರ ಗದ್ದುಗೆ ಚಿನ್ಮೂಲಾದ್ರಿ ಬೃಹನ್ಮಠದಲ್ಲಿ ಇರುತ್ತದೆ.

ರಾ॥ ಮುರುಗಾ ಸ್ವಾಮಿಗಳು ಲಿಂಗೈಕ್ಯರಾಗಲು ಆ ಚಿತ್ರಕಲ್ಲ ದುರ್ಗದ ದೊರೆಗಳಾದ ಬಿಚ್ಚುಗತ್ತಿ ಭರಮನಾಯಕರು ತಮ್ಮ ಮಗ

ನಾದ ಮೆದಕೆರೆ ನಾಯಕರಿಗೆ ತನ್ನ ಪಟ್ಟವನ್ನು ಕಟ್ಟಿ ಸಾಂಬಲೋಕ ವಾಸಿ ಆದನು.

ಇತ್ತ ಮ॥ ರಾ॥ ರಾ॥ ಮುರುಗಾಸ್ವಾಮಿಗಳವರು ತಮಗೆ ಶಿಖಾ ಪಟ್ಟವನ್ನು ಮಾಡಿ ದೊರೆಗಳು ಮುಂತಾದ ಸ್ವಾಮಿಗಳವರು ಸಾಂಬ ಲೋಕ ಪ್ರಾಪ್ತರಾದ ವರ್ತಮಾನವನ್ನು ಆಶೀರ್ವಾದ ನಿರೂಪಗಳಿಂದ ರಾ|| ಗುರುಸಿದ್ಧಸ್ವಾಮಿಗಳವರು ಸಕಲ ದೇಶಗಳಲ್ಲಿ ಇರುವ ಗುರು ಚರಮೂರ್ತಿಗಳು ಮೊದಲಾದ ದೇವ ಭಕ್ತರುಗಳಿಗೆ ಕೊಟ್ಟು ಕಳುಹಿ ಸಲು ಈ ಆಶೀರ್ವಾದ ನಿರೂಪುಗಳ ನೋಡಿಕೊಂಡು ಸಕಲ ಗುರು ಚರಮೂರ್ತಿಗಳು ಆಹೀರು ಮುಂತಾದ ಮರ್ಯಾದೆಗಳನ್ನು ರಾ|| ದುರ್ಗದ ಸನ್ನಿಧಾನಕ್ಕೆ ಕೊಟ್ಟು ಕಳುಹಿಸಿದರು.

ಇದಅಂತೆ ಚಿತ್ರಕಲ್ಲದುರ್ಗದ ದೊರೆಗಳಾದ ಮೆದಕೆರೆ ನಾಯಕರು ಮುಂತಾದ ಸಕಲ ದೇವ ಭಕ್ತರು ಮ|| ರಾ|| ರಾ|| ಕುಮಾರಸ್ವಾಮಿ ಗಳವರು ಸ್ವಾದಿ ದೊರೆಗಳಾದ ಸದಾಶಿವರಾಜನ ಭಕ್ತಿಯಿಂದ ಇಸಳೂರ ತಮ್ಮ ಮಠದಲ್ಲಿ ಲಿಂಗಪೂಜಾ ಜಂಗಮ ದಾಸೋಹದಿಂದ ಗಣಸಮೂಹ ದೊಡನೆ ಇದ್ದಾರೆಂಬ ವರ್ತಮಾನವನ್ನು ಕೇಳಿ ಸಮಸ್ತರೂ ಇಸಳೂ ರಲ್ಲಿ ಇರುವ ರಾ|| ಗುರು ಸನ್ನಿಧಾನಕ್ಕೆ ರಾ|| ಮುರುಗಾಸ್ವಾಮಿಗಳವರು ತಮ್ಮಯ ಶಿಖಾಪಟ್ಟವನ್ನು ರಾ|| ರುದ್ರಪ್ಪನವರೆಂಬ ಚರಮೂರ್ತಿಗಳಿಗೆ ಮಾಡಿ ಗುರುಸಿದ್ಧಸ್ವಾಮಿಗಳೆಂಬ ಅಭಿದಾನವನ್ನು ಕೊಟ್ಟು ಈ ಸ್ಥಲದ ದೊರೆಗಳಾದ ಭರಮನಾಯಕರು ಸದರಿ ಮುರುಗಾಸ್ವಾಮಿಗಳು ಸಹ ವಾಗಿ ಸಾಂಬಲೋಕ ಪ್ರಾಪ್ತರಾದರು. ತಾವು ದಯವಿಟ್ಟು ರಾ|| ದುರ್ಗದ ಸನ್ನಿಧಾನಕ್ಕೆ ಚಿತ್ತಯಿಸಿ ಸ್ವಾಮಿಗಳು ಮುಂತಾದ ನಮ್ಮಗಳನ್ನು ಸಂರಕ್ಷಣವನ್ನು ಮಾಡಿಕೊಂಡು ಈ ತಮ್ಮ ಸಂಸ್ಥಾನ ವನ್ನು ನಡಸಿಕೊಂಡು ಹೋಗುವ ಭಾರ ತಮ್ಮದೇ ಅದೆ. ನಾವು ಬರೆಯಿಸಿ ಕಳುಹಿಸಿದ ಬಿನ್ನಹ ಪತ್ರವನ್ನು ನೋಡಿಕೊಂಡು ಇಲ್ಲಿಗೆ ದಯಮಾಡಿಸಬೇಕೆಂದು ತಾವು ಬರಸಿದ ಬಿನ್ನಹ ಪತ್ರವನ್ನು ಕೊಟ್ಟು ತಮ್ಮ ಕಡೆಯಿಂದ ಕೆಲವು ಮೂರ್ತಿಗಳನ್ನು ರಾ|| ಕುಮಾರಸ್ವಾಮಿಗಳ ವರ ದುರ್ಗದ ಸನ್ನಿಧಿಗೆ ಕರೆದುಕೊಂಡು ಬರುವದಕ್ಕೆ ಕಳುಹಿಸಿ ಕೊಟ್ಟರು.

ಅವರು ಇಸಳೂರಿಗೆ ಬಂದು ನಡೆದ ವರ್ತಮಾನವನ್ನು ಇಸಳೂ ರಲ್ಲಿ ಇರುವ ಸನ್ನಿಧಿಗೆ ಸಾಷ್ಟಾಂಗ ಪ್ರಣುತರಾಗಿ ಅರಿಕೆಮಾಡಿಕೊಂಡು

ಬಿನ್ನಹ ಪತ್ರವನ್ನು ಒಪ್ಪಿಸಲು ಆ ಪತ್ರವನ್ನು ಕುಮಾರಸ್ವಾಮಿಗಳ ವರು ನೋಡಿಕೊಂಡು ರಾ|| ಮುರುಗಾಸ್ವಾಮಿಗಳವರೂ ಚಿತ್ರಕಲ್ಲ ದುರ್ಗ ದೊರೆಗಳೂ ಸಹ ನಮ್ಮನ್ನು ಕರಸದೆ ಹಳೆಬೀಡ ಕಲ್ಲುಮಠದ ಸೇಪು (ಆಪ್ತತ್ವ= ಸಂಬಂಧ) ಉಳ್ಳ ರುದ್ರಪ್ಪನವರಿಗೆ ಶಿಖಾಪಟ್ಟವನ್ನು ಮಾಡಿದ ಮೇಲೆ ಮುಂದೆ ಹಳೆಬೀಡ ಕಲ್ಲುಮಠದ ಚನ್ನವೀರಯ್ಯನ ಬಳಕೆ ಮಾಡುವದೇ ಖರೆ, ನಮ್ಮ ಆಚರಣೆಗೆ ಕೊರತೆ ಬರುವದೇ ಸಿದ್ಧವು. ಇನ್ನು ಮೇಲೆ ಈ ಮರ್ತ್ಯಲೋಕದಲ್ಲಿ ಇರಬಾರದೆಂದು ಆ ಕೂಡಲೆ ಸ್ವಾದಿ (ಸೋದೆ) ಅರಸನಾದ ಸದಾಶಿವರಾಜ ಮುಂತಾದ ಸಕಲ ದೇವ ಭಕ್ತರುಗಳನ್ನು ಕರೆಸಿಕೊಂಡು ಅವರಿಗೆ ಈ ವಿವರವನ್ನು ತಿಳಿಸಿ ಅವರ ಮುಂತಿಟ್ಟುಕೊಂಡು

ತಮ್ಮ ಸನ್ನಿಧಾನದಲ್ಲಿ ಇರುವ ಸಿದ್ಧರಾಮಪ್ಪನವರನ್ನು ಕರೆಯಿಸಿ ಅವರಿಗೆ ಕೆಂಪಿನ ಸಿದ್ಧಬಸವಸ್ವಾಮಿಗಳೆಂಬ ಅಭಿಧಾನವನ್ನು ಕೊಟ್ಟು ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ಮಾಡಿ ಅವರಿಗೆ ರಾ|| ಚಿತ್ರ ಕಲ್ಲದುರ್ಗದ ಗುರುಸಿದ್ಧಸ್ವಾಮಿಗಳು ಹಳೆಬೀಡ ಕಲ್ಲುಮಠದ ಚನ್ನವೀರ ಯ್ಯನ ಸೇಪು (ಸೇಪುರ್) ಉಳ್ಳವರು, ಆದ್ದರಿಂದ ಅವರು ಆ ಬಳಕೆ ಕೂ ಡಿಕೊಂಡಾಗ್ಯೂ ಅವರು ಆ ಬಳಕೆಯನ್ನು ನಮ್ಮಲ್ಲಿ ಇರುವ ಹಳೆ ಬೀಡ ಆಚಾರ ಬಾಬತು ಕಾಗದ ಪತ್ರ ನೋಡಿಕೊಂಡಾದರೂ ಬಿಡದೆ ಹೋದರೆ ಅವರ ಬಳಕೆ ಅವರ ಆಚರಣೆ ಸಹ ಮಾಡಬಾರದು ಎಂಬು ದಾಗಿ ಸಾಷ್ಟಾಂಗವನ್ನು ಹಾಕಿಸಿಕೊಂಡು ಆ ಮೇಲೆ ರಾ। ಕೆಂಪಿನ ಸಿದ್ಧಬಸವಸ್ವಾಮಿಗಳವರನ್ನು ಶೂನ್ಯಸಿಂಹಾಸನಾರೂಢರನ್ನು ಮಾಡಿಸಿ ೭೨ ಬಿರುದುಗಳೊಡನೆ ಉತ್ಸಹಂಗೊಳಿಸಿ ಮ|| ರಾ|| ಕುಮಾರಸ್ವಾಮಿ ಗಳವರು ಸಾಂಬಲೋಕ ಪ್ರಾಪ್ತರಾದರು.

ಇವರ ತೋರ ಗದ್ದುಗೆ ಇಸಳೂರ ಧರ್ಮಾನದಿ ಉದ್ಭವಸ್ಥಾನವಾದ ಧರ್ಮಾನದಿ ತಟಿಯಲ್ಲಿ ಇರುವ ಮಠದಲ್ಲಿ ಇದೆ.

ಆ ಬಳಿಕ ಸ್ವಾದೆ ಸದಾಶಿವರಾಜನು ತನ್ನ ಪಟ್ಟಣದಲ್ಲಿ ಇರುವ ನದಿಯಲ್ಲಿ ಸಾವಿರ ಲಿಂಗ ಪ್ರತಿಷ್ಠೆಗಳನ್ನು ಮಾಡಿಸಿ ರಾ|| ಕುಮಾರ ಕೆಂ ಪಿನ ಸಿದ್ಧವೃಷಭೇಂದ್ರ ಸ್ವಾಮಿಗಳವರನ್ನು ಸಹಸ್ರಲಿಂಗದ ಹೊಳೆಗೆ ಬಿನ್ನಹ ಮಾಡಿ ೭೨ ಬಿರುದುಗಳೊಡನೆ ಗಣಸಮೇತವಾಗಿ ಕರಕೊಂಡು ಹೋಗಿ ತಮ್ಮ ಪ್ರಸ್ತವನ್ನು ತೀರಿಸಿಕೊಂಡ ಬಳಿಕ ಸ್ವಾಮಿಗಳವರ ತಮ್ಮ ಅರಮನೆಗೆ ಕರೆದುಕೊಂಡು ಹೋಗಿ ತಮ್ಮ ಭಕ್ತಿಯಲ್ಲಿ ಇಟ್ಟು

ಕೊಂಡು ಸದಾಶಿವರಾಜನು ತನಗೆ ಉಳುವೆ ಮಹಾಮನೆ ಗವಿಯ ಒಳಗೆ ಪ್ರಮಥರ ಪುಸ್ತಕವು ದೊರೆತದ್ದನ್ನು ರಾ॥ ಸ್ವಾಮಿಗಳವರ ಮುಂದೆ ಇಡಲು, ಆ ಪುಸ್ತಕವನ್ನು ಸ್ವಾಮಿಗಳವರು ಓದಿದ್ದರಿಂದ ಇವರಿಗೆ ಭಕ್ತನಾಗಿ ತನ್ನ ಪಟ್ಟಣದಲ್ಲಿ ಇರುವ ಬಸ್ತಿ ಗುಡಿಯಲ್ಲಿ ಇರುವ ಜೈನ ವಿಗ್ರಹವನ್ನು ತೆಗೆಯಿಸಿ ಈ ದೇವಾಲಯಕ್ಕೆ ಲಿಂಗಮುದ್ರೆ ಸ್ಥಾಪನವನ್ನು ಮಾಡಿಸಿ ಶರಣು ಹಾಕಿ ಸ್ವಾಮಿಗಳವರನ್ನು ರಾಜನು ತನ್ನ ಭಕ್ತಿಯಲ್ಲಿ ಇರಬೇಕೆಂದು ಹೇಳಿಕೊಂಡದ್ದರಿಂದ ಸ್ವಾಮಿಗಳವರು ತಮ್ಮ ಖಾಸಾ ಚರ ಮೂರ್ತಿಗಳಾದ ಶಿವೊಗ್ರೊಹಿ (ಶಿವವೋಹಿ?) ಸಿದ್ಧರಾಮಪ್ಪನವರನ್ನು ಆ ಮಠದಲ್ಲಿ ಇಟ್ಟು ತಮ್ಮ ಗಣಸಮೂಹದೊಡನೆ ಇಸಳೂರಲ್ಲಿಯೂ ಸ್ವಾದಿ (ಸೋದೆ) ಯಲ್ಲಿಯೂ ಇರುತ್ತಾ ಲಿಂಗಪೂಜಾ ಜಂಗಮ ದಾಸೋಹದೊಡನೆ ರಾ॥ ಕುಮಾರಸ್ವಾಮಿಗಳು ರಾ॥ ದುರ್ಗದ ಸನ್ನಿಧಾನಕ್ಕೆ ಆಹೇರ ವಸ್ತ್ರಗಳನ್ನು ಕಳಿಸಿಕೊಟ್ಟ ಬಳಿಕ ರಾ॥ ಸದರೀ ಕೆಂಪಿನ ಸಿದ್ಧವೃಷಭೇಂದ್ರ ಸ್ವಾಮಿಗಳವರು ಸ್ವಾದೆ ಸೀಮೆಯಲ್ಲಿಯೇ ಇದ್ದರು.

ಇತ್ತ ಸ॥ ರಾ॥ ಗುರುಸಿದ್ಧಸ್ವಾಮಿಗಳವರಿಗೆ ರಾ॥ ಕುಮಾರ ಸ್ವಾಮಿಗಳವರು ಕಳುಹಿಸಿಕೊಟ್ಟ ಆಹೇರು ಮುಟ್ಟಿ ಇವರೂ ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ರಾ॥ ಕೆಂಪಿನ ಸಿದ್ಧಬಸವಸ್ವಾಮಿ ಗಳವರಿಗೆ ಮಾಡಿ ಸಾಂಬಲೋಕ ಪ್ರಾಪ್ತರಾದ ಸಮಾಚಾರವನ್ನು ಬನ್ನಹ ಪತ್ರ ಮುಖದಿಂದ ರಾ॥ ದುರ್ಗದ ಸ್ವಾಮಿಗಳವರು ತಿಳಿದು ರಾ॥ ಕುಮಾರಸ್ವಾಮಿಗಳವರ ತರುವಾಯದಲ್ಲಿ ಶಿವಾನುಭಾವ ಚರಂತಿಗೆ ಪಟ್ಟವು ರಾ॥ ಕೆಂಪಿನ ಸಿದ್ಧಬಸವಸ್ವಾಮಿಗಳವರಿಗೆ ಆದ್ದರಿಂದ ದುರ್ಗದ ಸನ್ನಿಧಾನದಿಂದ ಆಹೇರು ಮರ್ಯಾದೆಗಳನ್ನು ಕಳುಹಿಸಿಕೊಟ್ಟರು.

ಇದೇ ಪ್ರಕಾರವೇ ಸಕಲ ದೇಶಗಳಲ್ಲಿ ಇರುವ ಗುರು ಚರಮೂರ್ತಿಗಳು ಇಸಳೂರು ಚಿತ್ರಕಲ್ಲದುರ್ಗ ಈ ಉಭಯ ಸನ್ನಿಧಾನಂಗಳಿಗೆ ಆಹೇರು ಮರ್ಯಾದೆಗಳನ್ನು ಕಳುಹಿಸಿಕೊಟ್ಟರು.

ಆ ಬಳಿಕ ಹಿಂದೆ ಮೇಲುದುರ್ಗದಲ್ಲಿ ಸನ್ನಿಧಾನವು ಇರುವಾಗ್ಯೆ ಭಿಕ್ಷಾಟನಾರ್ಥವಾಗಿ ಹರಪನಹಳ್ಳಿ ಸೀಮೆಗೆ ದಯಮಾಡಿಸಿದ ಚೀಲಾಳ ಬುಡಕಟ್ಟಿನ ತೋಟಪ್ಪನವರು ತಮ್ಮ ಚರಸಹಿತವಾಗಿ ರಾ॥ ದುರ್ಗದ ಸನ್ನಿಧಾನಕ್ಕೆ ಬಂದು ಸನ್ನಿಧಿಗೆ ಆಹೇರು ಮುಂತಾದ ಮರ್ಯಾದೆಗಳನ್ನು ಕೊಡದೆ ಆ ಸನ್ನಿಧಿಯಲ್ಲಿ ಇರುವ ಗುರು ಚರಮೂರ್ತಿಗಳ ಮುಂದೆ ರಾ॥ ಚೀಲಾಳಪ್ಪನವರು ಆಡಿದ ದುರಹಮ್ಮತ್ತಿನ ಮಾತು ಏನೆಂದರೆ

ನಾವು ಘನ ಚರಮೂರ್ತಿಗಳು ಇರಲಿಕ್ಕೆ ಯಾರ ಮಾತಿನ ಮೇಲಿಂದ ರಾ|| ಮುರುಗಾಸ್ವಾಮಿಗಳವರು ತಮ್ಮ ಶಿಖಾಪಟ್ಟವನ್ನು ನಮಗೆ ಮಾಡದೆ ಈ ಮರಿ (ಶಿವಯೋಗ ಸಾಧಕ) ಗೆ ಹೇಗೆ ಮಾಡಿದರು? ಈ ಮರಿಯನ್ನು ನಾವು ಕಂಡವರಲ್ಲವು ಎಂಬುದಾಗಿ ಈ ಚರಮೂರ್ತಿಗಳು ಹಮ್ಮಿನ ಮಾತು ಬಳಸಿದ್ದರಿಂದ ಈ ವರ್ತಮಾನವು ಸನ್ನಿಧಾನಕ್ಕೆ ತಿಳಿದದ್ದರಿಂದ ಆಗ್ರಹ ಹುಟ್ಟಿ ಸನ್ನಿಧಾನವು ಮಠವ ಬಿಟ್ಟು ಚೀಲಾಳಪ್ಪನವರು ಮುಂತಾದ ಅವರ ಸೂತ್ರಿಕರಾದ ಚರಮೂರ್ತಿಗಳ ಸಹ ಹೊರಗೆ ಹಾಕಿಸಲು ಈ ವರ್ತಮಾನವು ಚಿತ್ರಕಲ್ಲದುರ್ಗದ ರಾಜನಾದ ಮದಕೆರಿ ನಾಯಕರಿಗೆ ತಿಳಿದು ಸದರಿ ಮೂರ್ತಿಗಳನ್ನು ತನ್ನ ಸೀಮೆ ಬಿಟ್ಟು ಗಡಿ ಪಾರು ಮಾಡಿಸಿದರು. (ಎಂದು ಮೊದಲು ಹೇಳಿದೆಯಷ್ಟೆ.)

ಈ ಚೀಲಾಳಪ್ಪನವರ ಕೂಡ ದುರ್ಗದಿಂದ ಹೋದ ಬುಡಕಟ್ಟಿನ ಚರಮೂರ್ತಿಗಳು ಎಷ್ಟು ಎಂದರೆ ಕವದಿಕಂತಿ ಬುಡಕಟ್ಟಿನ ಚರಮೂರ್ತಿಗಳು ೧೦ ಚೀಲಾಳ ಬುಡಕಟ್ಟಿನ ಚರಮೂರ್ತಿಗಳು ೧೩ ಬಳ್ಳಾರಿ ಬುಡಕಟ್ಟಿನ ಚರಮೂರ್ತಿಗಳು ೧೫ ಚಿತ್ರಿಗಿ ಬುಡಕಟ್ಟಿನ ಚರಮೂರ್ತಿಗಳು ೧೦ ಆದವಾನಿ ಬುಡಕಟ್ಟಿನ ಚರಮೂರ್ತಿಗಳು ೮ ಕಡಲೆ ಬರಹದ ಬುಡಕಟ್ಟಿನ ಚರಮೂರ್ತಿಗಳು ೫ ತಾಡವಾಲಿ ಬುಡಕಟ್ಟಿನ ಚರಮೂರ್ತಿಗಳು ೩೫ ಗದಗಿನ ಬುಡಕಟ್ಟಿನ ಚರಮೂರ್ತಿಗಳು ೧೫ ಬಟ್ಟಲಕೊಟ್ಟ ವಿರಕ್ತರು ೧೦೩ ಇಷ್ಟು ಮೂರ್ತಿಗಳ ಚೀಲಾಳಪ್ಪನವರು ಹರಪನಹಳ್ಳಿಗೆ ಕರಕೊಂಡು ಹೋಗಿ ಆ ಊರ ದೊರೆಗಳನ್ನು ಭಕ್ತನ ಮಾಡಿಕೊಂಡು ಆತನ ಭಕ್ತಿಯಿಂದ ಆ ಸ್ಥಲದಲ್ಲಿ ಮಠ ಮಾನ್ಯಗಳನ್ನು ಪಡೆದು ಅಲ್ಲಿಯೇ ನಿಂತರು. ಇವರ ಸೂತ್ರಿಕರಾದ ಗಣಂಗಳ ಮಠಗಳು ಹರಪನಹಳ್ಳಿ ಬಳ್ಳಾರಿ ಮುಂತಾದ ದೇಶಗಳಲ್ಲಿ ಇದ್ದಾವೆ. ಸದರಿ ಕಾರಣದಿಂದ ಚೀಲಾಳ ಸಮಯವು ಭೇದವಾಯಿತು.

ಇತ್ತಲಾಗಿ ಹಿಂದೆ ಚಿತ್ರಕಲ್ಲದುರ್ಗದ ಮಠದಲ್ಲಿ ರಾ|| ಮುರುಗಾಸ್ವಾಮಿಗಳು ರಾ|| ಕುಮಾರಸ್ವಾಮಿಗಳು ಕೂಡಿ ಇರುವಾಗ್ಯೆ ರಾ|| ಕುಮಾರಸ್ವಾಮಿಗಳವರ ಸನ್ನಿಧಾನಕ್ಕೆ ಮರ್ಯಾದೆ ಕೊಡದೆ ದುರಹಮ್ಮತ್ತಿನ ಮಾತು ಆಡಿದ್ದರಿಂದ ದುರ್ಗದ ಮಠದಲ್ಲಿ ಉಭಯ ಸನ್ನಿಧಾನವು ಹೊರಗೆ ಹಾಕಿಸಿದ ೫ ಬುಡಕಟ್ಟಿನ ಚರಮೂರ್ತಿಗಳು ಇವರ ಸೂತ್ರಿಕರಾದ ಮೂರ್ತಿಗಳು ಅಂದರೆ ಕೆಂಪಿನ ಸಮಯ ಸೋಮೆಕಟ್ಟಿ ಸಮಯ ಗದ್ದಕಟ್ಟಿನ ಸಮಯ ಗೂಳಿಕೊಂಡಯ್ಯಗಳ ಸಮಯ ಆಯುಕಟ್ಟಿನ ಸಮ

ಯ ಈ ಪ್ರಕಾರ ಭೇದವಾದ ಸಮಯಗಳಾದ ಮೂರ್ತಿಗಳು ಮುಂತಾದ ಇವರ ಬುಡಕಟ್ಟಿನ ಸಕಲ ಗಣಂಗಳನ್ನೂ ಹಾಗೂ ಹಿಂದೆ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳವರ ಕಾಲದಲ್ಲಿ ಸಮಯ ಭೇದವಾದ ಸಂಪಾದನೆಯ ಸಿದ್ಧವೀರಪ್ಪನವರ ಕೂಡ ಹೋದ ೧೦ ಬುಡಕಟ್ಟಿನ ಮೂರ್ತಿಗಳು ಇವರ ಸೂತ್ರಿಕರಾದ ಗಣಂಗಳನ್ನೂ ಸದರಿ ೫ ಸಮಯದ ಗಣಂಗಳನ್ನೂ ಸಹ ಸದರಿ ಚೀಲಾಳಪ್ಪನವರು ತಮ್ಮ ಚೀಲಾಳ ಸಮಯದಲ್ಲಿ ತೆಗೆದುಕೊಂಡರು. ಈ ಪ್ರಕಾರ ಒಂದೊಂದು ಕಾರಣಗಳಿಂದ ಗಣಂಗಳಲ್ಲಿ ಸಮಯಗಳೆಂತ ಭೇದವಾಗಿ ಇವತ್ತಿಗೂ ಆ ಹೆಸರಿನ ಸಮಯಗಳು ಇರುವದೇ ಸಾಕ್ಷಿಯು.

ಇತ್ತ ಶಾಲಿವಾಹನ ಶಕ ೧೫೮೦ ನೆಯ ವಿಳಂಬಿನಾಮ ಸಂವತ್ಸರದ ಚೈತ್ರ ಶುದ್ಧ ೨ ಯಲ್ಲು ಹಳೆಬೀಡ ಕಲ್ಲುಮಠದ ಚನ್ನವೀರಯ್ಯನನ್ನು ಆ ಊರ ಹಿರೇಮಠದ ರುದ್ರದೇವರು ಮುಂತಾದ ಕೆಲವು ದೇವಭಕ್ತರು ಕರೆದುಕೊಂಡು ಚಿತ್ರಕಲ್ಲದುರ್ಗದ ಮಠಕ್ಕೆ ಬಂದು ಮ|| ರಾ|| ಗುರುಸಿದ್ಧಸ್ವಾಮಿಗಳಿಗೆ ಸಾಷ್ಟಾಂಗ ಪ್ರಣುತರಾಗಿ ಕಲ್ಲುಮಠದ ಕಲ್ಯಾಣಯ್ಯನ ಮಗ ಚನ್ನಚೀರಯ್ಯನ ಕಡೆಯಿಂದ ೫ ನೂರು ವರಹ ಪಾದಕಾಣಿಕೆ ಇಡಿಸಿ ಈ ಚನ್ನವೀರಯ್ಯನ ಶಿವಾಚಾರ ಬಳಕೆಯಲ್ಲಿ ತೆಗೆದುಕೊಂಡು ಸ್ವಾಮಿ ಪಾದವು ಉದ್ಧಾರ ಮಾಡಬೇಕೆಂದು ಬಹು ಬಗೆಯಿಂದ ರುದ್ರದೇವರು ಮುಂತಾದ ಸಕಲರೂ ಹೇಳಿಕೊಂಡಿದ್ದರಿಂದ ರಾ|| ಸ್ವಾಮಿಗಳವರು ಆ ಚನ್ನವೀರಯ್ಯನ ಸೇವೆ ಉಳ್ಳವರಾದ ಕಾರಣ ಹಳೆಬೀಡು ಮುಂತಾದ ಆ ಸೀಮೆಯ ದೇವ ಭಕ್ತರ ಸಮ್ಮತವಿಲ್ಲದೆ ತಮ್ಮ ಬಲದಿಂದ ಸದರಿ ಚನ್ನವೀರಯ್ಯನನ್ನು ಶಿವಾಚಾರ ಬಳಕೆಯಲ್ಲಿ ದ್ರವ್ಯಾಪೇಕ್ಷೆಯಿಂದ ರಾ|| ಗುರುಸಿದ್ಧ ಸ್ವಾಮಿಗಳು ತೆಗೆದುಕೊಂಡು ಆ ಮೇಲೆ ಹಳೆಬೀಡು ಮುಂತಾದ ಆ ಸೀಮೆಯ ದೇವ ಭಕ್ತರಿಗೆ ಸದರಿ ಚನ್ನವೀರಯ್ಯನ ಬಳಕೆ ಮಾಡುವಂತೆ ಶುದ್ಧ ನಿರೂಪುಗಳನ್ನು ಕೊಟ್ಟು ಹಳೆಬೀಡ ದೈವದವರ ಕಳುಹಿಸಿಕೊಟ್ಟರು. ಇತ್ತ ದುರ್ಗದ ಸನ್ನಿಧಿ ಅಪ್ಪಣೆ ಪ್ರಕಾರ ಹಳೆಬೀಡ ಹಿರೇಮಠದ ರುದ್ರದೇವರು ಸದರಿ ಚನ್ನವೀರಯ್ಯನ ದೆಸೆಯಿಂದ ಕೊಟ್ಟ ಶುದ್ಧ ನಿರೂಪುಗಳನ್ನು ಹಳೆಬೀಡ ಮುಂತಾದ ಸಿಂಹಾಸನ ವಗೈರೆ ಆ ಸೀಮೆಯ ದೇವ ಭಕ್ತರುಗಳಿಗೆ ಕೊಡಲು ಅವರು ಚನ್ನವೀರಯ್ಯ ಮುಂತಾದ ಅವನ ಬಳಕೆ ಮಾಡಿದ ಸಕಲ ದೇವ ಭಕ್ತರುಗಳ ಬಳಕೆಗೂ ರಾ|| ಚಿತ್ರಕಲ್ಲ ದುರ್ಗದ ಸ್ವಾಮಿಗಳವರ

ಬಳಕೆಗೂ ಸಹ ಒಪ್ಪಿದೆ ಇರುವ ರಾ|| ಬಾಳೆಹಳ್ಳಿ ಸಿಂಹಾಸನದ ಎಂಟು ಜಡೆಯ ಸೋಮಶೇಖರ ಸ್ವಾಮಿಗಳು, ಪುಷ್ಪಗಿರಿ ಪಟ್ಟದದೇವರು, ಹಳೆ ಬೀಡ ಚನ್ನಪ್ಪಸೆಟ್ಟರು, ಮುಂತಾದ ಆ ಸೀಮೆಯ ಗೌಡಾಧ್ಯರು ನಾಡಿ ಗರು ಶಾನುಭೋಗರು ನಾಡಿಗರು ದೇಸಾಯಿಗಳು ಆದ ಸಮಸ್ತ ದೇವ ಭಕ್ತರು ಸದರಿ ಹೊಲೆ ಬಳಕೆವುಳ್ಳ ಚನ್ನವೀರನ ಬಳಕೆ ಮಾಡಿ ದವರು ಭಕ್ತರೇ ಆಗಲಿ ಗಣಂಗಳೇ ಆಗಲಿ ಆವರ ಬಳಕೆ ದೂರ ಮಾಡಿ ಅವರು ಚಿತ್ರಕಲ್ಲದುರ್ಗದ ಸನ್ನಿಧಾನದಿಂದ ಸದರಿ ಚನ್ನವೀರನ ಬಳಕೆ ಬಗ್ಯೆ ತಂದ ಶುದ್ಧ ನಿರೂಪಸ್ನು ಹಿಡಿಯಡೆ ಹಿಂದಕ್ಕೆ ಕೊಟ್ಟು ಇವರು ನಿರೂಪು ತಂದ ಹಳೆಬೀಡ ಹಿರೇಮಠದ ರುದ್ರದೇವರು ಮುಂತಾದ ಸಮ ಸ್ತರಿಗೆ ಹೇಳಿದ್ದು ಏನೆಂದರೆ ಸದರಿ ಚನ್ನವೀರನ ಆಜ್ಜ ಬಸವದೇವ ರಿಗೆ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳು ನೋಡ ಸಿದ್ಧಲಿಂಗಸ್ವಾಮಿಗಳು ಹಳೆಬೀಡಲ್ಲಿ ಇರುವ ವಿರಕ್ತಮಠದಲ್ಲಿ ಮೂರು ತಿಂಗಳು ಇದ್ದು ಕಲ್ಯಾ ಣಿಯ ಪೂರ್ವೋತ್ತರವ ವಿಚಾರಿಸಿದಲ್ಲಿ ಅವನ ಬಳಕೆ ಸ್ಥೂಲವಾಗಿ ಕಂಡದ್ದ ರಿಂದ ನಿನ್ನ ಮಗನನ್ನು ಬಿಟ್ಟು ಬೇರೆ ಮರಿಯ ತಂದು ಪಟ್ಟಮಾಡಿಕೋ ಎಂತ ಅಪ್ಪಣೆ ಕೊಡಲು ಕೇಳದೆ ಸದರಿ ಬಸವದೇವರು ಹೊಲೆ ಬಳಕೆ ವುಳ್ಳ ತನ್ನ ಮಗ ಕಲ್ಯಾಣಿ ತಮ್ಮ ಬಳಕೆಯಲ್ಲಿ ಕೂಡಿಕೊಂಡ ಬಳಿಕ ಆ ಕಲ್ಯಾಣಿ ಹುಡುಗ ಮಾದಿಗಿತ್ತಿ ಸಂಗ ಬಿಡದೆ ಸತ್ತನು. ಇವನು ಕೆಟ್ಟು ಹೊಲೆ ಬಳಕೆಯಲ್ಲಿ ಕೂಡಿದ ಬಳಿಕ ಹುಟ್ಟಿದ ಚನ್ನವೀರನ ಕೂಡುವರೆ ಆಗದು ಎಂದು ಹಿಂದೆ ಸದರಿಯವರ ಬಳಕೆ ಬಿಡಿಸಿದ ಬಳಿಕ ಅದೇ ರೀತಿಯಲ್ಲಿಯೇ ರಾ॥ ಮುರುಗಾಸ್ವಾಮಿಗಳು ರಾ॥ ಕುಮಾರ ಸ್ವಾಮಿಗಳು ರಾ॥ ಕೆಂಪಿನ ಸಿದ್ಧಬಸವಸ್ವಾಮಿಗಳು ಸಹ ಸದರಿ ಚನ್ನ ವೀರನು ಕೆಟ್ಟ ಮೇಲೆ ಹುಟ್ಟಿದ್ದರಿಂದ ಆತನ ಕುಟುಂಬ ಸಹ ಬಳಕೆ ಮಾಡಬಾರದೆಂದು ತೆಗೆದು ಹಾಕಿದವನ ಬಳಕೆ ನೀವು ಮುಂತಾದ ರಾ|| ದುರ್ಗದ ಸ್ವಾಮಿಗಳ ಬಳಕೆ ನಿಮ್ಮ ಬಳಕೆ ಮಾಡಿದವರ ಬಳಕೆ ಸಹ ಮಾಡಲಿಕ್ಕೆ ಇಲ್ಲವೆಂದು ಶಪಥ ಮಾಡಿಕೊಂಡು ಕಳುಹಿಸಲು, ಇತ್ತ ಆ ಸೀಮೆಗಳಲ್ಲಿ ಈ ಬಳಕೆ ವಿಷಯದಲ್ಲಿ ಹೆಣ್ಣು ಗಂಡು ಸಹ ಕಟ್ಟಾ ಗಲು ಈ ವರ್ತಮಾನವನ್ನು ಸದರಿ ರುದ್ರದೇವರು ರಾ|| ಚಿತ್ರಕಲ್ಲದು ರ್ಗದ ಸನ್ನಿಧಾನಕ್ಕೆ ಬಿನ್ನಹ ಪತ್ರದಲ್ಲಿ ಬರೆಯಿಸಿ ಅದೇ ಪತ್ರದಲ್ಲಿಯೇ ಹಳೇಬೀಡ ಮುಂತಾದ ಈ ಸೀಮೆಗಳಲ್ಲಿ ಮುಂದೆ ಈ ಬಳಕೆಯು ದೆಸೆ ಯಿಂದ ಎರಡು ನಿಟ್ಟು ಆಗಲು ಈ ಬಳಕೆಗೆ ಒಪ್ಪಿದವರು ತಾವು ಹಿಂದೆ

ಗುರುಗಳು ತೆಗೆದುಹಾಕಿ ಬಹಿಷ್ಕಾರದಲ್ಲಿ ಇದ್ದ ಹೊಲೆ ಬಳಕೆವುಳ್ಳ ಹಳೆ ಬೀಡ ಕಲ್ಲುಮಠದವರ ವಿಚಾರವಿಲ್ಲದೆ ಹ್ಯಾಗೆ ಬಳಕೆಯಲ್ಲಿ ತೆಗೆದುಕೊಂಡರು? ಇದರ ವಿಚಾರವು ಆಗುವ ತನಕ ನಿಮ್ಮ ಬಳಕೆ ಮಾಡಲಿಕ್ಕಿಲ್ಲವೆಂದು ಹೇಳುತ್ತಾರೆ. ಇದರ ವಿಷಯದಲ್ಲಿ ಸ್ವಾಮಿಪಾದವು ಸ್ವಾದೆ ಸೀಮೆ ಇಸಳೂರಲ್ಲಿ ಇರುವ ರಾ|| ಕುಮಾರ ಕೆಂಪಿನ ಸಿದ್ಧಬಸವಸ್ವಾಮಿಗಳವರ ಕರೆಯಿಸಿಕೊಂಡು ನೀವು ನೀವು ಸೌಖ್ಯವಾಗಿ ಇರಬೇಕು. ಕಾರಣವೇನೆಂದರೆ ತಾವು ಶಿಖಾಪಟ್ಟದವರು ಅವರು ಶಿವಾನುಭಾವ ಚರಂತಿಗೆ ಪಟ್ಟದವರು ಇದ್ದು ನೀವು ಉಭಯರು ಚಿನ್ಮೂಲಾದ್ರಿ ಶೂನ್ಯ ಸಿಂಹಾಸನಕ್ಕೆ ಬಾಧ್ಯರು ಇದ್ದು ಅವರನ್ನು ಬಿಟ್ಟರೆ ಮುಂದೆ ನಿಮ್ಮೊಳಗೆ ಕಲಹಗಳು ಉಂಟಾಗಿ ತಮ್ಮ ದುರ್ಗದ ಮಠದಲ್ಲಿ ಭೇದವಾಗಿ ಹೋದೀತು. ಈಗ ಈ ಸೀಮೆಗಳಲ್ಲಿ ತಾವು ಮಾಡಿದ ಹಳೆ ಬೀಡ ಕಲ್ಲುಮಠದ ಚನ್ನವೀರನ ಬಳಕೆಗೆ ಒಪ್ಪಿಕೊಳ್ಳದ ಜನರು ರಾ|| ಇಸಳೂರಲ್ಲಿ ಇರುವ ಸನ್ನಿಧಾನಕ್ಕೆ ಬಿನ್ನಹಪತ್ರವ ಬರೆಯಿಸಿ ಕಳುಹಿಸಿ ಕರೆಯಿಸಿಕೊಳ್ಳುವಂತೆ ಕಾಣಿಸುತ್ತದೆ. ಎಂತ ರಾ|| ಚಿತ್ರದುರ್ಗದ ಸನ್ನಿಧಾನಕ್ಕೆ ಈ ಪ್ರಕಾರ ಬಿನ್ನಹಪತ್ರ ಬರೆಯಿಸಿ ಸದರಿ ರುದ್ರದೇವರು ಕಳುಹಿಸಿ ಕೊಡಲು ಈ ಪತ್ರವ ರಾ|| ಗುರುಸಿದ್ಧಸ್ವಾಮಿಗಳವರು ನೋಡಿಕೊಂಡು ದುರ್ಗದ ದೊರೆ ಮುಂತಾದ ದೇವ ಭಕ್ತರಿಗೆ ತೋರಿಸಿದಲ್ಲಿ ಅವರು ಆ ಪತ್ರದಲ್ಲಿ ಇದ್ದ ಪ್ರಕಾರ ಸನ್ನಿಧಾನದ ಅಪ್ಪಣೆ ಮೇರೆಗೆ ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರ ಸನ್ನಿಧಾನವನ್ನು ರಾ|| ಚಿತ್ರಕಲ್ಲದುರ್ಗಕ್ಕೆ ಕರಕೊಂಡು ಬಂದು ಉಭಯ ಸನ್ನಿಧಾನವನ್ನು ಕೂಡಿಸಿ ಮುಂದೆ ಉಭಯ ಸ್ವಾಮಿಗಳವರು ಈ ಮಠದ ಕಾರ್ಯಗಳನ್ನು ಚನ್ನಾಗಿ ಸಾಗಿಸಿಕೊಂಡು ಹೋಗುವಂತೆ ಮಾಡಿ ಕೀರ್ತಿಯನ್ನು ತೆಗೆದುಕೊಳ್ಳಬೇಕೆಂದು ಸ್ವಾದೆ ದೊರೆಗಳು ಸಿರಸಿ ಇಸಳೂರ ಮುಂತಾದ ದೇವ ಭಕ್ತರಿಗೆ ಚಿತ್ರಕಲ್ಲದುರ್ಗದ ದೊರೆಗಳು ಮುಂತಾದ ದೈವದವರು ಪತ್ರವ ಬರೆಯಿಸಿ ರಾ|| ಚಿತ್ರಕಲ್ಲದುರ್ಗದ ಸ್ವಾಮಿಗಳವರು ಸಹ ಆಶೀರ್ವಾದ ನಿರೂಪುಗಳನ್ನು ಬರೆಯಿಸಿ ಸ್ವಾದೆ ಇಸಳೂರ ಸಿರಸಿಗೆ ಕಳುಹಿಸಲು ಈ ಪತ್ರಗಳನ್ನು ರಾ|| ಸ್ವಾದೆ ದೊರೆಗಳು ಮೊದಲಾದ ಇಸಳೂರು ಸಿರಸಿ ದೈವದವರು ನೋಡಿಕೊಂಡು ಸಂತೋಷಿತರಾಗಿ ದೊರೆಗಳು ಮುಂತಾದ ದೇವ ಭಕ್ತರು ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣುತರಾಗಿ ಆ ಬಳಿಕ ರಾ|| ಚಿತ್ರಕಲ್ಲ

ದುರ್ಗದ ಸನ್ನಿಧಾನವು ಚಿತ್ರಕಲ್ಲದುರ್ಗದ ದೊರೆಗಳು ಮುಂತಾದ ದೇವ ಭಕ್ತರು ಸಹವಾಗಿ ತಮ್ಮ ಗಣಸಮೂಹ ಸಹಿತವಾಗಿ ತಮ್ಮ ಸನ್ನಿಧಾನ ವನ್ನು ಚಿತ್ರಕಲ್ಲದುರ್ಗಕ್ಕೆ ಕರೆದುಕೊಂಡು ಬಂದು ತಮ್ಮ ಉಭಯ ಸ್ವಾಮಿಗಳವರನ್ನು ಕೂಡಿಸಿ ಹಿಂದೆ ನಿಮ್ಮ ಉಭಯರ ಗುರುಗಳಾದ ರಾ॥ ಮುರುಗಾಸ್ವಾಮಿಗಳೂ ಕುಮಾರಸ್ವಾಮಿಗಳೂ ಕೂಡಿ ಇದ್ದು ಕೊಂಡು ಆ ಮಠದ ಅಧಿಕಾರವನ್ನು ನಡೆಸಿಕೊಂಡು ಇದ್ದ ಪ್ರಕಾರ ತಾವೂ ರಾ॥ ಗುರುಸಿದ್ಧಸ್ವಾಮಿಗಳೂ ಕೂಡಿಕೊಂಡು ಆ ದುರ್ಗದ ಮಠ ವನ್ನು ಉದ್ಧಾರ ಮಾಡಿಕೊಂಡು ಇರಬೇಕೆಂದು ಬರಸಿದ ಪ್ರಕಾರವ ಸಮಸ್ತರೂ ಅರಿಕೆ ಮಾಡಿಕೊಳ್ಳಲು,

ಅದಕ್ಕೆ ಸ್ವಾಮಿಗಳ ಅಪ್ಪಣೆ ಆದದ್ದು:—

ನೀವು ಹೇಳುವದು ಸಮ್ಮತವು, ಆದರೆ ಹಿಂದೆ ಗುರುಹಿರಿಯರು ತೆಗೆದು ಹಾಕಿದ ಹಳೆಬೀಡ ಕಲ್ಲುಮಠದ ಕಲ್ಯಾಣಿ ಕೆಟ್ಟ ಮೇಲೆ ಅವನಿಗೆ ಹುಟ್ಟಿದ ಚನ್ನವೀರನು ಅಯ್ಯಾಚಾರಕ್ಕೆ ಸಲ್ಲ, ಭಕ್ತರೊಳಗೆ ಅಲ್ಲ, ಶಿವಾಚಾರ ದಲ್ಲಿ ಬರಲಾರನೆಂದು ತೆಗೆದುಹಾಕಿ ಇದ್ದು ರಾ॥ ಗುರುಸಿದ್ಧಸ್ವಾಮಿಗಳು ತಮ್ಮ ಪೂರ್ವದ ಸೇಪಿನಿಂದಲೂ ಹಾಗೂ ದ್ರವ್ಯಾಪೇಕ್ಷೆಯಿಂದಲೂ ಸದರಿ ಚನ್ನವೀರನನು ಬಳಕೆಯಲ್ಲಿ ತೆಗೆದುಕೊಂಡು ಇದ್ದಾರೆ. ಅವರ ಬಳಕೆ ಆಚರಣೆಯಲ್ಲಿ ಕೂಡುವದು ಹೇಗೆ? ಇದರ ಶಿವಾಯಿ ನಮ್ಮ ಗುರುಗ ಳಾದ ರಾ॥ ಕುಮಾರಸ್ವಾಮಿಗಳು ನಮಗೆ ಅಧಿಕಾರ ಕೊಡುವಾಗ್ಯೆ ಮುಂದೆ ರಾ॥ ದುರ್ಗದ ಸ್ವಾಮಿಗಳವರು ತಮ್ಮ ಸೇಪು ಹಿಡಿದು ಕಲ್ಯಾಣಿ ಯ ಮಗ ಚನ್ನವೀರನ ಬಳಕೆಯಲ್ಲಿ ತೆಗೆದುಕೊಂಡಾರು, ಅವರು ಆ ಬಳಕೆ ಬಿಟ್ಟರೆ ಕೂಡುವದು, ಇಲ್ಲವೆ ಆಗದು, ಎಂದು ಅಪ್ಪಣೆ ಕೊಟ್ಟು ಇದ್ದಾರೆ. ಅದಕ್ಕೆ ತಪ್ಪುವದು ಇಲ್ಲವೆಂದು ಅಪ್ಪಣೆ ಆಗಲು

ಅದಕ್ಕೆ ಸ್ವಾದಿ (ಸೋದೆ) ದೊರೆಗಳು ಮೊದಲಾದ ದೇವ ಭಕ್ತರು ಅರಿಕೆ ಮಾಡಿಕೊಂಡದ್ದು,

ಹಿರಿಯರಾದ ಗುರುಗಳು ತೆಗೆದುಹಾಕಿದ್ದು ತೆಗೆದುಕೊಳ್ಳಬಾ ರದು, ಅಥವಾ ಆ ಬಳಕೆ ಕೂಡಿಕೊಂಡದ್ದು ಬಿಡದೆ ಹೋದರೆ ಆ ಸ್ವಾಮಿಗಳ ಆಚರಣೆ ನಮಗೂ ಸಮ್ಮತವಿಲ್ಲ. ಈಗ ಅವರು ನಮ್ಮ ಸರ್ವ ರಿಗೆ ಆಶೀರ್ವಾದ ನಿರೂಪು ಕಳುಹಿಸಿದ ಪ್ರಕಾರ ಇಲ್ಲಿಯ ಸಿರಸಿ ಇಸ ಳೂರ ದೇವ ಭಕ್ತರ ಕರೆದುಕೊಂಡು ತಮ್ಮ ೭೨ ಬಿರುದುಗಳೊಡನೆ ಗಣಂಗಳು ಸಮೇತವಾಗಿ ರಾ॥ ದುರ್ಗದ ಸನ್ನಿಧಾನಕ್ಕೆ ಚಿತ್ತಯಿಸಿದಲ್ಲಿ

ಆ ಸ್ವಾಮಿಗಳು ಹಳೆಬೀಡ ಬಳಕೆ ಬಿಟ್ಟರೆ ಕೂಡುವದು, ಇಲ್ಲವೇ ಬಿಡು ವದು, ಎಂದು ಸ್ವಾದಿ ದೊರೆಗಳು ಅರಿಕೆ ಮಾಡಿಕೊಂಡು ರಾ|| ಕೆಂಪಿನ ಸಿದ್ಧಬಸವರಾಜೇಂದ್ರ ಸ್ವಾಮಿಗಳವರನ್ನು ಚಿತ್ರಕಲ್ಲದುರ್ಗದ ಸನ್ನಿಧಿಗೆ ಕಳುಹಿಸಲು

ಅಲ್ಲಿಗೆ ದಯಮಾಡಿಸಿ ರಾ|| ಗುರುಸಿದ್ಧಸ್ವಾಮಿಗಳವರ ದರ್ಶನವಾಗಲು ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರಿಗೆ ರಾ|| ಗುರು ಸಿದ್ಧಸ್ವಾಮಿಗಳವರು ತಮ್ಮ ಖಾಸ ಪಂಕ್ತಿಗೆ ಸಮಸ್ತ ಗಣಸಮೂಹ ದೊಡನೆ ಬರುವಂತೆ ಅಪ್ಪಣೆಯನ್ನು ಕೊಟ್ಟು ಬಿನ್ನಹವನ್ನು ಮಾಡಿಸಲು, ಅದಕ್ಕೆ ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರು ಹೇಳಿದ್ದು:— ತಾವು ಹಳೆಬೀಡ ಕಲ್ಲುಮಠದ ಹೊಲೆ ಬಳಕೆವುಳ್ಳ ಕಲ್ಯಾಣಿ ಹುಡುಗನು ಕಟ್ಟ ಮೇಲೆ ಹುಟ್ಟಿದ ಚನ್ನವೀರನ ಕೂಡುವರೆ ಆಗದು. ಅವನ ಬಳಕೆ ಬಿಟ್ಟರೆ ತಮ್ಮ ಖಾಸ ಪಂಕ್ತಿಗೆ ಬರುವೆವು, ಇಲ್ಲವೆ ಬರುವದಿಲ್ಲನೆಂದು ಹೇಳಲು,

ಈ ಮಾತಿಗೆ ಚಿತ್ರದುರ್ಗದ ದೊರೆಗಳು ಮೊದಲಾದ ದೇವ ಭಕ್ತರು ರಾ|| ಗುರುಸಿದ್ಧಸ್ವಾಮಿಗಳವರ ಪಕ್ಷವಿಡಿದು ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರಿಗೆ ಹೇಳಿದ ಮಾತು :—

ತಾವು ಉಭಯ ಸ್ವಾಮಿಗಳವರು ದೊಡ್ಡವರಾದ್ದರಿಂದ ಯಾವದಾ ದರೂ ಹಿಡಿಯಬೇಕಾದರೆ ವಿಚಾರ ಮಾಡಿ ಹಿಡಿದು ತೆಗೆದುಕೊಳ್ಳಬೇಕು. ಹಾಗಿಲ್ಲದೆ ತೆಗೆದುಕೊಂಡ ಮೇಲೆ ಅದು ಸ್ಥೂಲವೇ ಆಗಲಿ, ಅಥವಾ ಸೂಕ್ಷ್ಮವೇ ಆಗಲಿ, ತೆಗೆದುಕೊಂಡ ಬಳಿಕ ಬಿಡುವದಕ್ಕೆ ಬರುವದಿಲ್ಲ. ಬಿಟ್ಟರೆ ದೊಡ್ಡವರು ತೆಗೆದುಕೊಂಡು ಬಿಟ್ಟರಂತೆ, ಎಂಬುವದಾಗಿ ಲೋಕ ದಲ್ಲಿ ಹೆಚ್ಚಿನ ದುರಪವಾದವು ಬರುತ್ತದೆ, ಕಾರಣ ಆ ಬಳಕೆ ರಾ|| ಗುರುಸಿದ್ಧಸ್ವಾಮಿಗಳು ತೆಗೆದುಕೊಂಡ ಮೇಲೆ ನೀವೇ ತೆಗೆದು ಕೊಂಡ ಹಾಗೆ ಆಯಿತು. ನೀವು ಉಭಯ ಸ್ವಾಮಿಗಳೂ ಒಂದಾದರೆ ಯಾವದಾದರೂ ಒಳಬೀಳುತ್ತದೆ. ಆದುವರಿಂದ ನೀವು ಉಭಯ ಸ್ವಾಮಿಗಳವರು ನಮ್ಮ ಬಿನ್ನಹ ಒಪ್ಪಿಕೊಂಡು ನಮ್ಮ ಸರ್ವರ ಮನಸ್ಸು ಸಂತೋಷ ಮಾಡಬೇಕು.

ಎಂದು ಅಲ್ಲಿ ಇರುವ ಗುರು ಚರಮೂರ್ತಿಗಳು ಸಹ ಬಹು ಬಗೆ ಯಿಂದ ಹೇಳಿಕೊಳ್ಳಲು ಆ ಮಾತು ಅಲ್ಲಿ ವಿಚಾರವಿಲ್ಲದ್ದರಿಂದ ಈ ಆಚಾರ ಸಂಬಂಧವ ಕಾಗದ ಪತ್ರಗಳ ಸಹ ನೋಡದೆ ಇರುವದರಿಂದ

ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರು ರಾ|| ಗುರುಸಿದ್ಧಸ್ವಾಮಿಗಳವರ ಪಂಕ್ತಿ ಪಾದಾರ್ಜನೆ ಸಹ ಮಾಡದೆ ಅವರ ಆಚರಣೆಯು ಮಾಡಲಿಕ್ಕಿಲ್ಲ ವೆಂದು ಪ್ರತಿಜ್ಞೆ ಮಾಡಿಕೊಂಡು ದುರ್ಗದ ದೊರೆಗಳು ಮುಂತಾದ ದೇವ ಭಕ್ತರೂ ರಾ|| ಗುರುಸಿದ್ಧಸ್ವಾಮಿಗಳೂ ಸಹ ಹಳೆಬೀಡ ಬಳಕೆ ಬಿಡದೆ ಇರುವವರಿಂದ ಅವರ ಬಿನ್ನಹವನ್ನು ಒಪ್ಪಿಕೊಳ್ಳದೆ ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರು ಚಿತ್ರದುರ್ಗದಿಂದ ಸ್ವಾದಿ ಸೀಮೆ ಇಸಳೂ ರಿಗೆ ದಯಮಾಡಿಸಿ ಅಲ್ಲಿಗೆ ಸ್ವಾದಿ ದೊರೆಗಳು ಮೊದಲಾದ ಆ ಸೀಮೆ ಯ ದೇವಭಕ್ತರ ಕರಸಿಕೊಂಡು ಅವರಿಗೆ ಹಳೆಬೀಡ ಬಳಕೆ ರಾ|| ಚಿತ್ರ ಕಲ್ಲದುರ್ಗದ ಗುರುಸಿದ್ದ ಸ್ವಾಮಿಗಳು ಬಿಡಲಿಲ್ಲ, ನೀವು ಸಮ ಸ್ತರೂ ಅವರ ಆಚರಣೆಯಲ್ಲಿ ಇರುವವರೇ? ಅಥವಾ ನಮ್ಮ ಆಚರಣೆ ಯಲ್ಲಿ ಇರುವವರೇ? ನೀವು ರಾಜರು ಗೊತ್ತಿನವರಲ್ಲ, ಅಥವಾ ನೀವು ನಮ್ಮನ್ನು ಬಿಟ್ಟರೆ ನಮ್ಮ ಅನುಗ್ರಹ ಪಾತ್ರರಾದ ನಗರದ ದೊರೆಗಳ ಮಾವನವರಾದ ಮರಿಯಪ್ಪಸೆಟ್ಟರು ಆ ದೊರೆಗಳವರ ಸಿಸಬತ್‌ದಾರನಾದ ಜಡೇದ ಠಾಣೇದ ಗುರುಲಿಂಗಪ್ಪಗೌಡರು, ಹುಬ್ಬಳ್ಳಿ ಬಸವಪ್ಪಸೆಟ್ಟರು ಮುಂತಾದ ಅನೇಕ ಭಕ್ತರುಗಳು ಇದ್ದ ಸ್ಥಲಗಳು ಇದ್ದಾವೆ, ಅಲ್ಲಿಗೆ ನಮ್ಮ ಗಣ ಸಮೂಹ ಸಹಿತವಾಗಿ ದಯಮಾಡಿಸು ತ್ತೇವೆ, ಎಂದು ಅಪ್ಪಣೆ ಆಗಲು

ಇದ ಕೇಳಿ ದೊರೆಗಳು ಮುಂತಾದ ಸಮಸ್ತರೂ ಸಾಷ್ಟಾಂಗ ಪ್ರಣುತರಾಗಿ ಸ್ವಾಮಿಯ ಪಾದದ ಅಪ್ಪಣೆ ಪ್ರಕಾರ ರಾ|| ದುರ್ಗದ ಸ್ವಾಮಿಗಳವರು ಹಳೆಬೀಡ ಹೊಲೆ ಬಳಕೆ ಬಿಡದ ಕಾರಣ ಅವರ ಮತ್ತು ಅವರ ಸೂತ್ರಿಕರಾದ ಗುರುಚರಮೂರ್ತಿಗಳ ಆಚರಣೆ ಸಹ ಮಾಡಲಿಕ್ಕಿಲ್ಲವೆಂದು ಸಾಷ್ಟಾಂಗವನ್ನು ಹಾಕಿ ಸ್ವಾಮಿಗಳವರನ್ನು ತಮ್ಮ ಭಕ್ತಿಯಲ್ಲಿ ಸ್ವಾದಿ ಇಸಳೂರ ಸ್ಥಲಗಳಲ್ಲಿ ಪೂಜಾ ಉತ್ಸವಗಳಿಂದ ಲಿಂಗಪೂಜಾ ಜಂಗಮ ದಾಸೋಹಗಳೊಡನೆ ಇಟ್ಟುಕೊಂಡರು.

ಆಮೇಲೆ ರಾ|| ಗುರುಸಿದ್ಧಸ್ವಾಮಿಗಳವರು ಸ್ಥೂಲವಾದ ಹಳೆಬೀಡ ಕಲ್ಲು ಮಠದ ಬಳಕೆ ಬಿಡದ ಕಾರಣ ಇವರ ಆಚರಣೆಗೆ ದುರ್ಗದ ಸನ್ನಿಧಾನದಲ್ಲಿ ಇದ್ದ ರಾ|| ಈ ಕೆಂಪಿನ ಸಿದ್ಧಬಸವಸ್ವಾಮಿಗಳವರ ಗುರುಗಳಾದ ರಾ|| ಕುಮಾ ರಸ್ವಾಮಿಗಳವರೂ ಇವರ ಗುರುಗಳಾದ ರಾ|| ನೋಡ ಸಿದ್ಧಲಿಂಗಸ್ವಾಮಿ ಗಳವರೂ ಈ ಉಭಯ ಸ್ವಾಮಿಗಳವರು ಚರಂತಿಗೆ ಕೊಟ್ಟ ಬುಡಕ ಟ್ಟಿನ ಚರಮೂರ್ತಿಗಳು ಮೊದಲಾದ ಇವರ ಸೂತ್ರಿಕರಾದ ಚರಮೂ

ರ್ತಿಗಳೂ ವಿರಕ್ತರೂ ಸಹ ಒಪ್ಪದೆ ಈ ಕೆಂಪಿನ ಸಿದ್ಧಬಸವಸ್ವಾಮಿಗಳ್ಳ ವರು ಸವರಿ ಬಳಿಕೆ ಗುರುಸಿದ್ಧಸ್ವಾಮಿಗಳವರು ಬಿಡದೆ ಇರುವದರಿಂದ ಬೇಸರದಿಂದ ಚಿತ್ರಕಲ್ಲದುರ್ಗದ ಮಠವನ್ನು ಬಿಟ್ಟು ಇಸಳೂರಿಗೆ ಬರುವಾಗ್ಯೆ ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರ ಆಚರಣೆಗೆ ಒಪ್ಪಿಕೊಂಡು ಇವರ ಸಂಗಡ ಚಿತ್ರಕಲ್ಲದುರ್ಗದಿಂದ ಬಂದ ಬುಡಕಟ್ಟಿನ ಚರಮೂರ್ತಿಗಳು ವಿರಕ್ತರು ಇವರ ವಿವರವು :—

ರಾ|| ನೋಡ ಸಿದ್ಧಲಿಂಗಸ್ವಾಮಿಗಳವರ ಸಂಬಂಧದ ಚರಮೂರ್ತಿಗಳು ವಿರಕ್ತರು ಯಾರು ಅಂದರೆ ನೋಡ ಬುಡಕಟ್ಟಿನ ಶಾಂತವೀರಪ್ಪನವರ ಬಗೆ ಚರಮೂರ್ತಿಗಳು ೧೫, ಉದ್ಧರಣೆ ಶಾಂತಯ್ಯನವರು ಇವರ ಬಗೆ ಚರಮೂರ್ತಿಗಳು ೧೦, ಆರಮನೆ ಗುರುಶಾಂತಯ್ಯನವರು ಇವರ ಬಗೆ ಚರಮೂರ್ತಿಗಳು ೨, ಮೂರುಸಾವಿರದ ಬುಡಕಟ್ಟಿನ ಚನ್ನವೀರಪ್ಪನವರ ಬಗೆ ಚರಮೂರ್ತಿಗಳು ೧೫, ಸಾವಳಿಗೆ ಬುಡಕಟ್ಟಿನ ಚರಮೂರ್ತಿಗಳಾದ ಬಸವಲಿಂಗಪ್ಪನವರ ಬಗೆ ಚರಮೂರ್ತಿಗಳು ೫, ಕಲುಬುರಿಗಿ ಬುಡಕಟ್ಟಿನ ರೇವಣಸಿದ್ಧಪ್ಪನವರ ಬಗೆ ಚರಮೂರ್ತಿಗಳು ೧೫, ಟೀಕಿನ ಬುಡಕಟ್ಟಿನ ಕದಿರೆ ಬಸವಪ್ಪನವರ ಬಗೆ ಚರಮೂರ್ತಿಗಳು ೮, ಕೆಂಪಿನ ಬುಡಕಟ್ಟಿನ ಶಿವಲಿಂಗಪ್ಪನವರ ಬಗೆ ಚರಮೂರ್ತಿಗಳು ೫, ಕಗ್ಗೇರಿ ಬುಡಕಟ್ಟಿನ ಚನ್ನನಂಜಯ್ಯನವರ ಬಗೆ ಚರಮೂರ್ತಿಗಳು ೮, ಹುಕ್ಕೇರಿ ಬುಡಕಟ್ಟಿನ ಬಡ ಗುರುಸಿದ್ಧಪ್ಪನವರ ಬಗೆ ಚರಮೂರ್ತಿಗಳು ೫, ಸಿದ್ಧಗಂಗಾ ಬುಡಕಟ್ಟಿನ ಸಿದ್ಧಲಿಂಗಪ್ಪನವರ ಬಗೆ ಚರಮೂರ್ತಿಗಳು ೫, ಸಿಗ್ಗಾವಿ ಸಂಗನಬಸಪ್ಪನವರು, ಬೊಮ್ಮನಹಳ್ಳಿ ಪರದೇಶಿ ಬುಡಕಟ್ಟಿನ ಚನ್ನಬಸವಪ್ಪನವರು, ವಿರೂಪಾಕ್ಷಪ್ಪನವರು, ಮುಂತಾದ ನೂರು ವಿರಕ್ತ ಮೂರ್ತಿಗಳು, ಸದರಿ ರಾ|| ನೋಡ ಸಿದ್ಧಲಿಂಗ ದೇಶಿಕೇಂದ್ರರ ಶಿವಾನುಭಾವ ಚರಂತಿಗೆ ಪಟ್ಟದ ಕುಮಾರಸ್ವಾಮಿಗಳವರ ಸಂಬಂಧದ ಮೂರ್ತಿಗಳು :— ದಾಬಳಿ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ ಚರಮೂರ್ತಿಗಳು ೫, ಅಷ್ಟಗಿ ಪುರಾಣದ ಶಿವಲಿಂಗಪ್ಪನವರ ಬುಡಕಟ್ಟಿನ ಚರಮೂರ್ತಿಗಳು ೬, ವಾಚ್ಯದ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ ಚರಮೂರ್ತಿಗಳು ೧೦, ಶಿವಮ್ಮೋಹಿ ಬುಡಕಟ್ಟಿನ ಸಿದ್ಧರಾಮಪ್ಪನವರ ಬಗೆ ಚರಮೂರ್ತಿಗಳು ೬, ಹೊಟ್ಟಿ ಮಹಂತಪ್ಪನವರ ಬಗೆ ಚರಮೂರ್ತಿಗಳು ೫, ಗುಡ್ಡದ ಮಹಂತಪ್ಪನವರ ಬುಡಕಟ್ಟಿನ ಚರಮೂರ್ತಿಗಳು ೮, ಜಮಖಂಡಿ ಬುಡಕಟ್ಟಿನ

ಬಸವಪ್ರಭವಪ್ಪನವರ ಬಗೆ ಚರಮೂರ್ತಿಗಳು ೫, ಕಡಕೊಳ್ಳದ ಬುಡಕಟ್ಟಿನ ಶಾಂತಲಿಂಗಪ್ಪನವರ ಬಗೆ ಚರಮೂರ್ತಿಗಳು ೪, ಗೋಕಾವಿ ಬುಡಕಟ್ಟಿನ ಸಿದ್ಧಲಿಂಗಪ್ಪನವರ ಬಗೆ ಚರಮೂರ್ತಿಗಳು ೬, ಹಳೆ ಹುಬ್ಬಳ್ಳಿ ಗಳಗಿ (ಗಳಿಗೆ?) ರುದ್ರಯ್ಯನವರು ಕಪ್ಪಿನ ನಂಜಯ್ಯನವರು ತಲವೂರ ಬೈತಲೆ ಬಸವಲಿಂಗಪ್ಪನವರು ಮುಂತಾದ ೭೦ ವಿರಕ್ತ ಮೂರ್ತಿಗಳು. ಸದರಿ ರಾ|| ಕುಮಾರಸ್ವಾಮಿಗಳವರ ಕರಕಂಜೋದ್ಭವರಾದ ಶಿವಾನುಭಾವ ಚರಂತಿಗೆ ಪಟ್ಟದ ಕೆಂಪಿನ ಸಿದ್ಧಬಸವಸ್ವಾಮಿಗಳವರು ಚಿತ್ರಕಲ್ಲದುರ್ಗದ ಮಠವನ್ನು ಬಿಟ್ಟು ಈಚೆಗೆ ಸ್ವಾದಿ ಇಸಳೂರ ಮಠದಲ್ಲಿ ೫ ಚರಂತಿಗೆ ಕೊಟ್ಟಿದ್ದರಿಂದ ಇವರ ಸಂಬಂಧದ ಮೂರ್ತಿಗಳ ವಿವರ;—

ಯಕ್ಕುಂಡಿ ಬುಡಕಟ್ಟಿನ ಕೆಂಪಿನ ಶಿವಲಿಂಗಪ್ಪನವರ ಬಗೆ ಚರಮೂರ್ತಿಗಳು ೩, ಹಾರನಹಳ್ಳಿ ನೀಲಲೋಚನಪ್ಪನವರ ಬುಡಕಟ್ಟಿನ ಚರಮೂರ್ತಿಗಳು ೪, ಹಾವಸೇದ ಗುರುಸಿದ್ದಪ್ಪನವರ ಬುಡಕಟ್ಟಿನ ಚರಮೂರ್ತಿಗಳು ೫, ವೃದ್ಧಾಚಲದ ಬುಡಕಟ್ಟಿನ ಕುಮಾರದೇವರ ಬಗೆ ಚರಮೂರ್ತಿಗಳು ೪, ಹಾವೇರಿ ರಾಹುಪುರದ ಜಡೇದ ಚನ್ನವೀರಪ್ಪನವರು ಕೆರವೂರು ಸಂಗನಬಸವಪ್ಪನವರು ಚಚಡಿ ಚನ್ನಬಸವಪ್ಪನವರು ರಾಮನಹಳ್ಳ ಮಾವನೂರ ಮಡಿವಾಳಪ್ಪನವರು ಹಳೆಹುಬ್ಬಳ್ಳಿ ಡಗ್ಗಲಮಠದ ರುದ್ರದೇವರು ಮುಂತಾದ ನೂರಾಐದು ವಿರಕ್ತಮೂರ್ತಿಗಳು, ಈ ಪ್ರಕಾರ ರಾ॥ ನೋಡ ಸಿದ್ಧಲಿಂಗ ಸ್ವಾಮಿಗಳವರಿಂದ ೧೧ ಚರಂತಿಗೆ, ರಾ॥ ಕುಮಾರಸ್ವಾಮಿಗಳವರಿಂದ ೯ ಚರಂತಿಗೆ, ರಾ॥ ಕೆಂಪಿನ ಸಿದ್ಧಬಸವಸ್ವಾಮಿಗಳವರಿಂದ, ೫ ಚರಂತಿಗೆ, ವಟ್ಟು ೨೫ ಚರಂತಿಗೆ ಜಡೇದ ಬುಡಕಟ್ಟಿನಿಂದ ಆದವು. ಈ ೨೫ ಚರಮೂರ್ತಿಗಳೂ ಸದರಿ ಸಮಸ್ತ ವಿರಕ್ತರೂ ಇವರುಗಳಿಂದಲೇ ದೇಶಮಧ್ಯದಲ್ಲಿ ಕುಮಾರಸಮಯದ ಮಠಗಳೂ ಚರಮೂರ್ತಿಗಳೂ ವಿರಕ್ತರೂ ಅನೇಕವಾಗಿ ಕುಮಾರಸಮಯವು ಬೆಳೆಯಿತು.

ನೃಪಶಾಲಿವಾಹನ ಶಕ ೧೫೮೦ ನೆಯ ವಿಳಂಬಿನಾಮ ಸಂವತ್ಸರದಲ್ಲಿ ಚೀಲಾಳಪ್ಪನವರ ಸಂಗಡ ಹೋದ ಬುಡಕಟ್ಟಿನ ಚರಮೂರ್ತಿಗಳು ಗುಳೇದಗುಡ್ಡದಲ್ಲಿ ಇವರೊಳಗೆ ನ್ಯಾಯಬಿದ್ದಾಗ್ಯೆ ಶಾಲಿವಾಹನ ಶಕ ೧೫೯೨ ನೆಯ ಸಾಧಾರಣ ಸಂವತ್ಸರದ ಮಾಘ ಬ॥ ೧೪ ಯಲ್ಲು ರಾ॥ ಕುಮಾರಸ್ವಾಮಿಗಳು ಅನಾದಿ ತೋಂಟದಾರ್ಯಸ್ವಾಮಿಗಳವರು ಕೊಟ್ಟ ಚರಮೂರ್ತಿಗಳ ಚರಂತಿಗೆ ಬುಡಕಟ್ಟಿನ ವಿವರವನ್ನು ಗುಳೇದಗುಡ್ಡದ ಚೀಲಾಳದವರ ನ್ಯಾಯದ ಉದ್ದಿಶ್ಯ ಸನ್ನಿಧಿಗೆ

ಬಾಗಲಕೋಟೆಯವರು ಬಿನ್ನಹ ಪತ್ರ ಬರಕೊಂಡದ್ದರಿಂದ ಆ ದೈವದವ ರಿಗೆ ಆಶೀರ್ವಾದ ನಿರೂಪು ಕಳುಹಿಸಿದ ತರುವಾಯ ರಾ॥ ದುರ್ಗದ ಸನ್ನಿ ಧಾನದಿಂದಲೂ ರಾ|| ಜಡೇದ ಸನ್ನಿಧಾನದಿಂದಲೂ ಇತ್ತ ಅನೇಕ ಈ ಉಭಯ ಸನ್ನಿಧಾನದಿಂದ ಚರಮೂರ್ತಿಗಳೂ ಇವರುಗಳಿಂದ ಪುಷ್ಕಳ ವಿರಕ್ತರೂ ಆದರು. ಒಟ್ಟು ರಾ॥ ತೋಂಟದಾರ್ಯ ಸ್ವಾಮಿಗಳ ವರು ಕೊಟ್ಟ ಚರಂತಿಗೆ ಏಳುನೂರು ಇತ್ತ ರಾ॥ ಗಗನದಾರ್ಯ ಸ್ವಾಮಿ ಗಳು ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳು ರಾ|| ಮುರುಗಾಸ್ವಾಮಿಗಳು ಈ ಮೂವರೂ ಕೊಟ್ಟ ಚರಂತಿಗೆ ೪೦, ಸೋಡ ಸಿದ್ಧಲಿಂಗಸ್ವಾಮಿಗಳು ಕೊಟ್ಟ ಚರಂತಿಗೆ ೧೧, ರಾ|| ಕುಮಾರಸ್ವಾಮಿಗಳು ಕೊಟ್ಟ ಚರಂ ತಿಗೆ ೯, ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳು ಕೊಟ್ಟ ಚರಂತಿಗೆ ೫, ರಾ|| ಹಿಂದೆ ಗುಮ್ಮಳಾಪುರದ ಗಡ್ಡದ ಸಿದ್ಧವೀರಣ್ಣಸ್ವಾಮಿಗಳವರೂ ಗೂಳೂರ ಗುರುಸಿದ್ಧಸ್ವಾಮಿಗಳವರೂ ಈ ಉಭಯ ಸ್ವಾಮಿಗಳವರೂ ಕೊಟ್ಟ ಚರಂತಿಗೆ ೧೦, ಒಟ್ಟು ಏಳುನೂರ ಎಪ್ಪತ್ತೈದು ಚರಂತಿಗೆ ಬುಡಕಟ್ಟುಗಳೂ ಈ ಬುಡಕಟ್ಟಿನ ಪೈಕಿ ಮುರುಗಾ ಸಮಯ ಕುಮಾರ ಸಮಯ ಈ ೨ ಸಮಯಗಳು ಇರಲಾಗಿ ಉಳಿದ ಬುಡಕಟ್ಟಿನ ಚರ ಮೂರ್ತಿಗಳಲ್ಲಿ ೧೩ ಸಮಯಗಳು ಎಂದರೆ ಸಂಪಾದನೆಯ ಸಮಯ, ಚೀಲಾಳ ಸಮಯ, ಕೆಂಪಿನ ಸಮಯ, ಗೂಳಿಕೊಂಡಯ್ಯಗಳ ಸಮಯ, ಆಯಕಟ್ಟಿನ ಸಮಯ, ಗದ್ದಕಟ್ಟಿನ ಸಮಯ, ಸೋಮೆಕಟ್ಟೆಯ ಸಮಯ ಮುಂತಾದ ಸಮಯಗಳೂ ಭೇದವಾದವು. ಈ ಚರಮೂ ರ್ತಿಗಳ ಬುಡಕಟ್ಟಿನ ಪೈಕಿ ಕೆಲವು ಲೋಪವಾಗಿ ಇದ್ದಾವೆ. ಕೆಲವುಇದ್ದಾವೆ ಈ ಸಮಯಗಳ ಪೈಕಿ ಚೀಲಾಳ ಸಮಯ, ಮುರುಗಾ ಸಮಯ, ಕುಮಾರ ಸಮಯ ಈ ೩ ಪ್ರಬಲವಾಗಿಇದ್ದಾವೆ. ಉಳಿದ ಸಮಯಗಳು ಕೆಲವುಚೀಲಾಳ ಸಮಯಗಳಲ್ಲಿ ಕೂಡಿ ಇದ್ದಾವೆ. ಕೆಲವು ಲೋಪವಾಗಿ ಇದ್ದಾವೆ.

ಹೀಂಗೆ ಇರುವಲ್ಲಿ ರಾ॥ ಗುರುಸಿದ್ಧಸ್ವಾ ಮಿಗಳವರು ಹಳೆಬೀಡ ಕಲ್ಲುಮಠದ ಸ್ಥೂಲಬಳಕೆಯಲ್ಲಿ ವಿಶ್ರುಪಟ್ಟದ್ದ ರಿಂದ ಸಕಲ ಸಿಂಹಾಸನದವರೂ ಹಳೆಬೀಡು ಮುಂತಾದ ಆ ಸೀಮೆ ದೇವ ಭಕ್ತರೂ ಸಹ ರಾ॥ ದುರ್ಗದ ಸ್ವಾಮಿಗಳು ಮೊದಲಾ'ದ'(ಗ?)ಸದರಿ ಕಲ್ಲು ಮಠದ ಚನ್ನವೀರಯ್ಯನ ಬಳಕೆ ಮಾಡಿದ ಭಕ್ತ ಗಣಂಗಳ ಬಳಕೆ ಸಹ ಮಾಡದೆ ಆ ಸೀಮೆಗಳಲ್ಲಿ ಕೊಟ್ಟ ಹೆಣ್ಣು ಗಂಡುಗಳು ಸಹವಾಗಿ ಕಿಟ್ಟಾಗಲು, ಸದರಿ ಬಳಕೆ ವಿಷಯವಾಗಿ ವಿಚಾರವಾಗುವ ಬಗ್ಗೆ

ರಾ॥ ಬಾಳೆಹಳ್ಳಿ ಸಿಂಹಾಸನದ ಎಂಟು ಜಡಿ ಸೋಮಶೇಖರ ಸ್ವಾಮಿಗಳು ಮುಂತಾದ ಆ ಸೀಮೆ ದೇವ ಭಕ್ತರು ಇಸಳೂರಲ್ಲಿ ಇರುವ ಸನ್ನಿಧಾನಕ್ಕೆ ೭೨ ಬಿರುದುಗಳಿಂದ ಗಣ ಸಮೂಹದೊಡನೆ ತಮ್ಮ ದೇಶದಲ್ಲಿ ಇರುವ ಹಳೆಬೀಡ ಸಮೀಪದಲ್ಲಿರುವ ಹಾರನಹಳ್ಳಿಗೆ ದಯಮಾಡಿ ಈ ಹಳೆಬೀಡ ದುರ್ಬಳಕೆ ದೂರಮಾಡುವ ವಿಚಾರದ ಬಗ್ಗೆ ಹಿಂದೆ ಈ ನ್ಯಾಯದ ಸಂಬಂಧದ ಕಾಗದ ಪತ್ರಗಳನ್ನು ತೆಗೆದುಕೊಂಡು ಚಿತ್ತೈಸಬೇಕೆಂಬುವದಾಗಿ ಬಿನ್ನಹ ಪತ್ರ ಬರಸಿ ಇಸಳೂರ ಸನ್ನಿಧಾನವನ್ನು ಕರಸಿಕೊಂಡು,

ಆ ಹಳೆಬೀಡ ಸೀಮೆಯಾದ ಪುಷ್ಪಗಿರಿ ಮುಂತಾದ ಸಕಲ ಗ್ರಾಮಗಳಲ್ಲಿ ೭೨ ಬಿರುದುಗಳಿಂದ ಉತ್ಸವಂಗಳನ್ನು ಮಾಡುತ್ತಾ ಬಿನ್ನಹ ಮುಂತಾದ ಪಾದಕಾಣಿಕೆಯನ್ನು ಕೊಡುತ್ತಾ ಆ ಮೇಲೆ ತಮ್ಮ ಸಮಸ್ತರ ಭಕ್ತಿಯಿಂದ ಹಾರನಹಳ್ಳಿ ಗ್ರಾಮದಲ್ಲಿ ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗಳವರಿಗೆ ಮಠ ಮಾನ್ಯಗಳನ್ನು ಮಾಡಿಕೊಟ್ಟು ಶರಣು ಹಾಕಿ ಆ ಮಠದಲ್ಲಿ ಲಿಂಗಪೂಜಾ ಜಂಗಮ ದಾಸೋಹಗಳಿಂದ ಗಣ ಸಮೂಹದೊಡನೆ ಸ್ವಾಮಿಗಳವರನ್ನು ತಮ್ಮ ಸರ್ವರ ಭಕ್ತಿಯಲ್ಲಿ ಇಟ್ಟುಕೊಂಡು,

ಆ ಮೇಲೆಸಮಸ್ತರೂ ಹಳೆಬೀಡ ಕೆಟ್ಟವನ ಹೊಟ್ಟೆಯಲ್ಲಿಹುಟ್ಟದ ಕಲ್ಲುಮಠದ ಚನ್ನವೀರಯ್ಯನ ಶಿವಾಚಾರ ಬಳಕೆಯಲ್ಲಿ ಚಿತ್ರದುರ್ಗದ ರಾ॥ಗುರುಸಿದ್ಧಸ್ವಾಮಿಗಳವರು ಕೂಡಿಕೊಂಡ ಕಾರಣ ಅವರಬಳಕೆಗೆಒಳಪಟ್ಟ ಹಳೆಬೀಡು ಮುಂತಾದ ಆಸೀಮೆಯಲ್ಲಿ ಬಳಕೆ ಮಾಡಿದಭಕ್ತ ಗಣಂಗಳಿಗೆ ರಾ॥ಕೆಂಪಿನ ಸಿದ್ಧಬಸವಸ್ವಾಮಿಗಳವರು ಬಹಿಷ್ಕಾರಸ್ಥಾಪನವನ್ನು ಮಾಡಿದ್ದರಿಂದ,

ಈ ಆಚಾರವು ಆ ಸೀಮೆ ದೇವ ಭಕ್ತರು ಮೊದಲಾದ ಬಾಳೆಹಳ್ಳಿಸಿಂಹಾಸನ ಮುಂತಾದ ಸಕಲ ಮಠಸ್ಥರುಗಳಿಗೆ ಸಹ ಸಮ್ಮತವಾದ್ದರಿಂದ,

ಶಿವಾಚಾರದಲ್ಲಿ ಸದರಿ ಚನ್ನವೀರಯ್ಯನ ಬಳಕೆ ಇವನ ಬಳಕೆ ಮಾಡಿದ ಜನರ ಬಳಕೆಸಹ ಕಟ್ಟಾಗಿನಿಂತಿತು.

ಈ ವರ್ತಮಾನವನ್ನು ರಾ|| ಚಿತ್ರಕಲ್ಲದುರ್ಗದ ಗುರುಸಿದ್ಧಸ್ವಾಮಿಗಳವರು ಕೇಳಿ ಈ ಹಳೆಬೀಡ ಕಲ್ಲುಮಠದ ಚನ್ನವೀರಯ್ಯನ ಬಳಕೆ ಏಕೆ ಮಾಡಬಾರದು ? ಇದರ ಆಧಾರವೇನೆಂದು ಇದರ ವಿಚಾರದ ಬಗ್ಗೆ ಅಲ್ಲಿ ಸಭೆಯು ಕೂಡಿ ದೇವ ಭಕ್ತರು ನಿರ್ಣಯಿ-ಸಿದಲ್ಲಿ ಆ ಬಳಕೆ ವಿಷಯದಲ್ಲಿ ನಡೆದುಕೊಳ್ಳಲಿಕ್ಕೆ ಬಂದೀತೆಂದು ನಿರೂಪುಗಳನ್ನು ರಾ|| ಕೆಂಪಿನ ಸಿದ್ಧಬಸವ ಸ್ವಾಮಿಗಳವರ ಸನ್ನಿಧಾನಕ್ಕೆ ದುರ್ಗದ ಸ್ವಾಮಿಗಳವರು ಕಳುಹಿಸಿದ್ದರಿಂದ,

ಆ ಮೇಲೆ ರಾ|| ಕೆಂಪಿನ ಸಿದ್ಧಬಸವ ಸ್ವಾಮಿಗಳವರು ಹಳೆಬೀಡ ಕಲ್ಲುಮಠದ ಸ್ಥಳದ ಬಳಕೆ ವಿಷಯವಾಗಿ ಪೂರ್ವದಿಂದ ನಡೆದ ವೃತ್ತಾಂತವನ್ನು ಸತ್ಯವಾಗಿ ಬರೆಯಿಸಿ ಆ ಬಳಕೆವುಳ್ಳ ಕಲ್ಲುಮಠದ ಚನ್ನವೀರಯ್ಯನು ಶಿವಾಚಾರ ಬಳಕೆಯೊಳಗೆ ಬಂದಾನೇ ಬಾರನೇ ಈ ವಿಚಾರವನ್ನು ಬಿನ್ನಹ ಪತ್ರ ಮುಖದಿಂದ ಬರೆಯಿಸಿ ಕಳುಹಿಸಬೇಕೆಂದು ಆಶೀರ್ವಾದ ನಿರೂಪುಗಳನ್ನು ಕಳುಹಿಸಿಕೊಟ್ಟಿದ್ದರಿಂದ ರಾ|| ಕೆಳಗೆ ಹೆಸರು ನಮೂದ ಇದ್ದವರು ಬಿನ್ನಹ ಪತ್ರ ಮುಖದಿಂದ ರಾ|| ಕೆಂಪಿನ ಸಿದ್ಧಬಸವ ಸ್ವಾಮಿಗಳವರ ಸನ್ನಿಧಾನಕ್ಕೆ ಸತ್ಯಸತ್ಯವಾಗಿ ಸದರಿ ಬಳಕೆ ವಿಷಯವಾಗಿ ಬಿನ್ನಹ ಪತ್ರ ಮುಖದಿಂದ ಬರೆಯಿಸಿ ಕಳುಹಿಸಿದ ವಿವರವೇನೆಂದರೆ:—

ಹಿಂದೆ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳು ರಾ|| ನೋಡ ಸಿದ್ಧಲಿಂಗಸ್ವಾಮಿಗಳು ಹಳೆಬೀಡಿಗೆ ದಯಮಾಡಿಸಿದ್ದಾಗ್ಯೆ ಆ ಊರ ಕಲ್ಲುಮಠದ ಕಲ್ಯಾಣಿ ಮಾದಿಗಿತ್ತಿ ಸಂಗತಿಯ ಮಾಡಿದ್ದು ಸದರಿ ಸನ್ನಿಧಾನದ ಸಮಕ್ಷಮದಲ್ಲಿ ಪುರಾವೆ ಆದ್ದರಿಂದ ಆ ಕಲ್ಯಾಣಿ ಹುಡುಗನನ್ನು ಬಿಟ್ಟು ನಿನ್ನ ಶಿಷ್ಯರಲ್ಲಿ ಒಂದು ಶಿಸುವನ್ನು ತಂದು ಪಟ್ಟಗಟ್ಟಿ ನಿನ್ನ ಮಠವನ್ನು ಉದ್ಧಾರ ಮಾಡಿಕೋ, ಎಂದು ರಾ|| ಸ್ವಾಮಿಗಳವರು ಕಲ್ಯಾಣಿಯತಂದೆ ಬಸವದೇವರಿಗೆ ಅಪ್ಪಣೆ ಕೊಡಲು ಆದಕ್ಕೆ ಒಪ್ಪದೆ, ಇರುವವ ಒಬ್ಬ ಮಗನನ್ನು ಬಿಡಲಾರೆನೆಂದು ಹೇಳಿದ್ದರಿಂದ ಆ ಬಸವದೇವರ ಕೊರಳಿಗೆ ವಸ್ತ್ರವ ಹಾಕಿಸಿ ಸಭೆಯಿಂದ ಹೊರಗೆ ಹಾಕಿಸಿದ ಮೇಲೆ ಆ ಬಸವದೇವರು ತನ್ನ ಕುಟುಂಬವಲ್ಲಿ ತನ್ನ ಮಗ ಕಲ್ಯಾಣಿ ಹುಡುಗನ ಕೂಡಿಕೊಂಡ ಮೇಲೆ ಆ ಕಲ್ಯಾಣಿ ಹುಡುಗನು ಮೃತವಾಗುವ ವರೆವಿಗೂ ಮಾದಿಗರ ತಿಮ್ಮಿಯ ಸಂಗವನ್ನು ಬಿಡಲಿಲ್ಲ. ಈ ಕಲ್ಯಾಣಿಯು ಕೆಟ್ಟ ಮೇಲೆ ಚನ್ನವೀರನು ಹುಟ್ಟಿದ್ದರಿಂದ ಕೆಟ್ಟವನ ಹೊಟ್ಟೆಯಲ್ಲಿ ಹುಟ್ಟಿದವನ ಕೂಡುವರೆ ಆಗದು ಎಂದು ಹಿಡಿತವಮಾಡಿ ಹಿಂದೆ ರಾ|| ಮುರುಗಾಸ್ವಾಮಿಗಳೂ ರಾ|| ಕುಮಾರಸ್ವಾಮಿಗಳೂ ಸಹ ಹಿಂದೆ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳವರೂ 'ಸೂರ್ಯ ಚಂದ್ರರೂ ಇರುವ ವರೆವಿಗೂ' ಸದರಿ ಕುಟುಂಬದವರು ಬರಲಿಕ್ಕೆ ಇಲ್ಲವೆಂದು ತೆಗೆದು ಹಾಕಿ ಬಹಿಷ್ಕಾರವನ್ನು ಕೊಟ್ಟ ಪ್ರಕಾರ ರಾ|| ಸದರಿ ಉಭಯ ಸ್ವಾಮಿಗಳೂ ತೆಗೆದುಹಾಕಿ ಸದರೀ ಪ್ರಕಾರ ಅವರೂ ಬಹಿಷ್ಕಾರ ಕೊಟ್ಟು ಇದ್ದದ್ದರಿಂದ ಆ ಮಠದ ಶಿಷ್ಯರು

ಕಲ್ಲುಮಠವ ಗದ್ದುಗೆಗೆ ಬಾಧ್ಯರಾದ ಜೋಳದೇವರ ಶಿಷ್ಯ ಕಲ್ಯಾಣ ದೇವರ ಗುರುಗಳ ಮಾಡಿಕೊಂಡರು· ಅಲ್ಲಿಯ ತನಕ ಆ ವಂಶದಲ್ಲಿ ಗುರುಗಳು ಇಲ್ಲದ್ದರಿಂದ ೨೦-೩೦ ವರುಷ ಆ ಮಠದ ಶಿಷ್ಯರು ದೀಕ್ಷೆ ಇಲ್ಲದೆ ಇದ್ದರೂ ಆ ಶಿಷ್ಯರುಗಳಲ್ಲಿ ದೀಕ್ಷೆ ಆಗುವಾಗ್ಯೆ ಅ ನೇಕ ಈ ಸೀಮೆಗಳಲ್ಲಿರುವ ಶಿಷ್ಯರುಗಳ ಮನೆಗೆ ಕಲ್ಯಾಣಿ ಇವನ ಮಗ ಚನ್ನವೀರನ್ನ ಕರಕೊಂಡು ಬಂದಲ್ಲಿ ಅಲ್ಲಿ ಇರುವ ದೇವಭ ಕ್ತರು ಇವರನ್ನು ಕರಕೊಳ್ಳದೆ ಶಿವಾಚಾರ ಬಳಕೆಗೆ ದೂರಮಾಡಿ ಹಾಕಿಸಿದರು. ಇಂಥವರ ಕುಟುಂಬವನ್ನು ತೆಗೆದುಕೊಳ್ಳಬಾರದು, ತಾವು ಹಿಡಿದ ಆಚಾರ ಸಂಬಂಧದ ನ್ಯಾಯವು ಸಿಂಹಾಸನಪತಿಗಳಿಗೂ ಮ ಠಾಧಿಪತಿಗಳಿಗೂ ಸಮಸ್ತ ದೇವಭಕ್ತರಿಗೂ ಸಹ ಸಮ್ಮತವದೆ, ಎಂತ ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗಳವರ ಸನ್ನಿಧಾನಕ್ಕೆ ಬಿನ್ನಹ ಪತ್ರವಾದ ಒಪ್ಪಿತ ಪತ್ರಗಳನ್ನು ಬರಸಿ ಕಳುಹಿಸಿದವರು ಯಾರ್ಯಾರು ಎಂದರೆ ಹಳೆಬೀಡು ಮುಂತಾದ ಆ ಸೀಮೆ ದೇವಭಕ್ತರು ಗಳ ಹೆಸರಿನ ವಿವರವು:-

ಶ್ರೀ ರಂಭಾಪುರಿ ವೀರಸಿಂಹಾಸನಕ್ಕೆ ಕಾರಣ ಕರ್ತರಾದ ಎಂಟುಜಡೆಯ ಸೋಮಶೇಖರ ಸ್ವಾಮಿಗಳವರು ಶ್ರೀಮತ್ಪರಮೇಶ್ವರನ ಅ ರ್ಧಾಂ ಗಿ ಯಾ ದ ಉಮಾದೇವಿಯವರ ಮೇಲುದಿನ ಪರಮೇಶ್ವರನು ಸಕಲ ದೇವತೆಗಳೊಡನೆ ಮೂರ್ತವ ಮಾಡಿದ ಸಭಾ ಮಧ್ಯದಿ ಭೃಂಗೀಶ್ವರನ ನಾದದಿಂ ಸಂಚಲತ್ವದಿ ನೊಗೆದ ಚಂದ್ರ ದ್ರೋಣ ಪರ್ವತದ ಸಮೀಪದಿ ಇರ್ದ ಗಾಳಿಪೂಜೆ ಯ ಗಿರಿಯ ಸಿದ್ಧಕುಲ ಶಿಖಾಮಣಿಗಳಾದ ಷಟುಸ್ಥಲ ಪ್ರಭು ವಂಶೋದ್ಭವರಾದ ಮುಳ್ಳುಕಟ್ಟಿಗೆಯ ಮೇಲೆ ತಪಸ್ಸುಗೈದ ಸಿಮಿ ತ್ಯದಿಂ ಪೆಸರು ಪಡೆದ ಮುಳ್ಳುಕಟ್ಟಿಗೆಯ ಸ್ವಾಮಿಗಳವರ ಗದ್ದುಗೆಗೆ ಕಾರಣ ಕರ್ತರಾದ ಹೊಲಿಕೆರೆ ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗ ಳವರ ಕರ ಸಂಜನಿತರಾದ ಬಸವಪ್ಪ ದೇವರು, ಹಳೇಬೀಡ ಸೀಮೆ ಹಳೇಬೀಡ ಕೊಂಡೋಜಿ ಮಠದ ಹಲಗಪ್ಪ ದೇವರು, ಭದ್ರಪ್ಪದೇ ವರು, ವೀರಪ್ಪದೇವರು, ಮಲ್ಲಯ್ಯದೇವರು, ರಾ॥ ಪುಷ್ಪಗಿರಿ ಸಿಂ ಹಾಸನಕ್ಕೆ ಕಾರಣ ಕರ್ತರಾದ ಮಲ್ಲಿಕಾರ್ಜುನ ದೇವರು, ಹಳೇಬೀಡ ಅರಸಿನ ಕಲ್ಲಮಠದ ಜೋಳದೇವರ ಕಲ್ಯಾಣದೇವರು, ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗಳವರಿಗೆ ಶಿಷ್ಯರಾಗಿ ಸನ್ನಿಧಾನದ ಖಾಸಗತ ಹ

ಳೇಬೀಡ ಸಮೀಪದಲ್ಲಿ ಇರುವ ಹಾರನಹಳ್ಳಿ ಮಠಕ್ಕೆ ಸನ್ನಿಧಾನದ ಕ ಡೆಯಿಂದ ಖಾಸ ಚರಂತಿಗೆ ತೆಗೆದುಕೊಂಡು ಸದರೀ ಮಠಕ್ಕೆ ಬಾಧ್ಯ ರಾಗಿ ನಿಂತ ನೀಲಮ್ಮಯ್ಯನವರೆಂಬ ನೀಲಲೋಚನಪ್ಪನವರು, ಹಾರನ ಹಳ್ಳಿ ಚನ್ನಬಸವಪ್ಪ ಸೆಟ್ಟರು ಮುಂತಾದ ದೈವದವರು, ಬೇಲೂರ ಸೀಮೆ ಮಹತ್ತುಗಳಿಗೆ ನಾಡನಾರವೆ? ಚನ್ನಣ್ಣಗೌಡ, ಉತ್ತೊಲ ನಂಜಣ್ಣ ಗೌಡ, ಕೆರಗೋಡದ ಲಿಂಗಣ್ಣಗೌಡ, ಹನ್ನೊಂದೂರ ಗೌಡಗಳು, ಶಾಲಾ ವಾರದ ಲಿಂಗಣ್ಣಗೌಡ, ಶಾನಭೋಗರು ನಂಜಪ್ಪ ಸಹ, ಅಡಗೂರವು ಠದ ಕೊಟ್ರಪ್ಪನವರು, ಪ್ರಭುಗಳು, ಚನ್ನಯ್ಯಗೌಡ, ನಾಗಣ್ಣ ಗೌಡ, ಚಿಕ್ಕೇರಿಗೌಡ, ಹರಗಪ್ಪ ಗೌಡ, ರಾಜನಸಿರಿಯೂರ ಕೊಟ್ರಯ್ಯ ಗೌಡ, ಚಿಲಕೂರ ಮರಿಯಪ್ಪಗೌಡ, ಬೆಳ್ಳಿಯ ಹೊನ್ನೇನಹಳ್ಳಿಯ ಚನ್ನ ಪ್ಪಗೌಡರು, ವೀರಪ್ಪಗೌಡರು, ಚಿಲಕೂರಗೌರೀಗೌಡರು, ಕಟ್ಟೆ ಸೋ ಮ್ಮೇನಹಳ್ಳಿಯ ಬಸವಪ್ಪಗೌಡರು, ಚಿಕ್ಕನಾಯಕನಹಳ್ಳಿಯ ಬಸವಪ್ಪ ಸೆಟ್ಟರು, ನಿರಂಜನಪ್ಪ ಸೆಟ್ಟರು ದೈವದವರೂಸಹ, ಬುಕ್ಕಾ ಪಟ್ಟಣದ ವೀರಪ್ಪಗೌಡರು, ಮಠದ ಲಿಂಗಪ್ಪದೇವರು, ಕುರೆಹಳ್ಳಿ ಮಠದ ಬಸ ವಲಿಂಗಯ್ಯನವರು, ಬಂದೂರ ಬಸವಪ್ಪಗೌಡರು, ಚನ್ನಗಿರಿ ನೆಲ್ಲೂ ರ ನಾಡಿಗರು ಮುರುಳಪ್ಪ ಗಟ್ಟೆಪ್ಪನವರು, ಜಾವಣಗಿನಾಡ ಮುಳಲೂರ ತಿಮ್ಮಣ್ಣಗೌಡರು, ರಾ॥ ಷಟುಸ್ಥಲ ಬ್ರಹ್ಮಿಗಳಾದ ಕಲ್ಯಾಣಪ್ಪನ ವರು, ಹಳೇಬೀಡ ಚನ್ನಪ್ಪಸೆಟ್ಟರ ಮಗ ಚನ್ನಪ್ಪ ಸೆಟ್ಟರು, ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗಳವರ ಕರಕಂಜೋದ್ಭವರಾದ ಬಿಕ್ಕೋಡ ಮಠದ ಶಿವನೋಂಕಾರ ದೇವರು, ಹಳೇಬೀಡ ಅಂದಲೆ ಹುಚ್ಚಯ್ಯದೇ ವರ ಶಿಷ್ಯರು, ಪಾರುಪತ್ಯಗಾರ ಶಿವಪ್ಪಯ್ಯ, ರಾ॥ ಬಾಳೇಹಳ್ಳಿ ಸಿಂಹಾ ಸನದಗುರುಲಿಂಗಯ್ಯನವರು, ಕಿತ್ತವಾರದ ವೀರಪ್ಪಶೆಟ್ಟರು, ಹೊರಪಾಳ್ಯ ದ ವೀರಯ್ಯನ ಮಗ ರಾಚಯ್ಯನವರು, ಬಂದೂರ ಶಿವಯ್ಯಗೌಡರು, ಬೇಳವಾಡಿಯ ಸಿದ್ಧರಾಮಯ್ಯಗೌಡರು, ರುದ್ರಪ್ಪಗೌಡರು ಮುಂತಾದ ಗ್ರಾಮಗ್ರಾಮದ ಗೌಡರು ಮೊದಲಾದ ದೇವಭಕ್ತರು ಸದರಿ ಪ್ರಕಾ ರ ಹಳೇಬೀಡ ಕಲ್ಮಠದ ಹೊಲೆ ಬಳಿಕ ಕಲ್ಯಾಣಿಮಗ ಚನ್ನವೀರನು ಶಿವಾಚಾರಕ್ಕೆ ಸಲ್ಲ, ದೇವಭಕ್ತರೊಳಗಲ್ಲ, ಎಂದು ಸದರಿಯವರು ಬಿನ್ನಹ ಪತ್ರವ ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗಳವರಿಗೆ ಬರಸಿ ಕಳುಹಿಸಿದ ಬಳಿಕ,

ಆ ಪತ್ರವನ್ನು ಸ್ವಾಮಿಗಳವರು ನೋಡಿಕೊಂಡು ಆ

ಮೇಲೆ ರಾ|| ಚಿತ್ರದುರ್ಗದ ಸ್ವಾಮಿಗಳವರಿಗೆ ನೀವು ಹಳೇಬೀಡ ಕಲ್ಮ ಠದ ಸ್ಥೂಲವಾದ ಬಳಕೆಯನ್ನು ಸ್ಥೂಲ ಸೂಕ್ಷ್ಮವೆಂದು ವಿಚಾರಿಸದೆ ಪೂರ್ವದ ನಿಮ್ಮ ಸೇಪಿನಿಂದಲೂ, ಧ್ರವ್ಯದಅಪೇಕ್ಷೆಯಿಂದಲೂ, ಗುರು ಹಿರಿಯ ರು ತೆಗೆದು ಹಾಕಿದ್ದು, ಹಾಂಗೂ ಬಹಿಷ್ಕಾರದಲ್ಲಿ ಇದ್ದಂಥಾದ್ದು, ಕೆಟ್ಟ ಮೇಲೆ ಹುಟ್ಟಿದ ಚನ್ನವೀರಯ್ಯನ ಕೂಡುವರೆ ಇದರ ವಿಚಾರದ ಬಗ್ಯೆ ನಾವು ದೇಶ ಮಧ್ಯದಲ್ಲಿ ಇರುವ ಪೇಟಿಮನೆ ದೇವಭಕ್ತರುಗ ಳನ್ನು ಆಶೀರ್ವಾದ ಪತ್ರಮುಖದಿಂದ ಕರಸಿ ಸಭಾ ಕೂಡಿಸುತ್ತೇವೆ. ಆ ಸ್ಥಳಕ್ಕೆ ತಮ್ಮ ಸನ್ನಿಧಾನವು ಚಿತ್ತೈಯಿಸಬೇಕು. ಇಲ್ಲವೆ ಸದರಿಪ್ರಕಾ ರ ಸಭೆಯನ್ನು ನೀವು ಕೂಡಿಸಿದಲ್ಲಿ ಈ ಸೀಮೆ ದೇವಭಕ್ತರುಗಳನ್ನು ಕರಕೊಂಡು ನಾವು ದಯಮಾಡಿಸುತ್ತೇವೆ. ಆ ಸಭೆಯಲ್ಲಿ ನೀವು ಕೂ ಡಿಕೊಂಡ ಬಳಕೆ ಸ್ಥೂಲ ಅಥವಾ ಸೂಕ್ಷ್ಮ ಎಂಬುವದು ವಿಚಾರ ಆಗಿ ಆ ದೋಷ ನಿಮ್ಮ ಮೇಲೆ ಬಂದರೆ ಆ ಬಳಕೆಯನ್ನು ನೀವು ಬಿಟ್ಟು ಸಹಸ್ರ ಗಣ ತೃಪ್ತಿ ಮಾಡಬೇಕು, ನೀವು ಆ ಬಳಕೆ ಕೂಡಿಕೊಳ್ಳಬ ಹುದು, ಎಂತ ವಿಚಾರಮುಖದಿಂದ ದೇವಭಕ್ತರಲ್ಲಿ ಆದರೆ ನಾವು ಸಹ ಸ್ರಗಣ ತೃಪ್ತಿಮಾಡಬೇಕು, ಇದರ ವಿಷಯವಾಗಿ ನಮ್ಮ ಪತ್ರ ನೋ ಡಿಕೊಂಡು ಆ ಪತ್ರಕ್ಕೆ ಉತ್ತರ ಮುಖದಿಂದ ನಮಗೆ ತಿಳಿಸಬೇಕೆಂದು ರಾ|| ಗುರುಸಿದ್ಧ ಸ್ವಾಮಿಗಳವರಿಗೆ ರಾ|| ಕೆಂಪಿನಸಿದ್ಧಬಸವ ಸ್ವಾಮಿಗಳು ಹಳೇಬೀಡು ಮೊದಲಾದ ದೇವಭಕ್ತರುಗಳ ಕಡೆಯಿಂದ ಬಿನ್ನಹ ಪತ್ರ ಬರಸಿ ರಾ|| ಚಿತ್ರದುರ್ಗದ ಸದರಿ ಸನ್ನಿಧಿಗೆ ಕಳುಹಿಸಲು, ಆ ಪತ್ರವನ್ನು ನೋಡಿಕೊಂಡು ಚಿತ್ರದುರ್ಗದ ದೊರೆ ಮುಂತಾದ ಅಲ್ಲಿ ದೇವಭಕ್ತರ ಕರಸಿಕೊಂಡು ಆ ಪತ್ರವನ್ನು ಅವರಿಗೆ ತೋರಿಸಿ ಈಪ್ರಕಾರ ಪತ್ರ ಬಂ ದದೆ, ಏನು ಮಾಡಬೇಕೆಂದು ರಾ|| ಚಿತ್ರದುರ್ಗದ ಸ್ವಾಮಿಗಳು ಸದರಿ ದೊರೆ ಮುಂತಾದ ಆ ದೇವಭಕ್ತರನ್ನು ಕೇಳಲು ಅವರು ಅರಿಕೆ ಮಾಡಿ ಕೊಂಡದ್ದು ಏನಂದರೆ

ಹಿಂದೆ ನಿಮ್ಮ ಆವರ ಗುರುಗಳಾದ ರಾ|| ಮು ರುಗಾಸ್ವಾಮಿಗಳು, ರಾ|| ಕುಮಾರಸ್ವಾಮಿಗಳು, ಈ ಉಭಯರೂ ತ ಮ್ಮ ಗುರುಗಳಾದ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳು ಇವರ ಶಿವಾನು ಭಾವ ಚರಂತಿಗೆ ಪಟ್ಟದ ನೋಡಸಿದ್ಧಲಿಂಗಸ್ವಾಮಿಗಳವರು ಮೊದ ಲಾದ ಈ ನಾಲ್ವರೂ ಸ್ವಾಮಿಗಳವರು. ಹಳೇಬೀಡ ಕಲ್ಲುಮಠದ ಕ ಲ್ಯಾಣಿಯು ಕೆಟ್ಟಮೇಲೆ ಇವನ ಮಗ ಚನ್ನವೀರನು ಹುಟ್ಟಿದ್ದು ವಿ

ಚಾರದಲ್ಲಿ ಖರೆ ಅದ್ದರಿಂದಲೂ, ಸದರಿ ಕಲ್ಯಾಣಿ ತನ್ನ ಕುಟುಂಬದಲ್ಲಿ ಕೂಡಿ ಏಕ ಬಳಕೆಯಲ್ಲಿ ಇದ್ದದ್ದರಿಂದಲೂ, ಹಾಗೂ ರಾ|| ಹಿರಿಯ ಕರ್ತರಾದ ಸದರಿ ಸ್ವಾಮಿಗಳವರ ಬಹಿಷ್ಕಾರದಲ್ಲಿ ಸದರಿ ಕುಟುಂಬದವರು ಇದ್ದದ್ದರಿಂದಲೂ, ಈ ಕುಟುಂಬದಲ್ಲಿ ಕೂಡಿ ಇದ್ದ ಕಲ್ಯಾಣಿಯು ಸಾಯುವ ತನಕ ಮಾದಿಗಿತ್ತಿ ಸಂಗತಿಯಲ್ಲಿ ಇದ್ದದ್ದರಿಂದಲೂ ಆ ಪ್ರಕಾರ ಇರುವ ಕುಟುಂಬವು ಕೆಟ್ಟ ಮೇಲೆ ಹುಟ್ಟಿದ ಕಲ್ಯಾಣಿ ಮಗ ಚನ್ನವೀರಯ್ಯನ ಬಳಕೆಯಲ್ಲಿ ಸನ್ನಿಧಾನವು ತೆಗೆದುಕೊಂಡಮೇಲೆ ಈ ಬಳಕೆಗೆ ಯಾರೂ ಒಪ್ಪಲಿಕ್ಕಿಲ್ಲ, ಆ ಬಳಕೆ ಬಿಟ್ಟ ತಾವೂ ರಾ|| ಕೆಂಪಿನ ಸಿದ್ಧಬಸವ ಸ್ವಾಮಿಗಳೂ ತಾವು ಉಭಯ ಸ್ವಾಮಿಗಳೂ ರಾಜೀಆಗಿ ಹಿಂದೆ ನಿಮ್ಮ ಗುರುಗಳಾದ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳವರ ತರುವಾಯದಲ್ಲಿ ಪುಷ್ಪಗಂಧದಹಾಗೆ ಭೇದವಿಲ್ಲದೆ ಶಿಖಾ ಪಟ್ಟದ ಮುರುಗಾ ಸ್ವಾಮಿಗಳೂ ಶಿವಾನುಭಾವ ಚರಂತಿಗೆ ಪಟ್ಟದ ಕುಮಾರಸ್ವಾಮಿಗಳೂ ಕೂಡಿ ಈ ಚಿತ್ರಕಲ್ಲದುರ್ಗದ ಮಠಾಧಿಪತ್ಯವನ್ನು ನಡಸಿಕೊಂಡು ಇದ್ದಪ್ರಕಾರ ಇದ್ದರೆ ವಿಹಿತ ಕಾಣುತ್ತದೆ ಎಂದು ಅರಿಕೆ ಮಾಡಿಕೊಳ್ಳಲು,

ಸದರಿ ಸ್ವಾಮಿಗಳವರು ಆ ಬಳಕೆ ಕೂಡಿಕೊಂಡಿದ್ದರಿಂದ ಆ ಬಳಕೆ ಬಿಡಲಾರೆವು, ಬಿಟ್ಟರೆ—ದೊಡ್ಡವರು ಕೂಡಿಕೊಂಡರಂತೆ, ಬಿಟ್ಟರಂತೆ—ಎಂಬ ಅಪವಾದ ಬರುತ್ತದೆ, ಎಂಬ ದುರಭಿಮಾನದ ಮಾತು ಆಡಿದ್ದರಿಂದ

ಸದರಿ ದೊರೆಗಳು ಮುಂತಾದ ದುರ್ಗದ ದೇವಭಕ್ತರೂ ರಾ|| ಗುರುಚರಮೂರ್ತಿಗಳೂ ಸಹ ಸನ್ನಿಧಾನದ ವಿಚಾರವನ್ನು ತಿಳಿದುಕೊಂಡು ಸನ್ನಿಧಿ ಇರಾದೆಪ್ರಕಾರ ರಾ|| ಕೆಂಪಿನಸಿದ್ಧಬಸವ ಸ್ವಾಮಿಗಳಿಗೆ ಸದರಿ ದೊರೆಗಳು ಮೊದಲಾದ ದೇವಭಕ್ತರು ಬಿನ್ನಹ ಪತ್ರಮುಖದಿಂದ ರಾ|| ಗುರುಸಿದ್ಧ ಸ್ವಾಮಿಗಳು ಹಳೇಬೀಡ ಅಚಾರ ಸಂಬಂಧವಾದ ಕಲ್ಲುಮಠದ ಬಳಕೆಯನ್ನು ಕೂಡಿಕೊಂಡಮೇಲೆ ಈ ವಿಚಾರದ ಬಗ್ಗೆ ಸಭೆಯನ್ನು ಕೂಡಿಸುವದಿಲ್ಲ, ಕೂಡಿಸಿದರೆ ಬರುವದಿಲ್ಲ, ನಾವು ಬೇಕಾದರೆ ನಮ್ಮೊಳಗೆ ಕೂಡುವದು, ಒಲ್ಲದಿದ್ದರೆ ಅವರ ಆಚರಣೆ ಅವರಿಗೆ, ನಮ್ಮ ಆಚರಣೆ ನಮ್ಮಗೆ, ಎಂತ ಅಪ್ಪಣೆ ಆಯಿತು, ಇದರ ಮೇಲೆ ಸನ್ನಿಧಾನದ ಗುರುವಿನ ಚಿತ್ತಕ್ಕೆ ಬಂದಂತೆ ಮಾಡುವದು, ಎಂತ ತಿಳಿಸಲು

ಆ ಬಿನ್ನಹ ಪತ್ರವನ್ನು ರಾ|| ಕೆಂಪಿನ ಸಿದ್ಧಬಸವ ಸ್ವಾಮಿಗಳವರು ಹಳೇಬೀಡು ಹಾರನಹಳ್ಳಿ ಮೊ

ದಲಾದ ಸ್ಥಳಗಳ ದೇವಭಕ್ತರುಗಳನ್ನೂ ಆಸೀಮೆ ಸ್ಥಳ ಪರಸ್ಥಳ ಸಿಂಹಾಸನ ವಗೈರೆ ಗುರುಚರಮೂರ್ತಿಗಳನ್ನೂ ಪಟ್ಟ ಚರಂತರನ್ನೂ ಸಹ ಕರಸಿಕೊಂಡುಅವರಿಗೆ ರಾ|| ಚಿತ್ರದುರ್ಗದವರು ಬರಸಿ ಕಳುಹಿಸಿದ ಬಿನ್ನಹ ಪತ್ರವನ್ನು ತೋರಿಸಲು ಅವರು ನೋಡಿಕೊಂಡು ಮಾತಾಡಿದ್ದೇನೆಂದರೆ

ರಾ|| ಗುರುಸಿದ್ಧಸ್ವಾಮಿಗಳವರು ಹಳೇಬೀಡು ಕಲ್ಲುಮಠದ ಹೊಲೆ ಬಳಕೆಯನ್ನು ಪೂರ್ವದ ಸೇಪಿನಿಂದಲೂ ದ್ರವ್ಯದಮುಖದಿಂದಲೂ ಕೂಡಿಕೊಂಡು ಇದ್ದದ್ದರಿಂದ ತಮ್ಮ ಮಾತು ದೇವಭಕ್ತರು ಕೂಡಿದಲ್ಲಿ ಆ ಸಭೆಯೊಳಗೆ ಎಷ್ಟು ಮಾತ್ರಕ್ಕೂ ನಡೆಯಲಿಕ್ಕಿಲ್ಲಸೆಂದು ಈ ಪ್ರಕಾರ ತಮ್ಮ ಸನ್ನಿಧಾನಕಡೆಯಿಂದ ಚಿತ್ರದುರ್ಗದ ದೊರೆಗಳು ಮೊದಲಾದ ದೇವಭಕ್ತರುಗಳಿಂದ ಬಿನ್ನಹ ಪತ್ರವನ್ನು ಬರಸಿ ತಮ್ಮ ಸನ್ನಿಧಾನಕ್ಕೆ ಕಳುಹಿಸಿಇದ್ದಾರೆ, ಆ ಪತ್ರದ ಮೇಲಿಂದ ವಿಚಾರದ ಬಗ್ಯೆ ತಮ್ಮನ್ನುಕರಸಲಿಕ್ಕಿಲ್ಲ ತಾವು ಕರಸಿದರೆ ಬರಲಿಕ್ಕಿಲ್ಲ ಅವರು ಆ ಬಳಕೆ ಬಿಡಲಿಕ್ಕಿಲ್ಲ, ಇಂಥವರನ್ನು ರಾ|| ಚಿತ್ರದುರ್ಗ ಗುರುಸಿದ್ಧ ಸ್ವಾಮಿಗಳೂ ಇವರ ಬಗೆ ಮೂರ್ತಿಗಳೂ ಸಹ ಸದರಿ ಬಳಕೆಯನ್ನು ಕೂಡಿಕೊಂಡು ಇದ್ದದ್ದರಿಂದ ಇವರ ಆಚರಣೆಯನ್ನೂ ಸದರಿ ಚನ್ನವೀರಯ್ಯನ ಬಳಕೆ ಮಾಡಿದ ಈ ಸೀಮೆ ದೇವಭಕ್ತರುಗಳ ಆಚರಣೆಗಳನ್ನೂ ಮಾಡುವದಿಲ್ಲ, ನಮ್ಮೊಳಗೆ ಅವರಿಗೆ ಕೊಟ್ಟ ಹೆಣ್ಣು ನಮ್ಮ ಮಕ್ಕಳಾದರೂ ಕರತರುವದಿಲ್ಲ, ತಂದ ಹೆಣ್ಣು ಕಳುಹಿಸುವದಿಲ್ಲ, ನಾವು ನಮ್ಮ ವಂಶಪರಂಪರ್ಯವಾಗಿ ತಮ್ಮ ಪಾದದ ಆಚರಣೆಯಲ್ಲಿ ಇದ್ದು ಪಾದದ ಸರ್ವ ಸ್ವಾಭಿಮಾನವನ್ನೂ ನಡಸಿಕೊಟ್ಟು, ಸ್ವಾಮಿಪಾದಕ್ಕೆ ನಾವು ಸಮಸ್ತರೂ ನಮ್ಮ ಭಕ್ತಿಯಿಂದ ಮಾಡಿಕೊಟ್ಟ ಹಾರನಹಳ್ಳಿ ಮಠಕ್ಕೆ ವರ್ಷಾಶನ ರುಸುಮು ಪೇಟಿಗಳಲ್ಲಿ ಪಸಗಿ ಗ್ರಾಮದ ಆಯ ದೀಪಾರಾಧನೆ ಕಾಣಿಕೆ ನಮ್ಮಗ್ರಳ ಸರ್ವರಲ್ಲಿ ನಡೆವ ಲಗ್ನ ವಗೈರೆ ಕಾರ್ಯಗಳಲ್ಲಿ ಬರತಕ್ಕ ಎಡೆ ಕಾಸು ಸಹ ನಡಸಿಕೊಟ್ಟು ಆ ಮಠಕ್ಕೆ ದಾಸೋಹ ಮುಂತಾದ್ದು ನಡೆವಬಗ್ಯೆ ವತನ ಭೂಮಿಗಳನ್ನೂ ಸಹಾ ಮಾಡಿಸಿಕೊಡುತ್ತೇವೆ; ಸನ್ನಿಧಾನವು ನಮ್ಮ ಆಚರಣೆ ಬಗ್ಯೆ ಸನ್ನಿಧಾನದಲ್ಲಿ ಇರುವ ಕ್ರಿಯಾ ಮೂರ್ತಿಗಳನ್ನು ನಮ್ಮ ಸ್ಥಲಂಗಳಿಗೆ ಕಳುಹಿಸಿಕೊಡಬೇಕು, ಅವರಿಗೆ ನಮ್ಮ ನಮ್ಮ ಭಕ್ತಿಗಳಿಂದ ಮಠ ಮಾನ್ಯಗಳನ್ನು ಮಾಡಿಕೊಟ್ಟು ಇಟ್ಟುಕೊಳ್ಳುತ್ತೇವೆ, ಎಂತ ಸಮಸ್ತ ಹಳೇಬೀಡು ಹಾರನಹಳ್ಳಿ ಮುಂತಾದ ಆ ಸೀಮೆ ದೇವಭಕ್ತರು ರಾ|| ಕೆಂಪಿನಸಿದ್ಧಬಸವ

ಸ್ವಾಮಿಗಳವರಿಗೆ ಸಾಷ್ಟಾಂಗವನ್ನು ಹಾಕಿ ಸದರಿ ಪ್ರಕಾರ ಅರಿಕೆಮಾಡಿ ಕೊಳ್ಳಲು

ಆ ಮಾತಿಗೆ ಸನ್ನಿಧಾನವು ಒಪ್ಪಿಕೊಂಡು ಹಾರನಹಳ್ಳಿಯಲ್ಲಿ ನಿಂತು ಆ ಮೇಲೆ ಸದರಿ ದೇವಭಕ್ತರುಗಳಿಂದ ತಮ್ಮ ಹಾರನಹಳ್ಳಿ ಮ ಠಕ್ಕೆ ಸರ್ವಸಾಭಿಮಾನವನ್ನು ನಡಸಿಕೊಡುತ್ತೇವೆ ಎಂತ ಸದಂ ಪ್ರಕಾ ರ ಸದರಿ ದೇವಭಕ್ತರಕಡೆಯಿಂದ ತಾವು ಹಾರನಹಳ್ಳಿಯಲ್ಲಿ ಇದ್ದ ನೀ ಲಮ್ಮಯ್ಯನವರೆಂಬ ದೇಶಿಕರಾದ ಮೂರ್ತಿಗಳಿಗೆ ಸ್ಥಲ ಮಾಡಿಸಿ ಚರಂತಿ ಗೆಯನ್ನು ಕೊಟ್ಟು ಅವರಿಗೆ ನೀಲಲೋಚನಪ್ಪನವರೆಂಬ ಅಭಿಧಾನವ ನ್ನು ಇಟ್ಟು ಇವರ ಹೆಸರಿನಲ್ಲಿ ದಾನಪತ್ರವನ್ನು ಬರಸಿಕೊಂಡು ಆ ಹಾ ರನಹಳ್ಳಿ ವಗೈರೆ ಆ ಸೀಮೆ ದೇವಭಕ್ತರು ತಮ್ಮ ಭಕ್ತಿಯಿಂದ ಚಿಕ್ಕ ನಾಯಕನಹಳ್ಳಿ ಬಿಕ್ಕೋಡು ಹಾಸನ ಬೇಲೂರು ಚನ್ನಗಿರಿ ಮುಂತಾದ ಮಠಗಳಿಗೆ ಸದರಿ ನೀಲಲೋಚನಪ್ಪನವರನ್ನು ನೇಮಿಸಿ ಹಾರನಹಳ್ಳಿ ಯಲ್ಲಿ ಇಟ್ಟು ತಮ್ಮ ಸನ್ನಿಧಾನದಲ್ಲಿ ಇದ್ದ ವಿರಕ್ತಮೂರ್ತಿಗಳನ್ನು ಆ ಸೀಮೆಯ ದೇವಭಕ್ತರುಗಳ ಆಚರಣೆಯಬಗ್ಯೆ ಕೆಲವು ಮೂರ್ತಿಗಳನ್ನು ಸದರಿ ಆಸೀಮೆಯ ದೇವಭಕ್ತರ ಸ್ಥಳಂಗಳಿಗೆ ಕಳುಹಿಸಿಕೊಟ್ಟು ಆಮೇಲೆ ಸದರಿ ದೇವಭಕ್ತರುಗಳನ್ನು ಕರಸಿಕೊಂಡು ಅವರಿಗೆ ರಾ|| ಕೆಂಪಿನ ಸಿದ್ಧ ಬಸವ ಸ್ವಾಮಿಗಳವರು ಅಪ್ಪಣೆಕೊಟ್ಟದ್ದು ಏನಂದರೆ

ರಾ|| ಚಿತ್ರದುರ್ಗ ದ ಸ್ವಾಮಿಗಳವರು ಹಳೇಬೀಡು ಕಲ್ಮಠದ ಬಳಕೆ ಬಡುವವರೆವಿಗೂ ಅವರ ಮತ್ತು ಅವರ ಬಗೆ ಗಣಂಗಳ ಆಚರಣೆ ಮಾಡಲಾಗದು, ಹಾಂಗೂ ಸದರಿ ಚನ್ನವೀರಯ್ಯನ ಬಳಕೆ ಈ ಸೀಮೆಯಲ್ಲಿ ಮಾಡಿದ ದೇವಭಕ್ತರಲ್ಲಿ ಬಳ ಕೆ ಮಾಡಬಾರದು, ನೀವು ನಮಗೆ ಅರಿಕೆ ಮಾಡಿಕೊಂಡಪ್ರಕಾರ ನಡೆಯ ಬೇಕು, ಎಂದು ತಮ್ಮ ಶಿಷ್ಯರಾದನೀಲಲೋಚನಪ್ಪನವರು ಮೊದಲಾದ ದೇ ವಭಕ್ತರಿಗೆ ಅಪ್ಪಣೆಕೊಟ್ಟ ಆಶೀರ್ವಾದವನ್ನು ಮಾಡಿ ಕಳುಹಿಸಿದ ಬಳಿಕ

ಇತ್ತ ತಮ್ಮ ಸನ್ನಿಧಾನದ ಕೂಡ ಚಿತ್ರದುರ್ಗದಿಂದ ತಮ್ಮ ಆಚರ ಣೆ ಹಿಡಿದು ಬಂದ ತಮ್ಮ ಗುರುಗಳಾದ ರಾ|| ಕುಮಾರ ಸ್ವಾಮಿಗಳವರು ಕೊಟ್ಟ ಚರಂತಿಗೆಒಂಬತ್ತು ಬುಡಕಟ್ಟಿನ ಚರಮೂರ್ತಿಗಳು ಮತ್ತು ವಿರಕ್ತ

ರುಗಳು ತಮ್ಮ ಗುರುವಿನ ಗುರುಗಳಾದ ರಾ॥ ಸೋಡಸಿದ್ಧಲಿಂಗ ಸ್ವಾಮಿಗಳವರು ಕೊಟ್ಟ ಚರಂತಿಗೆ ಹನ್ನೊಂದು ಬುಡಕಟ್ಟಿನ ಚರಮೂರ್ತಿಗಳು ಮತ್ತು ವಿರಕ್ತರುಗಳು ರಾ॥ ತಾವು ಕೊಟ್ಟ ಚರಂತಿಗೆ ಐದು ಬುಡಕಟ್ಟಿನ ಚರಮೂರ್ತಿಗಳು ಮತ್ತು ವಿರಕ್ತರುಗಳು ಈ ೧೬ ಬುಡಕಟ್ಟಿನ ಚರಮೂರ್ತಿಗಳು ಮತ್ತು ವಿರಕ್ತರು ಮೊದಲಾದ ಈ ಬುಡಕಟ್ಟಿಗೆ ಸಂಬಂಧಪಟ್ಟ ಸಕಲ ಗುರು ಚರಮೂರ್ತಿಗಳು ವಿರಕ್ತರು ಹೀಗೆ ತಮ್ಮ ಸನ್ನಿಧಿಯಲ್ಲಿ ಇದ್ದವರಿಗೆ ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗಳವರು ಅಪ್ಪಣೆಕೊಟ್ಟದ್ದು ಏನೆಂದರೆ

ನೀವು ಸಮಸ್ತರೂ ಚರಸಮೇತರಾಗಿ ನಿಮ್ಮ ಇಚ್ಛೆ ಇದ್ದ ದೇಶಂಗಳಿಗೆ ದಯಮಾಡಿಸಿ ಆ ದೇಶದ ದೇವಭಕ್ತರುಗಳನ್ನು ನಿಮ್ಮ ಭಕ್ತರನ್ನು ಮಾಡಿಕೊಂಡು ಆ ದೇಶಗಳಲ್ಲಿ ಮಠಮಾನ್ಯಗಳನ್ನು ಸಂಪಾದಿಸಿ ಆ ಮಠಗಳಲ್ಲಿ ನೀವು ಇದ್ದುಕೊಂಡು ಅಲ್ಲಿಯ ದೇವಭಕ್ತರಿಗೆ ರಾ॥ ಚಿತ್ರದುರ್ಗದ ಗುರುಸಿದ್ಧಸ್ವಾಮಿಗಳವರು ತೆಗೆದುಕೊಂಡ ಹಳೇಬೀಡ ಬಳಕೆಯ ವಿಚಾರವನ್ನು ತಿಳಿಸಿ ಆ ದುರ್ಗದ ಬಗೆ ಸಂಬಂಧದ ಗಣಂಗಳ ಆಚರಣೆಯನ್ನು ಬಿಡಿಸಿ ನಿಮ್ಮ ಆಚರಣೆಯನ್ನು ಹಿಡಿದು ಭಕ್ತರುಗಳಲ್ಲಿ ಆಚರಿಸಿಕೊಂಡು ನಮ್ಮ ಆಚರಣೆಯನ್ನು ಪ್ರಬಲಿಸಿಕೊಂಡು ವರುಷಕ್ಕೆ ಒಂದು ವೇಳೆ ನಮ್ಮ ಸನ್ನಿಧಾನಕ್ಕೆ ಬಂದು ಕಾಣಿಕೆಯನ್ನು ಒಪ್ಪಿಸಿ ದರ್ಶನಾಶೀರ್ವಾದಗಳನ್ನು ತೆಗೆದುಕೊಂಡು ಹೋಗಿ ನಮ್ಮ ಗುರುಗಳಾದ ರಾ॥ ಕುಮಾರಸ್ವಾಮಿಗಳವರ ನಾಮವನ್ನು ಪ್ರಸಿದ್ಧಕ್ಕೆ ತರಬೇಕೆಂದು ಅಪ್ಪಣೆಯನ್ನು ಕೊಟ್ಟು

ಸನ್ನಿಧಿಯಲ್ಲಿರುವ ಗಣ ಸಮೂಹದ ಪೈಕಿ ಹತ್ತೆಂಟು ಚರಮೂರ್ತಿಗಳು ಇಪ್ಪತ್ತು ಮೂವತ್ತು ವಿರಕ್ತರು ಅಂತು ಕೂಡಿ ನೂರಾರು ಗಣಂಗಳನ್ನು ಇಟ್ಟುಕೊಂಡು ಉಳಿದ ಗುರುಚರಮೂರ್ತಿಗಳನ್ನು ದೇಶಾಟನಕ್ಕೆ ಕಳುಹಿಸಿಕೊಟ್ಟು ತಾವು ದಯಮಾಡಿಸಬೇಕೆಂಬುವಪರೋಕ್ಷಗೆ

ರಾ॥ ಕೆಂಪಿನಸಿದ್ದಬಸವಸ್ವಾಮಿಗಳವರಿಗೆ ದಯಮಾಡಿಸಿ ಐದಾರು ವರುಷ ಆಯಿತು ಅಲ್ಲಿ ಇಸಳೂರ ಸೋದೆಯಲ್ಲಿ ಇರುವ ತಮ್ಮ ಸನ್ನಿಧಿ ಮಠಗಳಲ್ಲಿ ಇದ್ದ ಗುರುಚರಮೂರ್ತಿಗಳು ನಾವು ಮುಂತಾದ ಸಕಲ ಇಲ್ಲಿ ಇರುವ ದೇವಭಕ್ತರೂ ಪಾದ ದರ್ಶನಾರ್ಥವಾಗಿ ಅಪೇಕ್ಷೆಯಾಗಿದೆ ಚಿತ್ತಯಿಸಬೇಕೆಂದು ಸೋದೆ ಸದಾಶಿವರಾಜರ ಬಿನ್ನಹ ಪತ್ರವು

ಬರಲು,

ಆ ಪತ್ರವನ್ನು ನೋಡಿಕೊಂಡು ತಮ್ಮ ೭-೨ ಬಿರುದುಗಳೊಡನೆ ಹಾರನಹಳ್ಳಿಯಿಂದ ಇಸಳೂರಿಗೆ ದಯಮಾಡಿಸಲು ಅಲ್ಲಿಯ ದೇವಭಕ್ತರು ಉತ್ಸವದಿಂದ ಸ್ವಾಮಿಗಳವರನ್ನು ಕರೆಕೊಂಡು ಹೋಗಿ ಈ ರಾ|| ಕೆಂಪಿನಸಿದ್ಧಬಸವ ಸ್ವಾಮಿಗಳವರನ್ನು ತಮ್ಮ ಭಕ್ತಿಯಿಂದ ತಮ್ಮ ಸ್ಥಳದಲ್ಲಿ ಇರುವ ಸನ್ನಿಧಿ ಮಠದಲ್ಲಿ ಇಟ್ಟುಕೊಳ್ಳಲು;

ಸ್ವಾಮಿಗಳವರು ಸೋದೆ ಅರಸು ಮುಂತಾದ ಆ ಸೀಮೆ ದೇವಭಕ್ತರುಗಳನ್ನು ಕರಸಿಕೊಂಡು ಅವರುಗಳಿಗೆ ರಾ||ಚಿತ್ರದುರ್ಗದ ಗುರುಸಿದ್ಧ ಸ್ವಾಮಿಗಳು ಅವರ ಬಗೆ ಚರಮೂರ್ತಿಗಳು ಸಹ ಹಳೇಬೀಡು ಕಲ್ಮಠದ ಸ್ಥೂಲ ಬಳಕೆಯಲ್ಲಿ ಕೂಡಿದ ಕಾರಣ ಆ ಸಂಬಂಧದ ಮೂರ್ತಿಗಳ ಆಚರಣೆ ಬಿಡಿಸಿ ತಮ್ಮ ಆಚರಣೆ ಉಂಟುಮಾಡಿಕೊಂಡ ಆ ಸೀಮೆ ಆಚಾರ ವಿಚಾರ ದಂಡ ಖಂಡನೆ ತಪ್ಪು ನೆಪ್ಪು ಮುಂತಾದ್ದಕ್ಕೆ ತಾವೇ ಬಾಧ್ಯರಾಗಿ ದುರಾಚಾರದಲ್ಲಿ ಇದ್ದವರ ಸನ್ಮಾರ್ಗದಲ್ಲಿ ತರುತ್ತ ಆ ಸೀಮೆ ದೇವಭಕ್ತರಲ್ಲಿ ವರ್ಷಾಶನ ದೀಪಾರಾಧನೆ ಕಾಣಿಕೆ ಮೊದಲಾದ ಸಕಲ ಕಾರ್ಯಗಳಲ್ಲಿ ಬರತಕ್ಕ ಬಾಬು ಮೊದಲಾದ ಬಾಬು ಕಾಣಿಕೆಗಳನ್ನು ತರಿಸಿಕೊಳ್ಳುತ್ತ ತಮ್ಮ ಗಣ ಸಮೋಹಡೊಡನೆ ದಾಸೋಹಂಗಳಿಂದ ತಮ್ಮ ಇಸಳೂರು ಮಠದಲ್ಲಿ ಕೆಲವು ತಮ್ಮ ಸನ್ನಿಧಾನದಲ್ಲಿ ಇರುವ ಗುರುಚರಮೂರ್ತಿಗಳನ್ನು ಇಟ್ಟು ತಾವು ಸೋದೆಯಲ್ಲಿ ದೊರೆಗಳ ಭಕ್ತಿಯಲ್ಲಿ ಲಿಂಗಪೂಜಾ ಜಂಗಮ ದಾಸೋಹಂಗಳಿಂದ ಗಣಸಮೂಹಂಗಳಿಂದ ರಾ||ಕೆಂಪಿನಸಿದ್ಧಬಸವ ಸ್ವಾಮಿಗಳವರು ಸೋದೆಯಲ್ಲಿ ಇರಲು,

ಇತ್ತ ಹಾರನಹಳ್ಳಿಯಿಂದ ಹೋದ ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರ ಬಗೆ ಚರಮೂರ್ತಿಗಳು ಮುಂತಾದ ವಿರಕ್ತರು ಮುಂತಾದವರು ದೇಶಮಧ್ಯದಲ್ಲಿ ಉತ್ತರದೇಶ ಮುಂತಾದ ಸಕಲ ಪೇಟೆಯುಮನೆ ದೇವಭಕ್ತರುಗಳಿಗೆ ಸದರಿ ಗುರುಚರಮೂರ್ತಿಗಳು, ರಾ||ಗುರುಸಿದ್ಧಸ್ವಾಮಿಗಳವರು ಚಿತ್ರದುರ್ಗದ ಮಠದಲ್ಲಿ ಹಳೇಬೀಡು ಕಲ್ಲುಮಠದ ಸ್ಥೂಲ ಬಳಕೆ ಕೂಡಿಕೊಂಡ ವಿಷಯವಾಗಿ ನಡೆದ ಸಕಲ ಪೂರ್ವೋತ್ತರವನ್ನು ತಿಳಿಸಿದ್ದರಿಂದ ಆ ಭಕ್ತಗಣಂಗಳು ಈ ಚಿತ್ರಕಲ್ಲದುರ್ಗದ ಬಗೆ ಗುರುಚರಮೂರ್ತಿಗಳ ಬಳಕೆ ಆಚರಣೆ ಬಿಟ್ಟು ರಾ|| ಕುಮಾರಕೆಂಪಿನಸಿದ್ಧಬಸವಸ್ವಾಮಿಗಳವರ ಬಗೆ ಗುರುಚರಮೂರ್ತಿಗಳವರಿಗೆ ತಮ್ಮ ಭಕ್ತಿ

ಯಿಂದ ಅವರಿಗೆ ಮಠಮಾನ್ಯ ರುಸುಮು ಕಾಣಿಕೆ ಬಾಬು ವಗೈರೆ ಮಾ ಡಿಕೊಟ್ಟು ಒಪ್ಪಿಸಿ ಆ ಮೂರ್ತಿಗಳನ್ನು ತಮ್ಮ ಆಚರಣೆಗೋಸ್ಕರ ಇಟ್ಟುಕೊಂಡು ಸದರಿ ದುರ್ಗದವರ ಆಚರಣೆ ಹಿಡಿದ ಸಕಲ ಬುಡಕಟ್ಟಿನ ಮೂರ್ತಿಗಳ ಆಚರಣೆ ಬಳಕೆ ಸಹ ಬಿಟ್ಟು ರಾ|| ಕುಮಾರಬಗೆ ಗಣಂಗಳ ಆಚರಣೆಯನ್ನು ಹಿಡಿದುಕೊಂಡು ನಡೆದುದರಿಂದ ರಾ|| ಮುರುಗಿ ಬಗೆ ಗಣಂಗಳ ಆಚರಣೆಯು ನಿಂತು ಕುಮಾರ ಬಗೆಯು ಗಣಂಗಳ ಆಚರಣೆಯೂ ಮಠಗಳೂ ಉತ್ತರದೇಶ ಮೊದಲಾದ ಹಳೇಬೀಡ ಸೀಮೆ ನಗರದ ಸೀಮೆ ಮುಂತಾದ ಸಕಲ ದೇಶಗಳಲ್ಲಿ ಪ್ರಬಲವಾಗಲು,

ಸದರಿ ಮುರುಗಿ ಗಣಂಗಳು ಅವರ ಅಭಿಮಾನಿಗಳಾದ ದೇವಭಕ್ತರು ಮುರುಗಿ ಬಗೆ ಮಠಗಳ ಹಾಸಲು ಬಾಬು ಆಚರಣೆ ಸಹ ನಿಂತದ್ದರಿಂದ ರಾ|| ಚಿತ್ರದುರ್ಗದ ಗುರುಸಿದ್ಧಸ್ವಾಮಿಗಳವರಿಗೆ ಸದರಿ ದೇವಭಕ್ತರು ಸದರಿವಿರಕ್ತರು ಮುಂತಾದ ಚರಮೂರ್ತಿಗಳು ಬಿನ್ನಹಪತ್ರ ಮುಖದಿಂದ ಸದರಿ ಕುಮಾರಬಗೆ ಗಣಂಗಳ ಮಠಗಳು ಆಚರಣೆಗಳು ಪ್ರಬಲವಾದದ್ದರಿಂದ ಹಳೇಬೀಡು ಬಳಕೆಯ ದೆಸೆಯಿಂದ ನಮ್ಮ ಬಳಕೆ ಆಚರಣೆ ನಮ್ಮ ಮಠಗಳ ಹಾಸಲು ಬಾಬುಗಳು ಸಹ ನಿಂತವು. ಮುಂದೆ ಸದರಿ ಕುಮಾರ ಬಗೆ ಗಣಂಗಳಿಗೆ ಗುರುಗಳಾದ ರಾ|| ಕೆಂಪಿನಸಿದ್ಧಬಸವಸ್ವಾಮಿಗಳೂ ತಾವೂ ರಾಜಿ ಆವರೆ ಒಂದುವೇಳೆ ಕ್ಷೇಮವಾಗುತ್ತದೆ, ಇಲ್ಲವೆ,ಅವರಿಗೆ ತಕ್ಕ ಬಂದೋಬಸ್ತು ಮಾಡಿ ಅವರನ್ನು ನಮ್ಮೊಳಗೆ ತೆಗೆದುಕೊಂಬುವದೇ ಆಗಲಿ ಅಥವಾ ಅವರನ್ನು ಬಿಡುವದೇ ಆಗಲಿ ಈ ಎರಡಕ್ಕೊಂದು ಆಗುವವರೆವಿಗೂ ಕ್ಷೇಮವು ಉಂಟಾಗುವದಿಲ್ಲ, ಇಷ್ಟು ಸನ್ನಿಧಾನವು ಮಾಡದೆ ಹೋದರೆ ಹಿಂದೆ ರಾ|| ಹಿರಿಯಕರ್ತರಾದ ರಾ|| ಕಟ್ಟಿಗೆಹಳ್ಳಿ ಸ್ವಾಮಿಗಳವರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರೇ ಬಾಧ್ಯರು, ರಾ|| ಶಿಖಾ ಪಟ್ಟಕ್ಕೆ ಮುರುಗಾಸ್ವಾಮಿಗಳವರ ತರುವಾಯದಲ್ಲಿ ತಾವೇ ಬಾಧ್ಯರು, ಈ ಪ್ರಕಾರ ರಾ|| ಮುರುಗಾಸ್ವಾಮಿಗಳು ನೋಡಸಿದ್ಧಲಿಂಗಸ್ವಾಮಿಗಳು ಇವರ ತರುವಾಯದ ಕುಮಾರಸ್ವಾಮಿಗಳು ಇವರ ಕಾಲದಲ್ಲಿ ಉಭಯ ಪಟ್ಟದವರೇ ಸಕಲ ಬುಡಕಟ್ಟಿನ ಚರಮೂರ್ತಿಗಳಿಗೂ ವಿರಕ್ತರಿಗೂ ಗುರುಗಳಾಗಿ ಚಿತ್ರದುರ್ಗದ ಮಠದಲ್ಲಿ ಇದ್ದುಕೊಂಡು ನಮ್ಮಗಳ ಕಡೆಯಿಂದ ಕಾಣಿಕೆ ಮುಂತಾದ್ದು ತೆಗೆದುಕೊಳ್ಳುತ್ತಾ ಇದ್ದರು, ಹೀಗೆ ಇದ್ದಬಳಿಕ ಆವರಿಗೆ ಸನ್ನಿಧಾನವು ಬಂದೋಬಸ್ತು ಮಾಡುವದು ಆಗದಿದ್ದರೆ ತಮ್ಮ ಸನ್ನಿಧಿಯು ಮೋ

ಲಿ ಮಾತು ಇಟ್ಟು ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರ ಕಡೆಗೆ ನಾವು ಸಮಸ್ತರೂ ಆಗುತ್ತೇವೆ, ಎಂದು ರಾ|| ಗುರುಸಿದ್ಧ ಸ್ವಾಮಿಗಳವರಿಗೆ ಅರಿಕೆ ಮಾಡಿಕೊಂಡದ್ದರಿಂದ

ಈ ವಿಚಾರವು ಸದರಿ ತಪ್ಪು ಮಾತು ಹಿಡಿವ ಗುರುಚರಮೂರ್ತಿಗಳು ಮೊದಲಾದ ದೇವಭಕ್ತರು ಬರಸಿ ಕಳುಹಿಸಿದ ಸದರಿ ಬಿನ್ನಹ ಪತ್ರಗಳನ್ನು ನೋಡಿಕೊಂಡು ಕೋಪಾರೂಢರಾಗಿ ಆಕೂಡಲೇ ಚಿತ್ರದುರ್ಗದ ದೊರೆಗಳು ಮುಂತಾದ ದೇವಭಕ್ತರನ್ನು ಕರಸಿ ಆ ಬಿನ್ನಹಪತ್ರಗಳಲ್ಲಿ ಇದ್ದ ವಿವರವನ್ನು ತಿಳಿಸಿ ಸಮಸ್ತರಿಗೆ ಅಪ್ಪಣೆ ಕೊಟ್ಟದ್ದು, ಏನಂದರೆ

ರಾ|| ಕೆಂಪಿನಸಿದ್ಧಬಸವಪ್ಪನವರ ಕುಮಾರಬಗೆ ಮಠಗಳು ಹಳೇಬೀಡು ಸೀಮೆ ಮೊದಲಾದ ಉತ್ತರದೇಶಗಳಲ್ಲಿ ಸಹ ಪ್ರಬಲವಾಗಿ ಅವರ ಬಗೆ ಗಣಂಗಳ ಆಚರಣೆಯೇ ಮುಖ್ಯವಾಗಿ ನಮ್ಮ ಬಗೆ ಮಠಗಳು ಮುಂತಾದ ಆಚರಣೆಯು ಕಟ್ಟಾದ್ದರಿಂದ ನಮ್ಮೊಳಗೆ ಇದ್ದ ಬುಡಕಟ್ಟಿನ ಸಕಲ ಗುರುಚರಮೂರ್ತಿಗಳೂ ಸಹ ಸದರಿ ರಾ|| ಕುಮಾರಬಗೆ ಗಣಂಗಳೊಳಗೆ ಹೊಂದಿಕೊಂಬುವಂತೆ ಕಾಣಿಸುತ್ತದೆ ಇದರ ಬಂದೋಬಸ್ತು ಬಗ್ಯೆ ಏನು ಮಾಡಬೇಕೆಂದು ದೊರೆಗಳು ಮೊದಲಾದವರಿಗೆ ಅಪ್ಪಣೆ ಆಗಲು, ಅವರು ಸ್ವಾಮಿಗಳವರ ಕೂಡ ಯೋಚನೆಮಾಡಿಕೊಂಡ ಮೇಲೆ

ರಾ|| ಸೋದೆ ದೊರೆಗಳು ಮೊದಲಾದ ಸಿರಸಿ ಆಸಳೂರ ದೇವಭಕ್ತರಿಗೆ ಸಹ ಇವರಿಗೆ ಸನ್ನಿಧಾನದ ಆಶೀರ್ವಾದ ಪತ್ರಮುಖದಿಂದ ನಮಗೂ ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರಿಗೂ ಹಳೇಬೀಡ ಬಳಕೆಯ ದೆಸೆಯಿಂದ ನಮ್ಮ ಆವರ ಆಚರಣೆಗಳು ಬೇರೆ ಆಗಿ ಇರುತ್ತವೆ, ಆ ಬಳಕೆ ನಾವು ಕೂಡಿಕೊಂಡ ಮೇಲೆ ಅವರು ಕೂಡಿಕೊಂಡಂತೆ ಆಯಿತು, ಇದರ ವಿಷಯಕ್ಕೆ ಸದರಿ ಸ್ವಾಮಿಗಳವರ ಈ ದುರ್ಗದ ನಮ್ಮ ಸನ್ನಿಧಾನಕ್ಕೆ ಕರಕೊಂಡು ಬಂದು ನಮ್ಮ ಈ ಉಭಯರನ್ನು ರಾಜಿ ಮಾಡಬೇಕೆಂದು ತಿಳಿಸಲು,

ಇದರ ದೆಸೆಯಿಂದ ರಾ|| ಚಿತ್ರದುರ್ಗದ ಸನ್ನಿಧಾನದಿಂದ ಸೋದೆ ದೊರೆಗಳು ಮೊದಲಾದವರಿಗೆ ಆಶೀರ್ವಾದ ಪತ್ರಗಳು ಬಂದ ವರ್ತಮಾನವನ್ನು ರಾ|| ಕೆಂಪಿನಸಿದ್ಧಬಸವ ಸ್ವಾಮಿಗಳವರು ಕೇಳಿ ಈ ಸೀಮೆಯ ದೊರೆಗಳು ಮೊದಲಾದ ದೇವಭಕ್ತರು ಗೊತ್ತಿ

ನವರು ಅಲ್ಲವೆಂದು ತಿಳಿದುಕೊಂಡು ಆ ಮೇಲೆ ತಮ್ಮ ಸನ್ನಿಧಾನದಲ್ಲಿ ಇರುವ ತಮ್ಮ ಖಾಸ ಚರಮೂರ್ತಿಗಳಾದ ರಾ|| ಕೆಂಪಿನಶಿವಲಿಂಗಪ್ಪನ ವರಿಗೆ ಸ್ವಾಮಿಗಳವರು ಅಪ್ಪಣೆಕೊಟ್ಟದ್ದು ಏನೆಂದರೆ

ಆ ಚರಮೂರ್ತಿಗ ಳಿಗೆ ಚಿತ್ರದುರ್ಗದಿಂದ ತಮ್ಮ ರಾಜೀದಿಸೆಯಿಂದ ಸೋದೆ ದೊರೆಗಳು ಮೊದಲಾದವರಿಗೆ ಆಶೀರ್ವಾದಪತ್ರವು ಬಂದದ್ದನ್ನು ತಿಳಿಸಿ ಆ ಮೇಲೆ ಈ ಸೀಮೆಯವರು ಗೊತ್ತಿನವರು ಅಲ್ಲವಾದ ಕಾರಣ ಈ ಸೋದೆ ಸೀ ಮೆಯಲ್ಲಿ ನಮ್ಮ ಗುರುಗಳಾದ ರಾ|| ನೋಡಸಿದ್ಧಲಿಂಗಸ್ವಾಮಿಗಳವರ ಗದ್ದುಗೆ ಇವರ ಶಿವಾನುಭಾವ ಚರಂತಿಗೆ ಪಟ್ಟದ ರಾ||ಕುಮಾರಸ್ವಾಮಿ ಗಳವರ ಗದ್ದುಗೆಗಳು ಇದ್ದು, ಹೀಗೆ ನಮ್ಮ ಮುಖ್ಯವಾದ ಮಠಗಳು ಇದ್ದಾಗ್ಯೂ ಈ ಸೀಮೆ ಮಠಗಳಲ್ಲಿ ಇರಬಾರದು, ಮುಂದೆ ಇಸಳೂರನಮ್ಮಗದ್ದುಗೆ ಮಠದಲ್ಲಿ ಉತ್ಪಾತವಾದ ಕಾರ್ಯಗಳು ನಡೆಯತಕ್ಕವು ಇರುತ್ತವೆ ಎಂ ದು ತಮ್ಮ ದಿವ್ಯಜ್ಞಾನಚಿತ್ತದಿಂದ ಅಪ್ಪಣೆಯನ್ನು ಕೊಟ್ಟ ಆ ಬಳಿಕ ನೀವು ನಮ್ಮಲ್ಲಿ ಇರುವ ದ್ರವ್ಯ ಮೊದಲಾದ ಸಕಲ ಸಾಮಾನುಗಳು ಪುಸ್ತಕ ಪುರಾಣ ಸಹ ಆನೆ ಕುದುರೆಗಳು ಒಂಟೆಗಳು ರಥ ವಹಿಲಿ ಮುಂತಾದ ಸಕಲ ಬಿರುದು ಸಹ ತೆಗಸಿಕೊಂಡು ಇಲ್ಲಿಯವರು ಎಲ್ಲಿಗೆ ದ ಯಮಾಡಿಸುವಿರಿ ಎಂತ ನಿಮ್ಮನ್ನು ಕೇಳಲು, ಅವರಿಗೆ ಭಿಕ್ಷಾಟನಕ್ಕೆ ದೆ ಶದ ಮೇಲೆ ದಯಮಾಡಿಸುತ್ತಾ ಇದ್ದೇವೆ, ಎಂತ ತಿಳಿಸಿ ರಾಯರಹುಬ್ಬ ಳ್ಳಿಗೆ ದಯಮಾಡಿಸಿ ಈ ಸಾಮಾನುಗಳನ್ನು ಬಸವಪ್ಪಸೆಟ್ಟರಲ್ಲಿ ಇಟ್ಟು, ಆದೇ ಸ್ಥಳದಲ್ಲೇ ಆಗಲಿ ಮತ್ತು ನಿಮ್ಮ ಮನಸ್ಸಿಗೆ ಬಂದ ಎರಡನೆಯ ಪೇ ಟೆಮನೆ ಸ್ಥಳಗಳಲ್ಲಿ ಆಗಲೀ ಅಲ್ಲಿ ಭಕ್ತರ ಭಕ್ತಿಯಲ್ಲಿ ನಮ್ಮ ಸನ್ನಿಧಾನ ವು ಇರುವುದಕ್ಕೆ ಯೋಗ್ಯವುಳ್ಳ ಸ್ಥಳಗಳಲ್ಲಿ ಮಠ ಕಟ್ಟಿಸಬೇಕೆಂದು ಅ ಪ್ಪಣೆಯನ್ನು ಕೊಟ್ಟ ಆ ಚರಮೂರ್ತಿಗಳಿಗೆ ಆಂದೋಳಿಕ ಮುಂತಾದ ಸದರಿಪ್ರಕಾರ ಸಕಲ ಸರಂಜಾಮನ್ನು ಕೊಟ್ಟು ಆನೆ ಒಂಟೆ ಗಾಡಿ ಎತ್ತುಗಳಮೇಲೆ ಸಾಮಾನುಗಳನ್ನು ಹೇರಿಸಿ ಈ ಚರಮೂರ್ತಿಗಳ ಕೂಡ ತಮ್ಮ ಸನ್ನಿಧಾನದಲ್ಲಿ ಇರುವ ಗಳ ಪುಂಡ ವಿರಕ್ತಗಣಂಗಳು ಮೊದ ಲಾದ ಕೆಲವು ಗಣ ಸಮೂಹದೊಡನೆ ಆ ಚರವನ್ನು ರಾಯರಹುಬ್ಬಳ್ಳಿ ಗೆ ಕಳುಹಿಸಲು,

ಇತ್ತ ರಾ||ಕೆಂಪಿನಸಿದ್ಧಬಸವಸ್ವಾಮಿಗಳು ರಾ|| ದುರ್ಗ ದಿಂದ ನಮಗೆ ನಿರೂಪು ಬಂದ ಕಾರಣ ಬೇಸರ ಆದರು ಎಂತ ಸೋದೆ

ದೊರೆಗಳು ಸಿರಸಿ ಇಸಳೂರು ಮುಂತಾದ ದೇಸಭಕ್ತರು ಬಂದು ಸವರಿ ಸ
ನ್ನಿಧಾನಕ್ಕೆ ಸಾಷ್ಟಾಂಗ ಪ್ರಣುತರಾಗಿ ತವಗ್ರೆ ರಾ|| ಚಿತ್ರದುರ್ಗದ
ರು ಬಂದು ಸಾಷ್ಟಾಂಗ ಪ್ರಣುತರಾಗಿ ಸನ್ನಿಧಿಗೆ ಚಿತ್ರದುರ್ಗದ ರಾ||
ಗುರುಸಿದ್ಧಸ್ವಾಮಿಗಳವರಿಂದ ತಮಗೆ ಬಂದ ಆಶೀರ್ವಾದ ನಿರೂಪಗ
ಳನ್ನು ತೋರಿಸಿದಲ್ಲಿಯೇ ಸನ್ನಿಧಾನಕ್ಕೆ ಬೇಸರ ಹುಟ್ಟಿ ಆ ಕೂಡಲೆ
ಸವಾರಿಯು ಹೊರಡುವದನ್ನು ನೋಡಿ ದೊರೆಗಳು ಮುಂತಾದ ದೈವವ
ರು ಕಂಡು ಸಾಷ್ಟಾಂಗ ಪ್ರಣುತರಾಗಿ ಅರಿಕೆ ಮಾಡಿಕೊಂಡದ್ದು ಏ
ನಂದರೆ

ಸ್ವಾಮಿಸಾದವು ಬೇಸರವನ್ನು ಮಾಡಬಾರದು ದುರ್ಗದ ಸ್ವಾ
ಮಿಗಳು ತಮನ್ನು ಕರಕೊಂಡು ಬಂದು ರಾಜಿ ಮಾಡಿಸಬೇಕೆಂದು ಆ
ಶೀರ್ವಾದ ನಿರೂಪಗಳನ್ನು ಕಳಿಸಿದ್ದರಿಂದ ಸನ್ನಿಧಾನಕ್ಕೆ ಹಾಜರ ಮಾ
ಡಿದೆವು, ಅವರು ಕೂಡಿಕೊಂಡ ಹಳೇಬೀಡ ಕಲ್ಲವಠದ ಸ್ಥಲವಾದ ಬ
ಳಕೆ ಬಿಡದೆ ಇದ್ದರೆ ಅವರ ಆಚರಣೆ ಬಳಕೆಯನ್ನು ಎಷ್ಟು ಮಾತ್ರ ಕ್ಷಮಾ
ಪಲಿಕ್ಕಿಲ್ಲನೆಂದು ಬಹುತರವಾಗಿ ಅರಿಕೆಮಾಡಿಕೊಂಡು ರಾ|| ಕೆಂಪಿನಸಿದ್ಧ
ಬಸವಸ್ವಾಮಿಗಳವರನ್ನು ನೋಡಿ ದೊರೆಗಳು ತಮ್ಮ ಭಕ್ತಿಯಲ್ಲಿ ನೋ
ಡಿ ಸ್ಥಳದಲ್ಲಿ ಇಟ್ಟುಕೊಂಡರು

ಆ ಬಳಿಕ ದೊರೆಗಳು ಸ್ವಾಮಿಗಳವರ
ಭಯದಿಂದ ರಾ|| ಚಿತ್ರದುರ್ಗದ ಸನ್ನಿಧಾನಕ್ಕೆ ಅವರಿಂದ ಬಂದ ಪ
ತ್ರಕ್ಕೆ ಉತ್ತರವಾದ ಬಿನ್ನಹ ಪತ್ರವನ್ನು ಬರಸಿ ಕಳುಹಿಸಲಿಲ್ಲ. ಸಿರಸಿ
ಇಸಳೂರು ದೈವದವರು ಮಾತ್ರ ತಮಗೆ ಬಂದ ಆಶೀರ್ವಾದ ನಿರೂಪ
ಗಳಿಗೆ ಉತ್ತರವಾದ ಬಿನ್ನಹ ಪತ್ರದಲ್ಲಿ ರಾ|| ಚಿತ್ರದುರ್ಗದ ಸನ್ನಿಧಾ
ನಕ್ಕೆ (ಸ್ವಾಮಿಸಾದವು) ತಮ್ಮ ಸವಾರಿಯು ಖುದ್ದು ಈ ಸೀಮೆಗೆ ದ
ಯಮಾಡಿಸಿ ಆ ದೊರೆಗಳಿಗೆ ದರ್ಶನವನ್ನು ಕೊಟ್ಟು ಆ ದೊರೆಗಳು ತಾ
ವು ಏನಾದರೂ ಪ್ರಯತ್ನ ಮಾಡಿದರೆ ರಾ|| ಕೆಂಪಿನಸಿದ್ಧಬಸವಸ್ವಾಮಿಗಳ
ವರೂ ತಾವೂ ರಾಜಿ ಆಗಬಹುದಲ್ಲದೆ ಉಳಿದ ಯತ್ನದಿಂದ ಆಗುವಂತೆ ಇ
ಲ್ಲ ಸನ್ನಿಧಾನವು ಈ ಸೀಮೆ ದೊರೆಗಳಿಗೂ ನಮಗೂ ಬರಸಿ ಕಳುಹಿ
ಸಿದ ಆಶೀರ್ವಾದ ನಿರೂಪಗಳನ್ನು ರಾ|| ಕೆಂಪಿನಸಿದ್ಧಬಸವಸ್ವಾಮಿಗ
ಳವರಿಗೆ ದೊರೆಗಳು ಮುಂತಾದ ನಾವು ತೋರಿಸಿದ್ದರಿಂದ ಸನ್ನಿಧಾನಕ್ಕೆ
ಬೇಸರ ಹುಟ್ಟಿ ಈ ಸ್ಥಲಗಳನ್ನು ಬಿಟ್ಟು ದಯಮಾಡಿಸುತ್ತಾ ಇದ್ದರು
ಇದರಿಂದ ಬಹುತರ ಅರಿಕೆಮಾಡಿಕೊಂಡು ದೊರೆಗಳು ತಮ್ಮ ಭಕ್ತಿಯ

ಲ್ಲಿ ಸೋದೆ ಸ್ಥಳದಲ್ಲಿ ಸ್ವಾಮಿಗಳವರನ್ನು ಇಟ್ಟುಕೊಂಡು ಇದ್ದಾರೆ. ಆ ಸ್ವಾಮಿಗಳವರು ಅವರ ಕಡೆಯಿಂದ ಅವರ ಸನ್ನಿಧಾನದಲ್ಲಿ ಇರುವ ಕೆಲವು ಗುರುಚರಮೂರ್ತಿಗಳನ್ನು ನಮ್ಮ ಇಸಳೂರಲ್ಲಿ ಇರುವ ಅವರ ಮಠದಲ್ಲಿ ಇಟ್ಟಿದ್ದಾರೆ, ಎಂಬುದಾಗಿ ಸದರಿ ಪ್ರಕಾರ ಬರಸಿ ರಾ|ಚಿತ್ರದುರ್ಗದ ಸನ್ನಿಧಿಗೆ ಕಳುಹಿಸಲು

ಆ ಸ್ವಾಮಿಗಳವರು ಆ ಬಿನ್ನಹ ಪತ್ರಗಳನ್ನು ನೋಡಿಕೊಂಡು ಕೋಪಾಗ್ನಿಭರಿತರಾಗಿ ಆ ಕೂಡಲೆ ಚಿತ್ರದುರ್ಗದ ದೊರೆಗಳು ಮೊದಲಾದ ದೈವದವರನ್ನು ಕರಸಿಕೊಂಡು ಶಿರಸಿ ಇಸಳೂರಿಂದ ಬಂದ ಬಿನ್ನಹ ಪತ್ರಗಳನ್ನು ತೋರಿಸಲು ಅವರು ನೋಡಿಕೊಂಡು ಸನ್ನಿಧಾನಕ್ಕೆ ಅರಿಕೆಮಾಡಿಕೊಂಡದ್ದು ಏನೆಂದರೆ:–

ಸ್ವಾಮಿಪಾದವು ೭೨ ಬಿರುದುಗಳಿಂದ ಗಣ ಸಮೂಹದೊಡನೆ ಹಿರಿಯಕರ್ತರಾದ ರಾ|| ಕಟ್ಟಿಗೆಹಳ್ಳಿಸ್ವಾಮಿಗಳವರ ಗದ್ದುಗೆ ಇದ್ದ ತಿಳವಳ್ಳಿಗೆಮೊದಲು ದಯಮಾಡಿಸಿ ಅಲ್ಲಿಂದ ತಮ್ಮ ಸನ್ನಿಧಿಯಲ್ಲಿದ್ದ ಒಬ್ಬ ಚರಮೂರ್ತಿಗಳನ್ನು ತಮ್ಮ ಪಲ್ಲಕ್ಕಿಯಲ್ಲಿ ಕೂಡಿಸಿ ಅವರಿಗೆ ತಮ್ಮ ೭೨ ಬಿರುದುಗಳನ್ನು ಹಿಡಿಸಿ ತಮ್ಮ ಸನ್ನಿಧಾನದಲ್ಲಿ ಇದ್ದ ಸಮಸ್ತರಿಗೆ ಇವರೇ ಸ್ವಾಮಿಗಳವರು ಎಂತ ಹೇಳುವಂತೆ ಆಜ್ಞೆಯನ್ನು ಮಾಡಿ ಇಸಳೂರ ರಾ||ಕೆಂಪಿನಸಿದ್ಧಬಸವಸ್ವಾಮಿಗಳವರ ಮಠದಲ್ಲಿಯೇ ಇಳಿಯುವಂತೆ ಅಪ್ಪಣೆಯನ್ನು ಕೊಟ್ಟು ಆ ಮೇಲೆ ಸ್ವಾಮಿಪಾದವು ಸೋದೆ ವೀರಕೋರ ಶಿವಪ್ಪನು ತಮ್ಮ ಅನುಗ್ರಹಪಾತ್ರನು ಆದಕಾರಣ ಅವನಿಗೆ ತಾವು ಆತನ ಮನೆಗೆ ಗುಪ್ತರೂಪಿನಿಂದ ದಯಮಾಡಿಸುವದು, ತಮ್ಮ ಕಡೆ ಒಬ್ಬ ಗೃಹಸ್ಥನನ್ನು ಕಳುಹಿಸಿ ಆಶೀರ್ವಾದ ಪತ್ರಮುಖದಿಂದ ತಿಳಿಸಿ ಆತನಿಂದ ಬಿನ್ನಹಪತ್ರವನ್ನು ಸೋದೆಯಿಂದ ತಿಳವಳ್ಳಿಗೆ ತರಿಸಿಕೊಂಡು ಆಮೇಲೆ ಸದರಿಪ್ರಕಾರ ೭೨ ಬಿರುದುಗಳೊಡನೆ ಚರಮೂರ್ತಿಗಳಾದ ಸ್ವಾಮಿಗಳವರನ್ನು ಇಸಳೂರಿಗೆ ಕಳುಹಿಸಿ ಆ ಬಳಿಕ ಸ್ವಾಮಿಪಾದವು ಸೋದೆಗೆ ಒಬ್ಬಿಬ್ಬರು ಶಿಷ್ಯರನ್ನು ಕರಕೊಂಡು ಗೃಹಸ್ಥರೂಪಿನಿಂದ ದಯಮಾಡಿಸಬೇಕು, ಏನುಕಾರಣವೆಂದರೆ:– ತಮ್ಮ ಗುರುಗಳಾದ ರಾ|| ಮುರುಗಾಸ್ವಾಮಿಗಳು ಅವರ ಗುರುವಿನಗುರುಗಳಾದ ರಾ|| ನೋಡಸಿದ್ಧಲಿಂಗಸ್ವಾಮಿಗಳವರು ಈ ಉಭಯಸ್ವಾಮಿಗಳವರು ರಾ||ಕಟ್ಟಿಗೆಹಳ್ಳಿ ಸ್ವಾಮಿಗಳವರಾದ ಒಂದೇ ಗುರುಗಳ ಶಿಷ್ಯರಾದ ಕಾರಣ ತಮ್ಮೂ ಅವರೂ ಅಣ್ಣತಮ್ಮಗಳಂತೆ ದಾಯಾದಿಗಳಂತೆ

ನಿಮ್ಮೊಳಗೆ ಬೇಸರವು ಇರುವದರಿಂದ ಏಕಾಏಕಿ ಸಹಜತ್ವದಿಂದ ದಯ ಮಾಡಿಸಬಾರದು, ಮುಂದಣ ಪ್ರಸಂಗವು ಹೇಗೆ ಬರುತ್ತದೆಯೋ! ಪಾದವು ಆಸೀಮೆಗೆ ದಯಮಾಡಿಸುವದು ನಮ್ಮ ಸಮಸ್ತರ ಮನಸ್ಸಿಗೆ ಬರುವದಿಲ್ಲ, ಆದರೆ ಈ ಕಾಲಕ್ಕೆ ಯಾರು ಹೇಳಿದರೂ ಸ್ವಾಮಿಪಾದವು ಆಸೀಮೆಗೆ ದಯಮಾಡಿಸುವದು ಬಿಡುವಂತೆ ಇಲ್ಲ. ಆದರೆ ಉಪಾಯವಿಲ್ಲ. ಸ್ವಾಮಿಪಾದವು ಆಸೀಮೆಗೆ ದಯಮಾಡಿಸಬೇಕಾದರೆ ಸದರಿ ಪ್ರಕಾರ ದಯಮಾಡಿಸಬೇಕೆಂದು ಅರಿಕೆಮಾಡಿಕೊಂಡು ಸಮಸ್ತರೂ ಅಪ್ಪಣೆ ತೆಗೆದುಕೊಂಡು ಹೋಗಲು

ಇತ್ತ ರಾ|| ಗುರುಸಿದ್ಧಸ್ವಾಮಿಗಳವರು ಸೋದೆ ಸೀಮೆಗೆ ದಯಮಾಡಿಸುವದಕ್ಕೋಸ್ಕರವಾಗಿ ಚಿತ್ರಕಲ್ಲದುರ್ಗದ ದೊರೆಗಳ ಕಡೆಯಿಂದ ಆನೆ ಕುದುರೆ ಐದಾರುನೂರು ದಂಡಿನ ಜನರು ಭಕ್ತಗಣಂಗಳು ಹಿಡಿದು ಸಾವಿರಾರು ಸಮೂಹಂಗಳೊಡನೆ ೭೨ ಬಿರುದುಗಳಿಂದ ರಾ|| ಗುರುಸಿದ್ಧಸ್ವಾಮಿಗಳವರು ಚಿತ್ರದುರ್ಗದಿಂದ ತಿಳವಳ್ಳಿಗೆ ದಯಮಾಡಿಸಿದರು. ಅಲ್ಲಿಂದ ಸದರಿಪ್ರಕಾರ ಸೋದೆಯಲ್ಲಿರುವ ವೀರಕೋರಶಿವಪ್ಪಗೆ ಆಶೀರ್ವಾದ ನಿರೂಪ ಗುಪ್ತರೂಪಿನಿಂದ ಕಳುಹಿಸಿಕೊಟ್ಟು ಆತನಿಂದ ದಯಮಾಡಿಸಬೇಕೆಂಬುದಾಗಿ ಬಿನ್ನಹ ಪತ್ರವನ್ನು ತರಿಸಿಕೊಂಡು ಆ ಬಳಿಕ ಸ್ವಾಮಿಗಳವರು ತಮ್ಮ ಪಲ್ಲಕ್ಕಿಯಲ್ಲಿ ಬದಲಿಚರಮೂರ್ತಿಗಳನ್ನು ಮೂರ್ತಮಾಡಿಸಿ ಸಕಲ ಬಿರದುಗಳೊಡನೆ ಆನೆ ಕುದುರೆ ಮುಂತಾದ ಸಕಲ ಸಮೂಹವನ್ನು ಇಸಳೂರು ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರ ಗದ್ದುಗೆಯ ಮಠದಲ್ಲಿ ಇಳಿದುಕೊಳ್ಳುವಂತೆ ಅಜ್ಞೆಯನ್ನುಮಾಡಿ ಆ ಚರವನ್ನು ಕಳುಹಿಸಿಕೊಟ್ಟು ಆಬಳಿಕ ರಾ|| ಗುರುಸಿದ್ಧಸ್ವಾಮಿಗಳವರು ಸದರಿಪ್ರಕಾರ ಬದಲು ರೂಪಿನಿಂದ ಇಬ್ಬರು ಶಿಷ್ಯರನ್ನು ಕರಕೊಂಡು ಗುಪ್ತರೂಪಿನಿಂದ ಸೋದೆ ವೀರಕೋರ ಶಿವಪ್ಪನವರ ಮನೆಗೆ ದಯಮಾಡಿಸಿದರು ಆತನು ಸ್ವಾಮಿಗಳವರಿಗೆ ಶರಣಾಗತನಾಗಿ ತನ್ನ ಮನೆಯಲ್ಲಿ ಸ್ವಾಮಿಗಳವರನ್ನು ಗುಪ್ತದಿಂದ ಇಟ್ಟುಕೊಂಡನು.

ಆಮೇಲೆ ಇಸಳೂರಿಗೆ ಬಂದ ರಾ|| ದುರ್ಗದ ಸ್ವಾಮಿಗಳವರ ಸವಾರಿಯು ಆ ಇಸಳೂರ ಗದ್ದುಗೆ ಮಠಕ್ಕೆ ದಯಮಾಡಿಸಿ ಆ ಮಠದಲ್ಲಿ ಇಳಿದುಕೊಳ್ಳಲಿಕ್ಕೆ ಮಠದೊಳಗೆ ಹೋಗಲು, ಆ ಮಠದಲ್ಲಿ ಇದ್ದ ಗಣಂಗಳು ಬಂದವರಿಗೆ ನೀವು ಯಾರೆಂದು ಕೇಳಲು, ಅವರು ನಾವು ರಾ|| ಚಿತ್ರದುರ್ಗದ ಗು

ರುಸಿದ್ಧಸ್ವಾಮಿಗಳು, ಎಂತ ಹೇಳಲು, ಆಗ ಮಠದವರು ನೀವು ದುರ್ಗದ ಸ್ವಾಮಿಗಳು ಆದರೆ ಈ ಮಠಕ್ಕೆ ಯಾಕೆ ಬಂದಿರಿ? ಈ ಮಠದಲ್ಲಿ ನಮ್ಮ ಗುರುಗಳಾದ ಸೋದೆಯಲ್ಲಿರುವ ರಾ॥ಕೆಂಪಿನಸಿದ್ಧಬಸವಸ್ವಾಮಿಗಳವರ ಅಪ್ಪಣೆಇಲ್ಲದೆ ನಿಮಗೆ ಈ ಮಠದಲ್ಲಿ ಇಳಿಯಗೊಡಲಿಕ್ಕಿಲ್ಲವೆಂದು ಆ ಮಠದಲ್ಲಿ ಇದ್ದ ಗಣಂಗಳು ಸವಾರಿಯಲ್ಲಿ ಇದ್ದ ಗಣಂಗಳಿಗೆ ಹೇಳಲು,

ಅವರು ಪಲ್ಲಕ್ಕಿಯಲ್ಲಿ ಮೂರ್ತ ಮಾಡಿದ ಸ್ವಾಮಿಗಳಿಗೆ ತಿಳಿಸಿದ್ದರಿಂದ ಅವರು ಆ ಸ್ವಾಮಿಗಳು ಜೋರಿನಿಂದ ಆ ಮಠದಲ್ಲಿ ಇದ್ದ ರಾ॥ಕೆಂಪಿನಸಿದ್ಧಬಸವಸ್ವಾಮಿಗಳವರ ಬಗೆ ಗಣಂಗಳನ್ನು ಆ ಮಠಾ ಬಿಟ್ಟು ಹೊರಗೆ ಹಾಕಿಸಿ ಆ ಮಠವಲ್ಲಿ ತಮ್ಮ ಬಂದ ಸಮೂಹದೊಡನೆ ಇಳಿದುಕೊಂಡರು.

ಈ ವರ್ತಮಾನವನ್ನು ಮಠದಲ್ಲಿ ಇದ್ದ ಗಣಂಗಳು ದುರ್ಗದಸ್ವಾಮಿಗಳವರು ತಮ್ಮ ಮಠ ಸಾಮಾನು ಸಹಿತವಾಗಿ ಇದ್ದವುಗಳನ್ನು ಕಸಿದುಕೊಂಡು ಬಡಿದು ಹೊರಗೆ ಹಾಕಿಸಿದರೆಂದು ಇಸಳೂರ ದೈವದವರಿಗೆ ರಾ॥ಕೆಂಪಿನಸಿದ್ಧಬಸವಸ್ವಾಮಿಗಳವರ ಸಂಬಂಧದ ಗಣಂಗಳು ಹೇಳಲು, ಆ ಮಾತಿಗೆ ಸದರಿ ದೈವದವರು ನೀವು ಸೋದೆಗೆ ಹೋಗಿ ಸ್ವಾಮಿಗಳವರಿಗೆ ತಿಳಿಸಬೇಕೆಂದು ಹೇಳಿದ್ದರಿಂದ ಆ ಗಣಂಗಳು ಸೋದೆಗೆ ಹೋಗಿ ಸನ್ನಿಧಿಗೆ ಸದರಿ ದುರ್ಗದವರು ತಮ್ಮನ್ನು ಬಡಿದು ಹೊರಗೆ ಹಾಕಿ ಸಾಮಾನು ಸಹಿತವಾಗಿ ಮಠವ ಕಸಿದುಕೊಂಡು ಇಳಿದುಕೊಂಡರು, ಇಸಳೂರು ಮಠ ಹೋಯಿತು, ಎಂತ ರಾ॥ ಕೆಂಪಿನಸಿದ್ಧಬಸವಸ್ವಾಮಿಗಳವರಿಗೆ ಹೇಳಿದರು.

ಆ ಕೂಡಲೆ ಅರಮನೆಯಿಂದ ದೊರೆಗಳನ್ನು ಕರಸಿಕೊಂಡು ಸ್ವಾಮಿಗಳವರು ಆ ದೊರೆಗಳಿಗೆ ಇಸಳೂರಲ್ಲಿ ನಡೆದ ವರ್ತಮಾನವನ್ನು ಅಪ್ಪಣೆಕೊಡಲು, ಅದಕ್ಕೆ ದೊರೆಗಳು ಅರಿಕೆಮಾಡಿಕೊಂಡದ್ದು ಏನೆಂದರೆ,

ಸ್ವಾಮಿಪಾದವು ತಮ್ಮ ಇಸಳೂರ ಮಠದಲ್ಲಿ ದುರ್ಗದ ಸ್ವಾಮಿಗಳವರು ಧಾಂದಲೆ ಮಾಡಿಸಿ ಸನ್ನಿಧಾನದ ಗಣಂಗಳ ಬಡಿದು ಹೊರಗೆ ಹಾಕಿಸಿದ್ದು ಅವರದು ಬಹಳ ಅನ್ಯಾಯವಿದೆ, ಅವರು ಹೀಗೆ ಮಾಡಿದರೆಂದು ನಾವು ಮಾಡಬಾರದ., ಈ ಸಂಗತಿಯು ಮುಂದಾಗಿಯೇ ನಮಗೆ ತಿಳಿದಿದ್ದರೆ ನಮ್ಮ ಕಡೆ ಸಿಬ್ಬಂದಿ ಜನರ ಮಠದ ಬಂದೋಬಸ್ತು ಬಗ್ಗೆ ಇಡಬಹುದಾಗಿತ್ತು, ಇನ್ನು ಮೇಲೆ ಉಪಾಯವಿಲ್ಲ, ಅವರ ಮಠವನ್ನು ಬಿಡಿಸಿ ಸನ್ನಿಧಾನದ ಸಾಮಾನು ಸಹ ಕೊಟ್ಟುಹೋಗುವಂತೆ ಮಾಡಿಸುತ್ತಾ ಇ

ದ್ದೇನೆ, ಸ್ವಾಮಿಯ ಪಾದವ ಅಭಿಮಾನವು ನನ್ನ ಕೂಡಿ ಇದೆ, ಇದರ ಕಾಳಜಿ ಬಿಡಬೇಕು, ಎಂದು ಬಹು ಬಗೆಯಿಂದ ಹೇಳಿಕೊಂಡು ಸ್ವಾಮಿಗಳವರಿಗೆ ಸ ಮಜೂ ಮಾಡಿ ದೊರೆಗಳವರು ಅರಮನೆಗೆ ಹೋಗುವದರೊಳಗೆ.

ಇಸಳೂರಿಂ ದ ಚಿತ್ರದುರ್ಗದ ಸ್ವಾಮಿಗಳವರ ಕಡೆಯಿಂದ ಚರಮೂರ್ತಿಗಳು ಸೋ ದೆಗೆ ಬಂದು ದೊರೆಗಳ ಭೆಟ್ಟಿ ಆಗಿ ಅವರಿಗೆ ಸ್ವಾಮಿಪಾದದ ದರ್ಶನ ಕ್ಕೆ ಬರಬೇಕೆಂದು ಬಂದ ಚರಮೂರ್ತಿಗಳು ದೊರೆಗಳಿಗೆ ಅಪ್ಪಣೆಕೊಡ ಲು, ಆ ದೊರೆಗಳು ಹೇಳಿದ್ದು,

ನಿಮ್ಮ ಸ್ವಾಮಿಗಳು ಮುಂಡಿನಿಂದ ಇಸಳೂ ರ ಕುಮಾರಬಗೆ ಮಠದಲ್ಲಿ ಇದ್ದ ಗಣಂಗಳ ಬಡಿಸಿ ಆ ಮಠದಲ್ಲಿ ಇದ್ದ ಸಾಮಾನು ಸಹಿತ ಆ ಮಠವನ್ನು ಕಸಿದುಕೊಂಡು ಆ ಗಣಂಗಳ ಹೊರಗೆ ಹಾಕಿ ಆ ಮಠದಲ್ಲಿ ತಾವು ಇರಬಹುದೆ? ಆ ಮಠ ಅವರ ಸಾಮಾನು ಅವ ರಿಗೆ ಒಪ್ಪಿಸುವತನಕ ಆ ಸ್ವಾಮಿಗಳವರ ಸನ್ನಿಧಿಗೆ ಬರುವುದಿಲ್ಲ, ಇದ ರಂತೆ ಸನ್ನಿಧಾನಕ್ಕೆ ತಿಳಿಸಿರಿ, ಎಂತ ದೊರೆಗಳು ಆ ಚರಮೂರ್ತಿಗಳನ್ನು ಮನ್ನಿಸದೆ ಮರ್ಯಾದೆಗಳನ್ನು ಕೊಡದೆ ಜಳಕ ಶಿವಾರ್ಚನೆಯನ್ನು ಸ ಹ ಮಾಡಿಸದೆ ಇಸಳೂರಿಗೆ ಕಳುಹಿಸಲು,

ಆ ಚರಮೂರ್ತಿಗಳು ಈ ವರ್ತ ಮಾನವನ್ನು ಸನ್ನಿಧಾನವಾದ ಚರಮೂರ್ತಿಗಳಿಗೆ ತಿಳಿಸಲು ಈ ಸಮಾ ಚಾರವನ್ನು ಗುಪ್ತದಲ್ಲಿ ಪತ್ರಮುಖದಿಂದ ಸೋದೆ ವೀರಕೋರ ಶಿವಪ್ಪನ ಮನೆಯಲ್ಲಿ ಇದ್ದ ರಾ॥ಗುರುಸಿದ್ಧಸ್ವಾಮಿಗಳವರಿಗೆ ತಿಳಿಸಿದ್ದರಿಂದ ಆ ಸ್ವಾಮಿಗಳವರು ವೀರಕೋರ ಶಿವಪ್ಪನನ್ನು ಕರಸಿ ಆತನಿಗೆ ಅಪ್ಪಣೆ ಕೊ ಟ್ಟದ್ದು ಏನೆಂದರೆ:-

ಈಸೋದೆ ದೊರೆಗಳು ಸಭೆಯಲ್ಲಿ ಇರದೆ ಏಕಾಂತ ಒಬ್ಬರೇ ಅರಮನೆ ತೋಟದಲ್ಲಿ ಇದ್ದದ್ದನ್ನು ತಿಳಿದು ನಮ್ಮ ಅವರ ಭೆಟಿ ಮಾಡಿಸಬೇಕೆಂದು ಅಪ್ಪಣೆಕೊಟ್ಟ ಪ್ರಕಾರ ಆ ಸ್ವಾಮಿಗಳವರ ಜೋ ಗಿಯರೂಪಿನಿಂದ ಕರಕೊಂಡು ಹೋಗಿ, ಆ ಶಿವಪ್ಪನು ಸ್ವಾಮಿಗಳವರ ದೊ ರೆಗಳ ಭೆಟ್ಟಿ ಮಾಡಿಸಲು ಸ್ವಾಮಿಗಳವರು ದೊರೆಗಳ ಕಂಡಕೂಡಲೆ ಜೋಗಿಯ ರೂಪು ಬಿಟ್ಟು ಆ ಶಿವಪ್ಪನಲ್ಲಿ ಇದ್ದ ಕಾವಿ ವಸ್ತ್ರಗಳ ಧರಿಸಿ ಕೊಂಡು ಹಾವುಗೆಯನ್ನು ಮೆಟ್ಟಿಕೊಂಡು ಉಪನಿಷತ್ತಿನಿಂದ ಆಶೀರ್ವಾ ದವ ಮಾಡಲು,

ಆ ದೊರೆಯು ಶರಣಾಗತನಾಗಿ ಆಮೇಲೆ ದೊರೆಗಳಿಗೂ ಸ್ವಾಮಿಗಳಿಗೂ ಪ್ರಸಂಗ ನಡೆದು ಆ ಬಳಿಕ ದೊರೆಗಳು ಹಳೇಬೀಡ್ಕಕಲ್ಲುಮಠದ ಸ್ಥೂಲ ಬಳಕೆ ಗುರುಹಿರಿಯರು ತೆಗೆದುಹಾಕಿದ್ದು ತಾವು ದುರ್ಗದ ಮಠದಲ್ಲಿ ಕೂಡಿಕೊಳ್ಳಬೇಕೋ? ಆ ಬಳಕೆ ತಾವು ಬಿಟ್ಟರೆ ನಾವೂ ರಾ|ಕೆಂಪಿನಸಿದ್ಧಬಸವಸ್ವಾಮಿಗಳವರೂ ಸಹಾ ತಮ್ಮ ಆಚರಣೆಯಲ್ಲಿ ಬರುತ್ತೇವೆ, ಇಲ್ಲವೇ ಸನ್ನಿಧಿಯ ಆಚರಣೆ ಮಾಡಲಿಕ್ಕೆ ಬಾರದು ಎಂತ ದೊರೆಗಳು ರಾ|| ಗುರುಸಿದ್ಧಸ್ವಾಮಿಗಳವರಿಗೆ ಹೇಳಿದ್ದರಿಂದ

ಆ ಕೂಡಲೆ ಸ್ವಾಮಿಗಳವರಿಗೆ ಅತಿಕೋಪಹುಟ್ಟಿ ಎಲೋ ದೊರೆಯೇ, ನೀನು ನಮಗೆ ಭಕ್ತನಾಗಿ ನಮ್ಮ ಆಚರಣೆಯಲ್ಲಿ ಬಂದು ನಮ್ಮ ಆಜ್ಞಾದಲ್ಲಿ ನೀನು ನಡೆದರೆ ಚಲೋ ಆಯಿತು, ಇಲ್ಲವೆ ನಿನ್ನ ಸಂಸ್ಥಾನ, ನಿನ್ನ ವಂಶ ಸಹ ನಷ್ಟವಾಗುವಂತೆ ಶಾಪಕೊಟ್ಟು ನಿನ್ನ ಸೀಮೆಯಲ್ಲಿ ಜಳಕ ಶಿವಾರ್ಚನೆ ಮುಂತಾದ್ದೂ ಸಹ ಮಾಡದೆ ದಯಮಾಡಿಸುತ್ತಾ ಇದ್ದೇವೆ, ಇದಕ್ಕೆ ಏನು ಹೇಳುತ್ತೀ, ಮುಂದಿನ ಎಚ್ಚರದಿಂದ ಹೇಳೆಂದು ಘರ್ಜಿಸಿ ಕೋಪದಿಂದ ಸ್ವಾಮಿಗಳವರು ನುಡಿಯಲು,

ಇದ ಕೇಳಿ ದೊರೆಗಳು ರಾ|| ಕೆಂಪಿನಸಿದ್ಧಬಸನಸ್ವಾಮಿಗಳವರಿಗೆ ದುರ್ಗದಸ್ವಾಮಿಗಳವರು ಹಳೇಬೀಡ ಸ್ಥೂಲ ಬಳಕೆ ಕೂಡಿಕೊಂಡದ್ದು ಬಿಡದೆ ಕೂಡುವದಿಲ್ಲ ಎಂದು ಸಾಷ್ಟಾಂಗವನ್ನು ಹಾಕಿ ಕ್ರಿಯೆ ಕೊಟ್ಟಿರುವದನ್ನು ಮರೆದು ರಾ|| ಗುರುಸಿದ್ಧಸ್ವಾಮಿಗಳು ತಮ್ಮ ಸಂಸ್ಥಾನವೂ ತಮ್ಮ ವಂಶವೂ ನಷ್ಟವಾಗಲಿ, ಎಂದು ಶಪಿಸಿದರೆ ತಪ್ಪಲಿಕ್ಕೆ ಇಲ್ಲವೆಂದು ಭಯಪಟ್ಟು ಶರಣಾಗತನಾಗಿ ಅಪರಾಧ ಕ್ಷಮಾ ಮಾಡಬೇಕೆಂದು ರಾ। ಗುರುಸಿದ್ಧಸ್ವಾಮಿಗಳವರಿಗೆ ಹೇಳಿಕೊಂಡು ಆಮೇಲೆ ದೊರೆಗಳು ಬಿನ್ನಹವನ್ನು ಮಾಡಿ ರಾ| ಗುರುಸಿದ್ಧಸ್ವಾಮಿಗಳಲ್ಲಿ ತೀರ್ಥ ಪ್ರಸಾದವನ್ನು ಸೋದೆ ದೊರೆಗಳು ತೆಗೆದುಕೊಂಡರು.

ಈ ವರ್ತಮಾನವು ರಾ|| ಕುಮಾರಕೆಂಪಿನ ಸಿದ್ಧಬಸವಸ್ವಾಮಿಗಳವರಿಗೆ ತಿಳಿಯಲು, ಆ ಕೂಡಲೆ ಸ್ವಾಮಿಗಳವರಿಗೆ ಅಂಗದಲ್ಲಿ ಬೇಸರವು ಹುಟ್ಟಿ ಈ ರಾಜನು ನಮಗೆ ಹಳೇಬೀಡ ಬಳಕೆಯ ದೆಸೆಯಿಂದ ದುರ್ಗದ ಸ್ವಾಮಿಗಳವರ ಆಚರಣೆಗೆ ಒಳಪಡುವದಿಲ್ಲವೆಂದು ಸಾಷ್ಟಾಂಗವನ್ನು ಹಾಕಿ ಈಗ ಕ್ರಿಯೆತಪ್ಪಿ ನಮ್ಮ ಮಠವನ್ನು ದುರ್ಗದವರು ತಗೆದುಕೊಂಡರೂ ವಿಚಾರಿಸದೆ

ಈ ದೊರೆಯು ರಾ| ದುರ್ಗದ ಸ್ವಾಮಿಗಳವರ ಆಚರಣೆಯಲ್ಲಿ ಕೂಡಿಇದ್ದ ದ್ದರಿಂದ ಇವನ ಸೋದೆ ಸಂಸ್ಥಾನವನ್ನು—ನಮ್ಮ ಇಸಳೂರ ಮಠವನ್ನು ರಾ॥ ದುರ್ಗದವರು ಕಸಿದುಕೊಂಡಂತೆ— ಈ ದೊರೆಗಳ ಸಂಸ್ಥಾನವು ಪರ ರಾಯರ ಪಾಲಾಗಲಿ ಎಂತ ನೊಂದುಕೊಂಡು

ಈ ಸೀಮೆಯಲ್ಲಿ ಸ್ನಾನ ಪೂಜಾರ್ಪಣವನ್ನೂ ಈ ಸೀಮೆಯ ಕಡೆಗೆ ಮುಖವಾಗಿ ಶಿವಾರ್ಚನೆಯನ್ನು ಮಾಡುವದನ್ನೂ ಬಿಡುವದಲ್ಲದೆ ಈ ಸೋದೆ ಸೀಮೆಯಲ್ಲಿ ಬೆಳೆದ ಪದಾರ್ಥವಾದ ಅಡಕೆ ಯಾಲಕ್ಕಿ ಮೆಣಸು ಮುಂತಾದ ಸಕಲ ಜಿನಸುಗಳನ್ನೂ ಮುಟ್ಟಲಿಕ್ಕೆ ಇಲ್ಲವೆಂದು ಶಪಥವಮಾಡಿಕೊಂಡು ರಾ॥ ಕೆಂಪಿನಸಿದ್ಧಬಸವ ಸ್ವಾಮಿಗಳವರು ತಮ್ಮ ಗಣ ಸಮೂಹದೊಡನೆ ಸೋದೆಯಿಂದ ಕೆಳದಿ ಸೀಮೆಗೆ ಸೇರಿದ ಜಡೆ ಕಸಬಾ ಕೋಟೆಯ ಮುಂದಿನ ಕಬ್ಬಿಣಕಂಥೆಯಮಠಕ್ಕೆ ದಯಮಾಡಿಸಿದರು.

ಅಲ್ಲಿ ಸ್ನಾನಪೂಜಾರ್ಪಣವನ್ನು ತೀರಿಸಿಕೊಂಡು ಹಳೇಬೀಡ ಸೀಮೆ ಹಾರನಹಳ್ಳಿ ಸ್ಥಳದಲ್ಲಿ ಇರುವ ತಮ್ಮ ಮಠಕ್ಕೆ ದಯಮಾಡಿಸಬೇಕೆಂಬುವದರೊಳಗೆ, ಈ ವರ್ತಮಾನವನ್ನು ಕೇಳಿ ಜಡೆಯಪೇಟೆ ದೈವದವರು ಜಡೆಕೋಟೆಯ ಠಾಣೇದಾರ ಗುರುಲಿಂಗಯ್ಯ ಮುಂತಾದ ಸಮಸ್ತ ದೇವಭಕ್ತರು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣುತರಾಗಿ ಸ್ವಾಮಿಗಳವರಿಗೆ ಸಮಸ್ತರೂ ಜಡೇಪೇಟೆಗೆ ದಯಮಾಡಿಸಿ ನಮ್ಮ ಸರ್ವರ ಬಿನ್ನಹಗಳನ್ನು ತೀರಿಸಿಕೊಟ್ಟು ಸ್ವಾಮಿಪಾದವು ದಯಮಾಡಿಸಬಹದೆಂದು ಸನ್ನಿಧಿಗೆ ಅರಿಕೆಮಾಡಿಕೊಳ್ಳಲು ಅವರಿಗೆ ಸ್ವಾಮಿಗಳವರು ಅಪ್ಪಣೆಕೊಟ್ಟಿದ್ದು ಏನೆಂದರೆ:—

ಸೋದೆ ದೊರೆಯು ಹಳೇಬೀಡ ಕಲ್ಲುಮಠದ ಸ್ಥೂಲ ಬಳಕೆಯ ಮಾಡಿದ ರಾ|ದುರ್ಗದಸ್ವಾಮಿಗಳವರ ಆಚರಣೆ ಮುಂತಾದ್ದು ಮಾಡಲಿಕ್ಕೆ ಇಲ್ಲವೆಂದು ಸಾಷ್ಟಾಂಗವನ್ನು ಹಾಕಿ ಈಗ ಆ ದೊರೆಯು ಕ್ರಿಯೆತಪ್ಪಿ ರಾ| ದುರ್ಗದವರು ನಮ್ಮ ಮಠಗಳನ್ನು ಕಸಿದುಕೊಂಡರೂ ವಿಚಾರಿಸದೆ ಅವರ ಆಚರಣೆಯಲ್ಲಿಯೇ ಸೇರಿಕೊಂಡನು, ಆ ದುರ್ಗದವರು ನಮ್ಮ ಮಠಗಳ ಕಸಿದುಕೊಂಡಂತೆ ಮುಂದೆ ಆ ದೊರೆಯ ಸೋದೆ ಸಂಸ್ಥಾನವನ್ನು ಪರರಾಯರಾದ ದೊರೆಗಳು ಕಸಿದುಕೊಂಡದ್ದೇ ಸಾಕ್ಷಿಯು, ಇನ್ನು ಮುಂದೆ ನೀವು ಸಮಸ್ತರೂ ನಮ್ಮ ಆಚರಣೆ ಹಿಡಿದುಕೊಂಡು ರಾ||ದುರ್ಗದ ಸ್ವಾಮಿಗಳವರ ಆಚರಣೆಯ ಒಳಗೆ ಹೊಂದುವದಿಲ್ಲ, ಎಂದು ಸಾಷ್ಟಾಂಗವನ್ನು ಹಾ

ಕಿದರೆ ನಿಮ್ಮ ಸ್ಥಳಕ್ಕೆ ಬಂದು ಬಿನ್ನಹವನ್ನು ತೀರಿಸಿಕೊಟ್ಟು ದಯಮಾಡಿಸುತ್ತಾ ಇದ್ದೇವೆ, ಇಲ್ಲವೆ ಮುಂದಕ್ಕೆ ಹೋಗುತ್ತೇವೆ, ಎಂತ ಸ್ವಾಮಿಗಳವರ ಅಪ್ಪಣೆ ಆಗಲು,

ಅದಕ್ಕೆ ಸದರಿ ದೇವಭಕ್ತರು ಸನ್ನಿಧಿಗೆ ಸ್ವಾಮಿಪಾದದ ಮಠಗಳನ್ನು ದುರ್ಗದವರು ಜೋರಿನಿಂದ ತೆಗೆದುಕೊಂಡ ಕಾರಣ ಈ ವರ್ತಮಾನವನ್ನು ಕೇಳಿ ನಾವು ಸಮಸ್ತರೂ ಸನ್ನಿಧಾನವು ಇದ್ದಲ್ಲಿಗೆ ಬಂದು ಸಾಷ್ಟಾಂಗವನ್ನು ಹಾಕಿ ನಮ್ಮ ಸ್ಥಳಕ್ಕೆ ಕರಕೊಂಡು ಬಂದು ಸ್ವಾಮಿಪಾದಕ್ಕೆ ಮಠವನ್ನು ಮಾಡಿ ಕೊಟ್ಟ ನಮ್ಮ ಭಕ್ತಿಯಲ್ಲಿ ಇಟ್ಟು ಕೊಳ್ಳಬೇಕೆಂದು ಸರ್ವರ ಅಪೇಕ್ಷೆಇದ್ದ ಪ್ರಕಾರ, ಬಡವರಿಗೆ ಭಾಗ್ಯವು ದೊರೆದಂತೆ ಸ್ವಾಮಿಪಾದವು ನಮ್ಮ ಸ್ಥಳಕ್ಕೆ ದಯಮಾಡಿಸಿತು, ನಾವು ಸಮಸ್ತರೂ ಪಾದದ ಆಚರಣೆಯಲ್ಲೇ ಇರುತ್ತೇವೆ, ರಾ॥ ದುರ್ಗದವರೊಳಗೆ ತಾವು ಕೂಡಿದರೆ ನಾವು ಕೂಡುತ್ತೇವೆ, ತಾವು ಕೂಡದಿದ್ದರೆ ನಾವೂ ಅವರ ಆಚರಣೆಯಲ್ಲಿ ಕೂಡುವದಿಲ್ಲ, ಎಂದು ಶರಣುಹಾಕಿ

ಆ ಮೇಲೆ ಉತ್ಸವದಿಂದ ಸ್ವಾಮಿಪಾದವನ್ನು ಕರಕೊಂಡು ಹೋಗಿ ರಾ| ಕುಮಾರಬಗೆಯ ರಾ| ಬೂದಿ ಬಸವಪ್ಪದೇವರ ಮಠದಲ್ಲಿ ರಾ॥ ಕುಮಾರಕೆಂಪಿನ ಸಿದ್ಧಬಸವ ಸ್ವಾಮಿಗಳವರ ಸನ್ನಿಧಾನವನ್ನು ಗಣಸಮೂಹದೊಡನೆ ಸದರಿ ದೇವಭಕ್ತರು ತಮ್ಮ ಭಕ್ತಿಯಲ್ಲಿ ಜಡೆ ಸ್ಥಳದವರು ಸನ್ನಿಧಾನವನ್ನು ಲಿಂಗ ಪೂಜಾ ಜಂಗಮ ದಾಸೋಹದೊಡನೆ ಇಟ್ಟುಕೊಂಡರು.

ಆ ಮೇಲೆ ರಾ॥ ಕೆಂಪಿನ ಸಿದ್ಧವೃಷಭೇಂದ್ರ ಸ್ವಾಮಿಗಳವರು ತಮ್ಮ ಕರಸಂಜನಿತರಾದ ರಾ॥ ಕೆಂಪಿನ ಶಿವಲಿಂಗಪ್ಪನವರು ನಿಮ್ಮ ಸ್ಥಳವಾದ ರಾಯರಹುಬ್ಬಳ್ಳಿಗೆ ದಯಮಾಡಿಸಿಇದ್ದಾರೆ, ಆ ಚರಮೂರ್ತಿಗಳನ್ನು ನೀವು ಕರಕೊಂಡು ಬರಬೇಕೆಂದು ಅದೇ ಪತ್ರದಲ್ಲಿ ಸೋದೆ ಇಸಳೂರಲ್ಲಿ ಇರುವ ಮಠಗಳನ್ನೂ ಆ ಮಠಗಳಲ್ಲಿ ಇರುವ ಸಾಮಾನುಗಳನ್ನೂ ರಾ| ದುರ್ಗದ ಸ್ವಾಮಿಗಳವರು ತಮ್ಮ ಗಣಂಗಳನ್ನು ಬಡಿದು ಮಠಗಳಬಿಟ್ಟು ಹೊರಗೆ ಹಾಕಿದ್ದನ್ನೂ ಸೋದೆ ದೊರೆಯು ಅವರಿಗೆ ತಮ್ಮ ಅರ್ಚಣೆಯನ್ನು ಬಿಟ್ಟು ಭಕ್ತನಾದದ್ದನ್ನೂ ಪಾರಂಗತವಾಗಿ ಆಶೀರ್ವಾದ ಪತ್ರದಲ್ಲಿ ಬರಸಿ ಸದರಿ ಹುಬ್ಬಳ್ಳಿ ಬಸವಪ್ಪಸೆಟ್ಟರ ಹೆಸರಿನಿಂದ ಬರಸಿದರು.

ಈ ಆಶೀರ್ವಾದಪತ್ರವು

ಖದಿಂದ ಸದರಿ ಬಸವಪ್ಪ ಸೆಟ್ಟರಿಗೆ ಈ ವಿಷಯ ತಿಳಿಸಲು ಆ ಬಸವಪ್ಪ ಸೆಟ್ಟರು ಸನ್ನಿಧಾನದಿಂದ ಬಂದ ಆಶೀರ್ವಾದದ ನಿರೂಪಗಳನ್ನು ನೋಡಿಕೊಂಡು ಸದರಿ ಬಸವಪ್ಪಸೆಟ್ಟರು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರ ಹಸ್ತಕರಾದ್ದರಿಂದ ವ್ಯಸನಪಟ್ಟು ಆ ಮೇಲೆ ತಮ್ಮ ಸ್ಥಳದಲ್ಲಿ ಇರುವ ರಾ| ಕೆಂಪಿನ ಶಿವಲಿಂಗಪ್ಪನವರಿಗೆ ಜಡೇಯಲ್ಲಿ ಇದ್ದ ಸನ್ನಿಧಿಯಿಂದ ಬಂದ ಪತ್ರವನ್ನು ತೋರಿಸಿ ಓದಿಹೇಳಿದ್ದರಿಂದ ಆಚರಮೂರ್ತಿಗಳೂ ವ್ಯಸನಪಟ್ಟರು

ಆ ಬಳಿಕ ಬಸವಪ್ಪಸೆಟ್ಟರು ಆ ಚರಮೂರ್ತಿಗಳು ಮುಂತಾದ ಹುಬ್ಬಳ್ಳಿ ದೇವಭಕ್ತರು ಕೂಡಿ ರಾ|| ಕೆಂಪಿನಸಿದ್ಧಬಸವ ಸ್ವಾಮಿಗಳವರ ದೆಸೆಯಿಂದ ಮಾತಾಡಿ ನಿಶ್ಚಯಿಸಿದ್ದು ಏನೆಂದರೆ;—

ನಾವು ಜಡೆಯಿಂದ ಸ್ವಾಮಿಗಳವರನ್ನು ಕರಕೊಂಡು ಬಂದು ಅವರಿಗೆ ನಮ್ಮ ಭಕ್ತಿಯಿಂದ ಮಹಮಾನ್ಯರುಸುಮು ಕಾಣಿಕೆಗಳನ್ನು ಮಾಡಿಕೊಟ್ಟು ನಮಸ್ಕರಿಸಿ ಸನ್ನಿಧಾನವನ್ನು ನಮ್ಮ ಭಕ್ತಿಯಲ್ಲಿ ಇಟ್ಟುಕೊಳ್ಳಬೇಕೆಂದು ಮಾತಾಡಿಕೊಂಡು ಆ ಮೇಲೆ ಸಮಸ್ತರೂ ನಮ್ಮ ಸ್ಥಳದ ಶ್ರೀ ಬಸವೇಶ್ವರನ ರಥೋತ್ಸವ ಇವೊತ್ತಿಗೆ ಹದಿನೈದು ದಿವಸಗಳಲ್ಲಿ ಆಗುತ್ತದೆ, ಅದನ್ನು ತೀರಿಸಿಕೊಂಡು ನಮ್ಮ ಹುಬ್ಬಳ್ಳಿಸೆಟ್ಟರು ಮುಂತಾದ ದೇವಭಕ್ತರು ಜಡೆಯಲ್ಲಿ ಇರುವ ಗುರುಸನ್ನಿಧಾನಕ್ಕೆ ಬಂದು ಸ್ವಾಮಿಗಳವರನ್ನು ನಮ್ಮ ಸ್ಥಳಕ್ಕೆ ಕರಕೊಂಡು ಬರುತ್ತೇವೆ. ತಾವು ತಮ್ಮ ಚರ ಸಮೇತರಾಗಿ ಜಡೆ ಸನ್ನಿಧಾನಕ್ಕೆ ಹೋಗಿ ಈ ವರ್ತಮಾನವನ್ನು ತಿಳಿಸುವುದೆಂದು ಚರಮೂರ್ತಿಗಳಿಗೆ ಹೇಳಿಕೊಂಡು ತಾವು ಆಮೇಲೆ ಆ ಚರಮೂರ್ತಿಗಳ ಅಪ್ಪಣೆ ತೆಗೆದುಕೊಂಡು ಹೋಗಲು,

ಇತ್ತ ರಾ| ಕೆಂಪಿನಶಿವಲಿಂಗಪ್ಪನವರು ನಾಳಿನ ದಿವಸ ಹೋಗಬೇಕೆಂದು ತಮ್ಮ ಸನ್ನಿಧಾನದಲ್ಲಿ ಇರುವ ಗಣಂಗಳಿಗೆ ಜಡೆಯುಕ್ಕೆ ಹೊರಡಬೇಕೆಂದು ಅಪ್ಪಣೆಕೊಟ್ಟು ಅವೊತ್ತಿನ ದಿವಸ ಹುಬ್ಬಳ್ಳಿಯಲ್ಲಿ ಇದ್ದರು.

ಆ ಬಳಿಕ ಆ ಚರಮೂರ್ತಿಗಳ ಒಂದಿಗಿದ್ದು ಗಳ ಮಂದಿ ಪುಂಡ ವಿರಕ್ತರಾದ ಜಂಗಮರು ಆ ಚರಮೂರ್ತಿಗಳಾದ ಶಿವಲಿಂಗಪ್ಪನವರಿಗೆ ತಮ್ಮ ದುರಾಲೋಚನೆಗಳನ್ನು ತಿಳಿಸದೆ ಅವರಿಗೆ ಆ ಸ್ಥಳದ ಸೆಟ್ಟರು ದೈವದವರಿಗೆ ಸಹ ತಿಳಿಸದೆ ಹಾಗೂ ಅವರಿಗೆ ಹೇಳದೆ ಆ ಹದಿನಾಲ್ಕು ಜಂಗಮರು ಸದರಿಯ

ರಾತ್ರಿಕಾಲದಲ್ಲಿಯೇ ತಮ್ಮ ಸಾಮಾನು ಸಹ ತೆಗೆದುಕೊಂಡು ಹುಬ್ಬಳ್ಳಿ ಯಿಂದ ಹೆಬ್ಬಳ್ಳಿಗೆ ಹೋಗಿ ಇದ್ದರು. ಇತ್ತ ಬೇಗಾಗಲು ಆ ಚರಮೂರ್ತಿ ಗಳು ತಮ್ಮ ಚರಸಹಿತವಾಗಿ ಜಡೆಯಕ್ಕೆ ಹೊರಡಲು ತಮ್ಮ ಚರದಲ್ಲಿ ಆ ಹದಿನಾಲ್ಕು ಮಂದಿ ಜಂಗಮರ ಕಾಣದೆ ಇರುವದರಿಂದ ಕಳುಹಿಸುವದಕ್ಕೆ ಬಂದ ಆ ಸ್ಥಳದ ಬಸವಪ್ಪಸೆಟ್ಟರು ಮುಂತಾದ ದೈವದವರು ಆ ಚ ರಮೂರ್ತಿಗಳಿಗೆ ತಮ್ಮ ಸನ್ನಿಧಿಯಲ್ಲಿ ಇದ್ದ ಆ ಹದಿನಾಲ್ಕು ಗಣಂಗ ಳು ರಾ। ತಮ್ಮ ಗುರುಗಳಾದ ಜಡೇಯಲ್ಲಿ ಇರುವ ಸ್ವಾಮಿಗಳವರ ಕಾ ಳಜಿಯಿಂದ ನಿನ್ನೆ ರಾತ್ರಿಯಲ್ಲಿಯೇ ಹೋಗಿ ಇದ್ದಾರು. ತಾವು ದಯಮಾ ಡಿಸಬೇಕೆಂದು ಸದರಿ ಸೆಟ್ಟರು ದೈವದವರು ಹೇಳಿದ್ದರಿಂದ ಆ ಚರಮೂ ರ್ತಿಗಳಾದ ರಾ||ಕೆಂಪಿನ ಶಿವಲಿಂಗಪ್ಪನವರು ಉಳಿದ ಗಣಂಗಳನ್ನು ಕರ ಕೊಂಡು ಜಡೆಯಕ್ಕೆ ದಯಮಾಡಿಸಲು,

ಇತ್ತ ಆ ಹದಿನಾಲ್ಕು ಜಂಗಮ ರು ಹೆಬ್ಬಳ್ಳಿ ಸುಳ್ಳ, ಬೆಪಟ್ಟಿ, ಕುಸುವಗಲ್ಲು, ಕೋಟೆ, ಮುಂತಾದ ಹ ತ್ತು ಇಪ್ಪತ್ತು ಗ್ರಾಮಂಗಳಿಗೆ ಹೋಗಿ ಆ ಗ್ರಾಮುಗಳಿಂದ ಮುನ್ನೂ ರು ನಾನೂರು ಕಾಟಗಯ್ಯ ಜನಗಳಾದ ಬೇಡರು, ಹನಮರು, ಲವಾಣಿಗಳು, ಕಬ್ಬೇರರು ಮುಂತಾದವರು, ಮುಸಲ್ಮಾನ ಜನಗಳನ್ನೂ ಸಹ ಕೂಡಿಸಿ ಅವರಿಗೆ ತಕ್ಕಷ್ಟು ತಮ್ಮಗಳಲ್ಲಿ ಇದ್ದ ಹಣಗಳನ್ನು ಖರ್ಚಿ ಗೆ ಕೊಟ್ಟು ಆ ಜನಗಳಿಗೆ ಗುಪ್ತದಲ್ಲಿ ಸದರಿ ಜಂಗಮರು ಸೋದೆ ಸೀ ಮೆಯಲ್ಲಿ ಇರುವ ಇಸಳೂರಲ್ಲಿ ದರೋಡೆ ಮಾಡಬೇಕು, ಆದರ ವಿಷ ಯದಲ್ಲಿ ಬಂದ ದ್ರವ್ಯಗಳಲ್ಲಿ ನಮಗೆ ಅರ್ಧ ನಿಮ್ಮ ಸಮಸ್ತರಿಗೆ ಅರ್ಧ ಈ ಪ್ರಕಾರ ಸಿಕ್ಕಿದ ಸಕಲ ಪದಾರ್ಥದಲ್ಲಿ ಹಂಚಿಕೊಳ್ಳಬೇಕೆಂದು ಸ ದರಿ ಜನರು ತಾವು ಮಾತಾಡಿಕೊಂಡು ಹುಬ್ಬಳ್ಳಿಗೆ ಬಂದು ಅಲ್ಲಿಂದ ತಡಸ ಮುಂಡಗೋಡು ಮುಂತಾದ ಗ್ರಾಮುಗಳ ಮೇಲೆ ಹಾಯ್ದು ಮಧ್ಯ ಗ್ರಾಮುಗಳಲ್ಲಿ ವಸ್ತ್ರಮಾಡಿ ಕೇಳುವಜನರಿಗೆ ಘಟ್ಟದ ಕೆಳಗೆ ಹೋಗುತ್ತಾ ಇ ದ್ದೇವೆ, ಎಂತ ಹೇಳುತ್ತಾ ರಾತ್ರಿ ಐದು ಆರು ತಾಸಿನ ವೇಳೆಯಲ್ಲಿ ಸ ದರಿ ಗಳ ಮಂದಿ ಜಂಗಮರು ಮುಂತಾದ ಸಕಲರೂ ಕತ್ತಿ ದೊಣ್ಣೆ ಭರ್ಚಿ ಬಿಲ್ಲು ಅಂಬು ಕವಣೆಗಲ್ಲು ಕೊಡಲಿ ಕುಡುಗೋಲು ಕಂದಲಿ ಮೊದಲಾದ ಆಯುಧಗಳು ಸಮೇತರಾಗಿ ಆ ಅಡವಿಯಲ್ಲಿ ಇದ್ದ ರಾ||ದು ರ್ಗದ ಸನ್ನಿಧಾನವು ಇದ್ದ ಕೆರೆಯಮೇಲಿನ ಮಠಕ್ಕೆ ಬಂದು ಆ ಮಠದೊ ಳಗೆ ಇದ್ದವರಿಗೆ ನಾವು ವಸ್ತ್ರಕಾರರು, ಮಠದಲ್ಲಿ ಈ ರಾತ್ರಿಯಲ್ಲಿ ಇದ್ದು

ಕೊಂಡು ನಾಳೆ ಮುಂಜಾನೆ ಹೋಗುತ್ತೇವೆ, ಕದಾ ತೆಗೆಯಬೇಕೆಂದು ಕರೆಪರು.

ಅಷ್ಟರೊಳಗೆ ರಾ|| ಗುರುಸಿದ್ಧಸ್ವಾಮಿಗಳು ದುರ್ಗದಿಂದ ಬಂದ ದಂಡಿನ ಜನಗಳು ಮುಂತಾದ ಸಮಸ್ತ ಜನಗಳನ್ನು ಕಳುಹಿಸಿ, ಆ ಇಸಳೂರ ಗದ್ದುಗೆ ಮಠದಲ್ಲಿ ಹತ್ತೆಂಟು ಚರಮೂರ್ತಿಗಳು ಇಪ್ಪತ್ತು ಮೂವತ್ತು ಪರದೇಶಿಗಳು ಮೊದಲಾದ ಸೇವಾಜನರು, ಸಿಪಾಯಿಗಳು ಜವಾನರು ಇವರ ಹಿಡಿದು ನೂರು ಇನ್ನೂರು ಜನಗಳು ಆ ಮಠದಲ್ಲಿ ಇದ್ದರು. ಆ ಜನಗಳ ಪೈಕಿ ಒಬ್ಬ ಸಂಬಳದ ಹುಡುಗನ ತಾಯಿ ಬಸುರು ಹೆಂಗಸು ತನ್ನ ಮಗನ ಸಂಬಳ ಒಯ್ಯಲಿಕ್ಕೆ ಬಂದು ಆ ಮಠದಲ್ಲಿ ಇದ್ದಳು.

ಆ ಮಠದೊಳಗೆ ಇರುವ ಜನರು ಹೊರಗೆ ಕೂಗುವ ಜನಗಳನ್ನು ಕಂಡು ಭಯಸ್ಥರಾಗಿ ಕದವನ್ನು ತೆಗೆಯದಿರಲು

ಇದನ್ನು ಕಂಡು ಹೊರಗಿನವರು ಆ ಮಠದ ಕದವನ್ನು ಕಡಿದು ಮುರಿದು ಒಳಗೆ ಹೊಗಲು ಸದರಿ ಬಸುರು ಹೆಂಗಸು ತನ್ನ ಮಗನನ್ನು ಕೊಲ್ಲುವರೆಂದು ಅಡ್ಡಗಟ್ಟಲು, ಆ ಹೆಂಗಸನ್ನು ಆ ಹದಿನಾಲ್ಕು ಅಯ್ಯಗಳ ಪೈಕಿ ಒಬ್ಬನು ಭರ್ಚಿಯಿಂದ ಇರಿದುಕೊಂದು ಒಂದೇ ವೇಳೆಯಲ್ಲಿಯೇ ಆ ಮಠದಲ್ಲಿರುವ ಗುರುಮಠವನ್ನು ಹೊಗಲು ಅದೇ ಸಮಯದಲ್ಲಿಯೇ ಆ ಮಠದಲ್ಲಿ ಇರುವ ಮುಖ್ಯಚರಮೂರ್ತಿಗಳಲ್ಲಿ ಪಡಕೊಂಡು ಕ್ರಿಯಾಮಾಡಿಕೊಂಡ ಗದ್ದುಗೆಯ ಮೇಲೆ ಇರುವವರನ್ನೇ ಸದರಿ ಹದಿನಾಲ್ಕು ಅಯ್ಯಗಳ ಪೈಕಿ ಒಬ್ಬಾತನು ಭರ್ಚಿಯಿಂದ ಇರಿಯುವನು, ನಿನ್ನ ಹತ್ತಿರ ಇದ್ದ ಸಿಕ್ಕಾ, ಶೈಲ ಕೊಡುತ್ತಾ ಇದ್ದೀಯೋ ಇಲ್ಲವೋ? ಎಂತ ಕೇಳುವನು.

ಸಮಸ್ತರೂ ರಾ|| ಚಿತ್ರಕಲ ದುರ್ಗದ ಗುರುಸಿದ್ಧಸ್ವಾಮಿಗಳು ಇವರೇ ಎಂದು ತಿಳಿದುಕೊಂಡು ಬೇರೆ ಚರಮೂರ್ತಿಗಳು ಎಂಬುವದ ತಿಳಿಯದೆ ಆ ಹದಿನಾಲ್ಕು ಅಯ್ಯಗಳು ಸದರಿ ಚರಮೂರ್ತಿಗಳಿಗೆ ಆಡಿದ ಮಾತು ಏನೆಂದರೆ:--

ನೀನು ದುರ್ಗದಿಂದ ದಂಡಾಲೋಚನೆ ಮಾಡಿಕೊಂಡು ಈ ಮಠಕ್ಕೆ ಬಂದು ಮಠದಲ್ಲಿ ಇರುವ ನಮ್ಮ ಗಣಂಗಳನ್ನು ಹೊರಗೆ ಹಾಕಿಸಿ ನಮ್ಮ ಗುರುಗಳಾದ ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರ ಮಠ, ವಗೈರೆ ಸಾಮಾನುಗಳನ್ನು ಸಹಾ ಕಸಿದುಕೊಂಡು ನಮ್ಮ ಗಣಂಗಳ

ಸ್ನು ಬಿಡಿಸಿ ಸೋಪೆ ದೋರೆ ಮೊದಲಾದ ಈ ಊರ ದೈವದವರ ಒಂದುಮಾಡಿಕೊಂಡು ನಮ್ಮ ಗುರುಗಳನ್ನು ಸೋದೆ ಮುಂತಾದ ಈ ಸೀಮೆಯನ್ನು ನೀನು ಬಿಡಿಸಬಹುದೋ? ಮೂಲಕರ್ತರಾದ ರಾ॥ಕಟ್ಟಿಗೆಹಳ್ಳಿ ಸ್ವಾಮಿಗಳವರ ಶಿವಾನುಭವ ಚರಂತಿಗೆ ಪಟ್ಟಕ್ಕೆ ನಮ್ಮ ಗುರುಗಳಾದ ರಾ॥ಕೆಂಪಿನಸಿದ್ಧಬಸವಸ್ವಾಮಿಗಳವರೇ ಬಾಧ್ಯರು, ನೀನು ಮುರುಗಾಸ್ವಾಮಿಗಳವರ ಶಿಖಾಪಟ್ಟಕ್ಕೆ ಬಾಧ್ಯ ನಮ್ಮ ನಿಮ್ಮ ಉಭಯರ ಗುರುಗಳಾದ ಗುರುವಿನಗುರುಗಳು ಸದರಿ ಕಟ್ಟಿಗೆಹಳ್ಳಿ ಸ್ವಾಮಿಗಳವರು ಒಬ್ಬರೇ ಗುರುಗಳಾದ ಮೇಲೆ ನಾವು ಚಿತ್ರಕಲ್ಲದುರ್ಗದ ಮಠಕ್ಕೆ ಬಾಧ್ಯರು ಅಲ್ಲವೋ? ಹೀಗೆ ಇದ್ದ ನಮ್ಮ ಗುರುಗಳ ಭೋಗವಟಿ ಇಷ್ಟ ಈಸು ಠವನ್ನು ಸಹ ನೀನು ಕಸಿದುಕೊಂಡ ಮೇಲೆ ನಿನ್ನಲ್ಲಿ ಇದ್ದ ಸಿಕ್ಕಾ ಕೈಲ ಒಯ್ದು ನಮ್ಮ ಗುರುಗಳಿಗೆ ಒಪ್ಪಿಸಿ ನಮ್ಮ ಕಡೆಯಿಂದ ಶಿಖಾ ಪಟ್ಟವನ್ನು ಮಾಡಿ ದುರ್ಗದಮಠವ ತೆಗೆಧುಕೊಳ್ಳುತ್ತೇವೆ, ಎಂತ ಅರ್ಭಟಿಸಿ ಕೂಗಿ ಆ ಚರಮೂರ್ತಿಗಳನ್ನು ಭರ್ಜಿಯಿಂದ ಇರಿದರು.

ಉಳಿದ ಚಿತ್ರದುರ್ಗದ ಚರದ ಸಂಬಂಧವಾದ ಮೂರ್ತಿಗಳು, ಅಯ್ಯಗಳು, ಜವಾನರು ಮುಂತಾದ ಸಿಬ್ಬಂದಿ ಜನರು ಸಹಾ ಇವರು ಸದರಿ ೧ಳ ಮಂದಿ ಜಂಗಮರು ಮತ್ತು ಅವರ ಕಡೆ ಜನಗಳಿಂದ ಸಹಾ ಬಡಿಸಿಕೊಳ್ಳುತ್ತಾ, ಇರಿಸಿಕೊಳ್ಳುತ್ತಾ ಕಡಿಸಿಕೊಳ್ಳುತ್ತಾ ಒದಸಿಕೊಳ್ಳುತ್ತಾ ತಿವಿಸಿಕೊಳ್ಳುತ್ತಾ ಈ ಪ್ರಕಾರ ಹಿಂಸೆಯಾದ್ದರಿಂದ ಸದರಿ ದುರ್ಗದವರ ಸಂಬಂಧದವರು ಕೆಲವರು ಕಡಿಸಿಕೊಂಡು ಸತ್ತರು. ಕೆಲವರು ಗಾಯದಿಂದ ಉಳಿದರು. ಕೆಲವರು ಕಾಲು, ಕೈ, ಹಲ್ಲು ಮುರಕೊಂಡರು. ತಲೆಯೊಡೆದು ಮೂರ್ಛೆ ಆದರು. ಕೆಲವರು ಈ ಬಧೆಗಳನ್ನು ತಡೆಯಲಾರದೆ ಓಡಿ ಹೋದರು.

ಹೀಗೆ ಆದಲ್ಲಿ ಆ ಹದಿನಾಲ್ಕು ಮಂದಿ ಜಂಗಮರು ಗುರುಮಠದಲ್ಲಿ ಗದ್ದುಗೆಯ ಮೇಲೆ ಇರಿಸಿಕೊಂಡು ಮೂರ್ಛೆಯಾಗಿ ಬಿದ್ದ ಚರಮೂರ್ತಿಗಳೇ, ರಾ॥ ಗುರುಸಿದ್ಧಸ್ವಾಮಿಗಳೆಂದು ದೀಪವ ಹಿಡಿದುನೋಡಲು, ಬೇರೆಯಾದ್ದರಿಂದ ನಾವು ಬಂದ ಕಾರ್ಯವಾದ ಸಿಕ್ಕಾ ಕೈಲ ಸಿಕ್ಕಲಿಲ್ಲವೆಂದು ಮರುಗಿ ಆಬಳಿಕ ಆ ಮಠದಲ್ಲಿ ಇದ್ದ ದ್ರವ್ಯ ಮೊದಲಾದ ಎಂದರೆ ಚೌಕ, ಉಂಗುರ, ಕಂಠೀಸರ ಮುಂತಾದ ಕಾಪಡ ಜಿನಸುಗಳನ್ನು ತೆಗೆದುಕೊಂಡು ಬಂದವರು ಸಕಲರೂ ಪರಾರಿ ಆದರು.

ಅಷ್ಟರೊಳಗೆ ಮಠವಲ್ಲಿ ಬಹಳ ಕೊ ಗಾಟ ವಿಶೇಷವಾದದ್ದರಿಂದಲೂ ಊರಿಗೂ ಆ ಮಠಕ್ಕೂ ಸ್ವಲ್ಪ ದೂ ರವಾದ್ದರಿಂದಲೂ ಆ ಮೇಲೆ ಊರಿಂದ ಜನಗಳ ಹೊಲಿಯು ಬಂದಿತು ಆ ಜನಗಳು ಮಠದೊಳಗೆ ಹಿಂಸೆ ಪಟ್ಟವರನ್ನು ನೋಡಿ ಊರಸೆಟ್ಟರು ದೈ ವದವರಿಗೆ ವರ್ತಮಾನವನ್ನು ತಿಳಿಸಿದ್ದರಿಂದ ಸಕಲರೂ ಬಂದು ಬೆಳಗಾ ಗ ಅವರು ರಾ॥ಸೋದೆ ದೊರೆಗಳಿಗೂ ರಾ॥ಶಿರಸಿ ದೈವದವರ ಬಿನ್ನ ಹಕ್ಕೊ ನ್ನರ ದಯುಮಾಡಿಸಿದ ಚಿತ್ರದುರ್ಗದ ಗುರುಸಿದ್ಧಸ್ವಾಮಿಗಳಿ ಗೂ ಈ ವರ್ತಮಾನವನ್ನು ತಿಳಿಸಲು,

ಈ ವರ್ತಮಾನವನ್ನು ಸಕಲರೂ ಕೇಳಿ ಬಹಳ ಚಿಂತಾಕ್ರಾಂತರಾಗಿ ಆ ಸ್ವಾಮಿಗಳು ದೊರೆಗಳು ಮೊದಲಾ ದ ಶಿರಸಿ ಇಳೂರು ಆ ಸೀಮೆಯ ಗೌಡರು ಮುಂತಾದ ಸಕಲ ದೈವದವ ರೂ ಕೂಡಿ ನೋಡುವದರಲ್ಲಿ ಆ ಮಠದಲ್ಲಿ ಹಿರಿಯ ಚರಮೂರ್ತಿಗಳಾದ ಚರ ಮೂರ್ತಿಗಳು ವಿರಕ್ತರ ಹಿಡಿದು ಎಂಟು ಒಂಬತ್ತು ಗಣಂಗಳಿಗೆ ಕಡ ತಪೆಟ್ಟು ಅರಗಾಯವಾದಕಾರಣ ಅವರಿಗೆ ಏನು ಜೋಕೆಮಾಡಿದರೂ ಬದು ಕಲಿಲ್ಲವು ಮೃತಪಟ್ಟರು ಮುಖ್ಯ ಚರಮೂರ್ತಿಗಳಾದ ಆ ಒಡೆಯರು ೯ ದಿವಸಕ್ಕೆ ತೀರಿದರು ಉಳಿದವ ಶಿಕ್ಷಣೆಯಿಂದ ಬದುಕಿದರು ಇಷ ರಲ್ಲದೆ ಪರಿವಾರದ ಜನರು ಇಪ್ಪತ್ತು ಮೂವತ್ತು ಜನರು ಗಾಯದಿಂದ ಸತ್ತರು ಕೆಲವರು ಉಳಿದರು. ಕೆಲವರು ಗಾಯವಿಲ್ಲದೆ ಪಾರಾಗಿ ಇದ್ದರು. ಇವುಗಳನ್ನು ನೋಡಿದ ರಾ॥ ಗುರುಸಿದ್ಧಸ್ವಾಮಿಗಳು ಸೋದೆ ದೊರೆಗಳು ಮುಂತಾದ ದೇವಭಕ್ತರು ಸದರಿ ಗಾಯಪಟ್ಟ ಮುಖ್ಯ ಚರಮೂರ್ತಿಗ ಳು ಮೊದಲಾದ ಗಾಯಪಟ್ಟವರ ಮುಖದಿಂದ

ರಾ॥ಕೆಂಪಿನಸಿದ್ಧ ಬಸವ ಸ್ವಾಮಿಗಳವರ ಸಂಬಂಧದ ೧೪ ಮಂದಿ ಜಂಗಮರು ಮುನ್ನೂರು ನಾನೂ ರು ಜನಗಳ ಕರಕೊಂಡು ಬಂದು ನಮಗೆ ನೀನೇ ಗುರುಸಿದ್ಧಸ್ವಾಮಿ ನಮ್ಮ ಮಠ ನಮ್ಮ ಸಾಮಾನು ಸಹಾ ಕಸಿದುಕೊಂಡು ನಮ್ಮ ಗಣಂಗಳ ಬಡಿದು ಹೊರಗೆ ಹಾಕಬಹುದೆ? ನಾವು ದುರ್ಗದ ಮಠಕ್ಕೆ ಬಾಧ್ಯರಲ್ಲ ವೇ? ನಿನ್ನಲ್ಲಿ ಇದ್ದ ಸಿಕ್ಕಾ ಕೈಲ ಕೊಡುತ್ತೀಯೋ ಇಲ್ಲವೋ? ಎಂದು ಗರ್ಜಿಸಿ ಹಡಕೊಂಡು ಇರುವದು ಸಹ ನೋಡದೆ ಬರ್ಚಿಯಿಂದ ಇರಿದ ರು, ಎಂಬದಾಗಿ ಅವರು ಆಡಿದ ಯಾವತ್ತು ಮಾತುಗಳನ್ನು ಆಡಿ ದ್ದು ಗಾಯಪಟ್ಟವರಿಂದ ಕೇಳಿ ಸಮಸ್ತರೂ ವ್ಯಸನಪಟ್ಟು ದೊರೆಗ ಳು ಮೊದಲಾದ ಸಮಸ್ತರೂ ರಾ॥ಗುರುಸಿದ್ಧಸ್ವಾಮಿಗಳವರಿಗೆ ಅರಿಕೆ

ನೂಡಿಕೊಂಡದ್ದು ಏನೆಂದರೆ

ಸ್ವಾಮಿವಾದವು ಇಲ್ಲಿಂದ ಬಿಸ್ತ್ರಹಕ್ತಿ ತಿರಸಿಗೆ ದಯಮಾಡಿಸದಿದ್ದರೆ ತಾವು ಐಕ್ಯವಾಗುವದೇ ಸರಿ. ತಾವು ಉಳಿದ್ದೇ ಡ್ಡದು. ತಾವು ಈ ಮಠದಲ್ಲಿ ಇದ್ದರೆ ಶಿಖಾ ಪೈಲವು ಅವರಿಗೆ ದೊರೆತು ತಾವು ಐಕ್ಯವಾಗಿದ್ದರೆ ಅವರೇ ಬಾಧ್ಯರಾಗುತ್ತಾ ಇದ್ದು ಕೇಳುವ ಪಾಲಿಕರೇ ಇರಲಿಲ್ಲ.

ಕಾರಣವೇನೆಂದರೆ ರಾ|| ಹಿರಿಯಕರ್ತರಾದ ಕಟ್ಟಿಗೆಹಳ್ಳಿ ಸ್ವಾಮಿಗಳವರ ತರವಾಯದಲ್ಲಿ ಚಿತ್ರಕಲ್ಲದುರ್ಗದ ಮಠಕ್ಕೆ ಶಿಖಾ ಪಟ್ಟವೂ ಶಿವಾನುಭಾವ ಚರಂತಿಗೆ ಪಟ್ಟವೂ ಏಕ್ಯವಾಗಿ ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರೂ ತಾವೂ ಉಭಯಸ್ವಾಮಿಗಳವರೂ ಬಾಧ್ಯರು ಹೀಗೆ ಇದ್ದಮೇಲೆ ಚಿತ್ರದುರ್ಗದ ಮಠಕ್ಕೆ ಅವರೇ ಬಾಧ್ಯರು ಆಗುತ್ತಾ ಇದ್ದರು.

ಆದರೆ ಅವರ ಗಣಂಗಳ ನಿಮ್ಮ ಚರಮೂರ್ತಿಗಳು ಬಡಿಸಿ ಅವರ ಸಾಮಾನು ಮಠ ಸಹ ಕಸಿದುಕೊಂಡಿದ್ದ ಕಾರಣ ಆ ಕುಮಾರಕೆಂಪಿನ ಸಿದ್ಧಬಸವಸ್ವಾಮಿಗಳು ಇವರೇ ಈ ಮಠದಲ್ಲಿ ೧ ಜಂಗಮಹತ್ಯ ೨ ಸ್ತ್ರೀಹತ್ಯ ೩ ಶಿಸುಹತ್ಯ ೪ ತೀರ್ಥಹತ್ಯ ೫ ಪ್ರಸಾದ ಹತ್ಯ ಈ ಪ್ರಕಾರ ಪಂಚದ್ರೋಹ ಮಾಡಿಸಿದರೆಂದು ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರ ಮೇಲೆ ಕಲ್ಪಿಸಿ ಅವರನ್ನು ಹಿಡಿತರಿಸಿ ವಿಚಾರಮಾಡಿದ ಬಳಿಕ ಅವರಮೇಲೆ ಈ ದೋಷವು ಬರುತ್ತದೆ. ಆ ಬಳಿಕ ಅವರಿಗೆ ಅವರ ಬಗೆ ಸಕಲಬುಡಕಟ್ಟಿನ ಗಣಂಗಳಿಗೂ ಸಹ ತಕ್ಕ ಪ್ರಾಯಶ್ಚಿತ್ತ ಮಾಡಿಸಿ ಅವರ ಕಡೆಯಿಂದ ಅಪರಾಧದ ಕಾಣಿಕೆ ತೆಗೆದುಕೊಂಡು ಅವರನ್ನು ಸ್ವಾಮಿಪಾದವು ತಮ್ಮೊಳಗೆ ತೆಗೆದುಕೊಳ್ಳ ಬಹುದು, ಪಾಪದ ಚಿತ್ತಕ್ಕೆ ಬರದಿದ್ದರೆ ಬಿಡಬಹುದು, ಎಂತ ರಾ|| ಗುರುಸಿದ್ಧಸ್ವಾಮಿಗಳಿಗೆ ಸದರಿ ದೊರೆಗಳು ಮುಂತಾದ ದೇವಭಕ್ತರು ಅರಿಕೆಮಾಡಿಕೊಂಡು ಆಮೇಲೆ ಸೋದೆ ದೊರೆಗಳು ಸದರಿ ಪಂಚದ್ರೋಹದ ವಿಚಾರದ ಬಗ್ಗೆ ರಾ|| ಕೆಂಪಿನಸಿದ್ಧಬಸವ ಸ್ವಾಮಿಗಳು ಅವರ ಬಗೆ ಗಣಂಗಳನ್ನು ಸಹ ಹಿಡಿದುಕೊಂಡು ಈ ಇಸಳೂರ ಮಠಕ್ಕೆ ಬರಬೇಕೆಂದು ತಮ್ಮ ಮಂತ್ರಿಯಾದ ವೀರಕೋಟ ತಿವಪ್ಪಗೆ ಆಜ್ಞೆಯನ್ನು ಮಾಡಿ ಆತನ ಕೂಡ ಸಾವಿರಾರು ದಂಡು ಕುದುರೆ ಸಹಾ ಕೊಟ್ಟು ಜಡೆಯಕ್ಕೆ ಕಳುಹಿಸಿಕೊಟ್ಟು ಆಮೇಲೆ ದೊರೆಗಳು ಮುಂತಾದ ವೈದಿಕರು ಸ್ವಾಮಿಗಳವರ ಅ

ಪ್ಪಣೆ ತೆಗೆದುಕೊಂಡು ತಮ್ಮ ಸ್ಥಳಗಳಿಗೆ ಹೋದರು.

ಇತ್ತ ಇಸಳೂರ ಮಠದಲ್ಲಿ ಪಂಚದ್ರೋಹ ಮಾಡಿದ ೧೪ ಅಯ್ಯಗಳು ಇಸಳೂರ ಮಠದಲ್ಲಿ ಸಿಕ್ಕ ಪದಾರ್ಥಗಳನ್ನು ಕರೆದುಕೊಂಡು ಬಂದ ಜನಗಳಿಗೆ ಪಾಲುಕೊಟ್ಟು ತಮಗೆ ಬಂದ ಪದಾರ್ಥವನ್ನು ತೆಗೆದುಕೊಂಡು ಹೋಗಲು ಈ ವರ್ತಮಾನವು ರಾ॥ ರಾಯರಹುಬ್ಬಳ್ಳಿ ಬಸವಪ್ಪಸೆಟ್ಟರು ಮುಂತಾದ ಆ ಸ್ಥಳದ ದೇವಭಕ್ತರಿಗೆ ತಿಳಿದು ಆ ೧೪ ಅಯ್ಯಗಳನ್ನು ಹಿಡಿಸಿತಮ್ಮ ಕಡೆಯ ಜನಗಳಿಂದ ಪಹರೆಯೊಳಗೆ ಆ ೧೪ ಜಂಗಮರನ್ನು ಜಡೆಯದಲ್ಲಿ ಇರುವ ರಾ ಕೆಂಪಿನಸಿದ್ಧಬಸವಸ್ವಾಮಿಗಳವರ ಸನ್ನಿಧಾನಕ್ಕೆ ಕಳುಹಿಸಿಕೊಡಲು ಆ ಬಳಿಕ ಸ್ವಾಮಿಗಳವರು ಆ ೧೪ ಅಯ್ಯಗಳು ಪಂಚದ್ರೋಹವನ್ನು ಮಾಡಿದ್ದರಿಂದ ಆ ಜಡೆಯದ ಠಾಣೇದ ಗುರುಲಿಂಗಯ್ಯ ಮೊದಲಾದ ದೈವದವರ ಮುಂತಿಟ್ಟುಕೊಂಡು ಅಯ್ಯಗಳನ್ನು ವಿಚಾರಿಸಿ ಕ್ರಮುಪ್ರಕಾರ ಆ ೧೪ ಅಯ್ಯಗಳ ಕಡೆಯಿಂದ ಕಟ್ಟು ಕೈಫೀಯತುಗಳನ್ನು ಮಾಡಿಕೊಂಡದ್ದರಿಂದ ಆ ಪಂಚದ್ರೋಹವು ಆ ೧೪ ಜಂಗಮರ ಮೇಲೆ ಬಂದ ಕಾರಣ, ಆ ಅಯ್ಯಗಳನ್ನು ರಾ॥ಕೆಂಪಿನ ಸಿದ್ಧಬಸವಸ್ವಾಮಿಗಳವರು ತಮ್ಮ ಆಚರಣೆಯಲ್ಲಿ ಕೂಡಿಕೊಳ್ಳದೆ ಈ ಪಂಚದ್ರೋಹದ ವಿಷಯದಲ್ಲಿ ಈ ದ್ರೋಹಮಾಡಿದ ೧೪ ಅಯ್ಯಗಳು ನಮ್ಮ ಮರಿಗಳಾದ್ದರಿಂದ ಇವರ ಕಡೆಯಿಂದ ನಾವೇ ಮಾಡಿಸಿದ್ದೇವೆಂದು ನಮ್ಮ ಮೇಲೆ ದೋಷವನ್ನು ಕಲ್ಪಿಸಿ ರಾ॥ಗುರುಸಿದ್ಧ ಸ್ವಾಮಿಗಳು ನಮ್ಮನ್ನು ವಿಚಾರಿಸದೆ ಎಷ್ಟು ಮಾತ್ರಕ್ಕೂ ಬಿಡಲಿಕ್ಕೆ ಇಲ್ಲ, ಅವರಿಗೆ ನಮ್ಮ ಮಾತು ಏನೂ ಸಿಕ್ಕಿದ್ದಿಲ್ಲ, ಆವರು ಹಳೇಬೀಡು ಕಲ್ಲುಮಠದ ಹೊಲೆ ಬಳಕೆಯಲ್ಲಿ ಮಿಶ್ರಪಟ್ಟಿದ್ದರಿಂದ ಅವರ ಮಾತು ನಮಗೆ ಸಿಕ್ಕಿತ್ತು, ಮುಂದೆ ವಿಚಾರದ ತಲೆಯಮೇಲೆ ತಿಳಿಯಬೇಕು, ಕಾರಣ ಈ ೧೪ ಜಂಗಮರನ್ನು ನಿನ್ನ ಕೋಟೆಯಲ್ಲಿ ಈ ಪಂಚದ್ರೋಹದ ವಿಷಯದಲ್ಲಿ ವಿಚಾರವಾಗುವವರೆವಿಗೂ ಪಹರೆಯಲ್ಲಿ ಇಟ್ಟು ಅವರ ಸಂರಕ್ಷಣೆ ಮಾಡಬೇಕೆಂದು ಜಡೆಯ ಕೋಟೆ ಠಾಣೇದಾರನಾದ ಗುರುಲಿಂಗಪ್ಪಗೌಡರಿಗೆ ಅಪ್ಪಣೆಕೊಟ್ಟದ್ದರಿಂದ ಸದರಿ ಪ್ರಕಾರ ಆ ಗುರುಲಿಂಗಪ್ಪಗೌಡರು ಕೋಟೆಯಲ್ಲಿ ಪಹರೆಯ ಒಳಗೆ ಸದರಿ ೧೪ ಜಂಗಮರನ್ನು ಇಟ್ಟರು.

ಇತ್ತಲಾಗಿ ಪಂಚದ್ರೋಹದ ವಿಚಾರದಬಗ್ಗೆ ರಾ॥ಗುರುಸಿದ್ಧಸ್ವಾಮಿಗಳವರ ಅಪ್ಪಣೆಯಪ್ರಕಾರ ಸೋದೆ ದೊರೆಗಳು ತ

ಮ್ಮ ಪ್ರಧಾನನಾದ ವೀರಕೋರ ಶಿವಪ್ಪನ ಸಂಗಡ ದಂಡು ಕುದುರೆ ಸ ವಾರರ ಸಹಾ ಕೊಟ್ಟು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರು ಇವರ ಸಂಬಂಧದ ಗಣಂಗಳ ಸಹಾ ಹಿಡಿದುಕೊಂಡು ಬರಬೇಕೆಂತ ದೊರೆಗಳ ಅ ಪ್ಪಣೆ ಪ್ರಕಾರ ಶಿವಪ್ಪನು ಸೈನ್ಯ ಸಹಿತವಾಗಿ ಜಡೆಯಕ್ಕೆ ಬಂದು ರಾ| ಕೆಂಪಿನಸಿದ್ಧಬಸವಸ್ವಾಮಿಗಳು ತಮ್ಮ ಗಣಸಮೂಹದೊಡನೆ ಇದ್ದ ಜಡೆಯು ವ ಪೇಟೆ ಬೂದಿ ಬಸವಪ್ಪದೇವರ ಮಠಕ್ಕೆ ಮುತ್ತಿಗೆ ಹಾಕಿ ಸದರಿ ಶಿವ ಪ್ಪನು ಸದರಿ ಸ್ವಾಮಿಗಳವರ ಬಗೆ ಗಣಂಗಳು ಹೊರಗೆ ಸಿಕ್ಕರೆ ಅವರನ್ನು ಹಿಡಿಸಿ ಕೂಡಿಸಿದನು. ಒಳಗೆ ಇದ್ದವರನ್ನು ಮಠದಿಂದ ಹೊರಗೆ ಬಾರ ದಂತೆ ತನ್ನ ದಂಡಿನ ಜನಗಳಿಂದ ಬಂದುಮಾಡಿಸಲು, ಈ ವರ್ತಮಾನವು ಪೇಟೆ ದೈವ ಮೊದಲಾದ ಠಾಣೆಯ ಗುರುಲಿಂಗಯ್ಯ ಮುಂತಾದ ಜಡೆ ತಿಲಗಡ್ಡಿ ಮಾಗಣಿ ಗೌಡರು ನಾಡಿಗರಿಗೂ ಸಹಾ ತಿಳಿದು ಸಮಸ್ತರೂ ರಾ| ಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ನೋಡಿ ಸಂಸ್ಥಾನದಿಂದ ಬಂ ದಿರುವ ವೀರಕೋರ ಶಿವಪ್ಪನ ಕರಸಿ ಆತನಿಂದ ಬಂದಕಾರಣವನ್ನು ತಿಳಿ ದು ಆ ಶಿವಪ್ಪಗೆ ಸದರಿ ಗುರುಲಿಂಗಯ್ಯ ಮೊದಲಾದ ಸರ್ವರೂ ಹೇಳಿ ದ್ದು ಏನೆಂದರೆ:—

ನಿನ್ನ ಕಡೆಗೆ ರಾ|ಕೆಂಪಿನಸಿದ್ಧಬಸವಸ್ವಾಮಿಗಳೇ ಆಗಲಿ ಇವರ ಬಗೆ ಗಣಂಗಳಾದ ಗುರುಚರಮೂರ್ತಿಗಳೇ ಆಗಲಿ ರಾ| ನಮ್ಮ ಕೆ ಳದಿ ಸಂಸ್ಥಾನದ ದೊರೆಗಳ ಅಪ್ಪಣೆ ಇಲ್ಲದೆ ಎಷ್ಟು ಮಾತ್ರಕ್ಕೂ ಕೊಡು ವದಿಲ್ಲ. ಅಥವಾ ಆ ಸ್ವಾಮಿಗಳವರನ್ನು ನಿನ್ನಲ್ಲಿ ದಂಡು ಇರುವದರಿಂದ ಜೋರಿನಿಂದ ತೆಗೆದುಕೊಂಡು ಹೋಗಬಹುದು. ಇದರಿಂದ ನಮ್ಮ ನಿಮ್ಮ ಪ್ರಾಣಗಳು ಹತವಾದಾವು. ಇದರಿಂದ ಕಾರಣವಿಲ್ಲ. ನೀವು ಬಂದ ಕಾರಣ ವನ್ನು ನಮ್ಮ ಸಂಸ್ಥಾನವಾದ ಕೆಳದಿ ದೊರೆಗಳಿಗೆ ಪತ್ರ ಮುಖದಿಂದ ತಿಳಿ ಸುತ್ತಾ ಇದ್ದೇವೆ ಆ ದೊರೆಗಳಿಂದ ರಾ| ಸ್ವಾಮಿಗಳವರನ್ನು ನೋಡೆಯು ವರ ಕಡೆಗೆ ಕೊಡಿರಿ ಎಂತ ಅವರಿಂದ ಹುಕುಮು ಬಂದರೆ ಅವಶ್ಯ ರಾ| ಕೆಂಪಿನಸಿದ್ಧಬಸವ ಸ್ವಾಮಿಗಳು ಅವರ ಬಗೆ ಗಣಂಗಳ ಸಹಾ ಕಳುಹಿಸಿಕೊ ಡುತ್ತೇವೆ. ಆದರೆ ನೀನು ಈ ಸ್ವಾಮಿಗಳವರ ನಿಮ್ಮ ದೊರೆಗಳ ಹುಕುಮು ಪ್ರಕಾರ ಕರೆದುಕೊಂಡು ಹೋಗಬೇಕಾದರೆ ನಮ್ಮ ದೊರೆಗಳ ಹುಕುಮು ಬರುವವರೆಗೂ ನಿನ್ನ ದಂಡು ಸಹವಾಗಿ ಈ ಜಡೆಯದಲ್ಲೇ ಇರುವದು, ಎಂತ ಸಮಸ್ತರೂ ಶಿವಪ್ಪಗೆ ಹೇಳಿದ್ದರಿಂದ ಶಿವಪ್ಪನು ಜಡೆಯದಲ್ಲೇ ನಿಂದಿರಲು

ಈ ಬಳಿಕ ತಾಣೇವ ಗುರುಲಿಂಗಯ್ಯ ಮುಂತಾದ ಜಡೆಯದ ಪ್ಯೆವದವರು ಕೆಳದಿ ಸಂಸ್ಥಾನದಲ್ಲಿರುವ ರಾ। ದೊರೆಗಳವಾವನವರಾದ ಮರಿಯಪ್ಪ ಸೆಟ್ಟರಿಗೆ ಪತ್ರಮುಖದಿಂದ ರ॥ ಸೋದೆ ದೊರೆಗಳ ಕಡೆ ಯಿಂದ ಶಿವಪ್ಪನು ಸೈನ್ಯ ಸಹಿತವಾಗಿ ರಾ। ಕೆಂಪಿನಸಿದ್ಧಬಸವ ಸ್ವಾಮಿ ಗಳವರ ತೆಗೆದುಕೊಂಡು ಹೋಗುವದಕ್ಕೆ ಬಂದು ಇದ್ದಾರೆ, ಎಂಬುದ ದಾಗಿ ಈ ಶಿವಪ್ಪನು ಬಂದ ವರ್ತಮಾನವನ್ನೂ ಹಾಗೂ ಇಸಳೂರಲ್ಲಿ ಪಂಚದ್ರೋಹ ನಡೆದು ರಾ। ಚಿತ್ರದುರ್ಗದ ಸ್ವಾಮಿಗಳಿಗೂ ರಾ। ಕೆಂ ಪಿನಸಿದ್ಧಬಸವ ಸ್ವಾಮಿಗಳಿಗೂ ಹಳೇಬೀಡ ಸ್ಥಳ ಬಳಕೆಯ ಉದ್ದೇಶವಾಗಿ ನಡೆದ ಆಚಾರ ಸಂಬಂಧವಾದ ನ್ಯಾಯದ ವಿಷಯವನ್ನೂ ತಿಳಿಸಿದ್ದರಿಂದ ರಾ॥ ಕೆಂಪಿನಸಿದ್ಧಬಸವ ಸ್ವಾಮಿಗಳವರ ಅನುಗ್ರಹಪಾತ್ರನಾದ ಸದರಿ ಮರಿಯಪ್ಪನವರು ಜಡೆಯಿಂದ ಬಂದ ಪತ್ರವನೋಡಿಕೊಂಡು ರಾ। ಕೆಳದಿ ಸಂಸ್ಥಾನದ ದೊರೆಗಳಿಗ ಸದರಿ ಮರಿಯಪ್ಪನವರು ರಾ॥ ಕೆಂಪಿನಸಿದ್ಧಬ ಸವಸ್ವಾಮಿಗಳವರ ಉದ್ದಿಶ್ಯ ಜಡೆಯಿಂದ ಬಂದ ಪತ್ರ ವಿಚಾರ ವಗೈ ರೆ ಸದರಿ ಪತ್ರದಲ್ಲಿ ಇದ್ದ ಸಮಸ್ತ ವಿಚಾರವನ್ನೂ ಕೆಳದಿ ದೊರೆಗಳಿಗೆ ತಿಳಿಸಿದ್ದರಿಂದ ಆ ದೊರೆಗಳು ಮುಂತಾದ ಮರಿಯಪ್ಪನವರೂ ಸಹಾ ತಮ್ಮ ನಿಸಬತ್‌ದಾರನಾದ ಜಡೆಯದ ಕೋಟೆ ತಾಣೇದಾರ ಗುರುಲಿಂಗಯ್ಯ ಮುಂತಾದ ಜಡೆಯದ ಪೇಟೆಪ್ಯೆವದವರಿಗೆ ರಾ। ಕೆಂಪಿನಸಿದ್ಧಬಸವಸ್ವಾಮಿ ಗಳು ಇವರ ಸಂಬಂಧದ ಮೂರ್ತಿಗಳಾದ ಗಣಂಗಳನ್ನು ಸಹವಾಗಿ ಇ ಸಳೂರಲ್ಲಿ ನಡೆದ ಪಂಚದ್ರೋಹದ ವಿಷಯವಾಗಿಯೂ ಹಳೇಬೀಡ ಪು ರ್ಬಳಕೆಯ ವಿಷಯವಾಗಿಯೂ ಈ ಎರಡು ಕಲಮುಗಳ ನ್ಯಾಯವು ಸ ವ್ಮಸೀಮೆಗೆ ಸೇರಿದ ಜಡೆಯದ ಸ್ಥಳದಲ್ಲಿ ತೀರಬೇಕಲ್ಲದೆ ಉಳಿದ ಸ್ಥಳದಲ್ಲಿ ಈ ನ್ಯಾಯಗಳು ತೀರಕೂಡದು. ಅಲ್ಲಿನ ತನಕ ರಾ॥ ಕೆಂಪಿನಸಿದ್ಧಬಸವಸ್ವಾಮಿ ಗಳವರನ್ನು ನಿಮ್ಮ ಸಮಸ್ತರ ಭಕ್ತಿಯಲ್ಲಿ ಇಟ್ಟುಕೊಳ್ಳಬೇಕೆಂದು ದೊ ರೆಗಳವರ ಹುಕುಮನ್ನು ರಾ। ಕೆಳದಿ ಸಂಸ್ಥಾನದಲ್ಲಿರುವ ಮರಿಯಪ್ಪನ ವರು ಕಳುಹಿಸಲು, ಆ ಕೆಳದಿ ಸಂಸ್ಥಾನದ ಹುಕುಮನ್ನು ರಾ।ಸೋದೆಯಿಂದ ಬಂದ ವೀರಕೋರ ಶಿವಪ್ಪನಿಗೆ ಜಡೆಯ ತಾಣೇದಾರ ಗುರುಲಿಂಗಯ್ಯ ಮುಂ ತಾದ ಪ್ಯೆವದವರು ಸೀಮೆಗೌಡ ನಾಡಿಗರು ಸಹಾ ತೋರಿಸಿ ರಾ। ಸ್ವಾಮಿ ಗಳವರ ಕಳುಹಿಸದಕಾರಣ ಶಿವಪ್ಪನು ತನ್ನ ದಂಡು ಸಹಾ ಸೋದೆಗೆ ಕ ರೆದುಕೊಂಡು ಹೋಗಿ ಈ ವರ್ತಮಾನವನ್ನು ರಾ। ಚಿತ್ರದುರ್ಗದಸ್ವಾಮಿ ಗಳವರಿಗೂ ದೊರೆಗಳವರಿಗೂ ತಿಳಿಸಿದ್ದರಿಂದ ಆ ಸೋದೆ ದೊರೆಗಳು

ಆ ವೀರಕೋರಶಿವಪ್ಪ ಮೊದಲಾದ ಸೋದೆ ದೈವದವರು ರಾ|| ಜಡೆಯು ದಲ್ಲಿಇರುವ ಕೆಂಪಿನಸಿದ್ಧಬಸವಸ್ವಾಮಿಗಳವರನ್ನು ಈ ಪಂಚದ್ರೋಹದ ವಿಚಾರದ ಬಗ್ಗೆ ಹೇಗೆ ತರಿಸಬೇಕೆಂದು ರಾ|| ಗುರುಸಿದ್ಧಸ್ವಾಮಿಗಳ ವರಿಗೆ ಅರಿಕೆಮಾಡಿಕೊಂಡದ್ದರಿಂದ ಅವರಿಗೆ ರಾ|| ಗುರುಸಿದ್ಧಸ್ವಾಮಿಗಳವರು ಅಪ್ಪಣೆಕೊಟ್ಟಿದ್ದು ಏನೆಂದರೆ

ರಾ|| ಕೆಂಪಿನಸಿದ್ಧಬಸವಸ್ವಾಮಿಗಳೂ ನಾವೂ ಒಂದೇ ಗುರು ಗಳ ಶಿಷ್ಯರಾದ ಕಾರಣ ಯಾವ ಮಾತು ಆದರೂ ನಮ್ಮನ್ನು ಅವ ರು ಹಿಡಿದು ಕೇಳುವುದಕ್ಕೆ ಬಾಧ್ಯರು. ಇದರಂತೆ ಅವರನ್ನು ನಾವು ಹಿಡಿದು ಕೇಳುವುದಕ್ಕೆ ಬಾಧ್ಯರು ಇದರಿಂದ ನಾವು ನಮ್ಮ ಗಣಸ ಮೂಹದೊಡನೆ ಇಸಳೂರಮಠಕ್ಕೆ ದಯಮಾಡಿಸಿ ಅಲ್ಲಿಗೆ ನೀವು ಮುಂತಾದ ಸಿರಸಿ ಇಸಳೂರು ದೈವದವರ ಕರಸಿಕೊಂಡು ಆ ಇಸಳೂರಿಂದ ಬನವಾ ಸಿಗೆದಯಮಾಡಿಸಿ ಅಲ್ಲಿಂದ ನಾವು ಜಡೆಯಕ್ಕೆದಯಮಾಡಿಸಿ ರಾ|| ಕೆಂಪಿ ನಸಿದ್ಧಬಸವಸ್ವಾಮಿಗಳವರನ್ನು ನಾವೇ ಖುದ್ದು ಪಂಚದ್ರೋಹದವಿಷಯ ವಾಗಿ ಕೇಳಬೇಕೆಂದರೆ ನಮಗೆ ಅವರು ಮರಿಯಾದೆ ಕೊಡುವದಿಲ್ಲ. ಅವ ರಿಂದ ನಮ್ಮ ಮಾತಿನ ವಿಷಯವಾಗಿ ನಮ್ಮ ಖಾಸಚರಮೂರ್ತಿಗಳನ್ನು ಕಳುಹಿಸಿ ಕೇಳಬೇಕೆಂದು ಅಪ್ಪಣೆಯಾಗಲು,

ಅದಕ್ಕೆ ದೊರೆಗಳು ಮುಂತಾದ ಸಮಸ್ತರೂ ಒಡಂಬಟ್ಟು ಆಮೇಲೆ ಸ್ವಾಮಿಗಳವರನ್ನು ಇಸಳೂರಿಗೆ ಕಳುಹಿಸಿಕೊಡಲು,

ಆಮೇಲೆ ಮ|| ರಾ|| ಗುರುಸಿದ್ಧಸ್ವಾಮಿಗಳವರು ಆಶೀರ್ವಾದ ಪತ್ರ ಮುಖದಿಂದ ಸಿರಸಿ ಸೋದೆ ಹುಲಿಕಲ್ಲು ಇಸಳೂರು ಮುಂತಾದ ದೇವಭಕ್ತರು ಗಳನ್ನು ಇಸಳೂರಿಗೆ ಕರಸಿಕೊಂಡು ಆ ದೇವಭಕ್ತರ ನ್ನು ತಮ್ಮಸನ್ನಿಧಾನದ ಸಂಗಡ ಕರಕೊಂಡು ಬನವಾಸಿಗೆ ಬಂದು ಅಲ್ಲಿಂದ ತಮ್ಮ ಬಗೆ ರಾ|| ಚರಮೂರ್ತಿಗಳಾದ ರಾ|| ಸೋದೆ ಚನ್ನಬಸವ ಪ್ಪನವರು ಮುತ್ತಿನ ಕಂತೆ ಗುರುಪಾದಯ್ಯನವರು ವಿರುಪಾಕ್ಷಯ್ಯ ನವರು ಸೊಮಶೇಖರೈಯ ಮುಂತಾದ ಈನಾಲ್ವರುಚರಮೂರ್ತಿಗಳ ಕೂಡತಮ್ಮ ಸನ್ನಿಧಾನದ ಕೂಡ ಬಂದ ಸಮಸ್ತ ದೇವಭಕ್ತರು ಸಹ ವಾಗಿ ಸದರಿನಾಲ್ಕುಚರಮೂರ್ತಿಗಳನ್ನು ಜಡೆಯಕ್ಕೆ ರಾ|| ಗುರುಸಿದ್ಧ ಸ್ವಾಮಿಗಳವರು ಕಳುಹಿಸಲು ಆ ಚರಮೂರ್ತಿಗಳು ಜಡೆಯದಲ್ಲಿ ರಾ|| ಕೆಂ ಪಿನಸಿದ್ಧಬಸವಸ್ವಾಮಿಗಳವರ ಸೆರಗಹಿಡಿದುನೀವು ನಿಮ್ಮ ಬಗೆಗಣಂಗಳಾ ದ ೧೧ ಮಂದಿಜಂಗಮರ ಕಡೆಯಿಂದ ಇಸಳೂರಮಠದಲ್ಲಿ ಪಂಚದ್ರೋಹ

ಪವಾಡಿಸ ಬಹುದೆ? ಈ ದೋಷವು ನಿಮ್ಮಿಂದ ಆಪಮೇಲೆ ಈ ದೋಷ
ನಿಮ್ಮಮೇಲೆ ಬಂತು,ಇದಕ್ಕೆ ನಿಮ್ಮ ಜವಾಬು ಏನೆಂದು ಸದರಿನಾಲ್ವರು
ಚರಮೂರ್ತಿಗಳು ಮುಂತಾದ ಅವರ ಕೂಡ ಬಂದ ದೈವದವರು ಮೊದ
ಲಾದ ಸಮಸ್ತರೂ ಕೇಳಲು

ಅದಕ್ಕೆ ರಾ। ಕೆಂಪಿನಸಿದ್ಧಬಸವಸ್ವಾಮಿಗಳವರು ಜಡೆಯದಲ್ಲಿ
ಇರುವ ಠಾಣೇದಾರ ಗುರುಲಿಂಗಯ್ಯ ಮುಂತಾದ ದೈವದವರು ಜಡಿ
ತೆಲಗಡ್ಡೆ ಸೀಮೆ ಸಮಸ್ತ ಮಠಸ್ತರು ಗೌಡರು ನಾಡಿಗರು ಮೊದ
ಲಾದ ಸಕಲರನ್ನೂ ಕರಸಿಗೊಂಡು ಅವರ ಮುಂದಿಟ್ಟುಕೊಂಡುರಾ।
ಗುರುಸಿದ್ಧಸ್ವಾಮಿಗಳವರ ಬಗೆ ಚರಮೂರ್ತಿಗಳಾದ ನಾಲ್ವರಿಗೆ ರಾ।
ಕೆಂಪಿನಸಿದ್ಧಬಸವಸ್ವಾಮಿಗಳವರು ಅಪ್ಪಣೆ ಕೊಟ್ಟದ್ದು ಏನೆಂದರೆ

ನೀವುನಮ್ಮಮೇಲೆಪಂಚದ್ರೋಹವನ್ನು ಕಲ್ಪಿಸಿನಮ್ಮಸೆರಗಹಿಡಿದು
ಇರುವದರಿಂದ ಆ ದೋಷ ನಮ್ಮ ಮೇಲೆ ಬರುವದಕ್ಕೂ ನೀವು ಹಳೇಬೀ
ಡಕಲ್ಲುಮಠದಹೊಲೆಬಳಕೆ ಕೂಡಿಕೊಂಡದ್ದರಿಂದ ಆ ದೋಷ ನಿಮ್ಮ
ಮೇಲೆ ಬರುವದಕ್ಕೂ ಈ ಆಚಾರ ಸಂಬಂಧವಾದನ್ಯಾಯಗಳು ತೀರ
ಬೇಕಾದರೆ ಇವತ್ತಿಗೆ ೬ ತಿಂಗಳು ಎಂದರೆ ಈ ಶ್ರಾವಣಮಾಸವನ್ನು ಹಿಡಿ
ದು ಪುಷ್ಯಮಾಸಕ್ಕೆ ಆರು ತಿಂಗಳು ಆಗುತ್ತದೆ ಅಷ್ಟರೊಳಗೆ ದೇಶ
ಮಧ್ಯದಲ್ಲಿ ಇರುವ ಪೇಟೆಮನೆಸ್ಥಲಪರಸ್ಥಲ ಮಠಮಹಾಂತ ಸಕಲ
ದೇಶದ ದೇಸಾಯಿ ದೇಶಪಾಂಡೆ ನಾಡಿಗರು ಬುದ್ಧಿವಂತರು ಮುಂತಾದ
ದೇವಭಕ್ತರುಗಳಿಗೆ ನಾವೂ ನೀವೂಆಶೀರ್ವಾದ ಪತ್ರ ಮುಖದಿಂದ ಕರಸಿ
ಕೊಂಡು ಆ ಸಭಾಮಧ್ಯದಲ್ಲಿ ದೇವಭಕ್ತರೂ ಸದರಿವಿಚಾರವನ್ನು ಮಾಡಿ
ದಲ್ಲಿ ಎರಡುದೋಷಗಳಪೈಕಿಯಾವ ದೋಷ ಯಾರಮೇಲೆಬರುತ್ತದೆಯೋ
ಅವರು ಅನುಭವಿಸ ಬೇಕಾಗುತ್ತದೆ. ಆದರಿಂದ ಸಭೆಯು ಕೂಡದೆಹೀಂಗೆ
ಜವಾಬು ಕೊಡುವುದಿಲ್ಲವೆಂದು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರ
ಅಪ್ಪಣೆ ಆಗಲು

ಆ ಮಾತಿಗೆ ಬನವಾಸಿಯಿಂದ ಬಂದ ಚರಮೂರ್ತಿಗಳು ಮುಂತಾದ
ಸಕಲ ದೇವಭಕ್ತರೂ ಒಪ್ಪಿಕೊಂಡು ಜಡೆಯಿಂದ ಬನವ ಸಿಗೆಬಂದುಈ
ವಿವರವನ್ನು ರಾ| ಗುರುಸಿದ್ಧ ಸ್ವಾಮಿಗಳವರಿಗೆ ತಿಳಿಸಿದ್ದರಿಂದ ಆಮಾ
ತಿಗೆ ಸನ್ನಿಧಾನವು ಒಪ್ಪಿಕೊಂಡು
ಸದರಿನ್ಯಾಯದವಿಚಾರದ ಬಗ್ಗೆ ಈಸೋದೆ ಸೀಮೆ,ಕೆಳದೀಸೀಮೆಈಉಭಯ
ಸೀಮೆಗಳ ಗಡಿಯಾದ ಜಡೆ, ಬನವಾಸಿ ಮಧ್ಯೆ ಇರುವ ಮೈ

ಣಸಿನಹಳ್ಳಿಕ್ಕೆ ಸಮೀಪವಾದ ಜಡೆಯದ ಹುಲಿಮುಖದ ಕೊತ್ತಳದಲ್ಲಿಸಭೆಯು ಪುಷ್ಯಬಹುಳ ತ್ರಯೋದಶಿಯಲ್ಲಿ ಕೂಡಿ
ದೇವಭಕ್ತರಮಧ್ಯದಲ್ಲಿ ಇಸಳೂರಮಠನಲ್ಲಿ ರಾ| ಕೆಂಪಿನಸಿದ್ಧಬಸವಸ್ವಾಮಿಗಳವರುಪಂಚದ್ರೋಹವನ್ನು ಮಾಡಿಸಿದ್ದರಿಂದ ಇವರ ವಿಚಾರದಬಗ್ಗೆ ಕೂಡುವಂತೆ ಸದರಿ ಮಿತಿಯನ್ನು ನೇಮಿಸಿ ಇದ್ದೇವೆ ನೀವು ಆ ಮಿತಿಗೆ ಸರಿಯಾಗಿ ಬರಬೇಕೆಂದು ದೇಶಮಧ್ಯದಲ್ಲಿ ಎಲ್ಲಾ ಕಡೆಗೂ ದೇವಭಕ್ತರಿಗೆ ಆಶೀರ್ವಾದ ಪತ್ರಗಳನ್ನು ಬರಸಿ ಆ ಪತ್ರಗಳನ್ನು ಕೊಟ್ಟು ಆ ದೇವಭಕ್ತರ ಹೊರಡಿಸಿಕೊಂಡು ಬರುವಂತೆ ತಮ್ಮ ಸನ್ನಿಧಾನದ ಕಡೆಯಿಂದ ಗಣಂಗಳನ್ನು ರಾ| ಗುರುಸಿದ್ಧಸ್ವಾಮಿಗಳವರು ಕಳುಹಿಸಿಕೊಟ್ಟರು.

ಇದರಂತೆರಾ| ಕೆಂಪಿನಸಿದ್ಧಬಸವಸ್ವಾಮಿಗಳ ಹಳೇಬೀಡಕಲ್ಲುಮಠದ ದುರ್ಬಳಕೆಯನ್ನು ರಾ॥ ಗುರುಸಿದ್ಧಸ್ವಾಮಿಗಳವರು ಕೂಡಿಕೊಂಡದ್ದರಿಂದ ಈ ಆಚಾರಸಂಬಂಧವಾದ ನ್ಯಾಯವು ತೀರಬೇಕಾಗಿದೆ, ಇದರವಿಚಾರದಬಗ್ಗೆ ಸಭೆಯು ಸದರಿ ಮಿತಿಗೆ ಈ ಜಡೆಯದಸ್ಥಳದ ಸಮೀಪವಾದ ಪುಣಸಿನಹಳ್ಳಿಕ್ಕೆ ಕೂಡಿ ಈ ಜಡೇದ ಹುಲಿಮುಖದ ಕೊತ್ತಳದಲ್ಲಿ ವಿಚಾರವಾಗಬೇಕೆಂದು ನೇಮಿಸಿ ಇದ್ದೇವೆ, ಸದರಿ ಮಿತಿಗೆ ಬರಬೇಕೆಂದು ದೇಶದಲ್ಲಿ ಇರುವ ದೇವಭಕ್ತರಿಗೆ ಆಶೀರ್ವಾದಪತ್ರಗಳನ್ನು ಬರಸಿ ಆ ಪತ್ರವನ್ನು ತಮ್ಮ ಗಣಂಗಳ ಕೈಯ್ಯಲ್ಲಿ ಕೊಟ್ಟು ಆ ಭಕ್ತಗಣಂಗಳನ್ನು ಕರಕೊಂಡು ಬರುವಂತೆ ರಾ॥ ಕೆಂಪಿನಸಿದ್ಧಬಸವಸ್ವಾಮಿಗಳವರು ಕಳುಹಿಸಿಕೊಟ್ಟರು.

ಸದರಿ ಮಿತಿಗೆ ಸರಿಯಾಗಿ ಸಭೆಯು ಕೂಡುವುದು ರಾ॥ ಕೆಳದಿ ಸಂಸ್ಥಾನದ ದೊರೆಗಳಿಗೂ ರಾ॥ ಸೋದೆ ಸಂಸ್ಥಾನದ ದೊರೆಗಳಿಗೂ ತಿಳಿದದ್ದರಿಂದ ಈ ಉಭಯ ದೊರೆಗಳೂ ತಮ್ಮ ಸೀಮೆಗಳಲ್ಲಿ ಇರುವ ಗೌಡರು ಮುಂತಾದ ಸಕಲರಿಗೆ ಸದರಿ ಮಿತಿಗೆ ಸರಿಯಾಗಿ ಕೂಡಿದ ದೇವಭಕ್ತರುಗಳು ಇರುವುದಕ್ಕೂ ಇವರ ಸ್ನಾನ ಭೋಜನಗಳು ಆಗುವುದಕ್ಕೂ ಉಭಯ ಸೀಮೆ ಗಡಿಯಾದ ಪೆಣಸಿನಹಳ್ಳಿಯ ದಂಡೆಯಮೇಲೆ ಹಂದರ ಚಪ್ಪರ ಹಾಕಿಸಿ ಸಮಸ್ತ ಸಾಮಗ್ರಿಯನ್ನೂ ಮಾಡಿಸಿ ಬಂದವರಿಗೆ ನೀವು ಖುದ್ದು ನಿಂತು ಸದರಿ ರಾ॥ ಉಭಯ ಸ್ವಾಮಿಗಳವರ ಆಚಾರ ಸಂಬಂಧವಾದ ನ್ಯಾಯವು ತೀರುವವರೆವಿಗೂ ಉಪಚರಿಸಿ ನಮ್ಮ ಸಂಸ್ಥಾನಗಳಿಗೆ ಕೀರ್ತಿ ಕೊಡಬೇಕೆಂದು ಎರಡು ಸಂಸ್ಥಾನದ ಹುಕುಮು ಬಂದ ಪ್ರಕಾರ ಉಭಯ ಸೀಮೆಯವರೂ ಸದರಿ ಪ್ರಕಾರವೆ

ಣಸಿನಹಳ್ಳಿಯ ದಂಡಿಗೆಗಳ ಮೇಲೆ ತಯಾರು ಮಾಡಲು ಆ ಮಿತಿಗೆಸ್ಸಾ ಯಾಗಿ ಶಾಲಿವಾಹನಶಕ ವರ್ಷ ೧೬೪೧ ನೆಯ ವಿಕಾರಿನಾಮಸಂವತ್ಸರದ ಪೌಷ್ಯ ಬಹುಳ ೧೩ ಮಂಗಳವಾರದಲ್ಲಿ ಕೆಳದಿ ರಾಷ್ಟ್ರಕ್ಕೆ ಸಲ್ಲುವ ಜಡೆಯದಸೇಟೆಯಲ್ಲಿ ಸಭೆಯು ಕೂಡಿದ ವಿವರವು

ಸಕಲಸೀಮೆಗಳ ಸೆಟ್ಟರು, ದೈವ, ಬಣಕಾರ, ಬುದ್ಧಿವಂತರು ಸಿಂಹಾಸನ ವಗೈರೆ ಸಕಲ ಮಠಸ್ಥರು ಸಕಲ ಸೀಮೆ. ದೊರೆಗಳು, ದೇಸಾಯಿಗಳು, ದೇಶಪಾಂಡೇರು, ನಾಡಗೌಡರು, ನಾಡಕರಣಿಗಳು,ಗಾಡ, ಶಾನಭೋಗರು ಮುಂತಾದ ಸಮಸ್ತರ ವಿವರ

ಹಾನಗಲ್ಲ ಪೇಟೆದೈವ' ಆಡೂರು, ಆಲೂರು ಇಮರಾಮಪುರದ ಪೇಟೆದೈವ, ತಡಸ ಮಿಶ್ರೀಕೋಟೆ ರಾಯರಹುಬ್ಬಳ್ಳಿ ಧಾರವಾಡದ ಪೇಟೆದೈವ, ಮಂಗಳವಾಡ ಕಾಶಿಗಾಗ್ಗವಿ ತೆಲುಸಂಗ ಜತ್ತಿಯ ಮರಾಣಿ ಗೋಕಾಕ ಬೆಳಗಾವಿ ಶಹಪೂರ ಕಿತ್ತೂರು ಮಕುಟಕಾನಹುಬ್ಬಳ್ಳಿಪೇಟೆ ದೈವ, ನವಲಗುಂದ ನರಗುಂದ ಡಂಬಳ ಸೀಹಟ್ಟಿ ಗದಗು ಬೆಟಗೇರಿಪೇಟೇ ದೈವ, ಸಂಪಸಿ ಕುಂದಗೋಳ ಕಲ್ಲಮುಳಗುಂದ ಲಕ್ಷ್ಮೇಶ್ವರ ಸವಣೂರು ಬಂಕಾಪುರದಪೇಟೆ. ದೈವ, ಅಗಡಿ ಹಾವೇರಿ ರಾಹುಪುರ ರಾಣೇಬೆನ್ನೂರು ಹರಿಹರ ದಾವಣಗೆರೆಪೇಟೆ ದೈವ ಸೊರಬ ಸಾಗರ ಸಿರವಂತಿಪೇಟೆದೈವ, ಸಿರಸಿ ಇಸಳೂರು ಹುಲಿಕಲ್ಲ ಮೇಲಗೈಯಲ್ಲಾಪೂರದಪೇಟೆದೈವ,ಮುಂತಾದಏಳುನೂರುಪೇಟೆದೈವ ಮೊದಲಾದ ಸ್ಥಲ ಪರಸ್ಥಲ ಮಠ ಮಹಂತು ಯಾವತ್ತೂ ದೇವಭಕ್ತರುಗಳು ಸಹ ಜಡೇದ ರಾ|| ಕೆಳದಿ ಸಂಸ್ಥಾನದ ದೊರೆಗಳವರ ಅಪ್ಪಣೆಪ್ರಕಾರನಿಸಬತ್‌ದಾರ ಕೋಟೇ ಠಾಣೇದಾರ ಗುರುಲಿಂಗಯ್ಯನ ಮುಂದೆ ರಾ ಕುಮಾರಕೆಂಪಿನ ಸಿದ್ದಬಸವಸ್ವಾಮಿಗಳವರಿಗೂ ರಾ| ಇಮ್ಮಡಿ ಚಿತ್ರಕಲ್ಲ ದುರ್ಗದ ಮುರಿಗಾ ಸ್ವಾಮಿಗಳವರ ತರುವಾಯದ ರಾ|| ಗುರುಸಿದ್ದಸ್ವಾಮಿಗಳವರಿಗೂ ಹಳೇಬೀಡ ಕಲ್ಲಮಠದ ಕಲ್ಯಾಣಯ್ಯನು ಮಾದಿಗಿತ್ತಿ ತಿಮ್ಮಿಯ ಸಂಗವಮಾಡಿದ ಸಂಬಂಧಕ್ಕೆ ಆ ಸೀಮೆ ದೇವಭಕ್ತರು ಆತನ ಕಳೆದಮೇಲೆ ಆ ಕಲ್ಯಾಣಯ್ಯನ ಹೆಂಡತಿ ಬಸಮ್ಮನ ಹೊಟ್ಟೆಯಲ್ಲಿ ಚನ್ನವೀರಯ್ಯನು ಹುಟ್ಟಲಾಗಿ ಆ ಚನ್ನವೀರಯ್ಯನನ್ನು ಆ ಸೀಮೆಯವರು ಅದೇ ರೀತಿಯಲ್ಲಿ ಕಳೆದು ಬಿಟ್ಟು ಇದ್ದಲ್ಲಿಗೆ ರಾ|| ಕಟ್ಟಿಗೆಹಳ್ಳಿಸ್ವಾಮಿಗಳು ಇವರ ಶಿಷ್ಯರು ರಾ. ನೋಪಕಿನ್ನಲಿಂಗಸ್ವಾಮಿಗಳು ರಾ| ಮುರಿಗಾ ಸ್ವಾಮಿಗಳು ಸಹ ಅವನ ಬಳಕೆಯಬಿಟ್ಟುನಡಕೊಂ

ಡು ಬರುತ್ತಾ ಇವದ್ದಲ್ಲಿಗೆ ಇತ್ತಲಾಗಿ ಆ ಚನ್ನವೀರಯ್ಯನನ್ನು ರಾ|
ಗುರುಸಿದ್ಧ ಸ್ವಾಮಿಗಳವರು ಚಿತ್ರಕಲ್ಲದುರ್ಗದ ಮಠದಲ್ಲಿ ಶಿವಾಚಾರ
ಬಳಕೆಯೊಳಗೆ ಕೂಡಿಕೊಂಡು ಇದ್ದಲ್ಲಿ ಆಮೇಲೆ ರಾ। ನೋಡಸಿದ್ಧಲಿಂಗ
ಸ್ವಾಮಿಗಳವರ ತರುವಾಯದ ರಾ|| ಕುಮಾರಸ್ವಾಮಿಗಳು ಇವರ ಕರ
ಸಂಜನಿತರಾದ ರಾ|| ಕುಮಾರ ಕೆಂಪಿನಸಿದ್ಧಬಸವಸ್ವಾಮಿಗಳು ಸಹ ಕೆ
ಟ್ಟವನ ಹೊಟ್ಟೆಯಲ್ಲಿ ಹುಟ್ಟಿದವನ ಕೂಡುವರೆ ಆಗದು ಎಂದು ಹಿಡಿತ
ವಮಾಡಿ ಹತ್ತು ವರುಷದಾರಭ್ಯ ಉಭಯಸ್ವಾಮಿಗಳವರು ನ್ಯಾಯವಾ
ಡುತ್ತಾ ಇದ್ದಲ್ಲಿ ಅಷ್ಟರೊಳಗಾಗಿ ರಾ|ಕೆಂಪಿನಸಿದ್ಧಬಸವಸ್ವಾಮಿಗಳವರು ಅ
ವರೊಳಗಣ ಹದಿನಾಲ್ಕು ಜಂಗಮರುಗಳು ಇಷಳೂರಮಠಕ್ಕೆ ಹೋಗಿ ಆಮಠ
ದಲ್ಲಿ ಇರುವ ಮೂರ್ತಿಗಳಕೂಡ ವಾಗ್ವಾದ ಬಂದ ಕಡಿದಲ್ಲಿ ಒಂಬತ್ತು ದಿವ
ಸಕ್ಕೆ ಆಒಡೆಯರವರು ಐಕ್ಯರಾದರು. ಆಸಮಾಚಾರವನ್ನು ರಾ|ಕೆಂಪಿನಸಿದ್ಧ
ಬಸವಸ್ವಾಮಿಗಳು ಕೇಳಿ ಆ ಹದಿನಾಲ್ಕುಜಂಗಮರುಗಳನ್ನು ಕಡೆಗೆ ತೆಗೆದು
ಬಿಟ್ಟರು. ಈ ಸಂಬಂಧಕ್ಕೆ ರಾ| ಗುರುಸಿದ್ಧಸ್ವಾಮಿಗಳವರು ಪಂಚದ್ರೋಹ
ವನ್ನು ನೀವೇ ಮಾಡಿಸಿದಿರಿ ಎಂದು ಆ ದೋಷವನ್ನು ರಾ| ಕೆಂಪಿನಸಿದ್ಧಬಸ
ವಸ್ವಾಮಿಗಳವರ ಮೇಲೆ ಕಲ್ಪಿಸಿ ಇಸಳೂರಿಂದ ಆ ಸೀಮೆ ದೇವಭಕ್ತರು
ಗಳನ್ನು ಕರಕೊಂಡು ಬನವಾಸಿಗೆ ಬಂದರು ಆ ಬಳಿಕ ಜಡೆಯದಲ್ಲಿ ಸದರಿ
ದೋಷವನ್ನು ನೀವು ಮಾಡಿಸಿದಿರಿ ಎಂತ ಸ್ವಾಮಿಗಳವರ ಸೆರಗಹಿಡಿದಲ್ಲಿ ಈ
ಮಾತು ನಮ್ಮ ಮೇಲೆ ಉಂಟು ಮಾಡಿಕೊಡಿ ಎಂತ ಜಡೆಯ ಕೋಟೆ ಹುಲಿ
ಮುಖದಕೊತ್ತಳದ ಒಳಗೆ ಈ ಸಮಸ್ತ ಸಭೆಯ ಮುಂದೆ ಗಟ್ಟ
ಮಾಡಿ ಈ ಮಾತು ಸೈ (ಸಹಿ) ಮಾಡಿ ಕೊಡಿ, ಎಂದು ರಾ| ಗುರುಸಿದ್ಧ
ಸ್ವಾಮಿಗಳ ಬಗೆ ಚರಮೂರ್ತಿಗಳು ಸೋದೆ ಚನ್ನಬಸವಪ್ಪನವರು
ಮುತ್ತಿನಕಂಥೆ ಗುರುಪಾದಯ್ಯನವರು ವಿರುಪಾಕ್ಷೈಯನವರು ಸೋಮ
ಶೇಖರಯ್ಯ ಮುಂತಾದ ಈ ನಾಲ್ಕು ಚರಮೂರ್ತಿಗಳ ಕೂಡೆ ರಾ|ಕೆಂಪಿ
ನಸಿದ್ಧಬಸವಸ್ವಾಮಿಗಳವರ ಬಗೆ ಚರಮೂರ್ತಿಗಳು ರಾ| ಉದ್ಧರಣೆಶಾಂ
ತೈಯನವರು ಪುರಾಣದ ಶಿವಲಿಂಗಪ್ಪನವರು ಶ್ರೀಮೋಕ್ಷಿ ಸಿದ್ಧರಾಮೈ
ಯನವರು ಕೆಂಪಿನಶಿವಲಿಂಗಪ್ಪನವರು ಹೀಗೆ ನಾಲ್ಕು ಚರಮೂರ್ತಿ
ಗಳು ಸಹಾ ಅವರ ಹಿಡಿದು ಕೇಳಿದಲ್ಲಿಗೆ ಆ ಹದಿನಾಲ್ಕು ಅಯ್ಯಗಳನ್ನು
ಕಳೆದಮೇಲೆ ಪಂಚದ್ರೋಹವು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರಿಗೆ

ಸಂಬಂಧ ಇಲ್ಲ ಎಂಬುವಹಾಗೆ ಸೋದೆ ವೀರಕ್ಷೋರಶಿವಪ್ಪ ಮುಂತಾಗಿ ರಾ| ಗುರುಸಿದ್ಧಸ್ವಾಮಿಗಳವರ ಬಗೆ ಚರಮೂರ್ತಿಗಳು ಸಹಾ ಇವರ ಮೇಲೆ ದೋಷವಿಲ್ಲ ಎಂಬುವಹಾಗೆ ಕೂಡಿದ ಸಭೆಯೇ ಮುಂತಾಗಿ ಸರ್ವರೂ ಕೈಚಪ್ಪಳೆ ಹೊಡೆದರು.

ಆ ಬಳಿಕ ಸಭೆಯುವರು ಇನ್ನು ಮೇಲೆ ೫೬ದೇಶ ೨೧ಸಾವಿರ ಸ್ಥಲಪರಸ್ಥಲದ ದೇವಭಕ್ತರೊಳಗೆ ಯಾರಾದರೂ ಈ ಪಂಚದ್ರೋಹವು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರ ಮೇಲೆ ಉಂಟು ಮಾಡಿ ಎಂದು ನುಡಿದರೆ ಅವರುಗಳು ಇಹ ಲೋಕಕ್ಕೆ ಪರಲೋಕಕ್ಕೆ ಹೊರಗ ಎಂದು ಆಡಿ ಆ ಮಾತು ಅಲ್ಲಿಗೆ ತೀರಿಸಿದರು.

ಆ ಮೇಲೆ ಸಭೆಯುವರು ಮುಂದೆ ಹಳೇಬೀಡ ಚನ್ನವೀರಯ್ಯನ ಬಳಕೆಯನ್ನು ಬಿಟ್ಟು ನೀವು ನೀವು ಒಂದಾಗಿ ಸುಖದಿಂದ ಇರಬೇಕೆಂದು ಕೂಡಿದ ದೇವಭಕ್ತರು ಹೇಳಿದಲ್ಲಿ ರಾ| ಗುರುಸಿದ್ಧಸ್ವಾಮಿಗಳವರ ಚರಮೂರ್ತಿಗಳು ಸಭೆಯುವರಿಗೆ ಎಂದಮಾತು:—

ನಾವು ಆ ಬಳಕೆಯು ಕೂಡಿಕೊಂಡ ಮೇಲೆ ಆಬಳಕೆಯ ವಿಷಯದಲ್ಲಿ ಬ್ರಹ್ಮದೇವರು ಬಂದು ಹೇಳಿದರೂ ಬಿಡುವುದಿಲ್ಲ ಎಂದು ಹೇಳಿದಲ್ಲಿ ಸಭೆಯುವರು ಎಂದಮಾತು :—

ನಾವು ನಿಮಗೆ ಬೇಕಾಗಿ ಇದ್ದರೆ ನಮಗೋಸ್ಕರ ಹಳೇಬೀಡ ಬಳಕೆಯ ಬಿಟ್ಟು ನೀವು ನೀವು ಒಂದಾಗಿ ಇರಬೇಕೆಂದು ಬಹುಬಗೆಯಲ್ಲಿಹೇಳಿಕೊಂಡದ್ದರಿಂದ ರಾ| ಚರಮೂರ್ತಿಗಳು ಹೇಳಿದ್ದು.

ನಾವು ಹಿಡಿದಿದ್ದರೊಳಗೆ ಇರಬೇಕಾದರೆ ಇರ್ರಿ. ಒಲ್ಲದಿದ್ದರೆ ನಮ್ಮಿಷ್ಟಕ್ಕೆ ನಾವೇ ಇರುತ್ತಾ ಇದ್ದೇವೆ ನಿಮ್ಮಿಷ್ಟಕ್ಕೆ ನೀವು ಇರಬೇಕೆಂದು ಹೇಳಿದರು.

ಈ ಪ್ರಕಾರ ಅವರ ಇವರ ಖಂಡಿತ ಉತ್ತರಗಳಾದ ಮೇಲೆ ರಾ| ಕುಮಾರಕೆಂಪಿನಸಿದ್ಧಬಸವಸ್ವಾಮಿಗಳವರು ಜಡೆತೆಲಗಡ್ಡೆ ಪೇಟೆಸೆಟ್ಟರ ದೈವದವರು ಈ ಜಡೆತೆಲಗಡ್ಡೆ ಸೀಮೆ ಮಾಗಣೆ ಗೌಡಾಧ್ಯರು ನಾಡಿಗರು ಮುಂತಾದ ಮಠಸ್ಥರು ಸಕಲ ದೇವಭಕ್ತರು ಸಹವಾಗಿ ಅವರುಗಳಿಂದ ವಚನಗಳನ್ನು ತೆಗೆದುಕೊಂಡವಿವರವು.

ಮುಂದೆ ಈ ಜಡೆ ತೆಲಗಡ್ಡೆ ಪ್ರಾಂತಿನಲ್ಲಿ ಮುರಗಿ ಚೀಲಾಳ

ಂಹಾಸನವನ್ನೇರೇಋುವರ ಮತಗಳು ಆಗ ಬಾರದು. ಹಾಗೂ ಈಸೀಮೆ ಗಳಲ್ಲಿ ಮೆರವಣಿಗೆ ಮಹೋತ್ಸವ ಆಚಾರ ಖಂಡಣೆ ಅಪರಾಧ ಕಾಣಿಕೆ ಮುಂಶಾವ ಶುಭ ಶೋಭನ ಕಾರ್ಯಗಳಲ್ಲಿ ಕಾಸು ವೀಸ ವೀಳ ದಕ್ಷಿಣೆ ರಥೋತ್ಸಹದಲ್ಲಿ ಕಾಯಿಗಳು ಉತ್ತರಕರ್ಮದಲ್ಲಿ ಬರತಕ್ಕ ಬಾಬುಗಳು ಸಹ ಜಡೆ ತೆಲಗಡ್ಡೆ ಪೇಟೆಗಳಲ್ಲಿಸಂತೆಯೊಳಗೆ ಪಸುಗೆ ರುಸುಮು ಗ್ರಾಮ ಒಂದಕ್ಕೆ ಆಯುವಬಾಬತು ವರುಷಾಶನದಭತ್ತ ದೀಪಾರಾಧನೆಕಾಣಿಕೆ ಶ್ರೀಮಠದ ಪ್ರಸ್ಥಗಳು ಶ್ರಾವಣಮಾಸದಲ್ಲಿ ಪೂಜಾ ಉತ್ಸಹ ಆವಲ್ಲಿ ಇವುಗಳ ಖರ್ಚು ಮಠಜೀರ್ಣೋದ್ಧಾರವಾಡ ಬೇಕಾದರೆ ಇವುಗಳಖರ್ಚುಗಳುಸಹಾ ನಮ್ಮಸಕಲರಭಕ್ತಿಯಿಂದ ನಡೆಸಿ ಕೊಡುವೆವು.

ಹೀಗೆ ಅವರುವಚನವನ್ನು ಕೊಡಲು,

ಆ ಪ್ರಕಾರ ಸರ್ವಸಾಭಿಮಾನಸವನ್ನು ನಮ್ಮ ಸನ್ನಿಧಾನಕ್ಕೆ ನಡಸಿ ಕೊಟ್ಟ ಆ ಮೇಲೆ ನಮ್ಮ ವೀರಶೈವ ಮತಕ್ಕೆ ಸೇರಿರುವ ಸರ್ವವರ್ಣ ದವರು ಪುಂತಾನ ಸಮುಸ್ತರೂ ಸಹಾ ನಮ್ಮ ವಂಶ ಪಾರಂಪರ್ಯವಾಗಿ ನಮ್ಮ ಶಿಷ್ಯಪಾರಂಪರ್ಯದನುಗೆ ನಡಸಿಕೊಡಬೇಕೆಂದು ರಾ| ಸಿದ್ಧ ಬಸವಸ್ವಾಮಿಗಳವರ ಅಪ್ಪಣೆ ಆಯಿತು

ರಾ। ಸ್ವಾಮಿಗಳವರ ಅಪ್ಪಣೆ ಪ್ರಕಾರ ರಾ। ತೆಲಗಡ್ಡೆ ಸೀಮೆ ಶ್ರೀಶಾಂತು ಪೂರಸಂಸ್ಥಾನಮಠದ ಪಟ್ಟದದೇವರಾದ ಮರಿಯಪ್ಪಒಡೆಯರು, ಜಡೆಯ ಕಸಬಾ ಕಬ್ಬಣಕಂಥೆಮಠದ ಚರಂತಿದೇವರಾದ ಬಸವಲಿಂಗಪ್ಪನವರು ಜಡೆಯ ಸೀಮೆ ಚಗಟೂರ ಸ........ ....ದ ಪಟ್ಟದದೇವರಾದಚನ್ನವೀರ ಪ್ಪನವರು, ಜಡೆಯ.ನಾಡಿಗರು, ಕ...........ಯ್ಯ,ಶಾನಭೋಗ ನಾಡಿಗ ಕೃಷ್ಣಪ್ಪಯ್ಯ, ಪರಿವಾರದ ಶಾನುಭೋಗರು ಮೊದಲಾದವರು, ತೆಲ ಗಡ್ಡೆ ಸೀಮೆ ನಾಡಿಗರು ಜಗನ್ನಾಥಯ್ಯ, ಅಲ್ಲಮಯ್ಯ.........ರು, ಕಲ್ಲ ಕೊಪ್ಪದ ಠಾಣೆದಾರ ಗುರುಲಿಂಗಯ್ಯಗೌಡರು,...........ಯ್ಯ ಗೌಡರು, ಕೆಳಗಿನಮನೆ ಪುಟ್ಟಯ್ಯಗೌಡರು, ಸಾಲಗಿ ಗೂಳಯ್ಯಗೌಡ, ಬರಮ ಯ್ಯನವರ ಲಿಂಗಯ್ಯಗೌಡ, ಮರಿಯಪ್ಪಗೌಡ. ಚನ್ನಪ್ಪಗೌಡ, ಕಾಲ ಗ್ಗೇರಿ ನಾಗಯ್ಯಗೌಡ, ಕರಿದೇವಯ್ಯಗೌಡ, ಜಗರಿ ಕೊಪ್ಪ ಜಂಬಿ ಹಳ್ಳಿ ವೀರಬಸವಯ್ಯಗೌಡ, ಹಳೆಕೊಪ್ಪದ ಲಿಂಗಯ್ಯಗೌಡ, ಎಡಕೆ

ನವರಲಿಂಗಯ್ಯಗಡ, ಆರೆತೆಲಗಡ್ಡೆ ಮೇಲಿನಮನೆ ಮಲ್ಲಯ್ಯಗೌಡು ಹಣಜಿಗೂಳಿಗೌಡ, ಚಗಟೋಕರಿಯ ಪ್ಪಗೌಡ, ದೊಡ್ಡತೆಲಗಡ್ಡಿ ವೀರ ಭದ್ರಪ್ಪಗೌಡ, ತುಮರಿಕೊಪ್ಪದ ಮರಿಯಪ್ಪಗೌಡ, ಹೊಸಕೊಪ್ಪದ ಹುಲ್ಲಬೆಂಕಿ ಬಸಯ್ಯಗೌಡ, ಬಂಕಸಾಣದ ಗುರುಲಿಂಗಯ್ಯಗೌಡ, ಶಾನ ವಳ್ಳಿಯ ಗುರಪ್ಪಗೌಡ, ತೈಲಗುಂದದ ರಾಘವೈಯಗೌಡ, ಶಾಂತ ಯ್ಯಗೌಡ. ಚಿಕ್ಕಯ್ಯಗೌಡರ ಬಸಯ್ಯಗೌಡ, ಹೊಸ ಯ್ಯಗೌಡರ ಶಾಂತಯ್ಯಗೌಡ, ಆಲವಳ್ಳಿ ದೊಡ್ಡಗೌಡ, ಪುಟ್ಟಯ್ಯಗೌಡ, ಹೂಡೇ ದಗೌಡ, ಕಾಡಯ್ಯಗೌಡ, ಕೋಡಿಕೊಪ್ಪದ ಸೋಮಯ್ಯಗೌಡ, ಗಿಂ ಡಿಗೌಡ, ಬಿಳಗಲಿ ಬಸವಯ್ಯಗೌಡ, ಸೂರಣಗಿ ಹೊಳೆಬಸವಯ್ಯಗೌಡ, ಕಚವಿ ಬಸವಲಿಂಗಯ್ಯಗೌಡ, ಬಂಕವಳ್ಳಿ ಚಿಕ್ಕಮನೆ ವೀರಬಸವಯ್ಯಗೌಡ ಮಂಗಾಪುರದ ಕಾಳಿಂಗಪ್ಪಗೌಡ, ಮಾದಾಪುರದ ಶಿವಪ್ಪಗೌಡ, ಮರದಿ ಕೊಪ್ಪದ ಚನ್ನಬಸವಯ್ಯಗೌಡ, ಕಮರೂರ ದೇವಪ್ಪಗೌಡ, ಶಕುನ ವಳ್ಳಿ ಹಿರಿಯಮನೆ ಬಸವಪ್ಪ ದೇವರು ಹೊಸಕೊಪ್ಪದ ಸಂಗಯ್ಯಗೌಡ ಶಂಕರಿಕೊಪ್ಪದ ಹೊಸಳ್ಳಿಭೀಮಣ್ಣ, ತೂಲಿಕೊಪ್ಪದ ಹನುಮಯ್ಯಗೌಡ ಸಾಬಾರದ (ಸೊರಬದ) ರಂಗಪ್ಪಗೌಡ, ಆರಸಾಪುರದ ಲಿಂಗಪ್ಪನವರ ವೀರ ಪ್ಪ, ಇನ್ನುಳಿದಗ್ರಾಮಗಳ ಗೌಡಾಧ್ಯರು, ನಾಡಿಗರು, ಸೀಮೆ ದೈವದವರು ಮಠಸ್ಥರು ಜಡೆ. ತೆಲಗಡ್ಡೆ ಪೇಟೆ ದೈವದವರು ಮುಂತಾದ ಈ ವೀರ ಶೈವಮತಕ್ಕೆ ಸೇರಪಟ್ಟ ಸರ್ವೇವರ್ಣದವರು ಮೊದಲಾದ ದೇವಭಕ್ತ ರು ಸಮಸ್ತರೂ ಆಡಿದಮಾತು:—

ಮೇಲೆಕಂಡ ಈಎರಡು ಮಾಗಣಿಗ ಳಲ್ಲಿ ನಾವು ಹಾಗೂ ನಮ್ಮ ವೀರಶೈವಮತಕ್ಕೆ ಸೇರಪಟ್ಟ ಸರ್ವೇವ ರ್ಣದವರು ಮುಂತಾದ ಸಮಸ್ತರೂ ತಮ್ಮ ಸಾಭಿಮಾನವನ್ನ ಹಿಡಿದು ಈ ಸೀಮೆಗಳಲ್ಲಿ ಎರಡನೆಯ ಮುರಿಗಿ ಚೀಲಾಳ ಬಗೆಯಮಠಗಳ ಮುಂತಾದ ಸಿಂಹಾಸನವಗ್ಯೆರೆ ಮಠಗಳವರಿಗೂ ಸಹಾ ನಡಕೊಳ್ಳಲಿಕ್ಕೆ ಇಲ್ಲ. ಇವರುಗಳಿಗೆ ನಮ್ಮ ಎರಡು ಮಾಗಣಿಗಳಲ್ಲಿ ಮಠಮಾನ್ಯಗಳ ನ್ನು ಮಾಡಿಕೊಡಲಿಕ್ಕೆ ಇಲ್ಲ

ರಾ| ರಾ| ಮಹಾಸ್ವಾಮಿಗಳವರ ಅಪ್ಪಣೆ ಪ್ರಕಾರ ಮಠಮಾನ್ಯಗಳು ಉತ್ಸವ ಮರಿಯಾದೆಗಳು ಆಚಾರ ವಿಚಾರ ದಂಡ ಖಂಡಣೆಗಳು ಸನ್ನಿಧಿಗೆ ಆಜ್ಞಾಮೀರಿದವರಿಗೆ ಅವರಿಂದ

ಅಪರಾಧ ಕಾಣಿಕೆ ತೆಗೆದುಕೊಳ್ಳುವದಕ್ಕೂ ಶಿಕ್ಷೆರಕ್ಷೆಗೂ ತಾವೇ ಬಾಧ್ಯರು ಇದರ ಶಿವಾಯಿ ರಾ। ಪುತ್ರಾಸ್ವಾಮಿಗಳವರ ಅಪ್ಪಣೆ ಪ್ರಕಾರ ಸರ್ವಕಾರ್ಯಗಳಲ್ಲಿ ಎಂದರೆ ಆಯ್ಯಾಚಾರ ಲಗ್ನ ಮುಹೂರ್ತ ಗುಗ್ಗಳ ಅರ್ಚನೆಪ್ರಸ್ಥ ಮುಂತಾದವುಗಳಲ್ಲಿ ಸರಕಾರದ ಕಂದಾಯದಪೂಜೆಯಲ್ಲಿ (ಪೂಜ್ಯದಲ್ಲಿ ?) ಮುಖ್ಯವಾಗಿವಾದಕಾರಣ ವೀಳ್ಯ ದಕ್ಷಿಣೆ ಸದರಿ ಕಾರ್ಯಗಳಲ್ಲಿ ಬರತಕ್ಕ ಎಡೆ ಕಾಸು ವಸ್ತ್ರ ವೀಳ್ಯ ದಕ್ಷಿಣೆ ಕಾಯಿ,ರಥೋತ್ಸಹದಲ್ಲಿ ಕಾಯಿಗಳು ಇವುಗಳನ್ನು ಸರಿಯಾಗಿ ಕೊಡುವದಲ್ಲದೆ ನಮ್ಮ ಗ್ರಾಮಗಳಲ್ಲಿ ಮನೆ ಒಂದಕ್ಕೆ ೧ಂಗಿದ್ದ ಬತ್ತ ಹಿಡಿದು ೨ಂಗಿದ್ದ ಬತ್ತದ ವರೆವಿಗೂ ವರ್ಷಾಶನದ ಬತ್ತ ದೀಪಾರಾಧನೆ ಕಾಣಿಕೆ ಗ್ರಾಮ ಒಂದಕ್ಕೆ ಆಯದ ಬಾಬತು ಒಂಪು ವಕ್ಕಳಬತ್ತ ಜಡೆ ತೆಲಗಡ್ಡೆ ಪೇಟೆಗಳ ಸಂತೆಗಳಲ್ಲಿ ಪಸುಗೆ ರುಸುಮು ಗುಡಾರ ಅಂಗಡಿಗಳಲ್ಲಿ ದರ ಲದಿವಸಕ್ಕೆ ಒಂದು ದುಡ್ಡು ಉತ್ತರಕರ್ಮಗಳಲ್ಲಿ ಬರತಕ್ಕಬಾಬು ಸಹ ಸ್ವಾಮಿಯವರ ಮಠದಲ್ಲಿ ಪ್ರಸ್ಥ ಪೂಜೆ ಉತ್ಸಹವಾದರೆ ಹಾಗೂ ನೂತ ಜೀರ್ಣವಾದರೆ ಇವುಗಳಿಗೆ ನಮ್ಮ ಶಕ್ತ್ಯನುಸಾರವಾಗಿ ನವ್ಮಗಳವಂಶಪಾರಪರ್ಯವಾಗಿ ನಿರಂತರವಾಗಿ ತಮ್ಮ ಮ। ರಾ। ಶ್ರೀ ಸ್ವಾಮಿಗಳವರ ಶಿಷ್ಯಪಾರಂಪರ್ಯರಾದ ಸ್ವಾಮಿಗಳವರಿಗೆ ಸಹ ಕೊಟ್ಟುಕೊಳ್ಳುತ್ತಾ ಬರುತ್ತಾ ಸದರಿ ಪ್ರಕಾರ ತಮ್ಮ ಗುರುಸನ್ನಿಧಾನದ ಸರ್ವ ಸಾಭಿಮಾನವನ್ನು ನಡಸಿಕೊಡುತ್ತೇವೆ ಎಂದು ಸರ್ವರೂ ತಮ್ಮ ಆತ್ಮಸಂತೋಷದಿಂದ ತ್ರಿಕರಣಶುದ್ಧವಾಗಿ ಶರಣುಹಾಕಿ

ಈಪ್ರಕಾರ ರಾ॥ ಕೆಂಪಿನಸಿದ್ಧಬಸವ ಸ್ವಾಮಿಗಳವರಿಗೆ ದಾನಪತ್ರವನ್ನು ಸೊರಬದ ಸೀಮೆ ಬಿಚ್ಚುಗತ್ತಿ ಸೂರಯ್ಯನಮಗ ನರಸಣ್ಣನಕಡೆಯಿಂದ ಬರಸಿಕೊಟ್ಟು ಈ ಶಾಸನವನ್ನು ಸ್ವಾಮಿಗಳವರಿಗೆ ಒಪ್ಪಿಸಿ ಆ ಮೇಲೆ ಸದರಿ ಸಮಸ್ತರೂ ರಾ॥ ಕೆಳದಿ ಸಂಸ್ಥಾನದಲ್ಲಿ ಇರುವ ರಾ॥ ದೊರೆಗಳವರ ಮಾವನವರಾದ ಮರಿಯಪ್ಪನವರಿಗೆ ರಾ॥ ಸ್ವಾಮಿಗಳವರ ಸನ್ನಿಧಾನಕ್ಕೆ ತಮ್ಮ ಭಕ್ತಿಗಳಿಂದ ಮಠಮಾನ್ಯಗಳನ್ನು ಮಾಡಿಕೊಡುವಬಗ್ಗೆ ಪತ್ರಮುಖದಿಂದ ತಿಳಿಸಿ ರಾ॥ ಕೆಳದಿ ಸಂಸ್ಥಾನದಿಂದ ಹುಕುಮು ತರಿಸಿಕೊಂಡು ತಮ್ಮ ಸರ್ವರ ಭಕ್ತಿಗಳಿಂದ ಸದರಿ ಸನ್ನಿಧಾನಕ್ಕೆ ಮಠಮಾನ್ಯಗಳನ್ನು ಮಾಡಿಕೊಟ್ಟು ನಮಸ್ಕರಿಸಿ ಕೆಂಪಿನಸಿದ್ಧಬಸವಸ್ವಾಮಿಗಳವರನ್ನು ಜಡೆ, ತೆಲಗಡ್ಡೆ ಮುಂತಾದ ಗ್ರಾಮಗಳ ಸಮಸ್ತ

ದೇವಭಕ್ತರೂ ತಮ್ಮ ಭಕ್ತಿಯಿಂದ ಲಿಂಗಪೂಜೆ ಜಂಗಮ ದಾಸೋಹಗ ಳಿಂದ ಇಟ್ಟುಕೊಂಡರು

ಇವರು ಸನ್ನಿಧಿಗೆ ಬರೆಸಿಕೊಟ್ಟ ದಾನಪತ್ರವು ಇವತ್ತಿಗೂ ಜಡೇದಮಠದಲ್ಲಿ ಆದೆ. ಈದಾನಪತ್ರವನ್ನು ಬರೆಸಿಕೊಟ್ಟ ಸ ಮಸ್ತರ ವಂಶೀಕರೂ ಇವತ್ತಿಗೂ ಸದರಿಯವರು ಸನ್ನಿಧಾನದ ಸರ್ವಸಾ ಭಿಮಾನವನ್ನು ನಡಿಸಿಕೊಟ್ಟ ಪ್ರಕಾರ ಇವತ್ತಿಗೂ ಜಡೇದಸನ್ನಿಧಾನಕ್ಕೆ ನಡಸಿಕೊಡುತ್ತಾರೆ

ಈ ಜಡೇದಮಠವು ಕುಮಾರಸಮಯಕ್ಕೆ ಮೂಲಮ ಠವು ಎಂಬುದಕ್ಕೂ ಹಾಗೂ ರಾ|| ಕುಮಾರ ಸ್ವಾಮಿಗಳವರ ತರುವಾ ಯದ ಶಿವಾನುಭಾವ ಚರಂತಿಗೆ ಪಟ್ಟದವರಾದ ರಾ|| ಕೆಂಪಿನ ಸಿದ್ದಬಸವ ಸ್ವಾಮಿಗಳವರೇ ಕುಮಾರ ಸಮಯಕ್ಕೆ ಮೂಲ ಗುರುಗಳು ಎಂಬುದ ಕ್ಕೂ ಸದರಿ ದಾನಶಾಸನ ಮುಂತಾದ ಹಿಂದೆ ಹಳೇಬೀಡ ಕಲ್ಲುಮಠವ ಸ್ಥಾಪಿಸಿ ಬಳಕೆಯನ್ನು ರಾ| ಚಿತ್ರದುರ್ಗದ ಗುರುಸಿದ್ಧಸ್ವಾಮಿಗಳವರುಕೂ ಡಿಕೊಂಡ ೧೦೦ ರಾ| ಹಳೇಬಿ ಡಸೀಮೆ ದೇವಭಕ್ತರುಗಳಿಗೆ ಆಬಳಕೆ ವ್ಯ ವಸ್ಥೆಗೆಬಾರದೆ ಈ ಬಳಕೆ ವಿಚಾರವಬಗ್ಗೆ ಆ ಹಳೇಬೀಡಸೀಮೆ ದೇವಭಕ್ತ ರೂ ರಾ| ಬಾಳೇಹಳ್ಳಿ ಸಿಂಹಾಸನನವರೂಸಹ ರಾ| ಕೆಂಪಿನಸಿದ್ದಬಸವಸ್ವಾ ಮಿಗಳವರಿಗೆ ಬರಸಿ ಕಳುಹಿಸಿದ ಬಿನ್ನಹಪತ್ರಗಳೇ ಸಾಕ್ಷಿಯು

ಸದರಿದಾ ನಪತ್ರ ಮುಂತಾದ ಹಳೇಬೀಡಸೀಮೆಯವರು ಬರಸಿ ಕಳುಹಿಸಿದ ಸದರಿ ಪ ತ್ರಗಳು ಜಡೇದಸನ್ನಿಧಾನದಲ್ಲಿ ಇರುತ್ತವೆ. ನೋಡಿಕೊಂಬುವುದು. ಸದರಿ ದಾನಪತ್ರವಾದ ಶಾಸನವನ್ನು ವ|| ರಾ| ಕೆಂಪಿನಸಿದ್ಧಬಸವ ಸ್ವಾಮಿಗಳ ವರ ಸನ್ನಿಧಾನಕ್ಕೆ ಜಡೆ, ತಿಲಗಡ್ಡೆ ಮುಂತಾದ ಈಸೀಮೆಯದೈವದವರು ಮಠಸ್ಥರು ಗೌಡಾಳ್ವರು ನಾಡಿಗರು ಮುಂತಾದ ಸಮಸ್ತರು ತಮ್ಮಒಪ್ಪಿ ತದಿಂದ ಸಹಿಮಾಡಿ ಬರಸಿಕೊಟ್ಟಕಾರಣವೇನೆಂದರೆ

ಸದರಿ ಹೊಯ್ಸಳ ದೇಶದ ರಾಜಧಾನಿಯಾದ ವೇಲಾಪುರದ ವಿಷ್ಣುವಿನ ದೇವಾಲಯವನ್ನು ನಿರ್ಮಾಣಮಾಡಿದ ವಿಷ್ಣುವರ್ಧನರಾಯನೆಂಬ ಬಲ್ಲಾಳನ ಆಳಿಕೆಯಲ್ಲಿನ ಹಳೇಬೀಡ ಕಲ್ಲುಮಠವ ಸ್ಥಾಪಿಸಿ ಬಳಕೆಯುಳ್ಳ ಆಚಾರಸಂಬಂಧವಾದ ನ್ಯಾ ಯವೂ ಸೋದೆಸೀಮೆಯಲ್ಲಿರುವ ಇಸಳೂರು ಮಠದಲ್ಲಿ ಪಂಚದ್ರೋಹದ

ಸಂಬಂಧವ ನ್ಯಾಯವೂ ಕೆಳದಿ ರಾಷ್ಟ್ರಕ್ಕೆ ಸೇರಿದ ಜಡೇದಸ್ಥಳದಲ್ಲಿ ತೀರಿದ ಮೇಲೆ ರಾ|| ಮುದುಗಾ ಸಮುಯವೆಂತಲೂ ರಾ||ಕುಮಾರ ಸಮಯವೆಂತಲೂ ಈ ಪ್ರಕಾರ ಈ ಎರಡು ಸಮಯಗಳು ಭೇದವಾದ ಬಳಿಕ ರಾ|| ರಾಯರ ಹುಬ್ಬಳ್ಳಿ ಬಸವಪ್ಪಸೆಟ್ಟರು ಮುಂತಾದ ಆ ಸ್ಥಳದದೇವಭಕ್ತರು ರಾ|| ಕೆಂಪಿನ ಸಿದ್ಧಬಸವಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣಾಮರಾಗಿ ನಮ್ಮಗಳ ಭಕ್ತಿಗೋಸ್ಕರವಾಗಿ ನಮ್ಮ ಸ್ಥಳಕ್ಕೆ ಸ್ವಾಮಿಪಾದವ್ರುದಯಮಾಡಿಸಿದರೆ ಪಂಚವಾನ್ಯ ಗುಸುಪು ಕಾಣಿಕೆ ಮೊದಲಾದವುಗಳನ್ನು ಮಾಡಿಕೊಟ್ಟು ನಮುಸ್ಕರಿಸಿ ನಮ್ಮಗಳ ವಂಶಪರಂಪರ್ಯವಾಗಿ ಸ್ವಾಮಿಪಾದದ ಸಾಭಿಮಾನವನ್ನು ನಡಸಿಕೊಡುತ್ತೇವೆ, ಎಂದು ಶರಣು ಹಾಕಿದ್ದರಿಂದ ಸನ್ನಿಧಾನವು ಹುಬ್ಬಳ್ಳಿಗೆ ದಯಮಾಡಿಸುವದನ್ನು ಸದರಿ ಜಡೆ ತೆಲಗಡ್ಡಿ ಪೇಟೆಸೀಮೆಯದೇವಭಕ್ತರು ಮುಂತಾದ ಸಕಲರೂ ಈವರ್ತಮಾನವನ್ನು ಕೇಳಿ ಈ ಸಮುಸ್ತರೂಸನ್ನಿಧಾನಕ್ಕೆ ಬಂದು ಹುಬ್ಬಳ್ಳಿಗೆ ರಾ|| ಸ್ವಾಮಿಯವರನ್ನು ಕಳುಹಿಸಡೆ ಸದರಿ ದಾನಪತ್ರವನ್ನು ಬರಸಿಕೊಟ್ಟು ಮಠವಾನ್ಯಗಳನ್ನು ಜಡೆ ತೆಲಗಡ್ಡಿ ಸ್ಥಳಗಳಲ್ಲಿ ಮಾಡಿಕೊಟ್ಟು ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರನ್ನು ಸದರಿ ಸಮುಸ್ತರೂ ತಮ್ಮಭಕ್ತಿಯಲ್ಲಿ ಲಿಂಗಪೂಜೆ,ಜಂಗಮ ದಾಸೋಹದೊಡನೆ ಗುಣ ಸಮೂಹಗಳಿಂದ ಸನ್ನಿಧಾನವನ್ನು ಇಟ್ಟುಕೊಳ್ಳಲು

ಇತ್ತ ಹುಬ್ಬಳ್ಳಿ ಬಸವಪ್ಪಸೆಟ್ಟರು ಮುಂತಾದ ದೇವಭಕ್ತರು ಸನ್ನಿಧಾನದ ಆಶೀರ್ವಾದವನ್ನು ತೆಗೆದುಕೊಂಡು ಹುಬ್ಬಳ್ಳಿಗೆ ಹೋಗಲು

ಆ ಬಳಿಕ ರಾ|| ಕೆಂಪಿನಸಿದ್ಧಬಸವಸ್ವಾಮಿ ಗಳವರು ಜಡೆಯಕೋಟೆಯಲ್ಲಿದ್ದ ಪಂಚದ್ರೋಹವನ್ನು ಮಾಡಿದ ೩ಹದಿನಾಲ್ಕು ಜಂಗಮರನ್ನು ಕರಸಿಅವರಿಗೆ ಸಮಯಬಿಟ್ಟು ಶಂಕರದೇವರೆಂಬ ಅಭಿಧಾನವನ್ನು ಕೊಟ್ಟು ಆ ಬಳಿಕ ಆ ಹದಿನಾಲ್ಕು ಜಂಗಮರನ್ನು ಜಡೇದ ಸೀಮೆ ತೆಲಗಡ್ಡಿ ಸೀಮೆಯನ್ನು ಬಿಟ್ಟು ಹೊರಗೆ ಹಾಕಿಸಲು

ಈ ೧೪ಜಂಗಮರು ಸದರಿ ನ್ಯಾಯವು ತೀರಿದನಂತರ ಬನವಾಸಿಯಿಂದ ದಯಮಾಡಿಸಿ ಇಸಳೂರಲ್ಲಿ ಇರುವ ರಾ|| ಗುರುಸಿದ್ಧಸ್ವಾಮಿಗಳವರ ಸನ್ನಿಧಾನಕ್ಕೆ ಹೋಗಿ ಇಸಳೂರ ಮಠದ ಹೊರಗೆ ನಿಂತುಕೊಂಡು ದರ್ಶನಕ್ಕೆ ಬಂದಿದ್ದಾರೆ, ಎಂತ ಹೇಳಿ ಕಳುಹಿಸಿದ್ದರಿಂದಈ ೧೪ ಜಂಗಮರು ಬಂದ ವರ್ತಮಾನವು ಸನ್ನಿಧಿಗೆ ತಿಳಿಪದ್ದರಿಂದ ಸ್ವಾಮಿಗಳ

ವರು ಈ ಅಯ್ಯಗಳು ಯಾಕೆಬಂದಿದ್ದಾರೆ ಎಂದು ಕೇಳುವುದಕ್ಕೆತಮ್ಮ ಸನ್ನಿಧಾನದ ಖಾಸ ಚರಮೂರ್ತಿಗಳಾದ ಸೋದೆ ಚನ್ನಬಸವಪ್ಪನವರನ್ನು ಕಳುಹಿಸಲು ಅವರು ಬಂದು ಆ ೧ಳ ಜಂಗಮರಿಗೆ ಭೆಟ್ಟಿಯಾಗಿ ಯಾಕೆ ಬಂದಿರಿ ಎಂತ ಕೇಳಲು ಅವರು ಅರಿಕೆ ಮಾಡಿಕೊಂಡದ್ದು ಏನೆಂದರೆ:—

ನಾವು ಈ ಮಠದಲ್ಲಿ ನಮಗೆ ತಿಳಿಯದೆ ಪಂಚದ್ರೋಹವನ್ನು ಮಾಡಿದ್ದರಿಂದ ನಮ್ಮಗುರುಗಳಾದ ರಾ॥ ಕೆಂಪಿನಸಿದ್ಧಬಸವ ಸ್ವಾಮಿಗಳವರು ನಮ್ಮ ಅಪರಾಧವನ್ನು ಕ್ಷಮಾ ಮಾಡದೆ ನಮ್ಮಗಳಿಗೆ ಸಮಯ ಬಿಟ್ಟ ಶಂಕರದೇವರೆಂಬ ಹೆಸರಿಟ್ಟು ನಮ್ಮಗಳನ್ನು ತಮ್ಮ ಆಚರಣೆಯಲ್ಲಿ ಕೂಡಿಕೊಳ್ಳದೆ ಹೊರಗೆಮಾಡಿದರು. ಆದರಿಂದ ನಮ್ಮ ಅಪರಾಧವನ್ನು ಕ್ಷಮಿಸಿ ನಮ್ಮಗಳನ್ನು ದಯವಿಟ್ಟು ತಮ್ಮ ಆಚರಣೆಗಳಲ್ಲಿ ತೆಗೆದುಕೊಂಡು ಉದ್ಧಾರಮಾಡಬೇಕೆಂದು ಈ ೧ಳ ಜಂಗಮರು ಸಾಷ್ಟಾಂಗ ಪ್ರಣಾಮರಾಗಿ ಬಹುಬಗೆಯಿಂದ ಹೇಳಿಕೊಳ್ಳಲು

ಈ ವರ್ತಮಾನವನ್ನು ಸದರಿ ಚರಮೂರ್ತಿಗಳು ಸನ್ನಿಧಾನಕ್ಕೆ ತಿಳಿಸಿದ್ದರಿಂದ ಸನ್ನಿಧಿಗೆ ಆಗ್ರಹ ಹುಟ್ಟಿ ಆ ಕೂಡಲೆ ಆ ಜಂಗಮರನ್ನು ಈ ಮಠದ ಸ್ಥಳವನ್ನು ಬಿಟ್ಟು ಹೊರಗೆಹಾಕಬೇಕೆಂದು ಅಪ್ಪಣೆ ಆಗಲು

ಇದು ಆ ೧ಳ ಅಯ್ಯಗಳಿಗೆ ತಿಳಿದು ಆ ಪೈಕಿ ಕುಮಾರದೇವರೆಂಬುವರು ಚಿಂತಾಭರಿತರಾಗಿ ಈ ಜಂಗಮಹತ್ಯವಾದ ಮಠದಸ್ಥಳದಲ್ಲಿಯೇ ಪ್ರಾಣವನ್ನು ಕೊಡುತ್ತೇನೆ ಎಂದು ಆ ಕೂಡಲೆ ತನ್ನನಾಲಿಗೆಯನ್ನು ತನ್ನಕೈಯಿಂದ ಕಿತ್ತುಕೊಂಡು ಪ್ರಾಣವನ್ನು ಬಿಟ್ಟರು. ಇವರ ಸಮಾಧಿಯು ಅದೇ ಮಠದಲ್ಲಿಯೇ ಆಯಿತು.

ಇನ್ನುಳಿದ ೧೩ಮಂದಿ ಜಂಗಮರ ಹೊರಗೆ ಹಾಕಲು, ಅವರು ದೇಶದ ಮೇಲೆ ಹೋಗಿ ಮಿಶ್ರಿಕೋಟಿ ಹಳೆಹುಬ್ಬಳ್ಳಿ ಶಿಕಾರಿಪುರ, ಬಸವನಹಳ್ಳಿ,ಬೆಂಗಳೂರು,ಹೊಸಪೇಟೆಮುಳ್ಳಬಾಗಿಲು ವಗೈರೆಸ್ಥಳಗಳಲ್ಲಿ ಅಲ್ಲಿನಭಕ್ತರ ಭಕ್ತಿಯಿಂದ ಮಠಮಾನ್ಯಗಳನ್ನು ಪಡೆದು ಆ ಸ್ಥಳಗಳಲ್ಲಿಯೇ ನಿಂತರು. ಇವತ್ತಿಗೂ ಆ ಸಮಯ ಬಿಟ್ಟ ಶಂಕರ ದೇವರ ಹೆಸರಿನ ಮಠಗಳೂ ಅವರ ಸೂತ್ರಿಕರಾದ ಗಣಂಗಳೂ ಇದ್ದಾರೆ. ಅವರ ಸೂತ್ರಿಕರಾದ ಗಣಂಗಳು ಇಲ್ಲದೆ ಇದ್ದಮಠಗಳು ಎರಡನೆಯಸಮಯದ ಗಣಂಗ

ಳಿಗೆ ಸೇರಿಪತ್ರವೆ ಇದರ ಮೇಲಿಂದ ಕುಮಾರಸಮಯಕ್ಕೆ ಮೂಲಗುರುಗಳ ಮಠವು ಜಡೆಯಮಠವೆಂಬುವುದಕ್ಕೆ ಈ ಸಮಯಬಿಟ್ಟ ಶಂಕರಯ್ಯಗಳ ಸಮಯವೆಂದು ಭೇದವಾಗಿರುವುದೇ ಸಾಕ್ಷಿಯು.

ಚೀಲಾಳ ಸಮಯ ಕೆಂಪಿನ ಸಮಯ ಗೂಳಿಕೊಂಡಯ್ಯಗಳ ಸಮಯ ಸಂಪಾದನೆ ಸಮಯ ಆಯುಕಟ್ಟಿನ ಸಮಯ ಸೊಮೆಕಟ್ಟಿ ಸಮಯ ಗದ್ದಕಟ್ಟಿನ ಸಮಯ ಸಮಯ ಒಟ್ಟಶಂಕರೈಂಗಳ ಸಮಯ ಮೊದಲಾದ ಗಳ ಸಮಯಗಳು ಆಚಾರಕ್ಕೆ ಸಮವಲ್ಲವೆಂದು ದೇವಭಕ್ತರೊಳಗೆ ರಾ|ಇಸಳೂರಲ್ಲಿ ಇರುವ ಚಿತ್ರಕಲ್‌ದುರ್ಗದ ಗುರುಸಿದ್ಧಸ್ವಾಮಿಗಳು ಕಿತ್ತುಹಾಕಿದ್ದುರಾ| ಕೆಂಪಿನಸಿದ್ದಬಸವಸ್ವಾಮಿಗಳವರಿಗೂ ಸಮ್ಮತವಾಯಿತು. ಇದರಂತೆಯೇ ಸಾಖಲೆಗಳನ್ನು ರಾ| ಚಿತ್ರದುರ್ಗದ ಮಠದಲ್ಲಿ ನೋಡಿಕೊಂಬುವದು.

ಆಬಳಿಕ ರಾ|ಗುರುಸಿದ್ಧಸ್ವಾಮಿಗಳು ತಮ್ಮ ಚಿತ್ರಕಲ್‌ದುರ್ಗದಮಠದಲ್ಲಿ ನಾವು ಹಳೇಬೀಡ ಕಲ್ಲುಮಠದ ಬಳಕೆಯನ್ನು ಕೂಡಿಕೊಂಡ ಕಾರಣದಿಂದ ನಮಗೂ ರಾ|ಕೆಂಪಿನಸಿದ್ದಬಸವಸ್ವಾಮಿಗಳಿಗೂ ಸಮಯಭೇದವಾಗಿ ನಮ್ಮ ಅವರ ಮಠಗಳು ಬೇರೆ ಆಗಿ ಇನ್ನುಮೇಲೆ ಸ್ಥಲ ಪರಸ್ಥಲಗಳಲ್ಲಿ ನಮ್ಮ ಸೂತ್ರಿಕರಾದ ಸಕಲ ಬುರ್ಕಟ್ಟಿನ ಗುರುಚರಮೂರ್ತಿಗಳೇ ಆಗಲಿ ಅಥವಾ ನಾವೇ ಆಗಲಿ ಸದರಿ ಸಮಯದ ಗಣಂಗಳಂತೆ ಪೂಜಾ ಉತ್ಸವ ಮುಂತಾದ ಆಚರಣೆಗಳಿಂದ ಭೇದವಾಗಿ ಸಕಲದೇಶದ ಪೇಟೆ ಮನೆಗಳಲ್ಲಿ ವ್ಯಾಜ್ಯಕ್ಕೆಕಾರಣವಾಯಿತು. ಸದರಿ ಸಮಯಗಳು ಭೇದವಾಗಿದ್ದು ನಮಗೆ ಮನದಲ್ಲಿ ಯೋಚನೆ ಇದ್ದಿಲ್ಲ. ಈಗ ನಮ್ಮೊಳಗೆ ಮುರುಗಾ ಸಮಯವೆಂತಲು ರಾ||ಕುಮಾರ ಸಮಯವೆಂತಲೂ ಈ ಎರಡು ಪಕಾರ ನಮ್ಮೊಳಗೆ ಸಮಯಭೇದವಾದ್ದರಿಂದ ನಮಗೆ ಬಹಳ ಯೋಚನೆ ಆಗಿದೆ, ಎಂತ ರಾ|| ಗುರುಸಿದ್ಧಸ್ವಾಮಿಗಳವರು ಇಸಳೂರ ದೈವದವರಿಗೆ ಅಪ್ಪಣೆಕೊಡಲ.,

ಆ ದೈವದವರು ಸನ್ನಿಧಿಗೆ ಅರಿಕೆಮಾಡಿಕೊಂಡಿದ್ದು ಏನೆಂದರೆ ರಾ| ಕುಮಾರಕೆಂಪಿನ ಸಿದ್ಧಬಸವ ಸ್ವಾಮಿಗಳವರು ಈ ಸೋದೇ ಸೀಮೆ ದೇವಭಕ್ತರನ್ನೂ ಸೋದೆ ದೊರೆಗಳಾದ ಸದಾಶಿವರಾಜರು ಮುಂತಾದ ಸಮಸ್ತರನ್ನೂ ತಮ್ಮ ಅಚರಣೆವುಳ್ಳ ಭಕ್ತರನ್ನು ಮಾಡಿಕೊಂಡು ಈ ಸೋದೆ ಸೀಮೆಯಲ್ಲಿ ನಡೆಯತಕ್ಕ ಆಚಾರ ವಿಚಾರ ತಪ್ಪು ನಪ್ಪು ಹವ್ಯ ಕವ್ಯ ಮುಂತಾದ ಸಮಸ್ತಕ್ಕೂ ತಾವೆ ಬಾಧ್ಯರಾಗಿ ಈ ಸೀಮೆಯಲ್ಲಿ ಇರುವ ಅವರ ಈ ಇಸಳೂರ ಮಠವೇ ಅಧಿಕಾರ ಸ್ಥಾನ

ವಾಗಿ ನಡೆಯಿತು. ತಾವು ಅಂಥಾದ್ದನ್ನು ದುರ್ಗದಿಂದ ಈ ಸೀಮೆಗೆ ದಯಮಾಡಿಸಿ ಸೋದೇ ದೊರೆಗಳು ಮುಂತಾದವರನ್ನು ತಾವು ಭಕ್ತರನ್ನು ಮಾಡಿಕೊಂಡಿದ್ದರಿಂದ ರಾ॥ ಕೆಂಪಿನಸಿದ್ಧಬಸವ ಸ್ವಾಮಿಗಳು ಈ ಸೋದೇ ಸೀಮೆಯ ಬಿಟ್ಟು ದಯಮಾಡಿಸಿದ್ದರಿಂದ ಈ ಸೀಮೆಯಲ್ಲಿ ಇರುವ ಅವರ ಮತಮಾನ್ಯಗಳು ಸನ್ನಿಧಾನದ ವಶವಾಗಿ ಈ ಸೀಮೆಯ ಆಚಾರ ವಿಚಾರವೊದಲಾದ ಹವ್ಯ ಕವ್ಯಕ್ಕೆ ತಾವೇ ಬಾಧ್ಯರಾದಿರಿ. ಇದರಂತೆಯೇ ತಾವು ಹುಬ್ಬಳ್ಳಿ ಬಸವಪ್ಪಸೆಟ್ಟರನ್ನು ತಮ್ಮ ಸನ್ನಿಧಾನದ ಭಕ್ತರನ್ನು ಮಾಡಿಕೊಂಡರೆ ಆ ಬಸವಪ್ಪಸೆಟ್ಟರು ಉತ್ತರ ದೇಶವಾದ ಆ ಸೀಮೆ ನೂರಾರು ಪೇಟೇ ಮನೆಗಳಿಗೆ ಪ್ರಸಿದ್ಧರಾಗಿ ಇದ್ದದ್ದರಿಂದ ಶಿವಾಚಾರದ ಆಚಾರದ ಸಂಬಂಧದ ಮುಖ್ಯನ್ಯಾಯಗಳು ಆ ಹುಬ್ಬಳ್ಳಿಯಲ್ಲಿ ತೀರುತ್ತವೆ. ಅದುಕಾರಣ ರಾ| ಕೆಂಪಿನಸಿದ್ಧಬಸವ ಸ್ವಾಮಿಯವರೇ ಆಗಲಿ, ಅವರ ಬಿಡಕಟ್ಟಿನ ಸಕಲ ಚರಮೂರ್ತಿಗಳು ಮುಂತಾದ ವಿರಕ್ತರೇ ಆಗಲಿ, ಇವರಿಗೆ ಸದಗಿ ಬಸವಪ್ಪಸೆಟ್ಟರಿಂದ ಆ ಸೀಮೆಗಳಲ್ಲಿ ಆಶ್ರಯವಾಗಿ ಅದೆ ಆದರಿಂದ ಸದರಿ ಬಸವಪ್ಪಸೆಟ್ಟರನ್ನು ಭಕ್ತರ ಮಾಡಿಕೊಳ್ಳಬೇಕೆಂದು ಸದರಿದೇವಭಕ್ತರು ರಾ|| ಗುರುಸಿದ್ಧಸ್ವಾಮಿಗಳವರಿಗೆ ಅರಿಕೆ ಮಾಡಿಕೊಂಡಿದ್ದರಿಂದ

ಆ ಸ್ವಾಮಿಗಳು ಆಶೀರ್ವಾದ ಪತ್ರಮುಖದಿಂದ ರಾ|| ರಾಯರಹುಬ್ಬಳ್ಳಿ ಬಸವಪ್ಪಸೆಟ್ಟರ ಕರಸಿಕೊಂಡು ಇಸಳೂರ ಮಠದಲ್ಲಿ ರಾ| ಗುರುಸಿದ್ಧಸ್ವಾಮಿಗಳು ಸದರಿ ಬಸವಪ್ಪ ಸೆಟ್ಟರಿಗೆ ಅಪ್ಪಣೆ ಕೊಟ್ಟದ್ದು ಏನೆಂದರೆ:—

ನೀವು ಮುಖ್ಯ ಜಂಗಮಭಕ್ತರಾದ್ದರಿಂದ ನಮ್ಮ ಸಾಭಿಮಾನವನ್ನು ನಡಸಿಕೊಡಬೇಕಾಗುತ್ತದೆ ಆದರೆ ನೀವು ಈ ಸ್ಥಳದಲ್ಲಿ ನಮ್ಮ ಸನ್ನಿಧಾನ ಇರುವ ಈ ಮಠಕ್ಕೆ ಬಂದು ಇಳುಕೊಳ್ಳತಕ್ಕದ್ದು ಇತ್ತು. ನೀವು ಪರಭಾರೆ ಮಠದಲ್ಲಿ ಇಳುಕೊಂಡು ನೀವು ನಮ್ಮ ದರ್ಶನಕ್ಕೆ ಬಂದಿರಿ ಆದರೂ ಚಿಂತೆ ಇಲ್ಲ. ನೀವು ಸ್ನಾನ ಶಿವಪೂಜಾ ತೀರಿಸಿಕೊಂಡು ನಿಮ್ಮ ಕೂಡ ಬಂದವರೂ ಸಹವಾಗಿ ನಮ್ಮ ಖಾಸಪಂಕ್ತಿಗೆ ಬರಬೇಕೆಂದು ಅಪ್ಪಣೆ ಆಗಲು ಸನ್ನಿಧಾನಕ್ಕೆ ಬಸವಪ್ಪ ಸೆಟ್ಟರು ಅರಿಕೆಮಾಡಿಕೊಂಡಿದ್ದು ಏನೆಂದರೆ:—

ಸ್ವಾಮಿಪಾದವು ಅಪ್ಪಣೆ ಕೊಟ್ಟದ್ದು ಸಹಜವದೆ. ಆದರೆ ನಾನೂ ರಾ| ಕೆಂಪಿನಸಿದ್ಧಬಸವ ಸ್ವಾಮಿಗಳವರೂ ಜಡೇದಸ್ಥಳದಲ್ಲಿ ನಮ್ಮ ಕಡೆಯಿಂದ ತಾವು ಹಳೇಬೀಡ

ಕಲ್ಲುಮಠದ ಬಳಕೆಯನ್ನು ಕೂಡಿಕೊಂಡಿದ್ದು ಆ ಬಳಕೆ ತಾವು ಬಿಡಸೆ ತಮ್ಮ ಆಚರಣೆಯಲ್ಲಿ ಕೂಡಬಾರದು, ಎಂತ ನನ್ನಿಂದ ವಚನ ತೆಗೆದುಕೊಂಡು ಸಾಷ್ಟಾಂಗ ಹಾಕಿಸಿಕೊಂಡು ಇದ್ದಾರೆ. ಕಾರಣ, ಭೋಜನದ ವಿಷಯದಲ್ಲಿ ಸನ್ನಿಧಾನವು ಸದರಿ ಬಳಕೆಬಿಡದೆ ಬರುವದಿಲ್ಲವೆಂದು ಬಸವಪ್ಪಸೆಟ್ಟರು ರಾ|| ಗುರುಸಿದ್ಧಸ್ವಾಮಿಗಳವರಿಗೆ ಅರಿಕೆಮಾಡಿಕೊಳ್ಳಲು ಇದರಿಂದ ಸನ್ನಿಧಾನಕ್ಕೆ ಆಗ್ರಹ ಹುಟ್ಟಿ ಬಸವಪ್ಪಸೆಟ್ಟರಿಗೆ ಶಾಪವನ್ನು ಕೊಟ್ಟದ್ದು ಏನೆಂದರೆ:—

ಎಲೋ ಬಸವಪ್ಪಸೆಟ್ಟಿಯೇ, ನೀನು ನಮ್ಮ ಖಾಸ ಪಂಕ್ತಿಗೆ ಭೋಜನಕ್ಕೆ ಬರಬೇಕೆಂತ ನಾವು ಅಪ್ಪಣೆಕೊಟ್ಟದ್ದಕ್ಕೆ ನೀನು ನಮ್ಮ ಆಜ್ಞೆ ಮೀರಿ ಬಾರದೆ ನಮ್ಮ ವಿರುದ್ಧಸ್ಥರಾದ ರಾ। ಕೆಂಪಿನ ಸಿದ್ಧಬಸವಸ್ವಾಮಿಗಳವರ ಮಾತು ಹಿಡಿದು ನಮ್ಮ ಮಾತಿಗೆ ಕೊರತೆ ತಂದ ಕಾರಣದಿಂದ ನೀನು ಗುರುದ್ರೋಹಿ. ಆದ್ದರಿಂದ ನಿನ್ನಮನೆ ಹೊಲೆಗೇರಿಯಲ್ಲಿ ಕಟ್ಟಿ ನೀನೂ ನಿನ್ನ ವಂಶದವರೂ ಸಹ ಅದೇ ಮನೆಯಲ್ಲಿ ಇರಲಿ ಎಂತ ರಾ। ಗುರುಸಿದ್ಧಸ್ವಾಮಿಗಳವರು ಬಸವಪ್ಪಸೆಟ್ಟರಿಗೆ ಶಾಪವನ್ನು ಕೊಡಲು, ರಾ॥ ಗುರುಸಿದ್ಧಸ್ವಾಮಿಗಳವರಿಗೆ ಬಸವಪ್ಪಸೆಟ್ಟರು ಶಾಪವನ್ನು ಕೊಟ್ಟದ್ದು ಏನೆಂದರೆ:—

ಹಳೇಬೀಡ ಕಲ್ಲುಮಠದ ಕಲ್ಯಾಣಿ ಹುಡುಗನು ಮಾದಿಗಿತ್ತಿಗೆ ಕೆಟ್ಟಮೇಲೆ ಹುಟ್ಟಿದವನ ಕೂಡುವರೆ ಆಗದು, ಎಂದು ರಾ। ತಮ್ಮ ಗುರುಗಳು ರಾ। ಮುರುಗಾಸ್ವಾಮಿಗಳು ರಾ। ಕುಮಾರಸ್ವಾಮಿಗಳು ರಾ॥ ಹಿಂದೆ ಹಿರೇ ಕರ್ತರಾದ ಕಟ್ಟಿಗೆಹಳ್ಳಿ ಸ್ವಾಮಿಗಳು ರಾ|| ನೋಡಸಿದ್ಧಲಿಂಗ ಸ್ವಾಮಿಗಳವರುಸಹ ತೆಗೆದು ಹಾಕಿದ, ಸದರಿ ಹೊಲೆಬಳಕೆಯನ್ನು ನೀವು ಆ ಕಲ್ಲುಮಠದ ಸೇಪಿನಿಂದಲೂ ದ್ರವ್ಯದ ಅಪೇಕ್ಷೆಯಿಂದಲೂ ಗುರುಹಿರಿಯರ ಮಾತಿಗೆ ಕೊರತೆ ತಂದು ಆ ಬಳಕೆಯನ್ನು ನೀವು ಕೂಡಿಕೊಂಡ ಮೇಲೆ ನೀವು ಗುರುದ್ರೋಹಿಗಳು. ರಾ|| ಕೆಂಪಿನಸಿದ್ಧಬಸವ ಸ್ವಾಮಿಗಳು ಸದರಿ ರಾ। ತಮ್ಮ ಗುರುಹಿರಿಯರಮಾತು ಹಿಡಿದು ಆ ಬಳಕೆ ಬಿಟ್ಟಕಾರಣ ಅವರು ಗುರುಪುತ್ರರು. ಆದ್ದರಿಂದ ಇಸಳೂರಲ್ಲಿ ಪಂಚದ್ರೋಹ ಆದದ್ದಕ್ಕೆ ರಾ। ಕೆಂಪಿನಸಿದ್ಧಬಸವಸ್ವಾಮಿಗಳೇ ಸದರಿ ಪಂಚದ್ರೋಹ ಮಾಡಿಸಿದರೆಂದು ಅವರ ಮೇಲೆ ತುಫಾನಿ ತಂದು ಜಡೇದಲ್ಲಿ ಅವರ ಸೆರಗ ತಾವು ಹಿಡಿಸಿದಾಗ್ಯೂ ಆ ದೋಷವು ಅವರ ಮೇಲೆ ಬಾರದೆ ಆ ದೋಷ ಮಾಡಿದ ಅಯ್ಯಗಳ ಮೇಲೆ ಬಂದು ಅವ

ರು ತಮ್ಮ ಉಭಯತರಿಗೂ ದೂರವಾಗಿ ಸಪ್ಪುಯಬಿಟ್ಟ ಶಂಕರಯ್ಯಗಳಾಗಿ ಹೋದರು. ಅವರು ಬಲವಿಲ್ಲದವರು ಆದ್ದರಿಂದ ಲೋಕದಲ್ಲಿ ಆ ಸಮಯಬಿಟ್ಟ ಶಂಕರಯ್ಯಗಳು ನಿಂದೆ ಕುಂದಿಗೆ ಒಳಗಾದರು. ತಾವು ಜಗದ್ಗುರುಗಳಾದ್ದರಿಂದ ಸದರಿ ಬಳಕೆ ಎಂಥ ದುರ್ದೋಷವುಳ್ಳದ್ದಾದರೂ ತಾವು ಆ ಬಳಕೆಯನ್ನು ತೆಗೆದುಕೊಂಡಿದ್ದರಿಂದ ಲೋಕದಲ್ಲಿ ಯಾರುಕೇಳುವರೂ ಇಲ್ಲ ಇಂಥ ದುರ್ದೋಷವ ಬಳಕೆ ಇಲ್ಲದ ಗುರುಗಳಾದ ರಾ। ಕೆಂಪಿನಸಿದ್ಧಬಸವಸ್ವಾಮಿಗಳವರ ಆಚರಣೆಯುಳ್ಳ ಸಿರಾಕಾರ ಧಿ ಆದ ನನ್ನ ಪುನೆ ಹೊಲೆಗೇರಿಯಲ್ಲಿ ಕಟ್ಟಿ ನಾನೂ ನನ್ನ ವಂಶಿಕರೂ ಸಹ ಅದೇ ಮನೆಯಲ್ಲಿ ಇರಬೇಕಾದರೆ ನೀನು ಜಂಗಮನು, ನಾನು ಭಕ್ತನು ಹೀಗೆ ಇದ್ದು ಎರಡು ವಸ್ತುವೂ ಒಂದೇ ಆದ ಮೇಲೆ ನನ್ನ ಪುನೆ ಹೊಲೆಗೇರಿಯಲ್ಲಿ ಕಟ್ಟಿದರೆ ನಿನ್ನ ಪ್ರಾಣವು, ಲಿಂಗವಿಲ್ಲದ ಭವಿಗಳಾದ ಸುರಾ ಮಾಂಷ ಭಕ್ಷಕರಾದ ಶೂದ್ರರ ಹೆಗಲ ಮೇಲೆ ಯಾರೂ ಕಾಣದಂತೆ ಹೋಗಲಿ, ಎಂದು ಬಸವಪ್ಪಸೆಟ್ಟರು ರಾ॥ ಗುರುಸಿದ್ಧಸ್ವಾಮಿಗಳವರಿಗೆ ಶಾಪವನ್ನು ಕೊಟ್ಟು

ಆ ಮೇಲೆ ಬಸವಪ್ಪಸೆಟ್ಟರು ರಾ| ಕುಮಾರಸಮಯದ ಗಣಂಗಳ ಶಿವಾಯಿ ಮುರಿಗಿ ಚೇಲಾಳ ವಗೈರೆ ಪರ ಸಮಯದ ಗಣಂಗಳಲ್ಲಿ ಸಾಮರಸ್ಯ ಮಾಡಲಿಕ್ಕೆ ಇಲ್ಲವೆಂತಲೂ ಈ ಸೀಮೆಗಳಲ್ಲಿ ನಮಗೆ ಶಾಪ ಬಂದ ಕಾರಣ ಈ ಸೋದೇ ಸೀಮೆಯ ಕಡೆಗೆ ಮುಖವಾಗಿ ಶಿವಾರ್ಚನೆ ಮುಂತಾದ ಆಚರಣೆಯ ಕೆಲಸಗಳನ್ನು ಮಾಡುವದಿಲ್ಲವೆಂತಲೂ ಈ ಸೀಮೆಯಲ್ಲಿ ಬೆಳೆಯುವ ಅಡಿಕೆ ಮೆಣಸು ಯಾಲಕ್ಕಿ ಮುಂತಾದ ಪದಾರ್ಥಗಳನ್ನು ಮುಟ್ಟಲಿಕ್ಕಿಲ್ಲವೆಂತಲೂ ಸದರಿ ಬಸವಪ್ಪ ಸೆಟ್ಟರು ಶಪಥವನ್ನು ಮಾಡಿಕೊಂಡು ಇಸಳೂರು ಮೊದಲಾದ ಆ ಸೋದೇ ಸೀಮೆಗಳಲ್ಲಿ ಸ್ನಾನ ಶಿವಾರ್ಚನೆಗಳನ್ನು ಮಾಡದೆ ತಮಗೆ ಈ ದೊಡ್ಡಗುರುಗಳಿಂದ ಶಾಪವು ಬಂತೆಂಬ ವ್ಯಸನದಿಂದ ಜಡೇದಲ್ಲಿ ಇರುವ ರಾ॥ ಕೆಂಪಿನ ಸಿದ್ಧಬಸವ ಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣುತರಾಗಿ

ಬಸವಪ್ಪಸೆಟ್ಟರು ಇಸಳೂರಲ್ಲಿ ರಾ| ಗುರುಸಿದ್ಧಸ್ವಾಮಿಗಳವರಿಗೂ ತಮಗೂ ಸದರೀ ವಿಷಯವಾಗಿ ತಮ್ಮ ದೇವಭಕ್ತರೊಳಗೆ ವಾಗ್ವಾದವು ಬಂದು ತಮ್ಮೊಳಗೆ ರಾ॥ ಸ್ವಾಮಿಗಳು ತಮಗೆ ಶಾಪವನ್ನು ಕೊಟ್ಟು ತಾವು ರಾ| ಸ್ವಾಮಿಗಳಿಗೆ ಶಾಪವನ್ನು ಕೊಟ್ಟ

ಸದರೀ ಪ್ರಕಾರ ಆ ಸೀಮೆಯ ಪದಾರ್ಥಗಳನ್ನೂ ಪರಸಮಯದ ಗ ಣಂಗಳಲ್ಲಿ ಆಚರಣೆಯನ್ನೂ ಸಹ ಮಾಡಲಿಕ್ಕೆ ಇಲ್ಲವೆಂದು ಶಪಥವನ್ನು ಮಾಡಿಕೊಂಡು ಬಂದೆವು. ಇದು ಹಾಗೆ ಇರಲಿ. ದೊಡ್ಡ ಗುರುಗಳು ನಾನು ನಿರಪರಾಧಿಯಾದವನಿಗೆ ಸದರಿ ಪ್ರಕಾರ ಶಾಪವಕೊಟ್ಟರು. ಈ ಶಾಪದ ದೋಷವು ನನಗೆ ಹೇಗೆ ದೂರವಾಗಬೇಕು? ಲೋಕದಲ್ಲಿ ಇಲ್ಲ ದಂಥಾದ್ದು ನನಗೆ. ನನ್ನ ವಂಶಿಕರೂ ಸಹ ಮನೆಕಟ್ಟಗೊಂಡು ಹೊಲೆಗೇರಿ ಯಲ್ಲಿ ಇರಬೇಕಾಯಿತು. ದೊಡ್ಡವರ ಶಾಪ ನನಗೆ ಎಷ್ಟುಮಾತ್ರಕ್ಕೂ ತ ಪ್ಪಲರಿಯದು. ಇದಕ್ಕೆ ಮುಂದೇನುಗತಿ ಎಂದು ಬಸವಪ್ಪಸೆಟ್ಟರು ಚಿಂ ತಾಕ್ರಾಂತರಾಗಿ ರಾ। ಕೆಂಪಿನಸಿದ್ದಬಸವಸ್ವಾಮಿಗಳವರಿಗೆ ಅರಿಕೆಮಾಡಿ ಕೊಳ್ಳಲು

ರಾ। ಸ್ವಾಮಿಗಳ ಚಿತ್ತದಲ್ಲಿ ಕರುಣ ಹುಟ್ಟಿ ಬಸವಪ್ಪಸೆಟ್ಟರಿಗೆ ಅಪ್ಪಣೆಕೊಟ್ಟದ್ದು ಏನೆಂದರೆ, "ನೀವು ದೊಡ್ಡವರು, ನಿಮಗೆ ಸದರಿ ಪ್ರ ಕಾರ ಶಾಪವನ್ನು ಕೊಟ್ಟರೆಂದು ಚಿಂತೆ ಮಾಡಬಾರದು. ಆ ಶಾಪ ದಿಂದ ಮುಂದೆ ನಿಮಗೆ ಬಹಳ ಶ್ರೇಯಸ್ಸು ಅದೆ. ಈಗ ಈ ಶ್ರಾವಣ ಮಾಸದಲ್ಲಿ ಬಸವೇಶ್ವರ ಪೌರಾಣ ನಡೆದಿದೆ. ಈ ತಿಂಗಳಲ್ಲಿ ಪುರಾ ಣ ಶ್ರವಣವನ್ನು ಮಾಡಿ ನೀವು ನಿಮ್ಮ ಸ್ಥಲಕ್ಕೆ ಹೋಗುವಾಗ್ಗೆ ಆ ಶಾಪ ದೂರವಾಗುವ ಪ್ರಯತ್ನವನ್ನು ಅಪ್ಪಣೆಯನ್ನು ಕೊಟ್ಟು ನಿಮಗೆ ಆಶೀರ್ವಾದವನ್ನು ಮಾಡಿ ಕಳುಹಿಸುತ್ತಾ ಇದ್ದೇವೆ" ಎಂದು ಅಪ್ಪಣೆ ಕೊಟ್ಟು ಆ ಬಳಿಕ ಬಸವಪ್ಪಸೆಟ್ಟರ ಕ್ರಿಯಾಚರಣೆಗಳನ್ನು ತೀರಿಸಿಕೊ ಟ್ಟು ಆ ಬಳಿಕ ಬಸವಪ್ಪಸೆಟ್ಟರನ್ನು ಪುರಾಣ ಮುಗಿಯುವ ವರೆವಿಗೂ ಸ್ವಾಮಿಗಳವರು ಜಡೇದ ಸ್ಥಲದಲ್ಲೇ ಇಟ್ಟುಕೊಂಡರು.

ಆ ಮೇಲೆ ಇ ಸಳೂರ ಮಠದಲ್ಲಿ ರಾ|| ಬಸಪ್ಪಸೆಟ್ಟರು ಚಿತ್ರದುರ್ಗದ ರಾ||ಗುರುಸಿದ್ಧ ಸ್ವಾಮಿಗಳವರು ತಮಗೆ ಸದರಿ ಪ್ರಕಾರ ಶಾಪಕೊಟ್ಟು ಈ ಶೀಮೆಯ ಲ್ಲಿ ಸ್ನಾನ ಶಿವಾರ್ಚನೆ ಮಾಡದೆ ಹೋದರು. ಈ ಶಾಪದ ದೋಷ ನಾ ವು ಗಣಂಗಳಾದರೂ ಬಿಡದು. ಈ ದೋಷದ ಪರಾಭವದ ಬಗ್ಗೆ ರಾ|| ಅನಂತಪುರದ ಚರಮೂರ್ತಿಗಳಾದ ಸ್ವಾಮಿಗಳವರು ತಪೋಬಲಿಷ್ಠರಾದ ದೊಡ್ಡವರಾದ ಕಾರಣ ಅವರನ್ನು ಕೇಳಿಕೊಂಡು ಅಲ್ಲಿಂದ ತಮ್ಮ ಮಠ ವಾದ ಚಿತ್ರಕಲ್ಲದುರ್ಗಕ್ಕೆ ಹೋಗಬೇಕೆಂದು ರಾ||ಗುರುಸಿದ್ಧಸ್ವಾಮಿಗಳು ಈ ಇಸಳೂರ ಮಠದಲ್ಲಿ ತಮಗೆ ಶಾಪವು ಬಂದು ಇರುವುದರಿಂದ ಈ

ಸ್ಥಳದಲ್ಲಿ ಸ್ನಾನ ಶಿವಾರ್ಚನೆ ಮಾಡಕೂಡದು, ಎಂತ ಆ ಕೂಡಲೆ ತಮ್ಮ ಚರಸಮೇತವಾಗಿ ಶಿರಾಳಕೊಪ್ಪದ ಮೇಲೆ ಹಾದು ಬೆಳಗಾವಿ ಉಡುಗಣಿ ವಗ್ಯೆರೆ ಗ್ರಾಮುಗಳನ್ನು ದಾಟಿ ಅನಂತಪುರಕ್ಕೆ ಹೋಗುವ ಮಾರ್ಗದಲ್ಲಿ ಮಧ್ಯದೊಳಗೆ ಮೇಣೇದಲ್ಲಿ ಇರುವ ರಾ|| ಗುರುಸಿದ್ಧ ಸ್ವಾಮಿಗಳವರು ಒಮ್ಮಿಂದೊಮ್ಮೆಗೆ ತೀರಿದ್ದರಿಂದ ಆ ಮೇಣೆಯ ಹೊತ್ತ ಭವಿಗಳಾದ ಬೋವಿಗಳು ರಾ| ಸ್ವಾಮಿಗಳವರ ಉಲುವು ಯಾವುದೊಂದೂ ಕಾಣದೆ ಇರುವುದರಿಂದ ಆ ಬೋವಿಗಳು ರಾ|| ಸ್ವಾಮಿಗಳವರು ಹೊತ್ತ ಮೇಣೆಯನ್ನು ಇಳುಹಿ ಮಹಾಸಂಶಯದಿಂದ ಆ ಬೋವಿಗಳು ಸನ್ನಿಧಾನದ ಚರದಲ್ಲಿ ಇರುವ ಗಣಂಗಳಿಗೆ ಈ ಸಂಜ್ಞೆಯನ್ನು ತಿಳಿಸಿದ್ದರಿಂದ ಆ ಗಣಂಗಳು ರಾ| ಸ್ವಾಮಿಗಳವರನ್ನು ಕರೆಯಲು, ಮಾತಾಡದ ಕಾರಣದಿಂದ ಆ ಗಣಂಗಳು ಆ ಮೇಣೇದ ಪಡಕುಗಳಾದ ಬಾಗಿಲುಗಳನ್ನು ತೆಗೆದು ನೋಡಲು ರಾ| ಗುರುಸಿದ್ಧಸ್ವಾಮಿಗಳು ತೀರಿ ಇದ್ದರು. ಇದ ಕಂಡು ಸನ್ನಿಧಿಯಲ್ಲಿ ಇರುವ ದೇವಭಕ್ತರು ರಾ|| ಸ್ವಾಮಿಗಳವರು ತೀರಿದ ವಿಚಾರವನ್ನು ಪ್ರಕಟಿಸಿದರೆ ಶವವನ್ನು ಮುಂದಕ್ಕೆ ಬಿಡಲಿಕ್ಕಿಲ್ಲವೆಂದು ಸರ್ವರೂ ಮಾತಾಡಿಕೊಂಡು ತೀರಿದ ರಾ|| ಸ್ವಾಮಿಗಳವರನ್ನು ಅನಂತಪುರದ ಮುರಿಗಿಮಠಕ್ಕೆ ಒಯ್ಯಲು ಅಲ್ಲಿ ಮುರಿಗಿ ಮಠದ ಚರಮೂರ್ತಿಗಳು ಮುಂತಾದ ದೇವಭಕ್ತರು ರಾ|| ಸ್ವಾಮಿಗಳವರು ಐಕ್ಯರಾಗಿದ್ದುದ ಕಂಡು ಆಶ್ಚರ್ಯಪಟ್ಟು

ಆ ದೇವಭಕ್ತರು ರಾ|| ಸ್ವಾಮಿಗಳವರ ಸನ್ನಿಧಿಯಲ್ಲಿ ಇದ್ದ ರಾ|| ಗುರುಚರಮೂರ್ತಿಗಳ ಮುಖದಿಂದ ಹಳೇಬೀಡ ಬಳಕೆದೆಸೆಯಿಂದ ಇಸಳೂರ ಮಠದಲ್ಲಿ ರಾ|| ಈ ಸ್ವಾಮಿಗಳವರಿಗೂ ಪುಬ್ಬಳ್ಳಿ ಬಸವಪ್ಪಸೆಟ್ಟರಿಗೂ ವಾಗ್ವಾದವು ಬಂದು ರಾ|| ಈ ಸ್ವಾಮಿಗಳು ಆ ಬಸವಪ್ಪಸೆಟ್ಟರಿಗೆ ನಿನ್ನ ಮನೆ ಹೊಲೆಗೇರಿಯಲ್ಲಿ ಕಟ್ಟಿ ನೀನು ನಿನ್ನ ವಂಶಿಕರೂ ಸಹ ಅದೇ ಗೃಹದಲ್ಲಿ ಇರುವದು, ಎಂತ ಶಾಪವನ್ನು ಕೊಟ್ಟದ್ದಕ್ಕೆ ಆ ಬಸವಪ್ಪಸೆಟ್ಟರು ನಿಮ್ಮ ಪ್ರಾಣ ಭವಿಗಳ ಹೆಗಲ ಮೇಲೆ ಹೋಗಲಿ ಎಂತ ಶಾಪವನ್ನು ಕೊಟ್ಟಪ್ರಕಾರ ರಾ|| ಈ ಸ್ವಾಮಿಗಳವರ ವಸ್ತುವು ಸದರಿ ಪ್ರಕಾರ ಹೋಗಿ ಅದೆ, ಎಂತ ಹೇಳಲು ಸದರಿ ಚರಮೂರ್ತಿಗಳು ಮುಂತಾದ ದೇವಭಕ್ತರು ಕೇಳಿ ಮಹಾದುಃಖಪಟ್ಟು

ರಾ|| ಗುರುಸಿದ್ಧಸ್ವಾಮಿಗಳವರನ್ನು ಅನಂತಪುರದ ಮುರಿಗೀ ಮಠದಲ್ಲಿ ಸಂಸ್ಕಾರ

ಸಿ ಆ ಮೇಲೆ ಸಮಸ್ತರೂ ಎಂದದ್ದು ಏನೆಂದರೆ ಲೋಕದಲ್ಲಿ ಗಣಂಗಳೇ ಶಾಪಾನುಗ್ರಹಕ್ಕೆ ಕರ್ತರು, ಎನ್ನುತ್ತಾರೆ ಅದು ಸಳ್ಳು. ದೇವಭಕ್ತರೂಉ ಭಯುತರೂ ದೊಡ್ಡವರು. ಇದರ ಮೇಲಿಂದ ಗಣಂಗಳಶಾಪ ಭಕ್ತನಿಗೆ, ಭಕ್ತನಶಾಪಗಣಂಗಳಿಗೆ, ಪ್ರಾಪ್ತವಾಯಿತು, ಎಂತ ಮಾಡಿ ತಮ್ಮ ಆಲಯಕ್ಕೆ ಹೋದರು.

ರಾ| ಈ ಗುರುಸಿದ್ಧಸ್ವಾಮಿಗಳವರು ಭವಿಗಳ ಹೇಲಮೇಲೆ ಮಧ್ಯಹಾದಿಯಲ್ಲಿ ತೀರಿದರು, ಎಂಬುವುದಕ್ಕೆ ರಾ। ಗುರುಸಿದ್ಧ ಸ್ವಾಮಿಗಳವರ ಸಮಾಧಿಯಾದ ಗದ್ದುಗೆಯು ಅನಂತಪುರದಲ್ಲಿ ಇರುವುದೇ ಸಾಕ್ಷಿಯು.

ರಾ॥ ಗುರುಸಿದ್ಧಸ್ವಾಮಿಗಳವರ ತರುವಾಯದಲ್ಲಿ ರಾ। ಸೋದೆ ಚನ್ನಬಸವಸ್ವಾಮಿಗಳವರಿಗೆ ಶಿಖಾಪಟ್ಟವು ಆಯಿತು. ಇವರು ಚರಸಮೇತವಾಗಿ ೭೨ ಬಿರುದುಗಳೊಡನೆ ದೇಶಾಟಣವನ್ನು ಮಾಡುತ್ತ ಹರಪನಹಳ್ಳಿಗೆ ದಯಮಾಡಿಸಿ ಆ ಊರ ಗುಡ್ಡದಮಠದಲ್ಲಿ ಸವಾರಿಯು ಇರುವಲ್ಲಿ, ಆ ಸ್ಥಲದ ದೇವಭಕ್ತರು ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣುತರಾಗಿ ಸನ್ನಿಧಿಗೆ ಅರಿಕೆಮಾಡಿಕೊಂಡಿದ್ದು ಏನೆಂದರೆ

ಈ ಊರ ಚಂದ್ರಶೇಖರರಾಜನು ತನಗೆ ದೊರೆತನವಿಲ್ಲದೆ ಇರುವುದರಿಂದ ತನ್ನ ತಂದೆಯಾದ ಪಟ್ಟದದೊರೆಗಳನ್ನು ಕೊಂದು ತಾನು ಪಟ್ಟದದೊರೆಯಾಗಿ ದೊರೆತನಮಾಡುತ್ತಾ ಇದ್ದಾನೆ. ಈತನು ಪಿತೃದ್ರೋಹಿ, ಆದಕಾರಣ ಈತನ ಬಿನ್ನಹವ ಒಪ್ಪಿಕೊಳ್ಳಬಾರದೆಂದು ಅರಿಕೆಮಾಡಿಕೊಂಡದ್ದರಿಂದರಾ ಚನ್ನಬಸವಸ್ವಾಮಿಗಳು ಆ ಹರಪನಹಳ್ಳಿ ದೊರೆಗಳ ಬಿನ್ನಹ ಒಪ್ಪಿಕೊಳ್ಳದೆ ಆ ದೊರೆಗೆ ಪಿತೃದ್ರೋಹ ಒಂದು, ಭಕ್ತದ್ರೋಹ ಒಂದು, ಹಿಂದೆ ತಮ್ಮ ಮೇಲೆ ತಿರುಗಿಬಿದ್ದ ಚೇಲಾಳಪ್ಪನವರಿಗೆ ಆಶ್ರಯಕೊಟ್ಟ ದ್ರೋಹ ಒಂದು ಈ ಪ್ರಕಾರ ಮೂರು ದ್ರೋಹಗಳ ಮಾಡಿದ ಈ ದೊರೆಯು ಬಳಕೆ ಮಾಡಬಾರದೆಂದು ಬಹಿಷ್ಕಾರವನ್ನು ಕೊಟ್ಟು ಸ್ವಾಮಿಗಳವರು ದುರ್ಗಕ್ಕೆ ದಯಮಾಡಿಸಲು, ಆ ದೊರೆಯು ಬಿನ್ನಹಪತ್ರಮುಖದಿಂದ ಡಂಬಳದ ತೋಂಟದಸ್ವಾಮಿಗಳವರನ್ನು ಕರಸಿಕೊಂಡು ಅವರಿಗೆ ರಾ। ಚಿತ್ರದುರ್ಗದ ಸ್ವಾಮಿಗಳವರು ಬಹಿಷ್ಕಾರವನ್ನು ಕೊಟ್ಟವಿಚಾರವನ್ನು ಆ ದೊರೆಗಳು ರಾ॥ ಡಂಬಳದ ತೋಂಟದಸ್ವಾಮಿಗಳವರಿಗೆ ತಿಳಿಸಿದ್ದರಿಂದ ಅವರು ಆ ದೊರೆಗೆ ಶುದ್ಧಿಯನ್ನು ಕೊಟ್ಟು ಬಿನ್ನಹತೀರಿಸಿ,

ಆ ಮೇಲೆ ಹರಪನಹಳ್ಳಿ ದೊರೆಗಳು ರಾ। ಜಡೇದಕೆಂಪಿ

ನಸಿದ್ಧಬಸವ ಸ್ವಾಮಿಗಳವರಿಗೆ ರಾ॥ ಡಂಬಳದ ತೋಂಟದಸ್ವಾಮಿಗಳವರ ಕಡೆಯಿಂದ (ಮುಖಾಂತರ?) ಪತ್ರಮುಖದಿಂದ ತಿಳಿಸಿದ್ದು ಏನೆಂದರೆ ರಾ। ಚಿತ್ರಕಲ್ಲದುರ್ಗದ ಸ್ವಾಮಿಗಳವರು ಹಳೇಬೀಡ ಕಲ್ಲುಮಠದ ಸ್ಥೂಲ ಬಳಕೆಯನ್ನು ಕೂಡಿಕೊಂಡಿದ್ದು ಅವರದು ಬಹಳ ಅನುಚಿತವಾದ್ದರಿಂದ ಸದರಿ ಬಳಕೆ ದೆಸೆಯಿಂದಲೂ ಇಸಳೂರಲ್ಲಿ ನಡೆವ ಪಂಚದ್ರೋಹದ ದೆಸೆಯಿಂದಲೂ ಕೂಡಿದ ಸಭೆಯವರು ಜಡೇದಸ್ಥಳದಲ್ಲಿ ವಿಚಾರಿಸಲು ಪಂಚದ್ರೋಹವು ತಮ್ಮ ಮೇಲೆ ಬಾರದೆ ೧ಳ ಜಂಗಮರ ಮೇಲೆ ಬಂದು ಅವರು ಸಮಯಬಿಟ್ಟು ಶಂಕರಯ್ಯಗಳಾಗಿ ಹೋದ ಬಳಿಕ

ಸಭೆಯವರು ಸದರಿ ಸ್ಥೂಲ ಬಳಕೆಯಬಿಟ್ಟು ನೀವು ನೀವು ಕೂಡಿ ಇರುವುದು ಎಂತ ರಾ॥ ದುರ್ಗದಸ್ವಾಮಿಗಳವರಿಗೆ ಹೇಳಿದರೆ ತಮ್ಮ ಮಾತು ಚೂಕಿ ಆದ್ದರಿಂದಲೂ ಆ ಬಳಕೆಯ ದೆಸೆಯಿಂದ ತಮಗೆ ಜವಾಬು ಇಲ್ಲದ್ದರಿಂದಲೂ ಮೂರ್ಖತನದಿಂದ ಬ್ರಹ್ಮದೇವರು ಬಂದು ಹೇಳಿದರೂ ಕೇಳುವುದಿಲ್ಲ, ನಾವು ಬೇಕಾದರೆ ನಾವು ಮಾಡಿದ ಬಳಕೆಯಲ್ಲೇ ಕೂಡುವುದು, ಒಲ್ಲದಿದ್ದರೆ ತಮ್ಮಷ್ಟಕ್ಕೆ ಇರುವುದೆಂದು ಎಂತ ಹೇಳಿ, ತಮ್ಮ ಆಚರಣೆ ತಮ್ಮ ಬಳಕೆ ಸುಮಾರುವುಳ್ಳದ್ದು ಇದ್ದರೂ ಇಸಳೂರಲ್ಲಿ ನಮ್ಮ ಚೀಲಾಳಸಮಯ ಮುಂತಾದ ೧ಳ ಸಮಯಗಳುಳ್ಳ ಗಣಂಗಳ ಆಚಾರವು ದೇವಭಕ್ತರೊಳಗೆ ಸಮವಲ್ಲವೆಂದು ಕಿತ್ತುಹಾಕಿ ಈ ಪ್ರಕಾರ ತಮ್ಮ ಮುರುಗಿ ಮಠಗಳು ಇದ್ದ ಸಕಲ ದೇಶದ ಪೇಟೆಗಳಿಗೆ ಜಾಹೀರುಕೊಟ್ಟು ಇದ್ದಾರೆ.

ಅದರಂತೆಯೇ ತಮ್ಮ ಆಚಾರವುಳ್ಳ ದೇವಭಕ್ತರಿಗೆ ಪರಸಮಯದ ಗಣಂಗಳಲ್ಲಿ ಸಮರಸವ ಮಾಡಬಾರದೆಂದು ರಾ॥ ಗುರುಸಿದ್ಧಸ್ವಾಮಿಗಳವರ ಮಾತಹಿಡಿದು ಇವರ ಶಿಷ್ಯರು ರಾ। ಚನ್ನಬಸವಸ್ವಾಮಿಗಳವರು ಅಜ್ಞೆ ಮಾಡಿದಕಾರಣ ಆ ದೇವಭಕ್ತರು ಪರಸಮಯದ ಗಣಂಗಳಲ್ಲಿ ಸಾಮರಸ್ಯ ಮಾಡುವುದಿಲ್ಲ, ಹಾಗೂ ತಮ್ಮ ಬಗೆಮಠಗಳು ಇದ್ದಲ್ಲಿ ಪರಸಮಯದ ಗಣಂಗಳ ಮೆರವಣಿಗೆ ಉತ್ಸಹ ಆಗಬಾರದು, ತಮ್ಮ ಸೂತ್ರಿಕರಾದ ಮಠಕ್ಕೆ ಪರಸಮಯದ ಗಣಂಗಳು ಬಂದರೆ ಇಳಿಯುವುದಕ್ಕೆ ಬಂದರೆ ಸ್ಥಳ ಕೊಡಕೂಡದು, ಬಳಕೆಯನ್ನೂ ಮಾಡಕೂಡದು, ಎಂತ ಆಜ್ಞೆ ಮಾಡಿದ ಪ್ರಕಾರ ಸೀಮೆಗಳಲ್ಲಿ ಅದರಂತೆ ನಡೆಯುತ್ತವೆ.

ಇದರ ವಿಷಯದಲ್ಲಿ ಹಾವೇರಿ ಪೇಟೆಯಲ್ಲಿ ಇರುವ ತಮ್ಮ ಸೂತ್ರಿಕರಾದ ಸಾವಳಗಿ ಮಠದಲ್ಲಿ ಶಿವಲಿಂಗಪ್ಪನವರ ಮರಿದೇವರಾದ ಸಿದ್ಧಲಿಂಗ

ಯ್ಯನವರು ಆ ಶಿವಲಿಂಗಪ್ಪನವರು ಭಕ್ತರ ಬಿನ್ನಹವನ್ನು ತೀರಿಸಲು ಊರೊಳಗೆ ಹೋದ ಕಾಲದಲ್ಲಿ ರಾ|ಚಿತ್ರಕಲ್‌ದುರ್ಗದ ಮಠದಶಾಖಾ ಚರಮೂರ್ತಿಗಳಾದ ರುದ್ರಪ್ಪನವರು ವಿಚಾರಿಸದೆ ಸದರಿ ಸಾವಳಗಿಮಠಕ್ಕೆ ಬರಲು

ಸದರಿ ಮರಿದೇವರು ನಮ್ಮ ಕುಮಾರ ಬಗೆಯ ಮೂರ್ತಿಗಳು ಬಂದರೆಂದು ಜಳಕ ಶಿವಾರ್ಚನೆಯ ಮಾಡಿಸಲು, ಅಷ್ಟರೊಳಗೆ ಸದರಿ ಶಿವಲಿಂಗಪ್ಪನವರು ಬಂದು ಮಠದಲ್ಲಿ ತಮ್ಮ ಮರಿಯಾದ ರುದ್ರದೇವರನ್ನು ಶಿವಪೂಜೆ ಮಾಡುವ ಮೂರ್ತಿಗಳು ಯಾರೆಂತ ವಿಚಾರಿಸಲು, ಆ ಬಳಿಕ ಮುರಿಗಿ ಬಗೆಯ ಗಣಂಗಳೆಂತ ತಿಳಿದ ಕಾರಣ ಆ ಶಿವಲಿಂಗಪ್ಪನವರಿಗೆ ಬಂದ ಚರಮೂರ್ತಿಗಳು ನಾವು ಕುಮಾರ ಸಮಯ ವೆಂಬುದಾಗಿ ತಿಳಿಯದೆ ಬಂದು ತಮ್ಮ ಮಠದಲ್ಲಿ ಜಳಕ ಶಿವಾರ್ಚನೆಆಯಿತು. ಇನ್ನು ಮುಂದೆ ನಮ್ಮ ಗುರುಗಳಾದ ರಾ॥ ಚನ್ನಬಸವಸ್ವಾಮಿಗಳು ಈ ವರ್ತಮಾನವನ್ನು ಕೇಳಿ ನಮ್ಮನ್ನು ಕೂಡಿಕೊಳ್ಳುತ್ತಾರೋ ಇಲ್ಲವೋ ಎಂತ ಬಹಳ ಚಿಂತೆ ಮಾಡಿದ್ದರಿಂದ

ರಾ|| ಸದರಿ ಶಿವಲಿಂಗಪ್ಪನವರು ಬಂದ ಚರಮೂರ್ತಿಗಳಿಗೆ ಮಠವನ್ನು ನಮಸ್ಕಾರ ಮಾಡಿದ ಕಾರಣ ಈ ವರ್ತಮಾನವನ್ನು ಕುಮಾರಸಮಯದ ಭಕ್ತರಾದ ಹಾವೇರಿ ಪೇಟೆ ಪಡನೂರ ವರದಪ್ಪ ಸೆಟ್ಟರು ಮುಂತಾದ ದೈವದವರು ಬಂದು ಆ ಮಠ ದೈವದವರದು,ಮೂರ್ತಿಗಳು ಕೊಟ್ಟರೂ ಕಾರಣ(ಫಲ)ವಿಲ್ಲವೆಂದು ತಕರಾರು ಮಾಡಿದ್ದರಿಂದ ಮುರಿಗಿ ಸಮಯದ ಭಕ್ತರು ಈ ವರ್ತಮಾನವನ್ನು ಕೇಳಿ ಬಂದು ದೈವದವರಲ್ಲಿ ರಾಜಿ ಆಗಿ ಆ ಊರ ಹೊಸ ಪೇಟೆಯಲ್ಲಿ ಇರುವ ಮುರಿಗಿ ಬಗೆಯುಮಠವನ್ನು ಸದರಿ ಶಿವಲಿಂಗಪ್ಪನವರಿಗೆ ಕೊಟ್ಟು ಇದ್ದದ್ದರಿಂದ ಆ ದರ್ಗದ ಚರಮೂರ್ತಿಗಳು ಸದರಿ ಶಿವಲಿಂಗಪ್ಪನವರು ತಮಗೆ ಮರಿಯಾದೆ ಕೊಟ್ಟು ಆಧಾರ ಮಾಡಿಕೊಟ್ಟರೆಂದು ಆ ಚರಮೂರ್ತಿಗಳು ಮುರಿಗಿ ಸಮಯದಲ್ಲಿ ಇದ್ದರೂ ತಮ್ಮ ಕುಮಾರ ಸಮಯದ ಸಾವಳಗಿ ಬುಡಕಟ್ಟಿನ ಹೆಸರು ಹೇಳುತ್ತಾರಂತೆ.

ಆ ಹಾವೇರಿ ಪೇಟೆಯಲ್ಲಿ ಮುರಿಗಿ ಸಮಯದ ಭಕ್ತರಾದ ಆನೂರಸೆಟ್ಟರು ವಗೈರೆ ದೈವದವರು ಕುಮಾರ ಸಮಯದ ಗಣಂಗಳಲ್ಲಿ ಸಾಮರಸ್ಯ ಮಾಡುವುದಿಲ್ಲವಂತೆ.ಇದರಂತೆ ಆ ಊರ ಹೊಸಪೇಟೆಸೆಟ್ಟರು ದೈವದವರು ಕುಮಾರ ಸಮಯದ ಭಕ್ತರಾಗಿ ಮುರಿಗಿ ಸಮಯದ ಗಣಂಗಳಲ್ಲಿ ಸಾಮರಸ್ಯ ಮಾಡುವುದಿಲ್ಲವಂತೆ.

ಈ ಪ್ರಕಾರ ಸೋದೆ ಸೀಮೆ ವಗೈರೆ ಸಕಲ ದೇಶಗಳಲ್ಲಿ ಪರಸಮಯದ ಗಣಂಗಳು ನಮ್ಮಗಳ ವಿಷಯವಾಗಿ ರಾ|| ದುರ್ಗದ ಸ್ವಾಮಿಗಳು ಕಟ್ಟು ಮಾಡಿದ್ದರಿಂದ ತಮ್ಮ ಕುಮಾರ ಸಮಯದ ಭಕ್ತರಾದ ಹುಬ್ಬಳ್ಳಿ ಬಸವಪ್ಪಸೆಟ್ಟರು ಹಾವೇರಿ ವರದಪ್ಪಸೆಟ್ಟರು ಕೆಳದಿ ಮರಿಯಪ್ಪಸೆಟ್ಟರು ಮುರಗೋಡ ಸಿದ್ದಪ್ಪಸೆಟ್ಟರು ಮುಂತಾದ ಉತ್ತರದೇಶದ ಸೆಟ್ಟರು ದೈವದವರಾದ ಸಮಸ್ತದೇವಭಕ್ತರೂ ಸೋದೆ ಸೀಮೆಯಲ್ಲಿ

ರಾ|| ಆ ದೇಶದ ದೊರೆಗಳು ಮುಂತಾದ ಆ ಸೀಮೆ ದೇವಭಕ್ತರು ರಾ| ಚನ್ನಬಸವಸ್ವಾಮಿಗಳವರ ಅಪ್ಪಣೆ ಪ್ರಕಾರ ಆ ಸೀಮೆಯಲ್ಲಿ ಸಕಲರೂ ಮುರಿಗಿ ಸಮಯದ ಭಕ್ತರಾಗಿ ಆ ಸೀಮೆಗಳಲ್ಲಿ ಕುಮಾರಸಮಯಗಳು ಮುಂತಾದ ಪಂಸಮಯದ ಗಣಂಗಳೇ ಆಗಲಿ ಪರಸಮಯದ ಭಕ್ತರೇ ಆಗಲಿ ಇವರ ಪ್ರವರ್ತಕವು ನಿಂತಕಾರಣ

ಈ ವರ್ತಮಾನವು ಸದರೀ ಕುಮಾರ ಸಮಯದ ದೇವಭಕ್ತರಾದ ಸದರಿ ಹುಬ್ಬಳ್ಳಿ ಬಸವಪ್ಪಸೆಟ್ಟರು ಮುಂತಾದ ಸಕಲ ದೈವದವರಾದ ಪೇಟೆ ಮನೆ ಭಕ್ತಗಣಂಗಳು ಸಮಸ್ತ ದೇಶಗಳಲ್ಲಿ ಇರುವ ಪೇಟೆ ಮನೆ ಸ್ಥಲಗಳಿಗೆ

ಪರಸಮಯದ ಗಣಂಗಳು ಪರಸಮಯದ ಭಕ್ತರು ಇವರುಗಳ ವಿಷಯವಾಗಿ ರಾ! ದುರ್ಗದಸ್ವಾಮಿಗಳು ಸೋದೆ ಸೀಮೆಗಳಲ್ಲಿ ಒಂದು ಕಾಯಂ ಮಾಡುವವರೆವಿಗೂ

ಆ ಸೋದೆ ಸೀಮೆಯಲ್ಲಿ ಬೆಳೆದ ಅಡಿಕೆ ಯಾಲಕ್ಕಿ ಮೆಣಸು ಮುಂತಾದ ಜಿನಸುಗಳನ್ನು ತೆಗೆದುಕೊಳ್ಳಬಾರದೆಂದು ಆ ಸೀಮೆಯ ವ್ಯಾಪಾರವನ್ನು ಪತ್ರ ಮುಖದಿಂದ ಕಟ್ಟುಮಾಡಿ

ಆ ಸೀಮೆಯ ಮುಖ್ಯ ಪೇಟೆಯಾದ ಶಿರಸಿಯಲ್ಲಿ ತಟ್ಟ ಕಟ್ಟಿಸಿ ಮೂರು ವರುಷ ವ್ಯಾಪಾರ ಬಂದು ಮಾಡಿಸಿದ ಕಾರಣ

ಆ ಸೀಮೆಯ ಹೈಗರು ಮುಂತಾದ ತೋಟಮಾಡಿದ ಜನಗಳು ಯಾವತ್ತರೂ ತಮ್ಮ ಸರಕುಗಳಾದ ಅಡಿಕೆ ಮೆಣಸು ಯಾಲಕ್ಕಿ ಮೊದಲಾದ ಜಿನಸುಗಳು ಮಾರದೆ ಇದ್ದದ್ದರಿಂದ ಜೀವನಕ್ಕೆ ತೊಂದರೆಗಳು ಸಂಭವಿಸಿದ ಕಾರಣ ಇವರೆಲ್ಲರೂ

ತಮ್ಮ ಸರಕು

ಗಳನ್ನು ಸಕಲ ದೇಶದ ವ್ಯಾಪಾರಿಗಳು ಒಪ್ಪಿದಂತೆ ಹುಬ್ಬಳ್ಳಿ ಬಸವಪ್ಪ ಸೆಟ್ಟರು ಮುಂತಾದ ಸಕಲ ಪೇಟಿಮನೆ ದೈವದವರು ಈ ಸೋದೆ ಸೀಮೆಯಲ್ಲಿ ಪರಸಮಯದ ಗಣಂಗಳು ಬಂದರೆ ಆಚರಿಸಬಾರದೆಂದು ರಾ| ದುರ್ಗದ ಸ್ವಾಮಿಗಳ ಅಪ್ಪಣೆ ಪ್ರಕಾರ ತಾವು ಈ ಸೀಮೆ ದೇವಭಕ್ತರಿಗೆ ಆಜ್ಞೆ ಮಾಡಿದ್ದರಿಂದ ಸದರಿ ಪ್ರಕಾರ ಬಂದಾಗಿ ಪರಸಮಯದ ದೇವಭಕ್ತರೂ ಶಿರಸಿಯಲ್ಲಿ ತಟ್ಟುಕಟ್ಟಿಸಿ ಮೂರ ವರುಷವಾಯಿತ, ಕಾರಣ ನಮ್ಮ ಸರಕು ಹೇಗೆ ಮಾರಾಟವಾಗಬೇಕೆಂತ ರಾ ಸೋದೆ ದೊರೆಗಳಿಗೆ ಅಂಕೆ ಮಾಡಿಕೊಂಡದ್ದರಿಂದ

ಆ ದೊರೆಗಳು ಪತ್ರ ಮುಖದಿಂದ ರಾ|| ಚನ್ನಬಸವ ಸ್ವಾಮಿಗಳವರಿಂದ ಆಶೀರ್ವಾದ ಪತ್ರವನ್ನು ತರಿಸಿಕೊಂಡು ಆ ಪತ್ರದಲ್ಲಿ ಇದ್ದಪ್ರಕಾರ ಶಿರಸಿ ಇಸಳೂರು ಮುಂತಾದ ತಮ್ಮ ಸೋದೆ ಸೀಮೆಯ ದೇವಭಕ್ತರ ಕಡೆಯಿಂದ ರಾ| ಸೋದೆ ದೊರೆಗಳು

ಹುಬ್ಬಳ್ಳಿ ಬಸವಪ್ಪ ಸೆಟ್ಟರು ಮುಂತಾದ ದೈವದವರಿಗೆ ಪತ್ರ ಮುಖದಿಂದ ರಾ| ಮುರಿಗಿ ಸಮಯದ ಗಣಂಗಳು ಮುಂತಾದ ಪರಸಮಯದ ಗಣಂಗಳು ನಿಮ್ಮ ಸೀಮೆಗಳಾದ ಪೇಟಿಮನೆಗಳಿಗೆ ದಯಮಾಡಿಸಿದರೆ ಆಚರಿಸುವುದಕ್ಕೆ ಹರಕತ್ತು ಇಲ್ಲ, ನಮ್ಮ ಸೋದೆ ಸೀಮೆಗೆ ರಾ|| ಕುಮಾರ ಸಮಯ ಮುಂತಾದ ಪರಸಮಯದ ಗಣಂಗಳು ದಯಮಾಡಿಸಿದರೆ ನಾವು ಆಚರಿಸುತ್ತೇವೆ. ರಾ| ಮುರಿಗೆ ಸಮಯದ ಗಣಂಗಳ ಮಠವಿದ್ದ ಸ್ಥಳದಲ್ಲಿ ಕುಮಾರ ಸಮಯ ಮೊದಲಾದ ಪರಸಮಯದ ಗಣಂಗಳ ಉತ್ಸವ ಆಗಬಾರದು, ಕುಮಾರ ಸಮಯದ ಮಠಗಳು ಇದ್ದಲ್ಲಿ ಮುರಿಗೆ ಸಮಯದ ಗಣಂಗಳು ಮೊದಲಾದ ಪರಸಮಯದ ಗಣಂಗಳ ಉತ್ಸವ ಆಗಬಾರದು, ಉಭಯ ಸಮಯದ ಮಠಗಳು ಇದ್ದಲ್ಲಿ ಉಭಯ ಸಮಯದ ಗಣಂಗಳ ಉತ್ಸವ ಆಗತಕ್ಕದ್ದು, ಇದರಂತೆ ಚೀಲಾಳ ಸಮಯದ ಮಠಗಳು ಇದ್ದ ಸ್ಥಳಗಳಲ್ಲಿ ನಡೆಯತಕ್ಕದ್ದು,

ಎಂಬುದಾಗಿ ಬರೆಸಿ ಕಳುಹಿಸಿದ್ದರಿಂದ ಆ ಪತ್ರಗಳನ್ನು ರಾ| ಹುಬ್ಬಳ್ಳಿ ಬಸವಪ್ಪಸೆಟ್ಟರು ಮೊದಲಾದ ಪರಸಮಯದ ದೇವಭಕ್ತರು ನೋಡಿಕೊಂಡು ರಾ| ಜಡೇದ ತಮ್ಮ ಸನ್ನಿಧಾನದಲ್ಲಿ ತಮ್ಮ ಮುಖದಿಂದ ಸೋದೆ ಸೀಮೆ ಮುಂತಾದ ಸಮಸ್ತ ಸೀಮೆ ದೇವಭಕ್ತರ ಮುಖದಿಂದ ಸೋದೆ ಸೀಮೆ ಮುಂತಾದ ಸಮಸ್ತಸೀಮೆ ದೇವ ಭಕ್ತರುಸೋ

ಡೇ ಸೀಮೆಯವರು ಬರಸಿ ಕಳುಹಿಸಿದ ಪತ್ರದಲ್ಲಿ ಇದ್ದ ಪ್ರಕಾರಕ್ಕೆ ಒಡಂಬಟ್ಟು ಅದೇ ಪ್ರಕಾರ ಸಮಯಾಚಾರದ ಮೂರ್ತಿಗಳಲ್ಲಿ ನಡೆಸುತಕ್ಕದ್ದು ಎಂತ ನಿಬಂಧನೆಯನ್ನು ಮಾಡಿ ಸ್ಥಿರಪಡಿಸಿ ಸಮಸ್ತ ಸ್ಥಲ ಪರಸ್ಥಲದ ದೇವಭಕ್ತರು ಶಿರಸಿಯಲ್ಲಿ ಕಟ್ಟಿಸಿದ ತಟ್ಟು ಬಿಚ್ಚಿಸಿ ಆ ತಟ್ಟಿಸಮೆರವಣಿಗೆಯನ್ನು ಮಾಡಿಸಿ ಆ ಮೇಲೆ ಸೋದೆ ಸೀಮೆ ವ್ಯಾಪಾರ ಶುರು ಆಯಿತು,

ಎಂತ ಒಳಗಡೆಯಲ್ಲಿ ತಾವು ಜಡೇದ ದೇವಭಕ್ತರ ಕಡೆಯಿಂದ ನಮಗೆ ಬರಸಿ ಕಳುಹಿಸಿದ ಬಿನ್ನಹಪತ್ರಮುಖದಿಂದ ನಮಗೆ ತಿಳದಿದ್ದರಿಂದ ಬಹಳ ಸಂತೋಷವಾಯಿತು.

ಆದರೆ ನಾವೂ ನೀವೂ ರಾ| ಒಂದು ಗುರುಗಳಾದ ಕಟ್ಟಿಗೆಹಳ್ಳಿ ಸ್ವಾಮಿಗಳವರ ಒಂದೇ ಸೂತ್ರಿಕರಾದ ಕಾರಣ ನಾವೂ ನೀವೂ ಕೂಡಿ ಒಂದೇ ಆಚರಣೆವುಳ್ಳವರಾಗಬೇಕೆಂಬ ನಮ್ಮ ಅಪೇಕ್ಷೆ ಅದೆ. ಇದರಂತೆ ತಾವು ನಡಸಿಕೊಟ್ಟರೆ ರಾ| ದುರ್ಗದ ಸ್ವಾಮಿಗಳವರು ಹಳೇಬೀಡ ಕಲ್ಮಠದ ಸ್ಥಲ ಬಳಕೆ ಕೂಡಿಕೊಂಡು ಇರುವುದರಿಂದ ಅವರ ಬಳಕೆ ಆಚರಣೆ ಮಾಡದಂತೆ ಸಕಲ ದೇಶಗಳಲ್ಲಿ ಇರುವ ದೇವಭಕ್ತರಲ್ಲಿ ನಿಬಂಧನವನ್ನು ಮಾಡೋಣ, ಈ ಮಾತು ನಾವೂ ನೀವೂ ಹಿಡಿದರೆ ಆ ಬಳಕೆಯ ವಿಷಯದಲ್ಲಿ ಒಂದು ಕಾಯಂ ಆದೀತು. ಇದಕ್ಕೆ ತಮ್ಮ ಅಪ್ಪಣೆ ಯಾವ ಪ್ರಕಾರ ಎಂಬುದನ್ನು ಬರಿಸಿ ಪತ್ರ ಮುಖದಿಂದ ತಿಳಿಸತಕ್ಕದ್ದು ಆ ಪ್ರಕಾರ ನಡಕೊಳ್ಳುವುದಕ್ಕೆ ಸಿದ್ಧವಾಗಿ ಇದ್ದೇವೆ,

ಎಂಬುದಾಗಿ

ರಾ| ಡಂಬಳದ ತೋಟದ ಸ್ವಾಮಿಗಳು ರಾ। ಜಡೇವ ಕೆಂಪಿನಸಿದ್ದಬಸವ ಸ್ವಾಮಿಗಳವರಿಗೆ ಪತ್ರಮುಖದಿಂದ ತಿಳಿಸಿದ ಕಾರಣ

ರಾ|| ಕೆಂಪಿನಸಿದ್ಧಬಸವಸ್ವಾಮಿಗಳು ರಾ। ಡಂಬಳದ ತೋಟದ ಸ್ವಾಮಿಗಳಿಗೆ ನಿಮ್ಮ ಗುರುಗಳು ತಮ್ಮ ಆಚರಣೆಯನ್ನು ಕೂಡಿಕೊಂಡದ್ದರಿಂದ ಆ ೫ ಸಮಯದ ಗಣಂಗಳನ್ನು ನಮಗೋಸ್ಕರ ನೀವು ಬಿಡುವುದು ಹೇಗೆ? ನಾವೂ ನೀವೂ ಒಂದಾಚರಣೆವುಳ್ಳವರು ಆಗುವುದು ಹೇಗೆ? ಇದರ ವಿಚಾರವನ್ನು ತಾವು ಪತ್ರಮುಖದಿಂದ ತಿಳಿಸಿದಲ್ಲಿ ನಮ್ಮ ನಿಮ್ಮ ಆಚರಣೆ ಉದ್ದಿಶ್ಯ ಮಾತಾಡಬಹುದೆಂದು ರಾ|| ಕೆಂಪಿನಸಿದ್ದಬಸವಸ್ವಾಮಿಗಳವರು ರಾ॥ ಹರಪನಹಳ್ಳಿ ದೊರೆಗಳು ರಾ|ಡಂಬಳದ ತೋಟದ ಸ್ವಾಮಿಗಳಿಗೆ ಪತ್ರಮುಖದಿಂದ

ತಿಳಿಸಲು ಅವರು ಆ ಪತ್ರವನ್ನು ನೋಡಿಕೊಂಡು,
(ಈ ಪ್ರಕರಣ (Para) ೩ ನೆಯ ಸಾಲಿನಲ್ಲಿ "ತಮ್ಮ ಆಚರಣೆಯನ್ನು" ಎಂಬುದರ ಬದಲಾಗಿ ತಮ್ಮ "ಆಚರಣೆಯಲ್ಲಿ" ಎಂತ ತಿದ್ದಬೇಕು.)

ತಾವು ಸದರಿ ೫ ಸಮಯದ ಗಣಂಗಳನ್ನು ಹಾಗೂ ತಮ್ಮ ಅಜ್ಜ ಗುರುಗಳಿಂದ ರಾ| ಕಟ್ಟಿಗೆಹಳ್ಳಿ ಸ್ವಾಮಿಗಳು ... ... ಬಿಟ್ಟ ಸಂಪಾದನೆ ಸಮಯದ ಗಣಂಗಳ ಹಿಡಿದು ೬ ಸಮಯದ ಗಣಂಗಳನ್ನು ಮಾಡಿಕೊಂಡ ಮೇಲೆ ಬಿಡುವುದಕ್ಕೆ ಬರುವುದಿಲ್ಲ. ನಮ್ಮ ನಿಮ್ಮ ಆಚರಣೆ ಒಂದಾಗದಿದ್ದರೂ ಮಾತಿನ ವಿಷಯಕ್ಕೆ ಒಬ್ಬರಿಗೊಬ್ಬರು ಕುಮುಕಾಗಿ ಇರುವುದಕ್ಕೆ ಹರಕತ್ತು ಇಲ್ಲವೆಂದು ರಾ| ಡಂಬಳದ ತೋಟದಸ್ವಾಮಿಗಳು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರಿಗೆ ಪತ್ರಮುಖದಿಂದ ತಿಳಿಸಿದ ಕಾರಣ ಆಗ್ಯೆ ಮುರಿಗಿ ಸಮಯವೆಂತಲೂ ಕುಮಾರ ಸಮಯವೆಂತಲೂ ಚೀಲಾಳಸಮಯವೆಂತಲೂ ಈ ಪ್ರಕಾರ ಮೂರು ಸಮಯಗಳೇ ಲೋಕದಲ್ಲಿ ಪ್ರಸಿದ್ಧಗಳಾದವು.

ಇನ್ನು ಉಳಿದ ಸಮಯಗಳು ಚೀಲಾಳ ಸಮಯಗಳಲ್ಲಿ ಕೂಡಿದಾಗ್ಯೂ ಸಂಪಾದನೆಯ ಸಮಯ ಕೆಂಪಿನ ಸಮಯ ಇವು ಎರಡು ಸ್ವಲ್ಪ ಪ್ರಚಾರಕ್ಕೆ ಬಂದು ಇರುತ್ತವೆ. ಉಳಿದ ಸಮಯಗಳು ಐಕ್ಯರೂಪದಲ್ಲಿ ಇದ್ದಾವೆ. ಸಮಯಬಿಟ್ಟ ಶಂಕರದೇವರ ಸಮಯವು ಒಂದು ಬೇರೆ ಇದ್ದರೂ ಪ್ರಚಾರಕ್ಕೆ ಬರಲಿಲ್ಲವು.

ಆದ್ದರಿಂದ ಮುರಿಗಿ ಸಮಯಕ್ಕೆ ಮೂಲಗುರುಗಳಾದ ರಾ| ಮುರಿಗಾಸ್ವಾಮಿಗಳವರ ಮಠವೇ ಚಿತ್ರಕಲ್ಲದುರ್ಗದ ಮಠವು- ರಾ| ಕುಮಾರಸಮಯಕ್ಕೆ ಮೂಲಗುರುಗಳಾದ ಕುಮಾರ ಸ್ವಾಮಿಗಳವರಮಠವೇ ಇಸಳೂರು ಮಠದ ತರುವಾಯದಲ್ಲಿ ಕೆಳದೀಸೀಮೆಗೆ ಸೇರಿದ ಜಡೇದಮಠವು. ಚೀಲಾಳ ಸಮಯಕ್ಕೆ ಮೂಲ ಗುರುಗಳಾದ ತೋಟದಸ್ವಾಮಿಗಳವರ ಮಠವೇ ಡಂಬಳದ ಮಠವು. ಸಂಪಾದನೆ ಸಮಯಕ್ಕೆ ಮೂಲಗುರುಗಳಾದ ಸಿದ್ಧವೀರಪ್ಪನವರ ಮಠವೇ ಹಾಗಲವಾಡಿ ಮಠದ ತರುವಾಯದಲ್ಲಿ ವಂಟಮುರಿ ಮಠವು. ಕೆಂಪಿನಸಮಯಕ್ಕೆ ಮೂಲಗುರುಗಳಾದ ಕೆಂಪಿನಪ್ಪನವರ ಶಿಷ್ಯರಾದ ಸಂಗನಬಸವಪ್ಪನವರ ಮಠವೇ ಹುಮನಾಬಾದಿ ಕಲ್ಯಾಣಸೀಮೆ ಪೈಕಿ ಹುಲಕುಂಟೆ ಬಸವತೀರ್ಥಮಠವು. ಸಮಯಬಿಟ್ಟ ಶಂಕರಯ್ಯಗಳ ಸಮಯಕ್ಕೆ ಮೂಲಗುರುಗಳಾದ ಚನ್ನವೀರದೇವರ ಶಿಕಾರಿಪುರ ಮಠದ ತರುವಾಯದ ಬ

ಸವನಹಳ್ಳಿ ಮಠವೇ ಮೂಲಮಠವು. ಉಳಿದ ಸಮಯದ ಮೂಲಗುರುಗಳ ಮಠಗಳು ಪ್ರಸಿದ್ಧವಿಲ್ಲ.

ಈ ಮುಂಚೆ ಹೇಳಿದ ಮೂರು ಸಮಯಗಳ ಪೈಕಿ ಕುಮಾರ ಸಮಯದ ಮೂಲ ಮಠವು, ಇಸಳೂರ ಮಠವು ಎಂಬುದಕ್ಕೆ ಆ ಮಠದಲ್ಲಿ ರಾ| ನೋಡಸಿದ್ಧಲಿಂಗಸ್ವಾಮಿಗಳವರ ಗದ್ದುಗೆ, ಇವರ ಶಿಷ್ಯರಾದ ರಾ| ಕುಮಾರಸ್ವಾಮಿಗಳವರ ಗದ್ದುಗೆ, ಈ ಎರಡು ಗದ್ದುಗೆಗಳು ಇರುವುದೇ ಸಾಕ್ಷಿಯು. ಈ ಇಸಳೂರು ಮಠದ ತರುವಾಯದಲ್ಲಿ ಜಡೇದ ಮಠವೇ ಕುಮಾರ ಸಮಯಕ್ಕೆ ಮೂಲ ಮಠವು ಎಂಬುದಕ್ಕೆ ಜಡೇದ ಸ್ಥಲದಲ್ಲಿ ಹಳೇಬೀಡು ಇಸಳೂರು ಈ ಎರಡು ಆಚಾರ ಸಂಬಂಧವಾದ ನ್ಯಾಯವು ತೀರಿದ ಬಳಿಕ ಇದೇ ಜಡೇದಲ್ಲಿ ಮುರಿಗೀ ಸಮಯ ಕುಮಾರ ಸಮಯ ಈ ಎರಡೂ ಸಮಯಗಳು ಭೇದವಾಗಿ ಇರುವುದೇ ಸಾಕ್ಷಿಯು. ಹಾಗೂ ರಾ| ಕುಮಾರಸ್ವಾಮಿಗಳವರ ತರುವಾಯದ ರಾ| ಕೆಂಪಿನಸಿದ್ಧಸ್ವಾಮಿಗಳವರ ಶಿಷ್ಯ ಪರಂಪರೆಯಾದ ಗುರುಗಳೇ ಇರುವುದೇ ಸಾಕ್ಷಿಯಾಯಿತು.

ರಾ| ಜಡೇದಸ್ಥಳದಲ್ಲಿ ಇರುವ ರಾ| ಕೆಂಪಿನಸಿದ್ಧಬಸವ ಸ್ವಾಮಿಗಳವರು ಜಡೆ ಮುಂತಾದ ಆ ಸೀಮೆ ದೇವಭಕ್ತರುಗಳ ಭಕ್ತಿಯಿಂದ ಪ್ರಾರಂಭವನ್ನು ಮಾಡಿಸಿದ ಬಸವೇಶ್ವರ ಪುರಾಣವು ಮುಗಿದು ಪ್ರಸ್ತ ಉತ್ಸವಗಳು ಆದ ಬಳಿಕ ಜಡೇದ ಮಠದಲ್ಲಿ ಸ್ವಾಮಿಗಳವರ ಸನ್ನಿಧಾನದಲ್ಲಿ ಇದ್ದ ಹುಬ್ಬಳ್ಳಿ ಬಸವಪ್ಪಸೆಟ್ಟರು ರಾ| ಕೆಂಪಿನಸಿದ್ಧಬಸವ ಸ್ವಾಮಿಗಳವರಿಗೆ ಸಾಷ್ಟಾಂಗ ಪ್ರಣಾತರಾಗಿ ಅರಿಕೆ ಮಾಡಿಕೊಂಡದ್ದು ಏನೆಂದರೆ ನಾನು ಇಸಳೂರಿಂದ ಸನ್ನಿಧಿಗೆ ಬಂದು ಹೇಳಿಕೊಂಡ ಪ್ರಕಾರ ರಾ| ಚಿತ್ರದುರ್ಗದ ಗುರುಸಿದ್ಧಸ್ವಾಮಿಗಳು ನನಗೆ ಶಾಪವನ್ನು ಕೊಟ್ಟಕಾರಣ ಈ ಶಾಪದ ದೋಷವು ನನಗೆ ದೂರವಾಗಿ ನಾನು ನನ್ನ ವಂಶಿಕರಾದ ಪುತ್ರರು ಸಹ ನನ್ನ ವಂಶಪಾರಂಪರ್ಯವಾಗಿ ಸ್ವಾಮಿಪಾದದ ಕುಮಾರಸಮಯದ ವಾತ್ಸಲ್ಯಸ್ಥರಾಗಿ ಸೌಖ್ಯದಿಂದ ನಿಂದೆ ಕುಂದುಗಳು ಬಾರದಂತೆ ಆ ಶಾಪ ನಿವೃತ್ತಿಗಳನ್ನು ನನ್ನ ಶಪಥ ಪ್ರಕಾರ ಕ್ರಿಯಾಚರಣೆಯ ಬಗ್ಗೆ ಸ್ವಾಮಿಪಾದದ ಸೂತ್ರಿಕರಾದ ಒಂದು ಮರಿದೇವರನ್ನು ಕೊಟ್ಟು ನನ್ನ ಉದ್ಧರಿಸಬೇಕೆಂದು ಭಯಭಕ್ತಿಗಳಿಂದ ಅರಿಕೆಮಾಡಿಕೊಂಡದ್ದರಿಂದ ರಾ| ಸ್ವಾಮಿಗಳವರು ಬಸವಪ್ಪಸೆಟ್ಟರಿಗೆ ಅಪ್ಪಣೆಕೊಟ್ಟದ್ದು ಏನೆಂದರೆ

ರಾ| ಗುರು

ಸಿದ್ಧಸ್ವಾಮಿಗಳು ಮಹಿಮಾ ಪುರುಷರು, ಇವರು ನಿಮಗೆ ಕೊಟ್ಟಶಾಪವು ತಪ್ಪಲಾರದು. ಈ ಶಾಪದ ದೋಷದ ಪರಾಭವದ ಬಗ್ಗೆ ನೀವು ನಿಮ್ಮ ಸ್ಥಳವಾದ ಹುಬ್ಬಳ್ಳಿ ಬದಿಯಲ್ಲಿ ಇರುವ ಉತ್ತಮಸ್ಥಳದಲ್ಲಿ ಇದ್ದ ಹೊಲೆಗೇರಿಯನ್ನು ನೋಡಿ ಅದೇ ಸ್ಥಳದಲ್ಲಿ ಇದ್ದ ಹೊಲೆಗೇರಿಯನ್ನು ಕೀಳಿಸಿ ಕೌಲಪೇಟೆಯನ್ನು ಕಟ್ಟಿಸುವೆನೆಂದು ಸರಕಾರದಿಂದ ಹುಕುಮು ಪಡೆದು ಆ ಹೊಲೆಗೇರಿಯನ್ನು ಕೀಳಿಸಿ ಆ ಸ್ಥಳಕ್ಕೆ ಧೂಳಪಾದೋದಕವನ್ನು ಪ್ರೋಕ್ಷಿಸಿ ಜಂಗಮದ ಪಾದಪೂಜೆಯನ್ನು ಮಾಡಿ ಕಾಯಿಗಳನ್ನು ಒಡೆದು ಪೇಟೆಕಟ್ಟುವದಕ್ಕೆ ಮುಹೂರ್ತವನ್ನು ಮಾಡಿ ಬಂದ ಗಣಂಗಳು ಮುಂತಾದ ಭಿಕ್ಷುಕರಿಗೆ ದಕ್ಷಿಣೆ ತಾಂಬೂಲವನ್ನು ಕೊಟ್ಟು ಇಲ್ಲಿಂದ ನಾವು ಕೊಟ್ಟ ಕಾವಿ ಜಾಂಡ್ಯವನ್ನು ನಿಲ್ಲಿಸಿ ಪೇಟೆಯನ್ನು ಕಟ್ಟಿಸಿ ಅದೇ ಪೇಟೆಯಲ್ಲಿ ನಿನ್ನ ಗೃಹವುತ್ತು ನಿನ್ನ ಕ್ರಿಯಾಮೂರ್ತಿಗಳಾದವರ ಮಠ ಸಹವಾಗಿ ಕಟ್ಟಿಸಿ ಮನೆಯಲ್ಲಿ ನೀವು ಪ್ರವೇಶಿಸಿ ಸಾಸಿರಗಣ ತೃಪ್ತಿಯನ್ನು ಮಾಡಿ ನೀನೂ ನಿನ್ನ ಕುಟುಂಬವೂ ಆ ಗೃಹದಲ್ಲಿ ಇದ್ದರೆ ನಿಮಗೆ ಗುರುಕೃಪೆಯಿಂದ ಧನಕನಕ ಪುತ್ರ ಮಿತ್ರ ಕಳತ್ರಾದಿಗಳು ದಿನ ದಿನಕ್ಕೆ ಅಭಿವೃದ್ಧಿಯಾಗಿ ಇದರಂತೆ ಆ ಸ್ಥಳದಲ್ಲಿ ಇರುವ ದೇವಭಕ್ತರಾದ ಭಕ್ತಗಣಂಗಳೂ ಸಕಲೈಶ್ವರ್ಯವುಳ್ಳವರಾಗಿ ಇದ್ದು ನೀವು ಆ ಪೇಟೆಗೆ ಹೊಸ ಹುಬ್ಬಳ್ಳಿ ಎಂಬ ಹೆಸರಿಟ್ಟು ಕಟ್ಟಲು ಆ ಪುರವು ಕಲ್ಯಾಣದಂತೆ ದಿನದಿನಕ್ಕೆ ವಿಶೇಷವಾಗಿ ಬೆಳೆದು ಕೀರ್ತಿಗೊಂಬುವುದು, ಇದು ಸತ್ಯವು. ನೀವು ಯೋಚನೆ ಮಾಡಲಾಗದು. ಮುಂದೆ ನಿಮ್ಮ ಮನಸ್ಸಿನಲ್ಲಿದ್ದ ಪ್ರಕಾರ ಹೊಲೆಗೇರಿಯನ್ನು ಕೀಳಿಸಿ ಆ ಸ್ಥಳದಲ್ಲಿ ಕೌಲಪೇಟೆ ಕಟ್ಟುವುದಕ್ಕೆ ನೀವು ಅರ್ಜಿಯನ್ನು ಕೊಡಲು ಸರಕಾರದಿಂದ ಹುಕುಮು ಆಗುವುದು, ಎಂದು ಅಪ್ಪಣೆಯನ್ನು ಕೊಟ್ಟು ಆ ಮೇಲೆ ಬಸವಪ್ಪಸೆಟ್ಟರಿಗೆ ರಾ| ಸ್ವಾಮಿಗಳವರು ನಮ್ಮ ಸನ್ನಿಧಾನದಲ್ಲಿ ಇರುವ ನಮ್ಮ ಮರಿಗಳಾದ ವಿರಕ್ತ ಮೂರ್ತಿಗಳ ಪೈಕಿ ಯಾವ ಮೂರ್ತಿಗಳು ನಿಮಗೆ ಕ್ರಿಯಾಮೂರ್ತಿಗಳಾಗಬೇಕೆಂದು ಅಪ್ಪಣೆ ಕೊಡಲು,

ಸೆಟ್ಟರು ಸನ್ನಿಧಿಯಲ್ಲಿ ಇದ್ದ ಗಣಂಗಳನ್ನು ನಿರೀಕ್ಷಿಸಿ ಆ ಪೈಕಿ ಮೂರು ಸಾವಿರದ ಗುರುಸಿದ್ಧಪ್ಪನವರು ನಮಗೆ ಕ್ರಿಯಾಮೂರ್ತಿಗಳಾಗಬೇಕೆಂದು ಅರಿಕೆ ಮಾಡಿಕೊಂಡರು. ಆ ಮೇಲೆ ಬಸವಪ್ಪಸೆಟ್ಟರು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರಿಗೆ ಸದರಿ ಕ್ರಿಯಾಮೂರ್ತಿಗಳಿಗೆ ಮೂರುಸಾವಿರದ ಗುರುಸಿದ್ಧಪ್ಪನವರೆಂಬ ಹೆಸರು ಏನುಕಾರಣವಾಗಿ ಆಯಿ

ತು? ಎಂತ ಅರಿಕೆಮಾಡಿಕೊಳ್ಳಲು, ಆ ಸೆಟ್ಟಿಗೆ ಸ್ವಾಮಿಗಳವರು ಅಪ್ಪಣೆಕೊಟ್ಟದ್ದು ಏನೆಂದರೆ ಸದರಿ ನಮ್ಮ ಮರಿದೇವರಾದ ಗುರುಸಿದ್ಧಪ್ಪನವರು ಮೂರುಸಾವಿರ ವ್ಯಾಕರಣವನ್ನು ಓದಿ ಜಿಕಪಾಠವಿದ್ದದ್ದರಿಂದ ಇವರಿಗೆ ನಾವು ಪ್ರೀತಿಯಿಂದ ಮೂರು ಸಾವಿರದ ಗುರುಸಿದ್ಧ ದೇವರೆಂದು ಹೆಸರು ಇಟ್ಟು ಇದ್ದೇವೆ. ಇವರಿಗೆ ಮುಂದೆ ನಮ್ಮ ತರುವಾಯದಲ್ಲಿ ಅನುಭಾವ ಚರಂತಿಗೆ ಕೊಡತಕ್ಕಂಥ ಸ್ಥಳ ಇದ್ದವು. ಆದರೆ ಈಗಲೇ ಬೇಕೆಂದು ನೀವು ಅಪೇಕ್ಷೆಯನ್ನು ಮಾಡಿದ್ದರಿಂದ ಇವರನ್ನು ಕರಕೊಂಡು ಹೋಗಬೇಕೆಂದು ಅಪ್ಪಣೆ ಕೊಟ್ಟ ಆ ಬಸವಪ್ಪಸೆಟ್ಟರಿಗೆ ಕಾವಿ ಜಾಂಡ್ಯ ಕಾಯಿಗಳು ಸಹ ಆಶೀರ್ವಾದವನ್ನು ಮಾಡಿ ಸದರಿ ಮೂರು ಸಾವಿರದ ಗುರುಸಿದ್ದಪ್ಪನವರನ್ನು ಸದರಿ ಸೆಟ್ಟರಿಗೆ ಕ್ರಿಯಾಮೂರ್ತಿಗಳನ್ನು ಮಾಡಿ ಕೊಟ್ಟು ಆ ಬಸವಪ್ಪಸೆಟ್ಟರನ್ನು ಹುಬ್ಬಳ್ಳಿಗೆ ಕಳಿಹಿಸಲು ಆ ಬಸವಪ್ಪಸೆಟ್ಟರು ರಾ॥ ಸ್ವಾಮಿಗಳವರು ಪ್ರಸಾದ ವಾಕ್ಯವನ್ನು ಕೊಟ್ಟ ಪ್ರಕಾರ ಸದರಿಯಂತೆ ಅರ್ಜಿಮಾಡಲು ಹುಕುಮು ಸರಕಾರದಿಂದ ಬಸವಪ್ಪಸೆಟ್ಟರಿಗೆ ಬರಲು ಆ ಬಸವಪ್ಪಸೆಟ್ಟರು ಮುಂತಾದ ದೇವಭಕ್ತರು ನಮಗೆ ಈ ಹುಕುಮು ನಮ್ಮ ಅರ್ಜಿಮಂಜೂರು ಆಗಿ ಬಂದುದು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರ ಮಹತ್ವದಿಂದ ಬಂದಿತು ಅಲ್ಲದೆ ಬೇರೆ ಇಲ್ಲ. ಸಾವಿರ ವರಹ ಖರ್ಚು ಆದರೂ ಆಗತಕ್ಕದ್ದು ಅಲ್ಲ ಎಂತ ರಾ। ಸ್ವಾಮಿಗಳವರನ್ನು ಕೊಂಡಾಡಿ ಮತ್ತು ಆ ಸೆಟ್ಟರು ಆ ದೇವಭಕ್ತರಿಗೆ ಹೇಳಿದ್ದು ಏನೆಂದರೆ ರಾ। ಕೆಂಪಿನಸಿದ್ಧಬಸವ ಸ್ವಾಮಿಗಳವರು ನನಗೆ ಅನುಗ್ರಹ ಗುರುಗಳು ಆದ್ದರಿಂದ ಅವರ ಕೃಪಾಕಟಾಕ್ಷದಿಂದ ರಾ। ಗುರುಸಿದ್ಧಸ್ವಾಮಿಗಳಿಗೆ ನಾನು ಕೊಟ್ಟಶಾಪವು ಸಿದ್ಧಿಯಾಗಿ ನಾನು ಅವರಿಗೆ ಶಾಪವನ್ನು ಕೊಟ್ಟಪ್ರಕಾರ ಭವಿಗಳ ಹೆಗಲಮೇಲೆ ಆ ಸ್ವಾಮಿಗಳ ವಸ್ತುವು ಹೋಯಿತು. ಯಾವದಾದರೂ ರಾ| ಕೆಂಪಿನಸಿದ್ಧಬಸವಸ್ವಾಮಿಗಳವರ ಅಂತಃಕರಣದಿಂದ ನಾನು ಈ ಲೋಕದಲ್ಲಿ ಜೀವಿಸಬೇಕಲ್ಲದೆ ಬೇರೆ ಇಲ್ಲವೆಂದು ಸ್ವಾಮಿಗಳವರನ್ನು ಆ ಬಸವಪ್ಪಸೆಟ್ಟರು ಸ್ತೋತ್ರವನ್ನು ಮಾಡಿ ಹೇಳಿದ್ದರಿಂದ ಆ ದೇವಭಕ್ತರು ಆದೇಪ್ರಕಾರ ರಾ। ಕೆಂಪಿನ ಸಿದ್ಧಬಸವ ಸ್ವಾಮಿಗಳವರನ್ನು ಕೊಂಡಾಡಿದರು.

ಆ ಬಳಿಕ ಬಸವಪ್ಪಸೆಟ್ಟರು ತಮಗೆ ಸರಕಾರದ ಹುಕುಮು ಬಂದ ಪ್ರಕಾರ ಹುಬ್ಬಳ್ಳಿ ಸಮೀಪದಲ್ಲಿ ಇರುವ ಹೊಲೆಗೇರಿಯನ್ನು ಕೀಳಿಸಿ ತೆಗೆಯಿಸಿ ಆ ಹೊಲೆಗೇರಿ ಇದ್ದಸ್ಥಳಕ್ಕೆ ರಾ॥ ಕೆಂಪಿನಸಿದ್ಧಬಸ

ವ ಸ್ವಾಮಿಗಳವರ ಅಪ್ಪಣೆ ಪ್ರಕಾರ ತಮ್ಮ ಕ್ರಿಯಾಮೂರ್ತಿಗಳಾದ ರಾ॥ ಗುರುಸಿದ್ಧಪ್ಪನವರ ಪಾದೋದಕವನ್ನು ಪ್ರೋಕ್ಷಿಸಿ ಆ ಸ್ಥಳದಲ್ಲಿ ಪೇಟೆ ಕಟ್ಟುವ ಮುಹೂರ್ತವನ್ನು ಮಾಡಿ ಪಾದವನ್ನು ಪೂಜಿಸಿ ಕಾಯಿಗಳನ್ನು ಒಡೆದು ದಕ್ಷಿಣೆ ವೀಳ್ಯಗಳನ್ನು ಕೊಟ್ಟು, ರಾ| ಕೆಂಪಿನಸಿದ್ಧಬಸವಸ್ವಾಮಿಗಳವರು ಕೊಟ್ಟ ಕಾವೀ ಜಾಂಡ್ಯವನ್ನು ಮುಟಿಸಿ ರಾ| ಸ್ವಾಮಿಗಳವರ ಹೆಸರಿನಿಂದ ಆ ಜಾಂಡ್ಯವನ್ನು ನಿಲ್ಲಿಸಲು ಆ ಕೂಡಲೆ ಬಸವಪ್ಪಸೆಟ್ಟರು ಮುಂತಾದ ದೇವಭಕ್ತರ ಸಮ್ಮುಖದಲ್ಲಿ ಆ ಜಾಂಡ್ಯವು ಮುರಿದು ಬೀಳಲು,

ಸದರಿ ಸೆಟ್ಟರೂ ದೈವದವರೂ ಕಂಡು ಮತ್ತೂ ಈ ಪೇಟೆ ಕಟ್ಟುವದಕ್ಕಿಂತ ಮೊದಲಿಗೆ ಈ ಮುಹೂರ್ತವಂ ಮಾಡಿ ನಿಲಿಸಿದ ದೊಡ್ಡಗುರುಗಳಾದ ರಾ| ಕೆಂಪಿನಸಿದ್ಧಬಸವಸ್ವಾಮಿಗಳವರು ಕೊಟ್ಟಜಾಂಡ್ಯವು ಮುರಿದುಬಿದ್ದ ಬಳಿಕ ಈ ಪೇಟೆ ಕಟ್ಟಿದರೆ ಉದ್ಧಾರವು ಆಗುವುದು ಹೇಗೆ? ರಾ| ಚಿತ್ರಕಲ್‌ದುರ್ಗದ ಗುರುಸಿದ್ಧಸ್ವಾಮಿಗಳವರು ನಮಗೆ ಕೊಟ್ಟಶಾಪವು ದೂರವಾಗಿ ನಾವೂ ನಮ್ಮ ವಂಶಿಕರೂ ಸಹ ನಮಗೆ ಈ ಸ್ಥಳದಲ್ಲಿ ಮನೆಕಟ್ಟಿ ಆ ಮನೆಯಲ್ಲಿ ಇದ್ದರೆ ನಮಗೆ ಸೌಖ್ಯವಾಗಿ ನಾವು ಇರುವುದು ಹೇಗೆ? ಎಂತ ಬಸವಪ್ಪಸೆಟ್ಟರು ಮುಂತಾದ ದೇವಭಕ್ತರು ಚಿಂತಾಭರಿತರಾಗಿ ರಾ| ಜಡೇದಿಂದ ಬಂದ ರಾ| ಕೆಂಪಿನಸಿದ್ಧಬಸವ ಸ್ವಾಮಿಗಳವರ ಮರಿಗಳಾದ ಮೂರುಸಾವಿರದ ಗುರುಸಿದ್ಧಪ್ಪನವರಿಗೆ ಸಾಷ್ಟಾಂಗ ಪ್ರಣುತರಾಗಿ ಸದರಿ ಪ್ರಕಾರ ಅರಿಕೆ ಮಾಡಿಕೊಳ್ಳಲು ರಾ| ಗುರುಸಿದ್ಧಪ್ಪನವರು ಸೆಟ್ಟರು ಮುಂತಾದ ದೇವಭಕ್ತರಿಗೆ ಅಪ್ಪಣೆ ಕೊಟ್ಟದ್ದು ಏನೆಂದರೆ

ನೀವು ಈ ಜಾಂಡ್ಯವು ಮುರಿದು ಬಿತ್ತು, ಎಂಬುವದಕ್ಕೆ ನೀವು ಸಮಸ್ತರೂ ಸಂಶಯವನ್ನು ತೆಗೆದುಕೊಳ್ಳಬಾರದು, ಆ ಜಾಂಡ್ಯವುಮುರಿದುಬಿದ್ದ ಕ್ರಮ ಹೇಗೆ ಅದೆಯಲ್ಲಾ, ಆ ಜಾಂಡ್ಯವು ಮುರಿದು ಬೀಳಲಿಲ್ಲ. ಲಕ್ಷ್ಮೀದೇವಿಯು ಕಾಲು ಮುರಿದು ಬಿದ್ದಳು. ಆ ಲಕ್ಷ್ಮೀದೇವಿಯು ಈ ಸ್ಥಳವನ್ನು ಬಿಟ್ಟು ತೊಲಗಲರಿಯಳು. ಮುಂದೆ ರಾ| ನಮ್ಮಗುರುಗಳಾದ ಕೆಂಪಿನಸಿದ್ಧಬಸವಸ್ವಾಮಿಗಳವರು ಅಪ್ಪಣೆಕೊಟ್ಟಪ್ರಕಾರ ಈ ಕವಲಪೇಟೆಗೆ ಹೊಸ ಹುಬ್ಬಳ್ಳಿ ಎಂಬ ಹೆಸರಿಟ್ಟು ಈ ಪುರವನ್ನು ಕಟ್ಟಿದರೆ ಈ ಪಟ್ಟಣವು ದಿನದಿನಕ್ಕೆ ವಿಶೇಷವಾಗಿ ಬೆಳೆದು ಹುಬ್ಬಿನ ಮೇಲೆ ಕೈಇಟ್ಟು ನೋಡಿದರೆ ಕಣ್ಣಿಗೆ ಕಾಣುವ ಪರ್ಯಂತರವೂ ಕಾಣುವತನಕ ಈ ಪೇಟೆಯು ಕಟ್ಟಿ ದೊಡ್ಡ ಶಹೆರ ಆಗುವುದು, ಎಂತ ಅಪ್ಪಣೆಯನ್ನು ಕೊಟ್ಟು

ಆ ಬಳಿಕ ಆ ದೇವಭಕ್ತರ ಕಡೆಯಿಂದ ಜಾಂಡ್ಯವನ್ನು ನಿಲ್ಲಿಸಿ ಆ ಪೇಟೆಯನ್ನು ಕಟ್ಟಿಸುವದಕ್ಕೆ ಪ್ರಾರಂಭವನ್ನು ಮಾಡಿಸಿ ರಾ॥ ಗುರುಸಿದ್ಧಪ್ಪನವರು ತಾವು ಇರುವಸ್ಥಳಕ್ಕೆ ದಯಮಾಡಿಸಲು

ಇತ್ತ ಬಸವಪ್ಪ ಸೆಟ್ಟರು ಆ ಪೇಟೆಯನ್ನು ಕಟ್ಟಿಸಿ ಆ ಪೇಟೆಯಲ್ಲಿ ತಮ್ಮ ಕ್ರಿಯಾಮೂರ್ತಿಗಳಾದ ರಾ|ಗುರುಸಿದ್ಧಪ್ಪನವರ ಮಠವನ್ನೂ ತಮ್ಮ ಮನೆಯನ್ನೂ ಕಟ್ಟಿಸಿ ರಾ॥ಕೆಂಪಿನ ಸಿದ್ಧಬಸವಸ್ವಾಮಿಗಳವರ ಅಪ್ಪಣೆ ಪ್ರಕಾರ ಸಾವಿರ ಗಣ ತೃಪ್ತಿಯನ್ನು ಮಾಡಿಸಿ ಗೃಹಪ್ರವೇಶವನ್ನು ಮಾಡಿ ಆ ಬಳಿಕ ರಾ| ಗುರುಸಿದ್ಧಪ್ಪನವರಿಗೆ ಬಸವಪ್ಪಸೆಟ್ಟರು ತಮ್ಮ ಭಕ್ತಿಯಿಂದ ಕಟ್ಟಿಸಿದ ಮಠವನ್ನು ಒಪ್ಪಿಸಿ ಆ ಮಠದಲ್ಲಿ ಲಿಂಗಪೂಜೆ ಜಂಗಮ ದಾಸೋಹದೊಡನೆ ಬಸವಪ್ಪಸೆಟ್ಟರು ರಾ| ಗುರುಸಿದ್ಧಪ್ಪನವರನ್ನು ಇಟ್ಟುಕೊಂಡು ಲಿಂಗಪೂಜೆ ಜಂಗಮ ದಾಸೋಹಗಳನ್ನು ಮಾಡುತ್ತ ತಾವು ಶಪಥವನ್ನು ಇಸಳೂರಲ್ಲಿ ಮಾಡಿಕೊಂಡು ಬಂದಪ್ರಕಾರ'ಪರಸಮಯಗಳಲ್ಲಿ ಸಾಮರಸ್ಯವನ್ನು ಮಾಡದೆ ಇಸಳೂರುಸೀಮೆಯಲ್ಲಿ ಬೆಳೆದ ಅಡಿಕೆ ಮೆಣಸು ಯಾಲಕ್ಕಿ ಮುಂತಾದ ಪದಾರ್ಥವನ್ನೂ ಮುಟ್ಟದೆ ಆ ಸೋದೆಯ ಸೀಮೆಯ ಕಡೆಗೆ ಮುಖವಾಗಿ ಶಿವಾರ್ಚನೆಯನ್ನೂ ಮಾಡದೆ ಜಡೇದ ರಾ|ಕುಮಾರ ಕೆಂಪಿನ ಸಿದ್ಧಬಸವಸ್ವಾಮಿಗಳವರ ಕುಮಾರ ಸಮಯದ ಭಕ್ತನಾಗಿ ರಾ| ಚಿತ್ರಕಲ್ಲದುರ್ಗದ ಸ್ವಾಮಿಗಳವರ ಶಾಪವನ್ನು ದೂರಮಾಡಿ ಸಕಲೈಶ್ವರ್ಯವುಳ್ಳವರಾಗಿ ಬಸವಪ್ಪಸೆಟ್ಟರು ತಾವು ಹೊಲೆಗೇರಿಯನ್ನು ತೆಗೆಯಿಸಿ ಕಟ್ಟಿಸಿದ ಹೊಸಹುಬ್ಬಳ್ಳಿ ಪೇಟೆಯಲ್ಲಿ ನಿಂತರು ಎಂಬುದಕ್ಕೆ ಆ ಪೇಟೆಯಲ್ಲಿ ಹೊಲೆಯರ ದೇವರು ಇದ್ದು ಇವತ್ತಿಗೂ ಆ ಪೇಟೆಯಲ್ಲಿ ಇರುವ ದೇವರಿಗೆ ವರುಷ ಒಂದಕ್ಕೆ ಪೂಜಿಸಿ ಹಬ್ಬವನ್ನು ಹೊಲೆಯರು ಮಾಡುವದೇ ಸಾಕ್ಷಿಯು.

ಹಿಂದೆ ರಾ| ಕುಮಾರ ಕೆಂಪಿನಸಿದ್ಧಬಸವಸ್ವಾಮಿಗಳವರು ಸೋದೇಸೀಮೆ ಇಸಳೂರಿಂದ ಬರುವಾಗ್ಗೆ ಆ ಸೀಮೆಯಲ್ಲಿ ಬೆಳೆದ ಪದಾರ್ಥವಾದ ಅಡಿಕೆ ಮೆಣಸು ಯಾಲಕ್ಕಿ ಸಹ ಮುಟ್ಟದಿರುವದು ಪರಸಮಯದ ಗಣಂಗಳಲ್ಲಿ ಸಾಮರಸ್ಯ ಮಾಡದೆ ಇರುವುದು ಆ ಸೋದೆ ಸೀಮೆಯ ಕಡೆಗೆ ಮುಖವಾಗಿ ಶಿವಾರ್ಚನೆಮಾಡದೆ ಇರುವುದು ಇವತ್ತಿಗೂ ಆ ಬಸವಪ್ಪಸೆಟ್ಟರು ರಾ|ಜಡೇದಸನ್ನಿಧಾನದಿಂದ ಆ ವ್ರತವನ್ನು ಸಾಷ್ಟಾಂಗವನ್ನು ಹಾಕಿ ಒಪ್ಪಿಕೊಂಡ ಪ್ರಕಾರ ರಾ| ಬಸವಪ್ಪ ಸೆಟ್ಟರ ಮನೆತನದ ಅವರ ವಂಶಿಕರು ನಡೆಸುವುದೇ ಸಾಕ್ಷಿಯು.

ಶಾಲಿವಾಹನ ಶಕೆ ವರುಷ ೧೫೩೬ನೆಯ ವಿಜಯನಾಮ ಸಂವತ್ಸರದ ಚೈತ್ರಬಹುಳ ೧೦ ಯಲ್ಲು. ರಾ|| ಕೆಳದಿ ಸಂಸ್ಥಾನದ ದೊರೆಗಳಾದ ಶ್ರೀ ಸದಾಶಿವರಾಯ ನಾಯಕರ ವಂಶೋದ್ಭವರಾದ ಸಿದ್ದಪ್ಪನಾಯಕರ ತನುಜರು, ಶಿವಪ್ಪನಾಯಕರು, ಇವರ ಪುತ್ರರು, ಸೋಮಶೇಖರ ನಾಯಕರು, ಇವರ ಧರ್ಮಪತ್ನಿಯರಾದ ಚನ್ನಮ್ಮಾಜಿಯವರ ಪುತ್ರರು ಬಸವಪ್ಪನಾಯಕರು, ಇವರು ಮಹಾಜ್ಞಾನಿಗಳಾದ್ದರಿಂದ ಮುಂದೆ ತಮ್ಮ ವಂಶವು ಬೆಳೆಯಬಾರದು, ಏಕೆಂದರೆ ತಮ್ಮ ವಂಶದಲ್ಲಿ ದುಷ್ಟ ಪುತ್ರರು ಹುಟ್ಟಿದರೆ ತಮ್ಮ ವಂಶಕ್ಕೆ ಕೊರತೆ ಬರುತ್ತದೆ, ಎಂತ ನಿಶ್ಚಯಿಸಿ ಈ ಬಸವಪ್ಪನಾಯಕರು ತಮ್ಮ ಅರಮನೆಯಲ್ಲಿ ಕತ್ತಿಯ ಅಲಗಿನ ಸಿಂಹಾಸನವನ್ನು ಮಾಡಿಸಿ ಆ ಬಳಿಕ ಆ ದೊರೆಗಳು ಸಕಲ ದೇಶಗಳಲ್ಲಿ ಇರುವ ಹರ ಗುರು ಚರಮೂರ್ತಿಗಳನ್ನು ಬಿನ್ನಹಪತ್ರಮುಖದಿಂದ ಕರಸಿಗೊಂಡು ಸಾಷ್ಟಾಂಗ ಪ್ರಣುತನಾಗಿ ಪ್ರಸ್ತ ಉತ್ಸವಗಳಾದ ಬಳಿಕ ಆ ಗುರು ಚರಮೂರ್ತಿಗಳಿಗೆ ಭಯಭಕ್ತಿಯಿಂದ ಶರಣಾಗತನಾಗಿ ಅರಿಕೆ ಮಾಡಿಕೊಂಡದ್ದು ಏನೆಂದರೆ

ನನ್ನ ಭಕ್ತಿಗೋಸ್ಕರ ನಮ್ಮ ಅರಮನೆಯಲ್ಲಿ ಇರುವ ಕತ್ತಿಯ ಅಲಗಿನ ಸಿಂಹಾಸನದ ಮೇಲೆ ಗಣಂಗಳನ್ನು ಮೂರ್ತ ಮಾಡಿಸಿ ಪಾದಪೂಜೆ ಮಾಡಿಸಬೇಕೆಂಬ ನನ್ನ ಅಪೇಕ್ಷೆ ಅದೆ. ಇದನ್ನು ನಡಸಿಕೊಡಬೇಕೆಂದು ಬಂದ ಗುರುಚರಮೂರ್ತಿಗಳಿಗೆ ಸಾಷ್ಟಾಂಗವನ್ನು ಹಾಕಲು, ಆ ಕತ್ತಿಯ ಅಲಗಿನ ಸಿಂಹಾಸನವನ್ನು ನೋಡಿದ್ದರಿಂದ ಆ ಗಣಂಗಳೊಳಗೆ ಯಾರಿಂದಲೂ ಆ ಸಿಂಹಾಸನವನ್ನು ಏರುವುದಕ್ಕೆ ಆಗದಕಾರಣ ಆ ದೊರೆಗಳ ಬಿನ್ನಹವನ್ನು ಒಪ್ಪಿ ಕೊಳ್ಳಲಿಲ್ಲವಾದ ಕಾರಣ ಆ ದೊರೆಗಳಿಗೆ ನಾನು ಈ ಸಿಂಹಾಸನವನ್ನು ನಿರ್ಮಿಸಿದ್ದು ವ್ಯರ್ಥವಾಯಿತು ಎಂದು ವ್ಯಸನ ಪಟ್ಟದ್ದರಿಂದ ಆ ಗಣಂಗಳ ಪೈಕಿ ರಾ|| ಕೆಂಪಿನಸಿದ್ಧಬಸವಸ್ವಾಮಿಗಳವರ ಮರಿದೇವರಾದ ಬಸವಲಿಂಗಪ್ಪನವರೆಂಬ ವಿರಕ್ತಮೂರ್ತಿಗಳು ಆ ಕೆಳದಿಯ ಅರಸನಾದ ಬಸವಪ್ಪನಾಯಕರಿಗೆ ಅಪ್ಪಣೆಕೊಟ್ಟದ್ದು ಏನೆಂದರೆ, ನೀನು ನಿರ್ಮಿಸಿದ ಅಲಗಿನ ಸಿಂಹಾಸನದ ಮೇಲೆ ನಿನ ಭಕ್ತಿಗೋಸ್ಕರವಾಗಿ ಮೂರ್ತ ಮಾಡುತ್ತೇನೆ. ಆದರೆ ಅಲಗಿನ ಸಿಂಹಾಸನದ ಮೇಲೆ ನಾವು ಮೂರ್ತಮಾಡಲು ನಿನ್ನ ವಂಶವು ನಾಶವಾಗುವದು. ಇದಕ್ಕೆ ಏನು ಮಾಡಬೇಕು, ಎಂದು ಆ ದೊರೆಗಳಿಗೆ ಅಪ್ಪಣೆಕೊಡಲು ಆ ದೊರೆಗಳು ನನ್ನ ಅಪೇಕ್ಷೆ ಅದೇ ಪ್ರಕಾರ ಇದ್ದದ್ದರಿಂದ ಆ ಸಿಂಹಾಸನ

ವನ್ನು ನಿರ್ಮಿಸಿ ಇದ್ದೇನೆ. ಆದರ ಮೇಲೆ ಮೂರ್ತವನ್ನು ಮಾಡಬೇಕೆಂ ಡು ಆ ದೊರೆಗಳು ಬಹು ಬಗೆಯಿಂದ ಸಾಷ್ಟಾಂಗ ಪ್ರಣಾತನಾಗಿ ಅಂಕೆ ಮಾಡಿಕೊಂಡದ್ದರಿಂದ ಆ ಬಸವಪ್ಪನಾಯಕರ ಭಕ್ತಿಗೆ ಮೆಚ್ಚಿ ರಾ| ಬಸ ವಲಿಂಗಪ್ಪನವರು ಆ ಸಿಂಹಾಸನದ ಮೇಲೆ ಮೂರ್ತಮಾಡಲು ದೊರೆ ಗಳು ಪಾದಪೂಜೆಯನ್ನು ಮಾಡಿಸಿ ಗಣತೃಪ್ತಿ ಆದ ಬಳಿಕ ರಾ| ಬಸ ವಲಿಂಗಪ್ಪನವರನ್ನ ಅಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಉ ತ್ಸಹಂಗೊಳಿಸಿ ಆ ಬಳಿಕ ದೊರೆಗಳು ಬಸವಲಿಂಗಪ್ಪನವರಿಗೆ ಸದರಿ ಉ ತ್ಸವ ಮಾಡಿಸಿದ ೭೨ ಬಿರುದುಗಳನ್ನು ಹಾಗೂ ತಮ್ಮ ಭಕ್ತಿಯಿಂದ ನ ಗರದಲ್ಲಿ ಮೂರು ಭವಂತಿ ಮಠವನ್ನು ಕಟ್ಟಿಸಿ ಆ ಮಠಕ್ಕೆ ನಾಲ್ಕು ಗ್ರಾ ಮಗಳನ್ನೂ ಇನಾಮು ಕೊಟ್ಟು ಒಪ್ಪಿಸಲು, ಆ ಬಸವಲಿಂಗಪ್ಪನವರು ಮ ಹಾವೈರಾಗ್ಯ ಪುರುಷರು, ಆದ್ದರಿಂದ ಆ ಮಠದಲ್ಲಿ ತಮ್ಮ ಮರಿದೇವರಾದ ಚನ್ನಬಸವಪ್ಪನವರನ್ನು ಇಟ್ಟು, ತಮಗೆ ಆ ದೊರೆಗಳು ಒಪ್ಪಿಸಿದ ಅಂದೋ ಳಿಕ ಮುಂತಾದ ೭೨ ಬಿರುದುಗಳನ್ನು ರಾ| ತಮ್ಮ ಗುರುಗಳಾದ ಕೆಂಪಿ ನಸಿದ್ಧಬಸವಸ್ವಾಮಿಗಳವರ ಸನ್ನಿಧಾನಕ್ಕೆ ಒಪ್ಪಿಸಿ ಆ ಮೇಲೆ ರಾ| ಬಸ ವಲಿಂಗಪ್ಪನವರು ದೇಶಾಟನವನ್ನು ಮಾಡಿ ಸಾಗರದಲ್ಲಿ ಇರುವ ಸ್ಮಶಾನ ಗಟ್ಟಿಯ ಮಠಕ್ಕೆ ಬಂದು ಐಕ್ಯವಾದರು. ಇವರ ಗದ್ದುಗೆ ಅದೇ ಮಠದಲ್ಲಿ ಇರುತ್ತದೆ.

ಆ ಬಸವಲಿಂಗಪ್ಪನವರು ಮಹಿಮಾ ಪುರುಷರಾಗಿ ನಗರದ ಸಂಸ್ಥಾನವಾದ ಕೆಳದಿ ಬೂದಿಬಸವಪ್ಪನಾಯಕರಿಂದ ೭೨ ಬಿರುದುಗಳು ಪಡೆದು ರಾ| ಕೆಂಪಿನಸಿದ್ಧಬಸವಸ್ವಾಮಿಗಳವರ ಸನ್ನಿಧಾನಕ್ಕೆ ಒಪ್ಪಿಸಿದರು ಎಂಬುದಕ್ಕೆ ರಾ| ಬಸವಲಿಂಗಪ್ಪನವರಿಗೆ ದೊರೆಗಳು ಸದರಿ ಬಿರುದುಗಳ ದೆಸೆಯಿಂದ ತಾಮ್ರದ ಶಾಸನವನ್ನು ಪಡೆದ ಶಾಸನವು ಆ ಬಿರುದುಗಳ ಪೈಕಿ ನಗಾರಿ ಡಂಕೆ ಕಾಯಿಕೋಲು ದೀವಟಗಿ ಚಾಮರ ಬೆಳ್ಳಿಯ ಬೆತ ಪಲ್ಲಕ್ಕಿ ನೆಗಳುಮುಖ ವಗೈರೆ ಬಿರುದುಗಳ ಮೇಲೆ ಇರುವ ಕೆಳದಿ ದೊ ರೆಗಳ ಹೆಸರುಗಳು ಇರುವುದೇ ಸಾಕ್ಷಿಯು.

ಆ ಬಳಿಕ ರಾ| ಕೆಂಪಿನಸಿದ್ಧಬಸ ವ ಸ್ವಾಮಿಗಳವರು ಜಡೆ ತೆಲಗಡ್ಡೆ ಸೀಮೆ ವಗೈರೆ ಸ್ಥಲ ಪರಸ್ಥಲದ ದೇವಭಕ್ತರುಗಳನ್ನು ತಮ್ಮ ಸನ್ನಿಧಾನಕ್ಕೆ ಕರಸಿಕೊಂಡು ಅವರ ಸಮಕ್ಷಮ ದಲ್ಲಿ ತಮ್ಮ ಶಿವಾನುಭಾವ ಚರಂತಿಗೆಯನ್ನು ತಮ್ಮ ಮರಿದೇವರಾದ ರಾ| ಆಲೂರು ಬಸವಲಿಂಗಸ್ವಾಮಿಗಳವರಿಗೆ ಕೊಟ್ಟು ಅವರನ್ನು ಶೂನ್ಯ ಸಿಂ

ಹಾಸನಾರೂಢರನ್ನು ಮಾಡಿಸಿ ಆ ಬಳಿಕ ೭೨ ಬಿರುದುಗಳೊಡನೆ ರಾ॥ ಬಸವಲಿಂಗಸ್ವಾಮಿಗಳವರನ್ನು ಉತ್ಸವವನ್ನು ಹೂಡಿಸಿ ಆ ಮೇಲೆ ಸಮಸ್ತ ದೇವಭಕ್ತರುಗಳಿಗೆ ತಿಮ್ಮಂತೆ ಈ ಬಸವಲಿಂಗಸ್ವಾಮಿಗಳವರಿಗೆ ಸರ್ವ ಸಾಭಿಮಾನವನ್ನು ನಡಸಿಕೊಡಬೇಕೆಂದು ಅಪ್ಪಣೆಯನ್ನು ಕೊಟ್ಟು ಕೆಳದಿ ಸೀಮೆ ವರದಾನದೀತೀರ ಜಟಾಪುರ ಬೃಹನ್ಮಠದಲ್ಲಿ ರಾ| ಕುಮಾರಕೆಂಪಿನ ಸಿದ್ಧಬಸವಸ್ವಾಮಿಗಳವರು ಲಿಂಗೈಕ್ಯರಾದರು. ಇವರ ಗದ್ದುಗೆ ಜಡೇದ ಮಠದಲ್ಲಿ ಇರುತ್ತದೆ.

ಆ ಮೇಲೆ ರಾ| ಕುಮಾರಕೆಂಪಿನ ಅಲೂರ ಬಸವಲಿಂಗ ಸ್ವಾಮಿಗಳವರು ಜಡೇಮಠದಲ್ಲಿ ಲಿಂಗಪೂಜೆ ಜಂಗಮ ದಾಸೋಹದೊಡನೆ ಸ್ವಾಮಿಗಳವರು ಗಣಸಮೂಹಗಳಿಂದ ಇರುತ್ತಾ ಮಠದ ದಾಸೋಹಕ್ಕೆ ಜಡೆ ಮುಂತಾದ ಸೀಮೆಗಳಲ್ಲಿ ಬರತಕ್ಕ ದೀಪಾರಾಧನೆ ಕಾಣಿಕೆ ವರ್ಷಾಶನದ ಬತ್ತ ಆಯದ ಬತ್ತ ಎತ್ತಿಸುವದಕ್ಕೆ ಆಚಾರ ವಿಚಾರ ದಂಡ ಖಂಡನೆ ಆಚಾರದಬಾಬತು ಕಾಣಿಕೆ ಮುಂತಾದ್ದು ಎತ್ತಿಸುವದಕ್ಕೆ ಜಡೇದ ಮಠದಲ್ಲಿ ತಮ್ಮ ಕಡೆಯಿಂದ ಒಬ್ಬರು ಚರಮೂರ್ತಿಗಳನ್ನೂ ಕೆಲವು ಗಣಂಗಳನ್ನೂ ಇಟ್ಟು ತಾವು ಜಡೇದಿಂದ ೭೨ ಬಿರುದುಗಳೊಡನೆ ಗಣಸಮೂಹಂಗಳಿಂದ ದೇಶಾಟನಾರ್ಥವಾಗಿ ಸ್ವಾಮಿಗಳವರು ದೇಶಮಧ್ಯದಲ್ಲಿ ದಯಮಾಡಿಸಿ ದೇವಭಕ್ತರುಗಳಿಂದ ಅನೇಕ ಮಠ ಮಾನ್ಯಗಳನ್ನು ಸಂಪಾದಿಸಿ ಮುನವಳ್ಳಿಗೆ ದಯಮಾಡಿಸಲು,

ಆ ಊರ ಧಣಿಯುವರಾದ ಸುಬ್ಬರಾವ್ ಸಿಂಧ್ಯ ಹೆಂಡತಿ ಅನಂದಿಬಾಯಿ ಇವರ ಮಗನಾದ ಮುರಾರಿರಾವ್ ಸಿಂಧ್ಯಇವರಿಗೆ ಘನರೋಗವು ಸಂಭವಿಸಿ ಪ್ರಾಣಾಂತಕವು ಬಂದಕಾರಣ ಈ ಸುಬ್ಬರಾವ್ ಸಿಂಧ್ಯಇವರು ರಾ॥ ಸದರಿ ಸ್ವಾಮಿಗಳವರ ಕಡೆಯಿಂದ ಭಸ್ಮಪಾದೋದಕವನ್ನು ಕೊಡಿಸಲು, ಆ ಮುರಾರಿರಾವ್ ಸಿಂಧ್ಯಇವರ ರೋಗವು ಪರಾಭವವಾದ್ದರಿಂದ ಸದರಿ ಸುಬ್ಬರಾವ್ಸಿಂಧ್ಯಇವರು ತಮ್ಮ ಮಗನಾದ ಮುರಾರಿರಾವ್ ಸಿಂಧ್ಯಇವರು ಅನಂದೀಬಾಯಿ ಇವರ ಹೆಸರಿನಿಂದ ದಾನಪತ್ರವನ್ನು ಬರಸಿ ರಾ| ಬಸವಲಿಂಗಸ್ವಾಮಿಗಳವರಿಗೆ ಒಪ್ಪಿಸಿ ತಮ್ಮ ಮುನವಳ್ಳಿಗೆ ಶೇರಿದ ಸಿಂದೋಗಿ ಗ್ರಾಮದಲ್ಲಿ ಮಠ ಸರ್ವ ಇನಾಮು ಭೂಮಿಯನ್ನು ನಮಸ್ಕರಿಸಿದರು.

ಈ ಪ್ರಕಾರ ಸ್ವಾಮಿಗಳವರು ಅನೇಕ ಮಹಿಮೆಗಳನ್ನು ಮಾಡಿ ತಮ್ಮ ಅಂತ್ಯಭಾಗದಲ್ಲಿ ಕಡಕೊಳ್ಳದ ಮಂದೇವ

ರಾದ ಸಿದ್ಧಲಿಂಗಪ್ಪನವರಿಗೆ ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ಮಾಡಿ ಅವರಿಗೆ ತಮ್ಮ ಗುರುಗಳ ಅಭಿಧಾನವನ್ನು ಎಂದರೆ ಸಿದ್ಧಬಸವ ಸ್ವಾಮಿಗಳೆಂಬ ಅಭಿಧಾನವನ್ನು ಕೊಟ್ಟು ಕಡಕೊಳ್ಳದಲ್ಲಿ ಶಿವಾಧೀನವಾದ ರು. ಇವರ ಗದ್ದುಗೆ ಅದೇ ಸ್ಥಳದಲ್ಲಿ ಇರುತ್ತದೆ.

ಇವರ ತರುವಾಯದ ಸಿದ್ಧಬಸವಸ್ವಾಮಿಗಳವರು ಗಣ ಸಮೂಹಗಳಿಂದ ಏಳು ಬಿರುದುಗಳೊಡನೆ ದೇಶಾಟನವನ್ನು ಮಾಡುತ್ತ ಜಡೆಯಕ್ಕೆ ದಯಮಾಡಿಸಿ ಶೂನ್ಯ ಸಿಂಹಾಸನಾರೂಢರಾಗಿ ಉತ್ಸಹವೂ ಪ್ರಸ್ತವೂ ಆದ ಬಳಿಕ ಜಡೇದಮಠದಲ್ಲಿ ಲಿಂಗಪೂಜೆ ಜಂಗಮದಾಸೋಹದೊಡನೆ ಇರುತ್ತಾ ಜಡೆ ತೆಲಗಡ್ಡೆ ಸೀಮೆಯ ದೇವಭಕ್ತರು ತಮ್ಮ ಗುರುಗಳಾದ ರಾ॥ ಕೆಂಪಿನಸಿದ್ಧಬಸವಸ್ವಾಮಿಗಳವರಿಗೆ ಬರಸಿಕೊಟ್ಟ ದಾನಪತ್ರದಲ್ಲಿ ಇದ್ದ ಪ್ರಕಾರ ಜಡೆ ತೆಲಗಡ್ಡೆ ಸೀಮೆಗಳಲ್ಲಿ ಇರುವ ದೇವಭಕ್ತರಲ್ಲಿ ತಿರುಗಬಿದ್ದವರಿಗೆ ಬಹಿಷ್ಕಾರವನ್ನು ಕೊಡುತ್ತಾ ತಿರುಗಿಬಿದ್ದ ಜನರು ಶರಣಾಗತರಾಗಲು ಅಪರಾಧ ಕಾಣಿಕೆಸಳನ್ನು ತೆಗೆದುಕೊಂಡು ರಕ್ಷಿಸುತ್ತಾ ಈ ಮಠಕ್ಕೆ ಸೇರುಪಟ್ಟ ಸಕಲ ಮಠಸ್ಥರು ಮತ್ತು ಪರ್ವದಲ್ಲಿ ವರುಷಾಶನ ದೀಪಾರಾಧನೆ ಕಾಣಿಕೆ ರುಸುಮು ಹವ್ಯಕವ್ಯಗಳಲ್ಲಿ ಬರತಕ್ಕ ಬಾಬುಗಳನ್ನು ಸಲ್ಲಿಸಿಕೊಳ್ಳುತ್ತಾ ಆ ಮೇಲೆ ಏಳು ಬಿರುದುಗಳಿಂದ ಗಣಸಮೂಹದೊಡನೆ ದೇಶಾಂತರವನ್ನು ಮಾಡುತ್ತಾ ತೊರಗಲ್ಲಿಗೆ ದಯಮಾಡಿಸಲು,

ಆ ಊರ ದೊರೆಗಳಾದ ಸಿಂಧ್ಯ ಇವರು ಸಕಲ ಸಂಭ್ರಮದಿಂದ ಸ್ವಾಮಿಗಳವರನ್ನು ತನ್ನ ಅರಮನೆಗೆ ಕರಕೊಂಡು ಹೋಗಿ ಸಾಷ್ಟಾಂಗ ಪ್ರಣತನಾಗಿ ಸ್ವಾಮಿಗಳವರಿಗೆ ಅರಿಕೆ ಮಾಡಿಕೊಂಡದ್ದು ಏನೆಂದರೆ

ನನ್ನ ಅರಮನೆಯಲ್ಲಿ ಎಲ್ಲ ಮಾತಿನಿಂದ ಕ್ಷೇಮವುಇಲ್ಲ. ಇದು ಏತರಿಂದ ಹೀಗೆ ಆಗುವದೆಂದು ಆ ಸಿಂಧ್ಯ ಇವರು ಅರಿಕೆ ಮಾಡಿಕೊಳ್ಳಲು ಸ್ವಾಮಿಗಳವರು ಅಪ್ಪಣೆಕೊಟ್ಟದ್ದು ಏನೆಂದರೆ

ನಿನ್ನ ಅರಮನೆಯಲ್ಲಿ ಈ ಸ್ಥಲದ ವೀರಭದ್ರ ದೇವರ ಕತ್ತಿಯಾದ ಹತಾರವು (ಖಡ್ಗವು] ಇರುವುದರಿಂದ ಜಯವಿಲ್ಲ, ಎಂದು ಅಪ್ಪಣೆ ಆಗಲು ಆ ಕೂಡಲೆ ತನ್ನ ಮನೆಯಲ್ಲಿ ಇದ್ದ ಆ ಸದರಿ ಹತಾರಗಳನ್ನು ಸನ್ನಿಧಿಗೆ ಸಿಂಧ್ಯ ಇವರು ಒಪ್ಪಿಸಿ ಮಾನ ಸನ್ಮಾನಗಳನ್ನು ಮಾಡಲು,

ಅಲ್ಲಿ ದೇವಭಕ್ತ
ರಿಂದ ಕಾಣಿಕೆಯನ್ನು ಒಪ್ಪಿಸಿಕೊಂಡು ಆ ಬಳಿಕ ಆ ದೇಶದಲ್ಲಿ ಇರುವ ಹಿಂದೆ ತಮ್ಮ ಗುರುಗಳಾದ ರಾ|| ಬಸವಲಿಂಗಸ್ವಾಮಿಗಳವರು ಮಿರ್ಜಿಗೆ ದಯಮಾಡಿಸಿದಾಗ್ಗೆ ಆ ಊರ ಧಣಿಯಾದ ಪಟವರ್ಧನನು ಸ್ವಾಮಿಗಳವರನ್ನು ತನ್ನ ಅರಮನೆಗೆ ಕರಕೊಂಡು ಹೋಗಿ ಶರಣಾಗತನಾಗಿ ತನ್ನ ಮಗನಿಗೆ ಕ್ಷಯರೋಗ ಇರುವುದೆಂದು ಅರಿಕೆ ಮಾಡಿಕೊಳ್ಳಲು ಸ್ವಾಮಿಗಳು ಭಸ್ಮವನ್ನು ಕೊಟ್ಟು ಆ ಭಸ್ಮವನ್ನು ೪೮ ದಿವಸ ಸಾಧಿಸಲು ಆ ರೋಗವು ಹೋಗುವುದೆಂದು ಅಪ್ಪಣೆ ಆದ್ದರಿಂದ ಆ ಪ್ರಕಾರ ಸಾಧಿಸಲು ಆ ರೋಗವು ಹೋಯಿತು. ಆಗ್ಗೆ ಆ ಮಿರ್ಜಿಧಣಿಯು ತನ್ನ ಕುದುರೆಪಾಗಾರದಲ್ಲಿ ಇದ್ದ ಗಬ್ಬದ ಕುದುರೆಯುಎಂತಹ ಮರಿಯನ್ನುಹಾಕುತ್ತದೆ ಎಂತ ಸ್ವಾಮಿಗಳವರನ್ನು ಕೇಳಿದ್ದರಿಂದ ಅವರು ಅಪ್ಪಣೆ ಕೊಟ್ಟಪ್ರಕಾರ(ಪಂಚಕಲ್ಯಾಣಿಯಾದ ಗಂಡು ಮರಿ ಹಾಕುತ್ತದೆ ಎಂತ ಹೇಳಿದಂತೆ)ಆ ಕುದುರೆಯುಮರಿಯನ್ನುಹಾಕಲು ಆಕುದುರೆಯ ಹೆಸರಿನಮಠವನ್ನು ಮಾಡಿಸಿದನು.

ಮಿರ್ಜಿಯಲ್ಲಿ
ಇರುವ ಈ ಮಠದಲ್ಲಿ ಕೆಲವು ದಿವಸ ಆ ಊರ ಭಕ್ತರ ಭಕ್ತಿಯಲ್ಲಿ ಇದ್ದು ಅಲ್ಲಿಂದ ಮುರುಗೋಡಿಗೆ ದಯಮಾಡಿಸಲು. ಆ ಊರ ಸಿದ್ದಪ್ಪಸೆಟ್ಟರಿಗೆ ಮಕ್ಕಳ ಫಲವಿಲ್ಲದಕಾರಣ ಸ್ವಾಮಿಗಳವರಿಗೆ ಅರಿಕೆಮಾಡಿಕೊಳ್ಳಲು ಅಪ್ಪಣೆ ಪ್ರಕಾರ ಆ ಸೆಟ್ಟರಿಗೆ ಮಕ್ಕಳಫಲವಾದ್ದರಿಂದ ಹಿಂದೆ ಈಸ್ವಾಮಿಗಳವರ ಗುರುಗಳಾದ ರಾ|| ಬಸವಲಿಂಗ ಸ್ವಾಮಿಗಳವರಿಗೆ ಸದರಿ ಸೆಟ್ಟರು ನಮಸ್ಕಾರವನ್ನು ಮಾಡಿದ ಮಠವನ್ನು ಆ ಸೆಟ್ಟರು ಕಲ್ಲು ಮಠವ ಕಟ್ಟಿಸಿ ನಮಸ್ಕಾರವನ್ನು ಮಾಡಿದ ಕಾರಣ ಆ ಮಠದಲ್ಲಿ ತಮ್ಮ ಸನ್ನಿಧಿಯಲ್ಲಿ ಇರುವ ಒಬ್ಬಮೂರ್ತಿಗಳನ್ನು ಇಟ್ಟು

ಈ ಪ್ರಕಾರ ಆ ಸೀಮೆಗಳಲ್ಲಿ ಇರ್ಪ
ವ ತಮ್ಮ ಮಠಗಳನ್ನು ಉದ್ಧಾರವನ್ನು ಮಾಡುತ್ತಾ ಜಡೆಯಕ್ಕೆ ದಯಮಾಡಿಸಿ ಜಡೇದಿಂದ ಕರಿಬಸವಪ್ಪನವರಿಗೆ ಚರಂತಿಗೆಯನ್ನು ಕೊಟ್ಟು ತಮ್ಮ ಸೊರಬದ ಮುರಿಗಿ ಮಠಕ್ಕೆ ಕಳಿಸಿದನಂತರ ಇತ್ತಲಾಗಿ ಹಾನಗಲ್ಲ ತಾಲ್ಲೂಕು ಆಲೂರ ವಿರಕ್ತಮಠದಲ್ಲಿ ಇರುವ ತಮ್ಮ ಮರಿಗಳಾದ ಕರಿಬಸವಪ್ಪನವರೆಂಬ ಚರಮೂರ್ತಿಗಳು ಶಿವಾಧೀನವಾಗಲು, ಆಮಠದಲ್ಲಿ ಇರುವ ಚನ್ನವೀರಮರಿ ಎಂಬಾತನು ಆ ಊರ ಭಕ್ತರ ಮಿಲಾಫೆ ಮಾಡಿ ಕೊಂಡು ಪರಭಾರೆ ಚರಮೂರ್ತಿಗಳ ಕಡೆಯಿಂದ ಚರಂತಿಗೆ ತೆಗೆದುಕೊಳ್ಳಲು

ಈ ವರ್ತಮಾನವು ರಾ|ಜಡೇದಸ್ವಾಮಿಗಳವರಿಗೆ ತಿಳಿದ ಕಾರಣ ಈ ಸ್ವಾಮಿಗಳು ಆಲೂರು ಬಳಿಯಲ್ಲಿರುವ ತಮ್ಮ ಕಲ್ಲಾಪುರದ ಮಠಕ್ಕೆ ದಯಮಾಡಿಸಿ. ಆ ಪರಭಾರೆ ಚರಂತಿಗೆ ತೆಗೆದುಕೊಂಡ ಚನ್ನವೀರಪ್ಪನವರ ಚರಂತಿಗೆಯನ್ನು ಸುಳ್ಳುಮಾಡಿ ಆಲೂರ ವಿರಕ್ತಮಠಕ್ಕೆ ಶಿವಲಿಂಗಪ್ಪನವರಿಂಬವರಿಗೆ ಚರಂತಿಗೆಯನ್ನು ಕೊಡಲು,ಇದರ ಉದ್ದಿಶ್ಯ ಆಲೂರು ಹಾವಣಿಗಿ ಬಾಳೂರು ವಗ್ಯೆರೆ ಗ್ರಾಮುಗಳ ದೇವಭಕ್ತರು ಕೂಡಿಸದಂ ಚನ್ನವೀರಪ್ಪನವರನ್ನು ರಾ| ಕೆಂಪಿನಸಿದ್ಧಬಸವಸ್ವಾಮಿಃಗಳವರ ಸನ್ನಿಧಾನಕ್ಕೆ ಕರಕೊಂಡು ಬಂದು ಸಾಷ್ಟಾಂಗವನ್ನು ಹಾಕಿಸಿ ತಾವು ಸಮಸ್ತರೂ ಶರಣಾಗತರಾಗಿ ಸನ್ನಿಧಾನಕ್ಕೆ ....

(ಕಾಗದಗಳ ಸುರುಳಿಗಳು ಸಾಲ್ಕರಲ್ಲಿ ಇದ್ದಂತೆ ಈ ನಿರಂಜನ ವಂಶ ರತ್ನಾಕರದ ೨ನೆಯ ಭಾಗವನ್ನು ಮುದ್ರಿಸಿದುದಾಗಿದೆ.

ಈ ಸುರುಳಿಗಳು ಹಾನಗಲ್ ತಾಲ್ಲೂಕು ಆಲೂರಲ್ಲಿ ರಾ|| ತುಪ್ಪದ ದುಂಡಪ್ಪಸೆಟ್ಟರಲ್ಲಿ ಇದ್ದವುಗಳು. ಶಿವಾನುಭವ ಪತ್ರಿಕೆಯ ಸಂಪಾದಕರಾದ ರಾ|| ಸಾ|| ಫ. ಗು. ಹಳಕಟ್ಟಿ ಇವರು ಪ್ರಕಟಿಸಿದ ನಿರಂಜನ ವಂಶ ರತ್ನಾಕರವು, "ಶಿಖಾಪಟ್ಟದ ಮುರುಗಾಸ್ವಾಮಿಗಳವರು ಕುಮಾರಸ್ವಾಮಿಗಳವರನ್ನು ಶಿವಾನುಭಾವ ಪಟ್ಟದ ಸ್ವಾಮಿಗಳನ್ನಾಗಿ ಮೆರವಣಿಗೆ ಮಾಡಿಸಿದರು." ಎಂಬಲ್ಲಿಗೆ ಮುಗಿಯುತ್ತಾ ಇದ್ದು ಇದರಲ್ಲಿ "ಸದರೀ ಕುಮಾರ ಸ್ವಾಮಿಗಳವರೂ ಮುರುಗಾಸ್ವಾಮಿಗಳದರೂ ಸಹಾ ಚಿತ್ರದುರ್ಗದಲ್ಲಿ ದಸರಾ ಉತ್ಸವದಲ್ಲಿ ಮೆರೆವಣಿಗೆಯುನ್ನು ಹೊಂದಿದರು." ಎಂಬಲ್ಲಿಂದ ಆರಂಭವಾಗಿರುವುದರಿಂದ ಇದು ನಿರಂಜನವಂಶ ರತ್ನಾಕರದ ೨ನೆಯ ಭಾಗವೆಂದು ತಿಳಿಯಬೇಕಾಗಿದೆ. ಈ ಭಾಗವು ಇಲ್ಲಿಗೆ ಮುಗಿದಿದೆ)

ಪ್ರಕಾಶಕ.

ಸದ್ಧರ್ಮ ದೀಪಿಕೆ, ಹಾವೇರಿ.



ನಿರಂಜನ ವಂಶ ರತ್ನಾಕರ

ಉಳಿದ ಭಾಗ

(೧) ಶಿವಾನು ಭಾವ ಪಟ್ಟದ ಶ್ರೀ॥ ॥ಗಳವರವಿಷಯ-



ಸಾಗರದ ಸ್ಮಶಾನಗಟ್ಟಿ ಮಠದ ಬಸವಲಿಂಗಪ್ಪನವರಿಗೆ ನಗರದ ರಾಜನು ತನ್ನ ಸ್ಥಲದಲ್ಲಿ ಮೂರು ಭವಂತಿ ಮಠವಕಟ್ಟಿಸಿ ಆ ಮಠಕ್ಕೆ ಮೂರು ಗ್ರಾಮುಗಳ ಇನಾಮು ಹಾಕಿಕೊಟ್ಟು ನಮಸ್ಕರಿಸಿ ಆಂದೋಲಿಕ ಮುಂತಾದ ೭೨ ಬಿರದುಗಳ ಕೊಡಲು ಇವುಗಳನ್ನು ತಾವು ಇಟ್ಟುಕೊಳ್ಳದೆ ರಾ॥ ಶಿವಾನುಭಾವ ಪಟ್ಟದ ಆಲೂರ ಬಸವಲಿಂಗಸ್ವಾಮಿಗಳವರಿಗೆ ಒಪ್ಪಿಸಿ ತಾವು ಸಾಗರಕ್ಕೆ ದಯಮಾಡಿಸಿ ಆ ಸ್ಮಶಾನಗಟ್ಟಿ ಮಠದಲ್ಲಿ ಬಯಲಾದರು.

ಈ ಬಸವಲಿಂಗಪ್ಪನವರ ತೋರ ಗದ್ದುಗೆಯು ಸಾಗರದಲ್ಲಿ ಇರುತ್ತದೆ. ಇವರು ಸಂಪಾದಿಸಿದಮಠ ಇನಾಮು ಗ್ರಾಮುಗಳು ಜಡೇದ ಮಠಕ್ಕೆ ನಡೆದು ಆ ಸಂಸ್ಥಾನವು ಖಾಲಸಾತು ಆದಮೇಲೆ ಆಗ್ಯೆ ಆ ಮಠವೂ ಇನಾಮುಗಳೂ ಖಾಲಸಾತ ಆದವು. ಇವತ್ತಿಗೂ ಆ ಮಠ ಆ ಗ್ರಾಮುಗಳು ನಗರದಲ್ಲಿ ಇದ್ದಾವೆ.

ಸದರಿ ಬಸವಲಿಂಗ ಸ್ವಾಮಿಗಳ ಮರಿದೇವರಾದ ಚನ್ನಬಸವಪ್ಪನವರು ಸಿಗ್ಗಾವಿಯಲ್ಲಿ ಮಠವನ್ನುಮಾಡಿ ತಮ್ಮ ಮರಿಗಳಿಗೆಸ್ಥಲಕೊಡಿಸಿ ದೇಶಗಳಮೇಲೆ ಮಠಗಳನ್ನು ಮಾಡಿ ಬಯಲಾದರು. ಇವರದು ಪರದೇಶಿ ಮನೆತನವು ಇದ್ದು ಮಧ್ಯದಲ್ಲಿ ಆ ಮಠದ ಮರಿಗಳಿಗೆ ಚರಂತಿಗೆಆಗಿದ್ದಕಾರಣ ಈಗ ಚರಂತೀಮಠ ಎನಿಸಿಕೊಂಡು ಇರುತ್ತದೆ.

ಪರದೇಶಪ್ಪನವರು ಸವಣೂರ ಸೀಮೆಯಲ್ಲಿ ಬೊಮ್ಮನಹಳ್ಳಿಯೊಳಗೆ ಮಠವನ್ನುಮಾಡಿ ತಮ್ಮ ಮರಿಗಳಿಗೆ ಸ್ಥಲಕೂಡಿಸಿ ದೇಶಂಗಳಲ್ಲಿ ಕೆಲವು ಮಠಗಳನ್ನು ಪಡೆದು ಬಯಲಾದರು. ಇವರ ಮಠವು ಪರದೇಶಿ ಮಠವಿದ್ದು ಮಧ್ಯದಲ್ಲಿ ಚರಂತಿಗೆಮಠವಾಗಿದೆ.

ಇನ್ನುಳಿದ ವಿರಕ್ತಮೂರ್ತಿಗಳು ದೇಶಗಳಲ್ಲಿ ಮಠಗಳನ್ನುಮಾಡಿ ಬಯಲಾದರು. ಇವರ ಸೂತ್ರಿಕರು ದೇಶಂಗಳಲ್ಲಿ ಇದ್ದಾರೆ.

ರಾ| ಕೆಂಪಿನ ಸಿದ್ಧಬಸವ ಸ್ವಾಮಿಗಳವರು ಸಮಯಾಚಾರವು ಭೇದವಾದಬಳಿಕ ಹುಬ್ಬಳ್ಳಿ ಬಸವಪ್ಪ ಶೆಟ್ಟರು ಕುಮಾರಸಮಯದ ಭಕ್ತರಾದ್ದರಿಂದ ಇವರ ಕ್ರಿಯಾಚರಣೆಯಬಗ್ಗೆ ತಾವು ಸಲಹಿದ ಮರಿಗಳ ಪೈಕಿ ಗುರುಸಿದ್ಧಪ್ಪನವರನ್ನುಕೊಟ್ಟು ಈ ಉಭಯತರ ಹುಬ್ಬಳ್ಳಿಗೆ ಕಳುಹಿಸಿದ ಮೇಲೆ ರಾ| ಕೆಂಪಿನಸಿದ್ಧಬಸವ ಸ್ವಾಮಿಗಳು ಇವರು ಆಲೂರ ಬಸವಲಿಂಗ ಸ್ವಾಮಿಗಳವರಿಗೆ ತಮ್ಮ ಗುರುಪರಂಪರವಾಗಿ ಬಳಿವಿಡಿದು ಬಂದ ತಮ್ಮ ಶಿವಾನುಭವ ಪಟ್ಟವನ್ನುಮಾಡಿದರು. ಇವರಿಂದ ೫ ಐದು ಚರಂತಿಗೆ ಪುಸ್ತಕವನ್ನುಕೊಟ್ಟ ಚರಮೂರ್ತಿಗಳು, ಐವತ್ತು ಕ್ರಿಯಾ ಮೂರ್ತಿಗಳು, ಇವರ ವಿವರ:—

ಜಡೇದ ಚನ್ನವೀರಪ್ಪನವರು ಡೊಗ್ಗಲವ ರುದ್ರಪ್ಪನವರು ಮಡಿವಾಳಪ್ಪನವರು ಗುರುಸಿದ್ಧಪ್ಪನವರು ಮುನಿಯಪ್ಪನವರು ಮೂರುಸಾವಿರದ ಗುರುಸಿದ್ಧಪ್ಪನವರು ಕುಮಸಿ ನಿರಂಜನಪ್ಪನವರು ನೀಲಕಂಠಪ್ಪನವರು ಕುಮಾರಪ್ಪನವರು ಮುಂತಾದವರು. ಇವರೇ ಸ್ಥಲಕೂಡಿದವಿರಕ್ತ ಮೂರ್ತಿಗಳು. ಇವರಿಗೆ ಸದರಿ ಆಲೂರ ಬಸವಲಿಂಗ ಸ್ವಾಮಿಗಳವರ ಆಜ್ಞಾನುಸಾರವಾಗಿ ನಡಕೊಂಬುವಂತೆ ಅಪ್ಪಣೆಕೊಟ್ಟ ಜಡೆಯದ ಬೃಹನ್ ಮಠದಲ್ಲಿ ಬಯಲಾದರು. ಇವರ ಗದ್ದುಗೆಯು ಜಡೇದಲ್ಲಿ ಅದೆ.

ಗುರುಸಿದ್ಧಪ್ಪನವರು ಮೂರುಸಾವಿರ ವ್ಯಾಕರಣ ಬಂದಕಾರಣ ಮೂರುಸಾವಿರ ಗುರುಸಿದ್ಧಪ್ಪನವರೆಂಬ ನಾಮವು ಬಂದಿತು. ಇವರು ಹುಬ್ಬಳ್ಳಿಯಲ್ಲಿ ಬಸವಪ್ಪ ಸೆಟ್ಟರಿಂದ ಮಠವನ್ನು ಹಿಡಿದು ತಮ್ಮಮರಿಗಳಿಗೆ ಸ್ಥಲಕೂಡಿದ ವಿರಕ್ತರನ್ನುಮಾಡಿ ಬಯಲಾದರು. ಇದು ಪರದೇಶಿಮಠವಿದ್ದು ಮಧ್ಯದಲ್ಲಿ ಆಮಠದ ಮರಿಗಳಪೈಕಿ ಟೊಪ್ಪಿಗೆಸಿದ್ಧಲಿಂಗಪ್ಪನವರೆಂಬ ವಿರಕ್ತರು ಜಡೇದಸ್ವಾಮಿಗಳವರ ಕಡೆಯಿಂದ ಚರಂತಿಗೆ ತೆಗೆದುಕೊಂಡಕಾರಣ ಚರಂತಿಗೆ ಮನೆತನವಾಯಿತು.

ರುದ್ರಪ್ಪನವರು ಹುಬ್ಬಳ್ಳಿಯಲ್ಲಿ ಮಠವನ್ನುಮಾಡಿ ತಮ್ಮ ಮರಿಗಳಿಗೆಸ್ಥಲಕೂಡಿಸಿ ಬಯಲಾದರು. ಇವರ ಮಠ ಹುಬ್ಬಳ್ಳಿಯಲ್ಲಿ ಇದೆ.

ಮಡಿವಾಳಪ್ಪನವರು ರಾಯನಹಳ್ಳ ಮಾವನೂರ ಸ್ಥಳಗಳಲ್ಲಿ ಮಠವನ್ನುಮಾಡಿ ತಮ್ಮಮರಿಗಳಿಗೆ ಕ್ರಿಯಾಮೂರ್ತಿಗಳ ಮಾಡಿ ಬಯಲಾದರು. ಇವರ ಮಠಗಳು ಸದರಿ ಸ್ಥಳಗಳಲ್ಲಿ ಇರುತ್ತವೆ.

ಗುರುಸಿದ್ಧಪ್ಪನವರು ಕಿತ್ತೂರುದೊರೆಗಳ ಭಕ್ತಿಯಲ್ಲಿಇದ್ದು, ಅಲ್ಲಿ

ಮಠಗಳನ್ನು ಮಾಡಿ ತಮ್ಮ ಮರಿಗಳಿಗೆ ಸ್ಥಲವನ್ನು ಕೊಡಿಸಿ ಬಯಲಾದರು. ಇವರದು ಪರದೇಶಿ ಮನೆತನವಿದ್ದು ಮಧ್ಯದಲ್ಲಿ ಜಡೇದ ಸ್ವಾಮಿಗಳವರಿಂದ ಚರಂತಿಗೆಯಂ ಪಡೆದ ಕಾರಣ ಚರಂತಿಗೆ ಮನೆತನವಾಯಿತು.

ಮುನಿಯಪ್ಪನವರು ಸಂಬರಿಗಿಯಲ್ಲಿ ಮಠವನ್ನು ಮಾಡಿ ತಮ್ಮ ಮರಿಗಳಿಗೆ ಸ್ಥಲಕೊಡಿಸಿ ಬಯಲಾದರು. ಇವರ ಮಠ ಸದರಿ ಸ್ಥಳದಲ್ಲಿ ಇದೆ.

ರುದ್ರಾಕ್ಷಪ್ಪನವರು ಹುಬ್ಬಳ್ಳಿಯಲ್ಲಿ ಮಠವನ್ನು ಪಡೆದು ತಮ್ಮ ಮರಿಗಳಿಗೆ ಸ್ಥಲಕೊಡಿಸಿ ಬಯಲಾದರು. ಇತ್ತ ಬಸವಲಿಂಗಪ್ಪನವರಿಂದ ಚರಂತಿಗೆಯಂ ಪಡೆದು ಚರಂತಿಗೆ ಮನೆತನವಾಯಿತು.

ನಿರಂಜನಪ್ಪನವರು ಕುಮುಸಿಯಲ್ಲಿ ಮಠವನ್ನು ಪಡೆದು ಇವರು ತಮ್ಮ ಮಠವನ್ನು ಜಡೇದ ಗುರುಸನ್ನಿಧಿಗೆ ಒಪ್ಪಿಸಿ ಬಯಲಾದರು. ಈ ಮಠವು ಸದರಿ ಸ್ಥಲದಲ್ಲಿ ಇದೆ.

ಕುಮಾರಪ್ಪನವರು ಕುಂಭಕೋಣದ ಸಮೀಪವಾದ ವೃದ್ಧಾಚಲದಲ್ಲಿ ಮಠವನ್ನು ಮಾಡಿ ತಮ್ಮ ಮರಿಗಳಿಗೆ ಸ್ಥಲಕೊಡಿಸಿ ವೃದ್ಧಾಚಲದಲ್ಲಿ ಬಯಲಾದರು. ಇವರ ಗದ್ದುಗೆ ಸದರಿಸ್ಥಲದಲ್ಲಿ ಇದೆ.

ಕೆಂಪಿನ ಶಿವಲಿಂಗಪ್ಪನವರು ಜಡೇದಸ್ವಾಮಿಗಳವರ ಆಜ್ಞೆಯ ಪ್ರಕಾರ ಸದರಿ ಸ್ವಾಮಿಗಳವರ ಆಲೂರ ವಿರಕ್ತಮಠದಲ್ಲಿಇದ್ದರು. ಇವರು ಸಾಕಿದ ಮರಿಗಳಪೈಕಿ ಕರಿಬಸವಪ್ಪನವರು ಯೋಗ್ಯರಾದಕಾರಣ ಈ ಮರಿಯನ್ನು ಸದರಿ ಬಸವಲಿಂಗ ಸ್ವಾಮಿಗಳವರು ತೆಗೆದುಕೊಂಡು ಜಡೇವಲ್ಲಿ ಚರಂತಿಗೆ ಕೊಟ್ಟರು. ಇವರು ಜಡೇದಸ್ವಾಮಿಗಳವರ ಆಜ್ಞಾನುಸಾರವಾಗಿ ಇದ್ದು, ಜಡೇದಮಠಕ್ಕೆ ದೇಶಗಳನ್ನು ಸಂಚರಿಸುತ್ತ ಕಾಣಿಕೆ ಎತ್ತಿ ದಾಸೋಹಕ್ಕೆ ಕಳುಹಿಸುತ್ತಿದ್ದರು.

ನೀಲಕಂಠಪ್ಪನವರು ನೆಲ್ಲೂರ ನಾಡಿಗರಿಂದ ಮಠವನ್ನು ಪಡೆದು ಆ ಮಠವನ್ನು ಜಡೇದ ಗುರುಸನ್ನಿಧಾನಕ್ಕೆ ಒಪ್ಪಿಸಿ ಬಯಲಾದರು. ಆ ಮಠದಲ್ಲಿ ಜಡೇದ ಸ್ವಾಮಿಗಳವರಕಡೆಯಿಂದ ಮರಿಗಳು ನೀತರು.

ಚನ್ನವೀರಪ್ಪನವರು ಹಾವೇರಿ ರಾಹುಪುರದಲ್ಲಿ ಭಕ್ತರಭಕ್ತಿಯಿಂದ ಕಲ್ಲುಮಠವನ್ನು ಕಟ್ಟಿಸಿ ತಾವು ಆ ಮಠದಲ್ಲಿ ಲಿಂಗಪೂಜಾ ಜಂಗಮದಾಸೋಹದೊಡನೆ ಇದ್ದು ಕೆಲವು ದಿವಸಗಳಮೇಲೆ ಹಾವೇರಿ ಹೊಸಪೇಟೆಯಲ್ಲಿ ಒಂದು ಮಠವನ್ನು ಮಾಡಿ ಈ ಎರಡುಮಠವನ್ನೂ ಜಡೇದ ಸನ್ನಿಧಿಗೆ ಒಪ್ಪಿಸಿ ಬಯಲಾದರು. ಈ ಮಠಗಳು ಸದರಿ ಸ್ಥಳದಲ್ಲಿ ಇರುತ್ತವೆ.

ಉಳಿದ ವಿರಕ್ತರು ದೇಶಗಳಲ್ಲಿ ಮಠಗಳನ್ನು ಪಡೆದು ಬಯಲಾದ ರು. ಅವರ ಸೂತ್ರಿಕರು ದೇಶಂಗಳಲ್ಲಿ ಇದ್ದಾರೆ.

ಅನಾದಿ ತೋಂಟದಾರ್ಯರು ಕೊಟ್ಟ ಚರಂತಿಗೆ ಏಳುನೂರು ರಾ| ಮುರಿಗಾ ಸ್ವಾಮಿಗಳು ಕೊಟ್ಟಚರಂತಿಗೆ:-ಸೋಲೂರ ಮಹಂತಪ್ಪನವರು ವಗೈರೆ ಗಣಂಗಳಿಗೆ ನಾಲ್ವತ್ತು ಚರಂತಿಗೆ ಕೊಟ್ಟರು. ರಾ| ಇಮ್ಮಡಿ ಗುರುಸಿದ್ಧ ಸ್ವಾಮಿಗಳು ಐದು ಚರಂತಿಗೆಯನ್ನು ಕೊಟ್ಟರು. ಅಂತು ಸದರಿ ಸ್ವಾಮಿಗಳವರಿಂದ ಈಚೆಗೆ ೪೫ ಚರಂತಿಗೆ ದುರ್ಗದಸ್ವಾಮಿಗಳವ ರುಕೊಟ್ಟರು. ಇವರ ಸೂತ್ರಿಕರು ಇದ್ದಾರೆ. ಜಡೇದ ಸಂಸ್ಥಾನದಿಂದ ೨೫ ಚರಂತಿಗೆ ಆದವು. ಅಂತೂಕೂಡಿ ಎಪ್ಪತ್ತು ಚರಂತಿಗೆ ಆದವು. ಸದರಿ ರಾ| ತೋಂಟದಾರ್ಯ ಸ್ವಾಮಿಗಳವರು ಕೊಟ್ಟ ಚರಂತಿಗೆ ಹಿಡಿ ದು ಏಳುನೂರ ಎಪ್ಪತ್ತು ಚರಂತಿಗೆ ಆದವು. ಇವರ ಸೂತ್ರಿಕರು ದೇಶಂಗಳಲ್ಲಿ ಇದ್ದಾರೆ.

ಮುರಿಗಾಸಮಯಕ್ಕೆ ಚಿತ್ರದುರ್ಗದ ಮಠವೇ ಮೂಲ ಮಠವು. ಕುಮಾರಸಮಯಕ್ಕೆ ಮೂಲಮಠವೇ ಜಡೇದಮಠವು. ಚೀಲಾಳಸಮ ಯಕ್ಕೆ ಮೂಲಮಠ ಡಂಬಳವು. ಉಳಿದ ಸಮಯಗಳು ಚೀಲಾಳಸಮ ಯದಲ್ಲಿ ಕೂಡಿದ ಕಾರಣ ಪ್ರಸಿದ್ಧಿಗೆ ಬರಲಿಲ್ಲ.

....

ಶಿವಾನುಭಾವ ಪಟ್ಟದ ಬಸವಲಿಂಗ ಸ್ವಾಮಿಗಳವರು ಜಡೇದಿಂದ ಹಾನಗಲ್ಲಿಗೆ ದಯಮಾಡಿಸಲು ಅಲ್ಲಿರುವ ಚರಮೂರ್ತಿಗಳಾದ ಫಕೀರ ಪ್ಪನವರು ಹಾನಗಲ್ಲ ದೈವದವರೊಡನೆ ಕೂಡಿಕೊಂಡು ೭-೮ ಬಿರುದುಗ ಳೊಡನೆ ಉತ್ಸವದಿಂದ ಕರಕೊಂಡುಬಂದು ಮಠದಲ್ಲಿ ಸದರಿ ಸ್ವಾಮಿ ಗಳನ್ನು ಇಟ್ಟುಕೊಂಡು ಮಾನ ಸನ್ಮಾನಂಗಳಂ ಮಾಡಿದರು. ಆಲೂರ ದೇ ವಭಕ್ತರುಮುಂತಾದ ಸದರೀ ಚರಮೂರ್ತಿಗಳಾದ ಫಕ್ಕೀರಪ್ಪನವರು ರಾ| ಬಸವಲಿಂಗಸ್ವಾಮಿಗಳವರಿಗೆ ಅರಿಕೆಮಾಡಿಕೊಂಡದ್ದು ಏನೆಂದರೆ:—

ಹಿಂದೆ ರಾ| ಕೆಂಪಿನಸಿದ್ಧಬಸವ ಸ್ವಾಮಿಗಳವರು ನಮ್ಮಗುರುಗ ಳಾದ ಕುಮಾರಪ್ಪನವರಿಗೆ ಈಊರ ವಿರಕ್ತಮಠವನ್ನು ದತ್ತಿಯನ್ನು ಕೊಟ್ಟರು. ಆದರೆ ಈ ಮಠದ ಕೆಳಗಿನ ಚಾಕಿ ಆದರಕೆಳಗಿನ ತೋಟ ಅವುಗಳನ್ನು ಆಶೀರ್ವಾದವ ಮಾಡಬೇಕೆಂದು ಸದರಿ ದೇವ ಭಕ್ತರು ಮುಂತಾದ ಚರಮೂರ್ತಿಗಳು ಅರಿಕೆಮಾಡಿಕೊಂಡದ್ದರಿಂದ ಸದರಿ ಚಾಕಿ ಮತ್ತು ತೋಟವನ್ನು ದತ್ತಿಯನ್ನು ಕೊಟ್ಟು ಆ ಬಳಿಕ

ಸದರಿ ದೇವಭಕ್ತರು ಮುಂತಾದ ಚರಮೂರ್ತಿಗಳಿಂದ ಕಾಣಿಕೆಯನ್ನು ಕೈಕೊಂಡು ಆಲೂರಿಗೆ ದಯಮಾಡಿಸಿ ಅಲ್ಲಿರುವ ಸನ್ನಿಧಿ ಖಾಸ ಚರಮೂರ್ತಿಗಳಾದ ಕರಿಬಸವಪ್ಪನವರು ಮುಂತಾದ ದೇವಭಕ್ತರು ಸಕಲ ಸಂಭ್ರಮ ಉತ್ಸಹಗಳಿಂದ ೭೨ ಬಿರುದುಗಳೊಡನೆ ಕರಕೊಂಡು ಹೋಗಿ ಮಠದಲ್ಲಿ ಇಳಿಸಿದರು. ಆ ಬಳಿಕ ಕರಿಬಸವಪ್ಪನವರು ರಾ|| ಸ್ವಾಮಿಗಳವರಿಗೆ ಅರಿಕೆ ಮಾಡಿಕೊಂಡದ್ದು:-ಈ ಆಲೂರು ಕೆರೆ ಹತ್ತರ ಇರುವುದರಿಂದ ನೀರಿನ ತಂಪಿನಿಂದ ಜನರಿಗೆ ಶೀತವಾಗಿ ಬೇನೆಗೆ ಬೀಳುತ್ತ ಬಂದ ಕಾರಣದಿಂದ ಈ ಊರು ಬಿಟ್ಟ ಉತ್ತರ ದಿಕ್ಕಿನ ಬಯಲ ಜಾಗಾದಲ್ಲಿ ಊರು ಕಟ್ಟಿತು. ಅದು ಕಾರಣವಾಗಿ ಈ ಮಠ ಊರಿಗೆ ದೂರವಾಯಿತು. ಈ ಮಠದಲ್ಲಿ ಇರಲಾರೆವು. ಹೊಸದಾಗಿ ಊರು ಕಟ್ಟಿದ ಪೇಟೆಯಲ್ಲಿ ಮಠವನ್ನು ಮಾಡಿ ಆ ಮಠದಲ್ಲಿ ನಮ್ಮನ್ನ ಇಡಬೇಕು—ಎಂದು ಅರಿಕೆಮಾಡಿಕೊಳ್ಳಲು ಅದಕ್ಕೆ ಸ್ವಾಮಿಗಳವರೂ ಈ ಮಾತು ನಿಜವದೆ ಎಂತ ತಿಳಿದು

ಆಊರ ಗೌಡರು ಮುಂತಾದ ಪೇಟಿ ಸೆಟ್ಟರು ದೈವದವರ ಕುಮಕಿನಿಂದ ಸವಣೂರು ಸರಕಾರದಲ್ಲಿ ಮಠ ಕಟ್ಟುವ ಜಾಗಾ ಇನಾಮು ಭೂಮಿ ವಗೈರೆ ವತನಗಳನ್ನು ಪಡೆದು ಆ ಸ್ಥಳದಲ್ಲಿ ಮಠವನ್ನು ಕಟ್ಟಸಿ ಆ ಮಠದಲ್ಲಿ ಕೆಲವು ದಿವಸ ಲಿಂಗಪೂಜಾ ಜಂಗಮ ದಾಸೋಹದೊಡನೆ ಗಣಸಮೂಹದಲ್ಲಿ ಇದ್ದ ಕಾರಣ ರಾ|| ವೈದ್ಯ ಬಸವಲಿಂಗ ಸ್ವಾಮಿಗಳವರಿಗೆ ರೂಢನಾಮವಾಗಿ ಆಲೂರು ಬಸವಲಿಂಗಸ್ವಾಮಿಗಳೆಂಬ ಹೆಸರಾಯಿತು.

ಅವರು ಕೆಲವು ದಿವಸ ಆಲೂರು ಮಠದಲ್ಲಿ ಇದ್ದು ಆ ಮೇಲೆ ತಮ್ಮ ಶಿಷ್ಯರಾದ ಖಾಸ ಚರಮೂರ್ತಿಗಳಾದ ಕರಿಬಸವಪ್ಪನವರಿಗೆ ಜಡೆ ವಗೈರೆ ಮಠಗಳನ್ನು ದೇಖರೇಖೆ ನೋಡುವಂತೆ ಆಜ್ಞೆಯನ್ನು ಮಾಡಿ ಅಲ್ಲಿಂದ ತಮ್ಮ ಗಣಸಮೂಹದೊಡನೆ ಆಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಕಲ್ಲಾಪುರಕ್ಕೆ ದಯಮಾಡಿಸಿ ಆ ಊರ ದೇಸಾಯಿ ಕೋನೇರಿರಾಯರಿಂದ ಅವರ ಇನಾಮುಗ್ರಾಮ ಕಲ್ಲಾಪೂರ ಬಾಳೂರು ಈ ಎರಡು ಗ್ರಾಮಗಳಲ್ಲಿ ಮಠ ಇನಾಮು ಭೂಮಿಗಳನ್ನು ಪಡೆದು ಆ ಮಠಗಳಲ್ಲಿ ತಮ್ಮ ಕಡೆಯಿಂದ ಮರಿಗಳನ್ನು ಇಟ್ಟು ಶೇಷಗಿರಿಯಲ್ಲಿ ಇರುವ ಮುರಾರಿರಾವು ದೇಸಾಯಿ ಇವರ ಭಕ್ತಿಯಿಂದ ಮಠ ಇನಾಮು ಭೂಮಿಯನ್ನು ಪಡೆದು ಅಲ್ಲಿಂದ ಗೊಂದಿಗೆ ದಯಮಾಡಿಸಿ ಆ ಊರ ಶಾನಭೋಗರು ಮುಂತಾದ ದೈವದವರ ಭಕ್ತಿಯಿಂದ ಮಠ ವಗೈರೆ ಇ

ನಾಮು ಭೂಮಿಯನ್ನು ಪಡೆದು ಅಲ್ಲಿ ಅಯ್ಯಗಳನ್ನು ಇಟ್ಟು ಅಲ್ಲಿಂದ ಮುಲಗುಂದಕ್ಕೆ ಚಿತ್ತೈಸಿ ಆ ಊರ ಗೌಡರ ಭಕ್ತಿಯಿಂದ ಇವರ ಉಂಬಳಿ ಗ್ರಾಮ ಮುಲಗುಂದ ಕನ್ನೇಶ್ವರ ಈ ೨ ಗ್ರಾಮಗಳಲ್ಲಿ ಮಠ ಸ್ವಾಸ್ತಿಯನ್ನು ಪಡೆದು ಆ ಮಠಗಳಲ್ಲಿ ಮರಿಗಳನ್ನು ಇಟ್ಟು ಅಲ್ಲಿಂದ ಬಡಮಲ್ಲಿಗೆ ದಯ ಮಾಡಿಸಿ ಆ ಊರ ದೇಸಾಯಿ ವೀರಪ್ಪನು ಬಹಳ ಯೋಗ್ಯ ಭಕ್ತನಾದ್ದರಿಂದ ಈತನು ಸ್ವಾಮಿಗಳವರ ಕಡೆಯಿಂದ ಅನುಗ್ರಹವನ್ನು ಪಡೆದು ಅಂಗ ಲಿಂಗ ಸಾಮರಸ್ಯ ಮುಂತಾದ ೩೬ ತತ್ವದ ವಿಚಾರವನ್ನು ತಿಳಿದುಕೊಂಡು ತನ್ನ ಇನಾಂಗ್ರಾಮ ಕೂಸನೂರಲ್ಲಿ ಸ್ವಾಮಿಗಳವರಿಗೆ ಮಠ ಸ್ವಾಸ್ತಿಯನ್ನು ತನ್ನ ಭಕ್ತಿಯಿಂದ ಮಾಡಿಕೊಟ್ಟು ಆ ಮಠದಲ್ಲಿ ತನ್ನ ಕ್ರಿಯಾಚರಣೆ ನಡವುದಕ್ಕೆ ಸನ್ನಿಧಾನದಲ್ಲಿರುವ ಶಿವಪೂಜಪ್ಪನವರೆಂಬ ವಿರಕ್ತರನ್ನು ಇಟ್ಟುಕೊಂಡು ಸ್ವಾಮಿಗಳವರಿಗೆ ಪಾದಗಾಣಿಕೆಯನ್ನು ಒಪ್ಪಿಸಿ ಉತ್ಸಹದೊಡನೆ ಕಳುಹಿಸಿಕೊಟ್ಟನು.

ಅಲ್ಲಿಂದ ಆಲದಕಟ್ಟಿ ಹೊಂಬಳಿಕ್ಕೆ ದಯಮಾಡಿಸಿ ಆ ಊರ ದೈವದವರ ಗೌಡರ ಕಡೆಯಿಂದ ಇನಾಮು ಭೂಮಿ ಮಠ ಬಾಬು ಎಡೆ ಕಾಸು ಮುಂತಾದವುಗಳನ್ನು ಪಡೆದು ಅಲ್ಲಿ ತಮ್ಮ ಮರಿಗಳನ್ನು ಇಟ್ಟು ಆ ಸೀಮೆಯ ಭಕ್ತರು ಮತ್ತು ಗಣಂಗಳಲ್ಲಿ ಅನಾಚಾರದಲ್ಲಿ ಇದ್ದವರನ್ನು ಆಚಾರದಲ್ಲಿ ತಂದು ತಿರಿಗಿ ಬಿದ್ದವರಿಗೆ ಬಹಿಷ್ಕಾರವನ್ನು ಸ್ಥಾಪಿಸಿ ತಿರುಗಿ ಬಿದ್ದ ಜನರು ಸನ್ನಿಧಿಯ ದಯವನ್ನು ಪಡಕೊಂಡರೆ ಅಪರಾಧ ಕಾಣಿಕೆಯನ್ನು ತೆಗೆದುಕೊಂಡು ಶುದ್ಧತೆಯನ್ನು ಕೊಟ್ಟು ಆ ಸೀಮೆಯಲ್ಲಿ ಕೆಲವು ಶಿವಭಕ್ತರನ್ನು ಶೀಲವಂತರನ್ನು ಮಾಡಿ ಕೆಲವು ಜೈನರಿಗೆ ಶಾಸ್ತ್ರದಿಂದ ಒಡಂಬಡಿಸಿ ಆ ಜೈನರಿಗೆ ಲಿಂಗಧಾರಣವಂ ಮಾಡಿಸಿ,

ಅಲ್ಲಿಂದ ರಾಯರಹುಬ್ಬಳ್ಳಿಗೆ ದಯಮಾಡಿಸಲು ಆ ಊರಲ್ಲಿ ಇರುವ ಗುರುಸಿದ್ದಪ್ಪನವರು ಮುಂತಾದ ಬಸವಪ್ಪಶೆಟ್ಟರು ದೈವದವರು ಪೇಟಿ ಶೃಂಗಾರವನ್ನು ಮಾಡಿಸಿ ಆ ಪೇಟೆಯಲ್ಲಿ ಸ್ವಾಮಿಗಳವರನ್ನು ಇದಿರುಗೊಂಡು ೭೨ ಬಿರುದುಗಳೊಡನೆ ಉತ್ಸಹಂಗೊಳಿಸಿ ಗುರುಸಿದ್ದಪ್ಪನವರ ಮಠದಲ್ಲಿ ಇಟ್ಟುಕೊಂಡು ನಿತ್ಯೋತ್ಸಹದಿಂದ ದಿನಾ ಒಬ್ಬೊಬ್ಬ ಭಕ್ತರು ಬಿನ್ನಹವಂ ಮಾಡಿ ಪಾದಗಾಣಿಕೆಯನ್ನು ಕೊಡುತ್ತ ಇದರಂತೆ ನಿತ್ಯ ಒಂದೊಂದು ಪ್ರಸ್ಥ ಮೆರವಣಿಗೆ ಮಾಡುತ್ತಾ ಮೂರು ತಿಂಗಳು ಸ್ವಾಮಿಗಳವರನ್ನು ಇಟ್ಟುಕೊಂಡು ಒಂದು ಸಾವಿರ ವರಹವನ್ನು ಪಾದಗಾಣಿಕೆ

ಯನ್ನು ಸ್ವಾಮಿಗಳವರ ಶಿಷ್ಯರುಗಳಾದ ಗುರುಸಿದ್ದಪ್ಪನವರು ಮುಂತಾದ ಸಕಲ ವಿರಕ್ತರು ಚರಮೂರ್ತಿಗಳಿಂದ ಪಾದಗಾಣಿಕೆಯನ್ನು ಒಪ್ಪಿಸಿಕೊಂಡು ಆ ಬಳಿಕ ಸೆಟ್ಟರು ದೈವದವರು ಉತ್ಸವದಿಂದ ಸ್ವಾಮಿಗಳವರನ್ನು ಕಳುಹಿಸಿ ಕೊಟ್ಟರು.

ಅಷ್ಟರಲ್ಲಿ ರಾಯನಹಳ್ಳಿ ಮಾವನೂರು ಗೃಹಸ್ಥರು ಸನ್ನಿಧಾನಕ್ಕೆ ಬಂದು ಬಿನ್ನಹವನ್ನು ಮಾಡಿ ಕರಕೊಂಡುಹೋಗಿ ಆ ಊರಿನಲ್ಲಿ ಇರುವ ರಾ| ಸ್ವಾಮಿಗಳವರ ವಿರಕ್ತ ಮಠದಲ್ಲಿ ಇದ್ದ ಮೂರ್ತಿಗಳು ಶಿವಾಧೀನರಾದಕಾರಣ ಆ ಮಠಗಳಲ್ಲಿ ಯಾರೂ ಇಲ್ಲದೆ ಇರುವುದರಿಂದ ಆ ಊರ ದೇವಭಕ್ತರು ಸ್ವಾಮಿಪಾದವು ತಮ್ಮ ಮಠಗಳಲ್ಲಿ ತಮ್ಮ ಮರಿಗಳನ್ನು ಇಟ್ಟು ಈ ಮಠವನ್ನು ಉದ್ಧಾರಮಾಡಬೇಕೆಂದು ಅರಿಕೆ ಮಾಡಿಕೊಂಡದ್ದರಿಂದ ಆ ಮಠಗಳಲ್ಲಿ ಮರಿಗಳನ್ನು ಇಟ್ಟು ಸದರಿ ದೇವಭಕ್ತರಿಂದ ಪಾದಗಾಣಿಕೆಯನ್ನು ಕೈಕೊಂಡು

ಅಲ್ಲಿಂದ ಕಿತ್ತೂರು ಗರಗ ಬೆಟಗೇರಿ ಬೆಳಗಾಂವ ಶಹಾಪೂರ ಸಂಬರಗಿ ಮಾಡಿಹಾಳ ಮುಂತಾದ ಸ್ಥಲಂಗಳಿಗೆ ದಯಮಾಡಿಸಿ ಅಲ್ಲಿ ದೈವದವರಿಂದ ಪಾದಗಾಣಿಕೆಯನ್ನು ಒಪ್ಪಿಸಿಕೊಂಡು ಆ ದೇಶದಲ್ಲಿರುವ ತಮ್ಮ ಸೂತ್ರಿಕರಾದ ಕುಮಾರ ಸಮಯದ ಮಠಗಳಲ್ಲಿ ಮರಿಗಳನ್ನು ಸ್ಥಲಕೂಡಿಸುತ್ತ ಚರಂತಿಗೆ ಕೊಡುತ್ತಾ ಆ ಮೂರ್ತಿಗಳಿಂದ ಕಪ್ಪ ಕಾಣಿಕೆಯನ್ನು ಒಪ್ಪಿಸಿಕೊಂಡು ಆ ದೇಶಂಗಳಲ್ಲಿ ಇರುವ ದೇವಭಕ್ತರಿಗೆ ಹಾಗೇ ಮೂಢರಾಗಿ ಇರಬಾರದೆಂದು ಶಿವಾನುಭಾವ ಶಾಸ್ತ್ರದಿಂದ ಒಡಂಬಡಿಸಿ ಆ ಭಕ್ತರುಗಳಿಗೆ ದೀಕ್ಷೆ ಮಂತ್ರೋಪದೇಶವನ್ನು ಮಾಡಿಸಿ ಅವರನ್ನು ಸನ್ಮಾರ್ಗದಲ್ಲಿ ತಂದು ಉದ್ಧಾರವ ಮಾಡುತ್ತ ಮುರುಗೋಡು ಸ್ಥಲಕ್ಕೆ ಚಿತ್ತೈಸಲು, ಆ ಊರ ಸೆಟ್ಟರು ಸ್ವಾಮಿಗಳವರಿಗೆ ತಮ್ಮಭಕ್ತಿಯಿಂದ ಕಲ್ಲು ಮಠವನ್ನು ಕಟ್ಟಿಸಿ ನಮಸ್ಕಾರವನ್ನು ಮಾಡಿ ಆ ಮಠಕ್ಕೆ ಸರಕಾರದಿಂದ ಸ್ವಾಸ್ತಿ ಪಡೆದುಕೊಟ್ಟು ಸಂತೆಯಲ್ಲಿ ಪಸುಗೆ ರುಸುಮು ಕಾಣಿಕೆ ಆಯ ಮುಂತಾದ ಬಾಬುಗಳನ್ನು ಮಾಡಿಕೊಟ್ಟು ಒಪ್ಪಿಸಲು ಆ ಮಠದಲ್ಲಿ ಒಬ್ಬ ಮೂರ್ತಿಗಳನ್ನು ಇಟ್ಟು ಆ ಊರ ದೇವಭಕ್ತರ ಕಾಣಿಕೆಯನ್ನು ಕೈಕೊಂಡು ಆ ಊರ ಗುಡ್ಡದ ಮಠದ ಮರಿಗೆ ಸ್ಥಲ ಕೂಡಿಸಿ

ಅಲ್ಲಿಂದ ಚಚಡಿ ತಲೂರು ಈ ದೇಸಾಯಿಗಳ ಮನೆಗಳಲ್ಲಿ ಕಾಡುವಂಥ ಬ್ರಹ್ಮಹತ್ಯವನ್ನು ದೂರಮಾಡಿ ಆ

ದೇಸಾಯ ರವರ ಭಕ್ತಿಯಲ್ಲಿ ಇದ್ದರು.

ಆಮೇಲೆ ತಲವೂರಲ್ಲಿ ಇರುವ ಬೈತಲೆ ಬಸವಲಿಂಗಪ್ಪನವರ ಮರಿಗಳಾದ ಮುಂದಿ ನೀಲಕಂಠಪ್ಪನವರ ಮರಿಗಳಾದ ಸಾಗರದ ನೀಲಕಂಠಪ್ಪನವರಿಗೆ ರಾ|| ಆಲೂರು ಬಸವಲಿಂಗಸ್ವಾಮಿಗಳವರು ಚರಂತಿಗೆ ಕೊಟ್ಟಕಾರಣ ಇ ರ ಕೂಡ ಸದರಿ ಮುಂದಿನೀಲಕಂಠಪ್ಪನವರ ಮರಿಗಳಾದ ಬಸವಲಿಂಗಪ್ಪನವರು ನೀವು ಎಲ್ಲಿ ಚರಂತಿಗೆ ಮಾಡಿಕೊಂಡೀರಿ ಅವರ ಮಠಕ್ಕೆ ಬಾಧ್ಯರಲ್ಲದೆ ನಮ್ಮ ಮಠ ಪರದೇಶಿಗಳ ಮಠವಲ್ಲದೆ ಚರಂತಿಗೆ ಮಠವಲ್ಲ, ಎಂತ ಈ ನ್ಯಾಯವು ಮುನವಳ್ಳಿ ವಗೈರಿ ಪೇಟಿ ಮನೆಗಳಲ್ಲಿ ತೀರದೆ ಆ ಪೇಟೇ ದೇವ ಭಕ್ತರು ಹುಬ್ಬಳ್ಳಿ ಸೆಟ್ಟರು ದೈವದವರ ಕಡೆಗೆ ಹಾಕಿಕೊಟ್ಟ ಕಾರಣ ಈ ಸೆಟ್ಟರು ದೈವದವರು ಕುಮಾರ ಸಮಯಕ್ಕೆ ಜಗದ್ಗುರುಗಳಾದ ಜಡೆಯ ಆಲೂರು ರಾ|| ಬಸವಲಿಂಗಸ್ವಾಮಿಗಳವರ ಕಡೆಗೆ ಹಾಕಿ ಕೊಟ್ಟದ್ದರಿಂದ, ಸದರಿ ಬಸವಲಿಂಗಪ್ಪನವರು ಮತ್ತು ತಲೂರು ಚಂದ್ರಪ್ಪದೇಸಾಯಿ ಇವರ ಭಕ್ತಿಯಲ್ಲಿ ಇರುವ ರಾ||ಜಡೇದ ಸ್ವಾಮಿಗಳವರ ಸನ್ನಿಧಾನಕ್ಕೆ ಮುನವಳ್ಳಿಯಲ್ಲಿ ಇರುವ ಸಾಗರದ ನೀಲಕಂಠಪ್ಪನವರು ಬಂದು ಸಾಷ್ಟಾಂಗ ಪ್ರಣುತರಾಗಿ ಅರಿಕೆಮಾಡಿಕೊಂಡದ್ದು:- ನಾವು ಸಾಗರದಲ್ಲಿ ಸನ್ನಿಧಾನದ ಕಡೆಯಿಂದ ಚರಂತಿಗೆ ತೆಗೆದುಕೊಂಡು ಇಲ್ಲಿಗೆ ಬಂದ ನಂತರ ನಮ್ಮ ಮಠದ ಬಸವಲಿಂಗಪ್ಪನವರ. ನೀವು ನಮ್ಮ ಮಠಕ್ಕೆ ಬಾಧ್ಯರಲ್ಲವು, ಸಾಗರದಲ್ಲಿ ಚರಂತಿಗೆ ಜಡೇದವರಲ್ಲಿ ತೆಗೆದುಕೊಂಡು ಬಂದ ವೇಳೆ ನೀವು ಅವರ ಮಠಕ್ಕೆ ಬಾಧ್ಯರು ಎಂತಾ ವ್ಯಾಜ್ಯ ಮಾಡುತ್ತಾರೆ, ಹಾಂಗೂ ನಮಗೆ ಸಾಗರದ ನೀಲಕಂಠಪ್ಪನವರು ಎಂತ ಹೆಸರು ಮಾಡಿ ಇದ್ದಾರೆ. ಈ ವ್ಯಾಜ್ಯವು ಮುನವಳ್ಳಿಯಲ್ಲಿ ತೀರದೆ ಹುಬ್ಬಳ್ಳಿಗೆ ಹಾಕಿಕೊಟ್ಟದ್ದರು. ಅವರು ಸನ್ನಿಧಿ ಕಡೆಗೆ ಕಳಹಿಸಿ ಇದ್ದಾರೆ ಈಗ ತಮ್ಮ ಸನ್ನಿಧಾನವು ಸಿಂಧ್ಯ ಮುನವಳ್ಳಿಗೆ ಗಣ ಸಮೂಹದೊಡನೆ. ಚಿತ್ತೈಸಬೇಕೆಂದು ಅರಿಕೆ ಮಾಡಿಕೊಂಡದ್ದರಿಂದ

ಸ್ವಾಮಿಗಳವರು ಮುನವಳ್ಳಿಗೆ ದಯಮಾಡಿಸಲು ಈ ವಾರ್ತೆಯನ್ನು ಸುಬ್ಬರಾವು ಇವರು ಕೇಳಿ ತಮ್ಮ ಸೈನ್ಯ ತೆಗೆದುಕೊಂಡು. ಆ ಊರ ದೇವಭಕ್ತರ ಕರಕೊಂಡು ಬಂದು ಶರಣಾಗತರಾಗಿ ಸ್ವಾಮಿಗಳವರನ್ನು ಆಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಉತ್ಸಹವನ್ನು ಮಾಡಿ ವಿರಕ್ತ ಮಠದಲ್ಲಿ ಇಳಿಸಿ ನಿತ್ಯ ಒಬ್ಬೊಬ್ಬ

ದೇವಭಕ್ತರು ಬಿನ್ನಹ ಪ್ರಸ್ಥ ಮೆರವಣಿಗೆ ಮಾಡುತ್ತಾ ಇರುವಲ್ಲಿ ಸದರಿ ಸಾಗರದ ನೀಲಕಂಠಪ್ಪನವರು ಬಸವಲಿಂಗಪ್ಪನವರು ಆಲೂರ ಮಾಶಾಳದ ಇರತಪ್ಪ (ವಿರಕ್ತಪ್ಪ?), ಬಾಳಿ ಸಿದ್ದಲಿಂಗಪ್ಪ, ಜಿಗಜಿನ್ನಿ, ಜಂಗಮಸೆಟ್ಟೆಪ್ಪ ಮುಂತಾದ ದೈವದವರನ್ನು ಸನ್ನಿಧಾನಕ್ಕೆ ಕರೆದುಕೊಂಡು ಬಂದು ತಮ್ಮ ವ್ಯಾಜ್ಯದ ಸಂಗತಿಯನ್ನು ತಿಳುಹಿಸಿ ಈ ವ್ಯಾಜ್ಯವನ್ನು ತೀರಿಸಬೇಕೆಂದು ಅರಿಕೆ ಮಾಡಿಕೊಂಡ ಕಾರಣ ರಾ॥ ಸ್ವಾಮಿಗಳವರು ಅಪ್ಪಣೆ ಕೊಟ್ಟದ್ದು:-ಇವರದು ಪರದೇಶಿಗಳ ಮನೆತನವು ನಿಜವು ಎಂತ ಸದರಿ ದೇವಭಕ್ತರಿಗೆ ಒಡಂಬಡಿಸಿ ಈ ವ್ಯಾಜ್ಯವ ಯಾವ ರೀತಿ ತೀರಿಸಬೇಕು? ಸಾಗರ ನೀಲಕಂಠಪ್ಪನವರಿಗೆ ನಾವು ಚರಂತಿಗೆ ಕೊಟ್ಟ ಕಾರಣ ಇವರಂತೆ ತೀರ್ಪು ಮಾಡಿದರೆ ಪಕ್ಷಪಾತವಾಗುತ್ತದೆ. ಬಿಟ್ಟರೆ ಸದರಿ ನೀಲಕಂಠಪ್ಪನವರು ಈ ಮಠಗಳಿಗೆ ಬಾಧ್ಯರಾಗುವುದಿಲ್ಲವು. ಇದಕ್ಕೇನುಪಾಯವೆಂದು ಗೃಹಸ್ಥರ ಕೂಡ ಮಾತಾಡಿಕೊಂಡು ಬಸವಲಿಂಗಪ್ಪನವರ ನ್ಯಾಯವು ಎದ್ದಿತು, ಸಾಗರದ ನೀಲಕಂಠಪ್ಪನವರ ನ್ಯಾಯವು ಸ್ಥಲವನ್ನು ಹಿಡಿಯಿತು ಎಂತ ತೀರ್ಪು ಮಾಡಿ ಈ ಕಾಗದ ಪತ್ರಗಳ ಸಹಿತವಾಗಿ ಸದರಿ ಉಭಯಮೂರ್ತಿಗಳನ್ನು ವಾಡೇದಲ್ಲಿ ಸಿಂಧ್ಯ ಇವರ ಕಡೆಗೆ ರಾ॥ ಸ್ವಾಮಿಗಳವರು ಕಳುಹಿಸಿಕೊಟ್ಟರು.

ಆ ಬಳಿಕ ಸದರಿ ಬಾಳಿ ಸಿದ್ಧಲಿಂಗಪ್ಪಗೆ ತಾವು ತೀರ್ಪು ಮಾಡಿದ ನ್ಯಾಯದ ಸಂಗತಿಯನ್ನು ಅಂತರಂಗದಲ್ಲಿ ತಿಳಿಸಿದ್ದು ಏನೆಂದರೆ ಬಸವಲಿಂಗಪ್ಪನವರ ನ್ಯಾಯವು ಎದ್ದಿತು ಎಂದರೆ ಗೆದ್ದಿತು ಎಂಬುವ ಅರ್ಥವು, ನೀಲಕಂಠಪ್ಪನವರ ನ್ಯಾಯವು ಸ್ಥಲವನ್ನು ಹಿಡಿಯಿತು ಅಂದರೆ ಬಿತ್ತು ಎಂಬ ಅರ್ಥವು, ಇದರ ಮೇಲಿಂದ ಸರಕಾರದಲ್ಲಿ ಅವರವರ ಪುಣ್ಯಾನುಕೂಲವಿದ್ದಂತೆ ಆಗುತ್ತದೆ, ಎಂತ ಅಪ್ಪಣೆ ಕೊಟ್ಟು ಕಳುಹಿಸಿ ಕೊಟ್ಟರು.

ಆ ದೊರೆಗಳು ಸಭಾ ಮಧ್ಯದಲ್ಲಿ ಈ ವ್ಯಾಜ್ಯದ ಕಾಗದ ಪತ್ರವ ವಿಚಾರವನ್ನು ಮಾಡಿ ರಾ॥ ಆಲೂರು ಬಸವಲಿಂಗಸ್ವಾಮಿಗಳವರು ತೀರ್ಪು ಮಾಡಿದ ಕಾಗದ ಪತ್ರಗಳ ಮೇಲಿಂದ ಈ ಊರ ವಿರಕ್ತಮಠದ ಮುದಿ ನೀಲಕಂಠಪ್ಪನವರ ಮರಿಗಳಾದ ಬಸವಲಿಂಗಪ್ಪನವರ ನ್ಯಾಯವು ಎದ್ದಿತು, ಎಂದರೆ ಈ ಸ್ಥಲ ಬಿಟ್ಟಿತು, ಎಂತ ಆಯಿತು, ಕಾರಣ ಈ ಊರ ಮಠವನ್ನು ಬಿಟ್ಟು ಬಸವಲಿಂಗಪ್ಪನವರು ತಲವೂರಿಗೆ ಹೋಗಬೇಕು. ನೀಲಕಂಠಪ್ಪನವರ ನ್ಯಾಯವು ಸ್ಥಲವನ್ನು ಹಿಡಿಯಿತು,

ಎಂದರೆ ಈ ಸ್ಥಳಕ್ಕೆ ಕಾಯಂ ಆಯಿತು. ಕಾರಣ ಈ ನೀಲಕಂಠಪ್ಪನ ವರು ಈ ಊರ ಮಠದಲ್ಲಿ ಇರಬೇಕು, ಎಂತ ಸಿಂಧ್ಯರವರು ನ್ಯಾಯವ ನ್ನು ತೀರಿಸಿ ನೀಲಕಂಠಪ್ಪನವರನ್ನು ಮುನವಳ್ಳಿ ವಿರಕ್ತ ಮಠಕ್ಕೆ ಕಾಯಂ ಮಾಡಿ ಆ ಮಠದ ಕೆಳಗಿನ ಇನಾಮು ಭೂಮಿ ರುಸುಮು ಪಸುಗೆ ಪರ ಡಿ ವಗೈರೆ ನೀಲಕಂಠಪ್ಪನವರಿಗೆ ಕೊಟ್ಟು ಬಸವಲಿಂಗಪ್ಪನವರನ್ನು ಮು ನವಳ್ಳಿ ಬಿಡಿಸಿ ತಲವೂರಿಗೆ ಕಳುಹಿಸಿದರು. ಅಂದಿನ ಲಾಗಾಯತು ಈ ಮ ನೆತನದಲ್ಲಿ ಪರದೇಶಿ ಮನೆತನವೆಂತಲೂ ಚರಂತಿಗೆ ಮನೆತನವೆಂತಲೂ ಎ ರಡು ಪ್ರಕಾರವಾಗಿ ತಲವೂರು ಮುನಿವಳ್ಳಿ ಮಠಗಳು ವಿಭಾಗವಾಗಿ ಈ ಹೊತ್ತಿಗೂ ನಡೆಯುತ್ತವೆ. ಅಷ್ಟರೊಳಗಾಗಿ ಒಂದು ದಿವಸ ಮುನಿವಳ್ಳಿ ಮುಂದಿರುವ ಮಲಾಪಹಾರಿ ನದಿಯ ತಟದಲ್ಲಿ ಇದ್ದಂಥಾ ಸಿಂದೋಗಿ ಭೂಮಿ ಯಲ್ಲಿ ಇರುವ ಬಿಲ್ವ ವನಾಂತರವನ್ನು ರಾ|| ಜಡೇದಸ್ವಾಮಿಗಳವರು ನೋಡಿ ಸಂತೋಷಿತರಾಗಿ ಆ ಬಿಲ್ವ ವೃಕ್ಷಗಳ ವನದಲ್ಲಿ ಪ್ರಸ್ತವನ್ನು ಮಾ ಡಿಸಿ ಸಕಲ ವಾದ್ಯದೊಡನೆ ಲಿಂಗಪೂಜೆಯನ್ನು ಮಾಡುತ್ತಾ ಇರುವಲ್ಲಿ

ಆವೇಳೆಯಲ್ಲಿ ಮುನಿವಳ್ಳಿ ದೊರೆಗಳಾದ ಸುಬ್ಬರಾವ ಸಿಂಧ್ಯರವರು ಇವರ ಪತ್ನಿ ಆನಂದಿಬಾಯಿಯೂ ಇವರ ಮಗನಾದ ಮುರಾರಿರಾವು ಸಿಂಧ್ಯರವ ರು ಸಣ್ಣ ಶಿಸುವು ಆದ ಕಾರಣ ಆ ಶಿಸುವಿಗೆ ವೈಯಲ್ಲಿ ಕಾಹಿಲೆ ಆಗಿ ಬಹಳ ಜೀರ್ಣವಾದ್ದರಿಂದ ಸದರಿ ತಾಯಿತಂದೆಗಳು ಬಹಳ ಚಿಂತೆಯಲ್ಲಿ ಇದ್ದವರು ಸದರಿ ವಾದ್ಯಗಳನ್ನು ಕೇಳಿ ತಮ್ಮಲ್ಲಿ ಇದ್ದ ಜನಗಳನ್ನು ಇದೇನು? ನದಿಯ ಆಚೆಯಲ್ಲಿ ವಾದ್ಯಗಳು ಯಾಕೆ ಆಗುತ್ತವೆ? ಎಂತ ಕೇಳಲು, ಆ ಜ ನಗಳು ಈ ಊರಿಗೆ ಬಂದಿರುವ ರಾ|| ಆಲೂರು ಬಸವಲಿಂಗಸ್ವಾಮಿಗಳ ವರಿಗೆ ಈ ಊರ ದೇವಭಕ್ತರು ಬಿನ್ನಹವನ್ನು ಮಾಡಿ ಗಣಾರಾಧನೆ ಮಾ ಡಿದ ಕಾರಣ ಬಿಲ್ವ ವನಾಂತರದಲ್ಲಿ ಶಿವಾರ್ಚನೆಯಾಗುವುದರಿಂದ ನಗಾ ರಿ ಕರ್ಣೆ ಮುಂತಾದ ಸಕಲ ವಾದ್ಯಗಳು ಆಗುತ್ತವೆ ಎಂತ ಹೇಳಲು,

ಇದನ್ನು ಕೇಳಿ ಬಹಳ ಕಿಂಕರವುಳ್ಳವರಾಗಿ ಹಣ್ಣು ಫಲಾದಿಗಳನ್ನು ತೆಗ ಸಿಕೊಂಡು ಸ್ವಾಮಿಗಳವರ ಸನ್ನಿಧಾನಕ್ಕೆ ಹೋಗಿ ದರ್ಶನಾಶೀರ್ವಾದವ ತೆ ಗೆದುಕೊಂಡು ತಮ್ಮ ಮಗನಿಗೆ ಬಂದ ವಿಪತ್ತನ್ನು ಅರಿಕೆ ಮಾಡಿ ಪ್ರ ಸ್ಥ ತೀರಿದ ಕೂಡಲೆ ಆನೆ ಕುದುರೆ ಕಾಲುಬಲ ಮುಂತಾದ ೩೨ ಬಿರು ದುಗಳೊಡನೆ ಉತ್ಸಹಸಂ ಮಾಡುತ್ತ ತನ್ನ ಅರಮನೆಗೆ ಕರಕೊಂಡು ಹೋಗಿ ಸಿಂಹಾಸನದ ಮೇಲೆ ಮೂರ್ತವ ಮಾಡಿಸಿ ಪೂಜೆಯಂ ಮಾಡಿ ಆ ಪಾ ದೋದಕವನ್ನು ತಮ್ಮ ಶಿಸುವಿನ ಮೇಲೆ ಪ್ರೋಕ್ಷಿಸಿ ಆ ಶಿಸುವನ್ನು ತಂ

ದು ಸ್ವಾಮಿಗಳವರಿಗೆ ತೋರಿಸಲು,

ಸ್ವಾಮಿಗಳವರಿಗೆ ವೈದ್ಯಶಾಸ್ತ್ರ ಜ್ಯೋತಿಷ್ಯ ಸಾಮುದ್ರಿಕ ಮುಂತಾದ ಶಾಸ್ತ್ರಗಳು ಗೊತ್ತಿದ್ದ ಕಾರಣ ಸಕಲ ವಿಧದಿಂದ ಆ ಶಿಸುವನ್ನು ನೋಡಿ ಆ ಶಿಸುವಿನ ತಾಯಿ ತಂದೆಗೆ ಜೀವಕ್ಕೆ ಭಯವಿಲ್ಲ ಎಂದು ಅಭಯವಂ ಕೊಟ್ಟು ವೈದ್ಯ ಚಿಕಿತ್ಸಂಗಳ ಮಾಡಿಸುವಂತೆ ಔಷಧಗಳನ್ನು ಕೊಟ್ಟು ಮತ್ತು ನಿತ್ಯ ಉಷ್ಣೋದಕದಲ್ಲಿ ಪಾದೋದಕ ಮಿಶ್ರವಾಗಿ ಸ್ನಾನವನ್ನು ಆ ಶಿಸುವಿಗೆ ಒಂದು ಮಂಡಲವ ಮಾಡಿಸುವಂತೆ ಅಪ್ಪಣೆ ಕೊಟ್ಟುಮಠಕ್ಕೆ ಉತ್ಸವದಿಂದ ದಯಮಾಡಿಸಲು ನಿತ್ಯ ನಿತ್ಯ ಸನ್ನಿಧಾನಕ್ಕೆ ಸಿಂಧ್ಯರವರು ಬರುತ್ತಾ ನಾಲ್ವತ್ತು ದಿವಸವು ಪೂರಾ ಆಗುವವರೆವಿಗೂ ಸ್ವಾಮಿಗಳವರನ್ನು ಇಟ್ಟುಕೊಂಡರು. ಆ ದಿವಸ ಪೂರಾ ಆಗುವುದರೊಳಗೆ ಆ ಶಿಸುವಿಗೆ ಕ್ಷೇಮವಾಯಿತು.

ಆ ಮೇಲೆ ರಾ। ಸ್ವಾಮಿಗಳವರು ಸಿಂಧ್ಯರವರು ಮುಂತಾದ ಮುನ್ನವಳ್ಳಿ ದೇವಭಕ್ತರನ್ನು ಕರಸಿಕೊಂಡು— ಶಮನ! ಮಿರ್ಜಿ ಸಂಸ್ಥಾನದ ದಣಿಯು ತನ್ನ ಮಗನಾದ ಬಾಲಕನಿಗೆ ಕ್ಷಯರೋಗ ಹತ್ತಿ ಯಾರಿಂದಲೂ ಕ್ಷೇಮವಾಗದ ಕಾರಣ ಈ ಸಂಸ್ಥಾನದಲ್ಲಿ ನಮ್ಮಿಂದ ಶಿಸುವಿಗೆ ರೋಗ ಪರಾಭವವಾದ್ದರಿಂದ ಈ ವರ್ತಮಾನವು ಸದರಿ ಸಂಸ್ಥಾನಿಕರಿಗೆ ತಿಳಿದು ನಮಗೆ ತಮ್ಮ ಸ್ಥಲಕ್ಕೆ ಬರುವಂತೆ ಬಿನ್ನಹ ಪತ್ರವ ಬರಕೊಂಡು ತಮ್ಮ ಕಡೆಯಿಂದ ಕರಕೊಂಡು ಹೋಗುವುದಕ್ಕೆ ಜನರುಗಳನ್ನು ಕಳುಹಿಸಿ ಇದ್ದಾರೆ, ಕಾರಣ ಅಲ್ಲಿಗೆ ದಯಮಾಡಿಸುತ್ತೇವೆ— ಎಂದು ಅಪ್ಪಣೆ ಕೊಡಲು, ಆ ಕೂಡಲೆ ದೈವದವರು ಸುಬ್ಬರಾವು ಸಿಂಧ್ಯರವರಿಗೆ ನಿಮ್ಮ ಅಪೇಕ್ಷೆ ಇದ್ದಪ್ರಕಾರ ನಿಮ್ಮ ಸರಕಾರದ ಕಮತದಲ್ಲಿ ಇರುವ ಸಿಂದೋಗಿ ಭೂಮಿಯಲ್ಲಿ ನದಿಯತಟಿಯಲ್ಲಿ ಇರುವಂಥ ರಾ। ಸ್ವಾಮಿಯವರು ಲಿಂಗ ಪೂಜೆ ಮಾಡಿದ ಬಿಲ್ವ ವನಾಂತರದಲ್ಲಿ ಮಠ ಕಟ್ಟಿಸಿ ಆ ಮಠಕ್ಕೆ ಇನಾಮು ಭೂಮಿ ರುಸುಮು ಸಂತೆಯಲ್ಲಿ ಪಸುಗೆ ಭೂಮಿಯಲ್ಲಿ ಆಯ ಎಡೆ ಕಾಸು ಬಾಬು ಮುಂತಾದ್ದು ಮಾಡಿಕೊಟ್ಟು ಸ್ವಾಮಿಯವರ ಪಾದಕ್ಕೆ ಒಪ್ಪಿಸಿದರೆ ಬಂದು ಹೋದ ಪ್ರವಾಸಿಕ, ಅತೀತ, ಅನಾಗತ, ಜನರಿಗೆ ಅನ್ನ ದೊರೆಯುತ್ತದೆ, ಎಂತ ಹೇಳಿಕೊಳ್ಳಲು ಈ ದೈವದವರ ಮಾತಿಗೆ ಸಂತೋಷಪಟ್ಟು

ವಿಕ್ರಮನಾಮ ಸಂವತ್ಸರದಲ್ಲಿ ಸದರಿಯವರು ಹೇಳಿದಂತೆ ತನ್ನ ಮಗನಾದ ಮುರಾರಿರಾವು ಸಿಂಧ್ಯ ಆನಂದಿಬಾಯಿ ಇವರ ಹೆಸರಿನಲ್ಲಿ ದಾನ ಪತ್ರ ಬರಸಿ ಆ ಕೂಡಲೇ ಮಠ ಇನಾಮು ರುಸುಮು ಪಸುಗೆ ವಗೈರೆ

ಮಾಡಿಕೊಟ್ಟು ದಾನಪತ್ರವ ಸ್ವಾಮಿಯವರಿಗೆ ಒಪ್ಪಿಸಿ ಮತ್ತು ೩ ಶ್ವೇ ತಛತ್ರ ೩ ಬಂಗಾರದ ಮುಲಾಮು ಮಾಡಿದ ಹುಡೇನ ಕತ್ತಿ ಪಾದಗಾ ಣಿಕೆ ಮುಂತಾದ್ದು ಸಿಂದ್ಯರವರಿಂದ ಒಪ್ಪಿಸಿಕೊಂಡು ಸಿಂಧ್ಯರವರು ಮುಂ ತಾದ ದೇವಭಕ್ತರಿಗೆ ಆಶೀರ್ವಾದವಕೊಟ್ಟು ತಮ್ಮ ಗಣ ಸಮೂಹದೊ ಡನೆ ಮಿರ್ಜಿಗೆ ಚಿತ್ತೈಸಲು

ಈ ವರ್ತಮಾನವನ್ನು ಆ ಊರ ದಣಿಯು ಕೇಳಿ ತನ್ನ ಸೈನ್ಯ ಸಹಿತವಾಗಿ ಬಂದು ಸಾಷ್ಟಾಂಗವೆರಗಿ ೭೨ ಬಿರುದು ಗಳೊಡನೆ ಉತ್ಸಹವಂ ಮಾಡಿ ತನ್ನ ಅರಮನೆಗೆ ಕರಕೊಂಡು ಹೋಗಿ ಮಾನ ಸನ್ಮಾನಂಗಳಂ ಮಾಡಿ ತನ್ನ ಮಗನಿಗೆ ಆದ ರೋಗವನ್ನು ಪರಾ ಭವ ಮಾಡಬೇಕೆಂದು ಅರಿಕೆ ಮಾಡಿಕೊಂಡ ತನ್ನ ಮಗನನ್ನು ತೋರಿ ಸಿದಲ್ಲಿ ಸ್ವಾಮಿಯವರು ತಮ್ಮ ಕರುಣ ದೃಷ್ಟಿಯಿಂದ ನಿರೀಕ್ಷಿಸಿ ಪಾದೋ ದಕದಿಂದ ನಿತ್ಯ ನಿಮ್ಮ ಮಗನಿಗೆ ಸ್ನಾನವನ್ನು ಮಾಡಿಸಿ ೧ ವರುಷ ಪರಿ ಯಂತರ ಈ ರೋಗಕ್ಕೆ ಚಿಕಿತ್ಸಮಾಡಬೇಕೆಂದು ಅಪ್ಪಣೆ ಕೊಟ್ಟು ಔಷ ಧವನ್ನು ಕೊಟ್ಟು ಆಶೀರ್ವಾದವಂ ಮಾಡಿ ಕೆಲವು ದಿವಸ ಮಿರ್ಜಿ ದ ಣಿಯು ಭಕ್ತಿಯಲ್ಲಿ ಇದ್ದಗು. ಅಷ್ಟರೊಳಗಾಗಿ ಸದರಿ ದಣಿಯು ಸ್ವಾಮಿ ಗಳವರು ಸಿದ್ಧಾಂತ ಗಣಿತ ಜ್ಯೋತಿಷ್ಯ ಮುಂತಾದ ಶಾಸ್ತ್ರವ ಬಲ್ಲವರು ಎಂಬ ವರ್ತಮಾನವನ್ನು ಕೇಳಿ ತನ್ನ ಸಂಸ್ಥಾನದ ಕುದುರೆ ಪಾಗದೊಳ ಗಿನ ಒಂದು ಗಬ್ಬದ ಕುದುರೆಯನ್ನು ತರಿಸಿ ಈ ಕುದುರೆಯನ್ನು ಸ್ವಾಮಿ ಗಳವರ ಸನ್ನಿಧಾನಕ್ಕೆ ತೆಗಸಿಕೊಂಡು ಬಂದು ಈ ಕುದುರೆ ಯಾವ ವರ್ಣ ದಮರಿಯನ್ನುಕೊಡುತ್ತದೆ ಅಪ್ಪಣೆ ಆಗಬೇಕೆಂದು ಅರಿಕೆ ಮಾಡಿಕೊಳ್ಳಲು ಆ ಕೂಡಲೆ ಗಣಿತವ ಹಾಕಿ ಆ ಕುದುರೆಯನ್ನು ನಿರೀಕ್ಷಿಸಿ ಈ ಕುದುರೆ ಯು ಇವತ್ತಿಗೆ ಒಂದ ತಿಂಗಳಿಗೆಪಂಚ ಕಲ್ಯಾಣಿಂಯಾದ ಗಂಡು ಮರಿಯನ್ನುಈ ಯುತ್ತದೆ.ಈ ಕುದುರೆಯು ಗರ್ಭಿಣಿ ಆಗಿ ೧೧ ತಿಂಗಳು ಆಗಿದೆ ಎಂತ ಅ ಪ್ಪಣೆ ಕೊಡಲು ಆ ದಣಿಯು ಬಹ ಸಂತೋಷವಾಗಿ ಹೋಗಲು ಆಕ ದುರೆಯು ಸ್ವಾಮಿ ಗಳವರ ಅಪ್ಪಣೆ ಪ್ರಕಾರ ಒಂದು ತಿಂಗಳದಲ್ಲಿ ಅದೇ ವರ್ಣದ ಗಂಡುಮರಿಯನ್ನು ಕೊಡಲು ಇದನ್ನು ಮಿರ್ಜಿ ದಣಿಯು ನೋ ಡಿ ಆಶ್ಚರ್ಯಪಟ್ಟು ಇವರ ಮೇಲಿಂದ ಸ್ವಾಮಿಗಳವರ ಅಪ್ಪಣೆ ಪ್ರಕಾರ ನನ್ನ ಮಗನ ಕ್ಷಯರೋಗವು ಪರಾಭವ ಆಗಲಿಕ್ಕೆ ಏನೂ ಸಂದೇಹವಿಲ್ಲ ವೆಂದು ತಿಳಿದುಕೊಂಡು ಒಂದು ಸಾವಿರ ವರಹ ಪಾದಗಾಣಿಕೆಯನ್ನು ಒ ಪ್ಪಿಸಿ ಕುದುರೆಯ ಚಿನ್ಹೆಯನ್ನು ಅಪ್ಪಣೆ ಕೊಟ್ಟದ್ದರಿಂದ ತಮ್ಮೂರಲ್ಲಿರುವ

ಬೃಹಸ್ಪತಿವಾರದ ಪೇಟಿಯಲ್ಲಿ ಕುದುರೆ ಮಠವೆಂದು ಹೆಸರಿಟ್ಟು ಮಠವನ್ನು ಕಟ್ಟಿ ಒಪ್ಪಿಸಿ ಸಕಲ ಉತ್ಸಹದಿಂದ ಸ್ವಾಮಿಗಳವರನ್ನು ಕಳುಹಿಸಿಕೊಟ್ಟನು. ಇವತ್ತಿಗೂ ಬೃಹಸ್ಪತಿವಾರ ಪೇಟಿಯಲ್ಲಿ ಕುದುರೆ ಮಠವೆಂತಲೂ ಆಲೂರ ಮಠವೆಂತಲೂ ಈ ಎರಡು ಹೆಸರು ಒಂದೇ ಮಠಕ್ಕೆ ಎನ್ನುತ್ತಾರೆ. ಈ ಮಠವು ಮಿರ್ಜಿಯಲ್ಲಿ ಇರುತ್ತದೆ, ಸಿಂಧ್ಯ ಮುನವಳ್ಳಿಯಲ್ಲಿಯೂ ಸ್ವಾಮಿಗಳವರು ಪಡೆದ ಮಠವು ಇರುತ್ತದೆ. ಶಿಂದೋಗಿಯಲ್ಲಿಯೂಇರುತ್ತದೆ. ಈ ಮಠಗಳಿಗೆ ಆಲೂರ ಮಠವೆಂದು ಎನ್ನುತ್ತಾರೆ. ಆ ಮಠಗಳು ಅವರು ಪಡೆದ ಸರ್ವ ಇನಾಮು ಭೂಮಿಗಳು ಈಗ್ಯೂ ನಡೆಯುತ್ತವೆ.

ಸ್ವಾಮಿಗಳವರು ಮಿರ್ಜಿಯಿಂದ ದೇಶ ಸಂಚರಿಸುತ್ತ ನಿಲಂಗಿ ಲಾತೂರು ಕಲ್ಯಾಣ ವಗೈರೆ ಸಕಲ ದೇಶಂಗಳಲ್ಲಿ ದಯಮಾಡಿಸಿ ಆಯಾಯ ದೇಶಗಲ್ಲಿ ಇರುವ ತಮ್ಮ ಸೂತ್ರಿಕರಾದ ಕುಮಾರ ಸಮಯದ ವಿರಕ್ತರು ಚರಮೂರ್ತಿಗಳು ಮುಂತಾದ ದೇವಭಕ್ತರುಗಳ ಕಡೆಯಿಂನ ಪಾದಗಾಣಿಕೆಯನ್ನು ಒಪ್ಪಿಸಿಕೊಂಡು ಆಚಾರದಲ್ಲಿ ಇದ್ದ ದೇವಭಕ್ತರಿಗೆ ಕೃಪಾ ಮಾಡಿ ಅನಾಚಾರದಲ್ಲಿ ಇದ್ದವರಿಗೆ ಆಚಾರದಲ್ಲಿ ತಂದು ತಿರುಗಿ ಬಿದ್ದ ಜನರಿಗೆ ಬಹಿಷ್ಕಾರವ ಸ್ಥಾಪಿಸಿ ತಿರುಗಿ ಬಿದ್ದ ಜನರು ಶರಣಾಗತರಾಗಿ ಬಂದರೆ ರಕ್ಷಿಸಿ ದುಷ್ಟ ಜನರಿದ್ದರೆ ಶಿಕ್ಷಿಸಿ ಆ ದೇಶಂಗಳಲ್ಲಿರುವ ಕೆಲವು ಕೆಲವು ಗ್ರಾಮಂಗಳಲ್ಲಿ ಮಠಮಾನ್ಯಂಗಳನ್ನು ಪಡೆದು ಆ ಮಠಂಗಳಲ್ಲಿ ಮೂರ್ತಿಗಳ ನೆಲೆಗೊಳಿಸಿ ಕೆಲವು ಸ್ಥಲಂಗಳಲ್ಲಿ ಚರಂತಿಗೆ ಕೊಡುತ್ತ ಸ್ಥಲಗಳನ್ನು ಕೂಡಿಸುತ್ತ ದೇಶಂಗಳಲ್ಲಿ ತಮ್ಮ ಗುರು ವಾಂಶಲ್ಯಂಗಳನ್ನು ಹಿಡಿದು ಕುಮಾರ ಸಮಯ ಎಂಬುವದನ್ನು ಉದ್ಧಾರ ಮಾಡುತ್ತ ಮುನವಳ್ಳಿಗೆ ದಯಮಾಡಿಸಿ ಇರುವಲ್ಲಿ

ಸಂವದತ್ತಿಯಲ್ಲಿ ಇರುವ ಜಯಪ್ಪ ದೇಸಾಯಿಯವರು ಡೊಂಬರ ಸ್ತ್ರೀಯಳು ಮಹಾರೂಪವತಿ ಆದ ಕಾರಣ ಅವಳಿಗೆ ಮೋಹಿಸಿ ಆ ಊರಲ್ಲಿ ಇರುವ ರಾ। ಸ್ವಾಮಿಗಳವರ ಸೂತ್ರಿಕರಾದ ಕುಮಾರ ಸಮಯದ ವಿರಕ್ತಮಠದ ಮಹಾಲಿಂಗಪ್ಪನವರು ಸಾಂಬಯ್ಯನವರ ಮಠದ ಶಿವಲಿಂಗಪ್ಪನವರು ಮುಂತಾದ ಷಟುಸ್ಥಲ, ಗುರುಸ್ಥಲಮಠಸ್ಥರಾದ ಗಣಂಗಳಿಗೆ ಸದರಿ ಡೊಂಬರ ಸೂಳೆಗೆ ಲಿಂಗಧಾರಣ ದೀಕ್ಷೆ ಮಂತ್ರೋಪದೇಶಂಗಳನ್ನು ಮಾಡಿ ತನ್ನೊಡನೆ ಕೂಡಿಸುವಂತೆ ಸದರಿ ಜಯಪ್ಪದೇಸಾಯಿ ಈತನು ಹೇಳಿ

ಕೊಂಡಕಾರಣ ಸದರಿ ಮಹಲಿಂಗಪ್ಪನವರು ಅಪ್ಪಣೆಕೊಟ್ಟದ್ದು ನಮ್ಮಕು ಮಾರ ಸಮಯ ಅತಿ ಸೂಕ್ಷ್ಮವುಳ್ಳದ್ದು ಆದ ಕಾರಣ ಹೊಲೆ ಬಳಕೆಯಲ್ಲಿ ಕೂಡಿದ ಹಳೇ ಬೀಡ ಕಲ್ಯಾಣಯ್ಯನ ಮಗ ಚನ್ನವೀರಯ್ಯನನ್ನು ಚಿತ್ರದುರ್ಗದ ಸ್ವಾಮಿಯವರು ಶಿವಾಚಾರ ಬಳಕೆಯಲ್ಲಿ ತೆಗೆದುಕೊಂಡ ಕಾರಣ ದುರ್ಗದ ಸ್ವಾಮಿಗಳವರ ಕೂಡ ಕೆಟ್ಟವನ ಹೊಟ್ಟೆಯಲ್ಲಿ ಹುಟ್ಟಿದವನ ಕೂಡುವರೆ ಆಗದೆಂದು ಜಡೇದ ಸ್ವಾಮಿಗಳವರು ಹತ್ತು ವರುಷವು ನ್ಯಾಯವಾಡಿದರು. ದುರ್ಗದ ಸ್ವಾಮಿಗಳು ಆ ಬಳಕೆ ಬಿಡದ ಕಾರಣ ಜಡೆಯದಲ್ಲಿ ಮುರಿಗೆ ಸಮಯವೆಂತಲೂ ಕುಮಾರ ಸಮಯವೆಂತಲೂ ಈ ಎರಡು ಹೆಸರಿನ ಸಮಯವೆಂದರೆ ನಮ್ಮ ನಮ್ಮ ಗುರು ಪೂತ್ರವಿಡಿದು ಬಂದ ಹೆಸರಿನ ತಿ ಸಮಯಂಗಳು ಭೇದವಾದವು ಹೀಗೆ ನಮ್ಮ ಕುಮಾರ ಸಮಯದಲ್ಲಿ ಸ್ಥೂಲವಾದ ಆಚರಣೆಯಲ್ಲಿ ದುರ್ಗದವರು ಮಿಶ್ರ ಪಟ್ಟಂತೆ ನಮ್ಮ ಸಮಯದಲ್ಲಿ ಎಂದಿಗೂ ಮಿಶ್ರ ಪಡಲಿಲ್ಲ ಆದ ಕಾರಣ ಆ ಡೊಂಬತಿಗೆ ನೀನು ಲಿಂಗಧಾರಣ ದೀಕ್ಷೆ ಮಂತ್ರೋಪದೇಶಂಗಳ ಮಾಡಿಸಿ ಅವಳ ಬಳಕೆ ನೀವು ಮಾಡಿದರೆ ನಿಮ್ಮ ಬಳಕೆ ನಾವೇನು ಮಾಡತಕ್ಕವರಲ್ಲ ಎಂದು ಅಪ್ಪಣೆಕೊಟ್ಟು ಸರಕಾರ ವಾಡೇದಿಂದ ಮಠಕ್ಕೆ ಬಂದು ಆ ಊರ ಸೆಟ್ಟರು ಸಮಸ್ತದೈವದವರನ್ನು ಕರಸಿಕೊಂಡು ಡೊಂಬತೀ ದೆಸೆಯಿಂದ ದೇಸಾಯಿಗೂ ತಮ್ಮಗೂ ನಡೆದ ವೃತ್ತಾಂತವನ್ನೆಲ್ಲ ಹೇಳಿ ಆ ಬಳಿಕ ಈ ಸಂಸ್ಥಾನದಲ್ಲಿ ಹಿಂದಿನ ದೇಸಾಯಿಗಳು ಸದಾಚಾರದಲ್ಲಿ ನಡೆದರು.

ಈ ದೇಸಾಯಿಯು ವಿಪ್ರರಿಗೂ ನಮ್ಮ ಗಣಂಗಳಿಗೂ ನಮಸ್ಕಾರ ಮುಂತಾದವುಗಳಲ್ಲಿ ಸಮಗೊಂಡು ನಡೆಯುತ್ತಾನೆ. ಅದರಿಂದ ಈತನ ನಡತೆಯು ಬರೋಬರಿ ಇರಲಿಲ್ಲ ಇನ್ನು ಮೇಲೆ ಕಾಮ ಕ್ರೀಡೆ ಗೋಸುಗ ಡೊಂಬತಿಗೆ ಲಿಂಗಧಾರಣವ ಮಾಡಿಸಿ ಈ ದೇಸಾಯಿಯು ಮಿಶ್ರಪಟ್ಟಮೇಲೆ ಯಾವ ಮುಖದಿಂದಲಾದರೂ ಮಿಶ್ರವಾದೀತು ಆದ್ದರಿಂದ ನಮ್ಮ ಊರ ಹೊರಗಿನ ಕಲ್ಲು ಮಠ ಅದರ ಕೆಳಗಿನ ಇನಾಮು ಭೂಮಿ ಪೇಟೆಯಲ್ಲಿ ಇರುವ ಚವಕೀ ಮಠ ಇವುಗಳಿಗೆ ನಮ್ಮ ಗುರುಗಳಾದ ಜಡೇದ ಆಲೂರು ಬಸವಲಿಂಗಸ್ವಾಮಿಗಳವರು ತಮ್ಮ ಮುನವಳ್ಳಿ ಆಲೂರು ಮಠದಲ್ಲಿ ಇದ್ದಾರೆ. ಅವರನ್ನು ಕಂಡುನಡಕೊಂಬುವದು ಎಂತ ಸೆಟ್ಟರು ದೈವದವರಿಗೆ ಅಪ್ಪಣೆ ಕೊಟ್ಟು ಆ ಕೂಡಲೆ ಮುನವಳ್ಳಿಗೆ ಬಂದು ಸದರಿ ನಡೆದ ಸಂಗತಿಗಳನ್ನು ತಿಳಿಸಿ ಸಂವದತ್ತಿ

ಮಠದ ವತನ ವಗೈರೆಗಳನ್ನು ಸ್ವಾಮಿಗಳವರಿಗೆ ಒಪ್ಪಿಸಿ . ತಾವು ಜಡೇದ ಮಠಕ್ಕೆ ದಯಮಾಡಿಸಿದರು. ಆ ಮಠದಲ್ಲಿ ಕೆಲವು ದಿನಸವು ಲಿಂಗಪೂಜೆ ಜಂಗಮ ದಾಸೋಹದಲ್ಲಿ ಇದ್ದು ಅಲ್ಲಿಯೇ ಬಯಲಾದರು

ಇತ್ತ ದೇಸಾಯಿಯು ಡೊಂಬತಿಗೆ ಲಿಂಗಧಾರಣವ ಮಾಡಿಸಬೇಕೆಂದು ಮಹಾಲಿಂಗಪ್ಪನವರಿಗೆ ಹೇಳಿಕೊಂಡದ್ದಕ್ಕೆ ಒಪ್ಪದೆ ತನ್ನ ಮೇಲೆ ಬೇಸರವ ಮಾಡಿಕೊಂಡು ಹೋದ ಕಾರಣ ಸದರಿ ದೇಸಾಯಿಯು ತನ್ನ ಕ್ರಿಯಾಚರಣೆಗೆ ವಿರಕ್ತರಾದ ಮೂರ್ತಿಗಳನ್ನು ತನ್ನ ಸಂಸ್ಥಾನಕ್ಕೆ ಸನ್ನಿಧಾನದ ಕಡೆಯಿಂದ ಕಳುಹಿಸಿದಲ್ಲಿ ತಮ್ಮ ಮುರಿಗಾ ಸಮಯಕ್ಕೆ ಭಕ್ತನಾಗಿ ನಡಕೊಳ್ಳುತ್ತೇನೆ ಎಂಬುದಾಗಿ ರಾ|| ಚಿತ್ರದುರ್ಗದ ಚನ್ನಬಸವಸ್ವಾಮಿಗಳವರಿಗೆ ಬಿನ್ನಹಪತ್ರವ ಕಳುಹಿಸಲು ಸೋಲೂರು ಚನ್ನವೀರಪ್ಪನವರನ್ನು ಕಳುಹಿಸಿದರು. ಇವರು ಸ್ವಾದಿಯಿಂದ ಬಂದಕಾರಣ ಇವರಿಗೆ ಮಠ ಕಟ್ಟಿಸಿ ಆ ಮಠಕ್ಕೆ ಇನಾಮುಭೂಮಿ ಕೊಟ್ಟು ಸದರಿ ಚನ್ನವೀರಪ್ಪನವರಿಗೆ ಸದರಿ ದೇಸಾಯಿ ಭಕ್ತನಾಗಿ ತಾನು ಮೆಚ್ಚಿದ ಡೊಂಬತಿಗೆ ಲಿಂಗಧಾರಣ ದೀಕ್ಷೆ ಮಂತ್ರೋಪದೇಶಂಗಳಂ ಮಾಡಿಸಿ ಸದರಿ ಚನ್ನವೀರಪ್ಪನವರ ಕಡೆಯಿಂದ ತೀರ್ಥ ಪ್ರಸಾದವನ್ನು ಕೊಡಿಸಿ ಆಕೆಯಲ್ಲಿ ಮಿಶ್ರಪಟ್ಟನು. ಇದನ್ನು ಸವದತ್ತಿ ಸೆಟ್ಟರು ದೈವದವರು ತಿಳಿದು ನಮ್ಮ ಊರ ಕುಮಾರ ಸಮಯದ ಮಹಾಲಿಂಗಪ್ಪನವರು ಈ ದೇಸಾಯಿ ವಂಶದಲ್ಲಿ ಪುತ್ರ ಸಂತತಿ ಆಗಬಾರದೆಂದು ಶಾಪಕೊಟ್ಟು ಈ ಸ್ಥಲವನ್ನು ಬಿಟ್ಟು ಜಡೆಯಕ್ಕೆ ದಯಮಾಡಿಸಿದರು. ಮುರಿಗಿ ಸಮಯದ ಗಣಂಗಳಲ್ಲಿ ಆಚರಣೆ ಇಲ್ಲದ ಕಾರಣ ಅವರಲ್ಲಿ ಸಾಮರಸ್ಯ ಮಾಡಬಾರದೆಂದು ನಿಶ್ಚೈಸಿಕೊಂಡು ಸದರಿ ಮಹಾಲಿಂಗಪ್ಪನವರು ಹೇಳಿದ ಪ್ರಕಾರ ಮುನವಳ್ಳಿಯಲ್ಲಿ ಇರುವ ರಾ|| ಆಲೂರು ಬಸವಲಿಂಗಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ಸದರಿ ತಮ್ಮ ಊರಲ್ಲಿ ನಡೆದ ಸಂಗತಿಗಳನ್ನು ಅರಿಕೆ ಮಾಡಿಕೊಂಡು ಸ್ವಾಮಿಗಳವರ ಮರಿಗಳಾದ ಕುಮಾರಪ್ಪನವರೆಂಬ ಚರಮೂರ್ತಿಗಳನ್ನು ಕರಕೊಂಡು ಸವದತ್ತಿಗೆ ಬಂದು ಸೆಟ್ಟರು ದೈವದವರು ತಮ್ಮ ಊರ ಕಲ್ಲು ಮಠ ಚಾಕೀಮಠ ಆ ಮಠದ ಇನಾಮು ವಗೈರೆ ಭೂಮಿ ರುಸುಮು ಬಾಬು ಮುಂತಾದವುಗಳ ರಾ| ಜಡೇದಸ್ವಾಮಿಗಳಾದ ಆಲೂರು ಬಸವಲಿಂಗಸ್ವಾಮಿಗಳವರ ಮರಿಗಳಾದ ಕುಮಾರಪ್ಪನವರಿಗೆ ಒಪ್ಪಿಸಿ ತಾವು ಕುಮಾರ ಸಮಯದ ಭಕ್ತರಾದವರಾಗಿ ಇವತ್ತಿಗೂ ನಡೆಯುತ್ತಾರೆ. ಕಾರಣ ಸಂವದತ್ತಿ ಕುಮಾರ

ಸಮಯದ ೩ ಮಠಗಳು ಜಡೇದ ಕೆಳಗಿನ ಮಠಗಳಾದವು. ಸದರೀ ಮಹಾಲಿಂಗಪ್ಪನವರೂ ದೇಸಾಯಿಯೂ ಆಚಾರವ ಬಿಟ್ಟು ಅನಾಚಾರಕ್ಕೆ ಮುಖ್ಯನಾದ್ದರಿಂದ ಅವನ ವಂಶದಲ್ಲಿ ಪುತ್ರ ಸಂತತಿ ಆಗಬಾರದೆಂದು ಶಾಪ ಕೊಟ್ಟ ಪ್ರಕಾರ ಅವನ ಸಂಸ್ಥಾನದಲ್ಲಿ ಪುತ್ರ ಸಂತತಿ ಇಲ್ಲದೆ ದತ್ತಕ ಸಂತತಿ ಇವತ್ತಿಗೂ ನಡೆಯುತ್ತದೆ.

ಆ ಬಳಿಕ ಮುನವಳ್ಳಿ ದೇವಭಕ್ತರು ಗೊಡಚಿ ವೀರಭದ್ರದೇವರ ರಥೋತ್ಸಹಕ್ಕೆ ಬಿನ್ನಹವಂ ಮಾಡಿ ಆಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಉತ್ಸಹದಿಂದ ಸ್ವಾಮಿಗಳವರನ್ನು ಕರಕೊಂಡು ಹೋಗಿ ಪ್ರಸ್ತ ಮುಂತಾದ ರಥೋತ್ಸಹವಂ ಮಾಡಿಸಿ ಆ ಮೇಲೆ ಸ್ವಾಮಿಗಳವರನ್ನು ಮುನವಳ್ಳಿಗೆ ಉತ್ಸಹದಿಂದ ದೇವಭಕ್ತರು ಕರಕೊಂಡು ಬರುವಂಥಾದ್ದು ಕಡಕೊಳ್ಳದ ದೇವಭಕ್ತರು ಕಂಡು ಸಮೂಹ ಸಹಿತವಾಗಿ ರಾ॥ ಸ್ವಾಮಿಗಳವರಿಗೆ ಬಿನ್ನಹವಂ ಮಾಡಿ ಸಕಲ ಸಂಭ್ರಮದಿಂದ ಉತ್ಸಹವನ್ನು ಮಾಡುತ್ತ ಚವಕೀ ಮಠಕ್ಕೆ ಸ್ವಾಮಿಗಳವರನ್ನು ಕರಕೊಂಡು ಹೋಗಿ ಇಳಿಸಿ ಪ್ರಸ್ತವನ್ನು ನಾಳಿನ ದಿವಸ ತೀರಿಸಿಕೊಟ್ಟು ದಯಮಾಡಿಸಬೇಕೆಂದು ಅರಿಕೆ ಮಾಡಿಕೊಂಡರು. ಅವತ್ತಿನ ರಾತ್ರಿ ಕಾಲಕ್ಕೆ ಸ್ವಾಮಿಗಳವರಿಗೆ ಸಾಂಬಲೋಕಕ್ಕೆ ದಯಮಾಡಿಸುವ ಸೂಚನೆ ತೋರಿದ್ದರಿಂದ ಮುನವಳ್ಳಿ ದೈವದವರ ಸಮಕ್ಷ ಕಡಕೊಳ್ಳದ ದೇವಭಕ್ತರ ಕರಸಿಕೊಂಡು ತಮ್ಮ ಸನ್ನಿಧಾನದಲ್ಲಿ ಸಾಕಿದ ಮರಿಗಳಲ್ಲಿ ಯೋಗ್ಯರು ಇಲ್ಲದ ಕಾರಣ ಕಡಕೊಳ್ಳದ ಚವಕೀ ಮಠದ ಚರಮೂರ್ತಿಗಳ ಮರಿದೇವರ ಸಾಷ್ಟಾಂಗವ ಹಾಕಿಸಿಕೊಂಡು ತಮ್ಮ ಗುರು ಪರಂಪರ ಬಳಿವಿಡಿದು ಬಂದ ಶಿವಾನುಭಾವ ಚರಂತಿಗೆ ಪಟ್ಟವನ್ನು ಮಾಡಿ ತಮ್ಮ ಸನ್ನಿಧಿಕೂಡ ಬಂದ ಸಾಗರದ ನೀಲಕಂಠಪ್ಪನವರ ಹಸ್ತದಲ್ಲಿ ಕೊಟ್ಟು ತಮ್ಮ ಗುರುಗಳಾದ ಸಿದ್ಧಬಸವಸ್ವಾಮಿಗಳವರ ಅಭಿಧಾನವನ್ನು ಇಟ್ಟು ಸಾಂಬಲೋಕಕ್ಕೆ ದಯಮಾಡಿಸಿದರು.

ಆ ಕೂಡಲೆ ಮುನವಳ್ಳಿ ಕಡಕೊಳ್ಳದ ದೇವಭಕ್ತರು ಸ್ವಾಮಿಗಳವರನ್ನು ಮೂರ್ತವಮಾಡಿಸಿ ಇವರು ಕುಮಾರಸಮಯಕ್ಕೆ ಮೂಲಗುರುಗಳಾದ ಕಾರಣ ಇವರ ಹೆಸರಿನ ಮಠವನ್ನು ಮಾಡಿ ಆ ಮಠದಲ್ಲಿ ಸ್ವಾಮಿಗಳವರ ಸಮಾಧಿ ಆಗಬೇಕೆಂದು ನಿಶ್ಚಯಿಸಿ ತಕ್ಷಣವೇ ಸರ್ವರು ಊರ ಹೊರಗೆ ಸಮೀಪದಲ್ಲಿ ಒಂದು ಜಾಗಾ ಆ ಊರ ಲಿಂಗಾಯತ ದೇಸಾಯಿ ಕಡೆಯಿಂದ ತೆಗೆದು

ಕೊಂಡು ಲಿಂಗಮುದ್ರೆಕಲ್ಲು ಸ್ಥಾಪನಂಗೈದು ಸಮಾಧಿಯನ್ನು ಮಾಡಿಸಿ ತೇರು ಕಟ್ಟಿ ಸ್ವಾಮಿಗಳವರನ್ನು ಮೂರ್ತ ಮಾಡಿಸಿ ಉತ್ಸವದಿಂದ ತೆಗೆದುಕೊಂಡು ಹೋಗಿ ಸಂಸ್ಕಾರವನ್ನು ಮಾಡಿ ಮಠಕಟ್ಟಿಸಿ ಗದ್ದುಗೆಯನ್ನು ಮಾಡಿಸಿದರು. ಈ ಆಲೂರ ಬಸವಲಿಂಗಸ್ವಾಮಿಗಳವರ ತೋರ ಗದ್ದುಗೆಯು ಗೊಡಚಿ ಸಮೀಪ ಕಡಕೊಳ್ಳದಲ್ಲಿ ಇರುತ್ತದೆ.

ರಾ॥ ಶಿವಾನುಭಾವ ಚರಂತಿಗೆ ಪಟ್ಟದ ಸಿದ್ಧವೃಷಭೇಂದ್ರ ಸ್ವಾಮಿಗಳವರನ್ನು ಕಡಕೊಳ್ಳದ ದೇವಭಕ್ತರು ಬಿಡದಕಾರಣ ಸ್ವಾಮಿಗಳವರು ಮುನವಳ್ಳಿ ಸಾಗರದ ನೀಲಕಂಠಪ್ಪನವರು ಮುಂತಾದ ದೇವಭಕ್ತರಿಗೆ ಆಶೀರ್ವಾದವ ಕಳುಹಿಸಿಕೊಟ್ಟ ಆ ಊರ ದೇವಭಕ್ತರ ಬಿನ್ನಹಂಗಳ ಕೈಕೊಳ್ಳುತ್ತ ಕಡಕೊಳ್ಳದಲ್ಲಿ ತಮ್ಮ ಗಣ ಸಮೂಹದೊಡನೆ ಇದ್ದರು. ಈ ಗಣ ಸಮೂಹದಲ್ಲಿ ಇದ್ದ ರಾ॥ ಆಲೂರ ಬಸವಲಿಂಗಸ್ವಾಮಿಗಳವರ ಮರಿದೇವರಾದ ಸಿನ್ನಲಿಂಗಪ್ಪನವರೆಂಬ ವಿರಕ್ತರು ಶಹಪುರಕ್ಕೆ ದಯಮಾಡಿಸಿ ಅಲ್ಲಿ ಭಕ್ತರ ಭಕ್ತಿಯಲ್ಲಿ ಇರುವದರೊಳಗಾಗಿ ಆ ಊರ ಕೋರಿಪುವರ ಭಕ್ತಿಯಿಂದ ಶಹಪುರದಲ್ಲಿ ಒಂದು ಮಠ ಬೆಳಗಾಂವಿಯಲ್ಲಿ ಒಂದು ಮಠ ಹೀಗೆ ಎರಡು ಮಠವನ್ನು ಮಾಡಿ ಆ ಸಂಪಾದಿಸಿದ ಮಠಗಳನ್ನು ತಮ್ಮ ಗುರುಗಳಾದ ಜಡೇದಸ್ವಾಮಿಗಳವರಿಗೆ ಬಿನ್ನಹಪತ್ರ ಬರಕೊಂಡು ಜಡೆಯದ ಸ್ವಾಮಿಗಳವರ ಕಡೆಯಿಂದ ರಾಚೋಟೆಪ್ಪನವರೆಂಬ ಮರಿದೇವರ ಕರೆಸಿಕೊಂಡು ಅವರಿಗೆ ತಮ್ಮ ಮಠವಗೈರೆ ಸಕಲ ಜಿಂದಿಗೆಯನ್ನು ಒಪ್ಪಿಸಿ ಶಹಪೂರ ಮಠನಲ್ಲಿ ಬಯಲಾದರು.

ಆ ಬಳಿಕ ಸದರಿ ಕಡಕೋಳದಲ್ಲಿ ಇದ್ದ ರಾ॥ ಕುಮಾರಕೇಪಿನ ಸಿದ್ಧಬಸವಸ್ವಾಮಿಗಳವರು ಮುನವಳ್ಳಿಗೆ ತಮ್ಮ ಗಣ ಸಮೂಹದೊಡನೆ ದಯಮಾಡಿಸಿ ಅಲ್ಲಿರುವ ತಮ್ಮ ಗುರುಗಳು ಸಂಪಾದಿಸಿದ ಮಠವನ್ನು ಕಟ್ಟಿಸಿ ಆ ಮಠದಲ್ಲಿ ಮುನವಳ್ಳಿ ಸಾಗರದ ನೀಲಕಂಠಪ್ಪನವರ ಮರಿಯಾದ ವೀರಯ್ಯನೆಂಬವನಿಗೆ ಲಗ್ನವನ್ನು ಮಾಡಿಸಿ ಇವನನ್ನು ಇಟ್ಟು ಆ ಮಠದಲ್ಲಿ ಸ್ವಾಮಿಗಳವರು ಲಿಂಗಪೂಜೆ ಜಂಗಮ ದಾಸೋಹ ಮಾಡುತ್ತ ಇದ್ದು ಅಲ್ಲಿಂದ ಸವಣೂರು ಸೀಮೆ ನಗರಂದ ಸೀಮೆಗಳಲ್ಲಿರುವ ಆಲೂರು ಜಡೆ ವಗೈರೆ ತಮ್ಮ ಮಠಗಳಲ್ಲಿ ಇರುವ ಮೂರ್ತಿಗಳು ಮುಂತಾದ ದೇವಭಕ್ತರುಗಳಿಗೆ ರಾ॥ತಮ್ಮ ಗುರುಗಳು ಸಾಂಬಲೋಕಕ್ಕೆ ದಯಮಾಡಿಸಿದ ವರ್ತಮಾನವನ್ನು ಆಶೀರ್ವಾದ ನಿರೂಪು ದಯ

ಪಾಲಿಸಲು ಅಲ್ಲಿಯವರೂ ನೋಡಿಕೊಂಡು ಆ ಕೂಡಲೆ ಜಡೆ ಆಲೂರು ವಗೈರೆ ಸ್ವಾಮಿಗಳವರ ಮಠಗಳಲ್ಲಿ ಇರುವ ಮೂರ್ತಿಗಳು ದೇವಭಕ್ತರುಗಳು ಸಹವಾಗಿ ಮುನವಳ್ಳಿಗೆ ಬಂದು ದರ್ಶನಾಶೀರ್ವಾದಗಳನ್ನು ತೆಗೆದುಕೊಂಡು ಸ್ವಾಮಿಗಳವರನ್ನು ಅಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಕರಕೊಂಡು ಹೋಗಿ ಜಡೇದಲ್ಲಿ ಆ ಸೀಮೆ ಮುಂತಾದ ಸ್ಥಲ ಪರಸ್ಥಲದಲ್ಲಿರುವ ದೇವಭಕ್ತರು ಆ ಸೀಮೆಗಳಲ್ಲಿರುವ ವಿರಕ್ತರು ಚರಮೂರ್ತಿಗಳು ಮುಂತಾದ ಪಟ್ಟ ಚರಂತಪ್ಪಗಳು ಗುರು ಸ್ಥಲಗಣಂಗಳು ಸಹವಾಗಿ ಕರಸಿಕೊಂಡು ಜಡೇದ ಮಠದಲ್ಲಿ ಗಣಾರಾಧನೆಯನ್ನು ಮಾಡಿಸಿ ಅಗ್ಗೆ ರಾ॥ ಸ್ವಾಮಿಗಳವರನ್ನು ಸಿಂಹಾಸನದ ಮೇಲೆ ಮೂರ್ತ ಮಾಡಿಸಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದ ಪೂಜೆಯಂ ಮಾಡಿ ದೇವಭಕ್ತರ ತೃಪ್ತಿ ಆದ ಬಳಿಕ ಸಕಲ ಸಂಭ್ರಮದಿಂದ ಅಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಉತ್ಸಹಂಗಳನ್ನು ಮಾಡಿಸಿ ಸಕಲ ಸೀಮೆದೇವಭಕ್ತರು ವಿರಕ್ತರು ಚರಮೂರ್ತಿಗಳು ಪಟ್ಟಚರಂತರು ಗುರುಸ್ಥಲದ ಗಣಂಗಳು ಮುಂತಾದ ದೇವಭಕ್ತರು ತಮ್ಮ ತಮ್ಮ ಯೋಗ್ಯತೆಪ್ರಕಾರ ರಾ॥ ಸ್ವಾಮಿಗಳವರಿಗೆ ಅಹೇರು ಕಾಣಿಕೆ ಮುಂತಾದವುಗಳನ್ನು ಒಪ್ಪಿಸಿ ಆಶೀರ್ವಾದವನ್ನು ತೆಗೆದುಕೊಂಡು ತಮ್ಮ ಸ್ಥಲಂಗಳಿಗೆ ಹೋದರು.

ಇತ್ತ ಸ್ವಾಮಿಗಳವರು ಜಡೇದ ಬೃಹನ್ಮಠದಲ್ಲಿ ತಮ್ಮ ಗಣಸಮೂಹದೊಡನೆ ಲಿಂಗಪೂಜೆ ಜಂಗಮದಾಸೋಹಂಗಳನ್ನು ಮಾಡುತ್ತ ಸಕಲದೇಶದಲ್ಲಿರುವ ತಮ್ಮ ಸೂತ್ರಿಕರಾದ ಕುಮಾರ ಸಮಯದ ವಿರಕ್ತರು ಚರಮೂರ್ತಿಗಳು ಮುಂತಾದ ದೇವಭಕ್ತರಿಗೆ ಆಶೀರ್ವಾದನಿರೂಪವನ್ನು ದಯಪಾಲಿಸುತ್ತ ಇದ್ದರು. ಈ ಆಶೀರ್ವಾದ ನಿರೂಪವನ್ನು ಸದರಿ ವಿರಕ್ತರು ಚರಮೂರ್ತಿಗಳು ಮುಂತಾದ ದೇವಭಕ್ತರು ಶಿರಸಾವಹಿಸಿ ನೋಡಿಕೊಂಡು ಅಹೇರು ಮುಂತಾದ ಪಾದಗಾಣಿಕೆಯನ್ನು ಕಳುಹಿಸಿಕೊಟ್ಟರು. ಕೆಲವು ಭಕ್ತಗಣಂಗಳು ದರ್ಶನಾಶೀರ್ವಾದವ ತೆಗೆದುಕೊಂಡು ಅಹೇರು ಮುಂತಾದ ಪಾದಗಾಣಿಕೆಯನ್ನು ಒಪ್ಪಿಸಿ ತಮ್ಮ ಸ್ಥಲಂಗಳಿಗೆ ಹೋದರು. ಆ ಬಳಿಕ ರಾ॥ ಕೆಂಪಿನಸಿದ್ಧಬಸವಸ್ವಾಮಿಗಳವರಿಗೆ ಇವರ ಮಠಗಳು ಇರುವ ಸೊರಬ ಸಾಗರ ಮುಂತಾದ ದೇವಭಕ್ತರು ಬಿನ್ನಹಪತ್ರವ ಬರಕೊಂಡ ಕಾರಣ ಸ್ವಾಮಿಗಳವರು ಅಂದೋಳಿಕ ಮುಂತಾದ ೭೨ ಬಿರುದುಗಳೊಡನೆ ದೇಶಂಗಳ ಸಂಚರಿಸುತ್ತ ಕೆರೆಹಳ್ಳಿ

ಯಲ್ಲಿ ಮಠವನ್ನು ಪಡೆದು ಆ ಊರ ಲಗತ ಇರುವ ಬಾಸೂರು ಗ್ರಾಮ ದಲ್ಲಿ ನಗರದ ದೊರೆಗಳ ಮಾವನವರಾದ ಮರಿಯಪ್ಪ ಸೆಟ್ಟರು ಸದರಿ ಗ್ರಾಮದ ಕೆರೆ ಏರಿಯ ಮೇಲೆ ಆ ದೇಶದ ರೊಕ್ಕ ವಸೂಲು ಮಾಡುವುದರ ದೆಸೆಯಿಂದ ಡೇರೆ ಹೊಡಿಸಿ ಜಮಾಬಂದಿ ಮಾಡಿ ಅಲ್ಲಿ ೪ ದಿನ ಇರುವು ದರಲ್ಲಿ ಆ ಸೆಟ್ಟರಿಗೆ ಆ ಗ್ರಾಮ ಬಹಳ ಮನೋಹರ ವಾಗಿದ್ದ ಕಾರಣ ಆ ಕೆರೆ ದಂಡೆಯ ಹತ್ತರ ತೇಗಿನ ಮೋಪಿನಿಂದ ಭಾರಿ ಮಠವನ್ನು ಕಟ್ಟಿಸಿ ಆ ಮಠಕ್ಕೆ ತೋಟ ಮುಂತಾದ ೩೫೦ ರೂಪಾಯಿನ ಸ್ವಾಸ್ಥಿ ಇನಾಮು ಭೂಮಿಯನ್ನು ನಗರದ ದೊರೆಗಳಿಂದ ಹುಕುಮು ತರಿಸಿ ಸದರಿ ಭೂಮಿಯ ನ್ನು ಕೊಟ್ಟು ಆ ಮಠಕ್ಕೆ ಜಡೆ ಹಳ್ಳಿ ವಗ್ಯೆರೆ ೭ ಗ್ರಾಮಗಳಲ್ಲಿ ಅಯಾಮುಂ ತಾದ ಎಡೆ ಕಾಸು ನಡೆಯುವಂತೆ ಮಾಡಿ ಪುಟ್ಟನಹಳ್ಳಿ ವೀರಭದ್ರದೇವ ರಿಗೆ ಈ ಮಠದಲ್ಲಿ ಇರುವ ಮೂರ್ತಿಗಳು ತೀರ್ಥವನ್ನು ಕೊಡಬೇಕೆಂದು ನಿರ್ಣಯಿಸಿ ಈ ಮಠವನ್ನು ರಾ॥ ಸ್ವಾಮಿಗಳವರಿಗೆ ಒಪ್ಪಿ ಸಿದ ಮಠವನ್ನು ಜೀರ್ಣೋದ್ಧಾರ ಮಾಡಿ ಅಲ್ಲಿಂದ ಗುತ್ತೀ ಸೀಮೆ ನೇ ರಸಿ ಗ್ರಾಮದಲ್ಲಿ ಮಠ ಇನಾಮು ಭೂಮಿಯನ್ನು ಪಡೆದು ಆ ಸೀಮೆಯ ಲ್ಲಿ ಕೆಲವು ಜೈನರಿಗೆ ಶಾಸ್ತ್ರದಿಂದ ವೀರಶೈವ ಮತ ಅಧಿಕವೆಂದು ಒಡಂ ಬಡಿಸಿ ಲಿಂಗಧಾರಣ ಮಾಡಿಸಿ ಶಿವಭಕ್ತರುಗಳಲ್ಲಿ ಅಚಾರದಲ್ಲಿದ್ದ ವರನ್ನು ಸದಾಚಾರದಲ್ಲಿ ತಂದು ಅಲ್ಲಿಂದ ಸಿದ್ಧಾಪುರಕ್ಕೆ ಚಿತ್ತೈಸಲು

ಆ ಊರ ದೇವಭಕ್ತರು ಅಂದೋಳಿಕ ಮುಂತಾದ ೭೨ ಬಿರುದುಗಳೊಡನೆ ಉತ್ಸಹಂಗೊಳಿಸಿ ಪಾದಗಾಣಿಕೆಯನ್ನು ಒಪ್ಪಿಸಿ ಇದಲ್ಲ ದೆ ತಮ್ಮ ಗ್ರಾಮದಲ್ಲಿ ಒಂದು ಮಠವನ್ನು ಮಾಡಿಕೊಟ್ಟು ಸ್ವಾಮಿಗಳವರ ಬೀಳಗಿ ದೊರೆ ಮುಟ್ಟಳ್ಳಿನಾಯಕರು ಮುಂತಾದ ಆ ಸೀಮೆ ದೇವಭಕ್ತರ ಇಟ್ಟುಕೊಂಡು ಸ್ವಾಮಿಗಳವರಿಂದ ಅನುಗ್ರಹವಂ ಪಡೆದು ಕೇವಲ ವೀರ ಶೈವಾಚಾರಸ್ಥರಾದರು. ಈ ಭಕ್ತರುಗಳಿಗೆ ಸ್ವಾಮಿಗಳವರು ತಮ್ಮ ಮ ರಿದೇವರಾದ ಕೆಂಪಿನಪ್ಪನವರನ್ನು ಕ್ರಿಯಾಮೂರ್ತಿಗಳ ಮಾಡಿಕೊಟ್ಟು ಸೊ ರಬಕ್ಕೆ ದಯಮಾಡಿಸಿದರು. ಸದರಿ ಸಿದ್ಧಾಪುರದಲ್ಲಿ ಇರುವ ಮಠಕ್ಕೆ ಕೆಂಪಿನಪ್ಪನವರು ಇದ್ದ ಕಾರಣ ಇವತ್ತಿಗೂ ಕೆಂಪಿನಮಠವೆಂದು ಎನ್ನು ತ್ತಾರೆ. ಸದರಿ ಸೊರಬದ ಕೋರಿಸೆಟ್ಟಪ್ಪ ಮುಂತಾದ ದೇವಭಕ್ತರು ಸ್ವಾ ಮಿಯವರನ್ನು ಉತ್ಸಹದಿಂದ ಕರಕೊಂಡು ಹೋಗಿ ಸನ್ನಿಧಿ ಖಾಸಗತ ಮಠವಾದ ಮುರಿಗಿ ಮಠದಲ್ಲಿ ತಮ್ಮ ಭಕ್ತಿಯಿಂದ ಲಿಂಗಪೂಜೆ ಜಂಗಮ

ದಾಸೋಹದೊಡನೆ ಇಟ್ಟುಕೊಂಡರು. ಆ ಮಠಕ್ಕೆ ಇನಾಮು ಭೂಮಿ ಇಲ್ಲದ ಕಾರಣ ಆ ಊರ ದೇವಭಕ್ತರ ಕಡೆಯಿಂದ ನಗರದ ಸಂಸ್ಥಾನಕ್ಕೆ ಉತ್ತರವ ಬರಸಿ ಆ ಮಠಕ್ಕೆ ವರುಷ ಮೂರುನೂರು ರೂಪಾಯಿ ಸರಕಾರದಿಂದ ತಸ್ತೀಕು ಬರುವಂತೆ ಪಡೆದು ಇದಲ್ಲದೆ ಮತ್ತೊಂದು ಚೌಕೀ ಮಠವನ್ನು ಪಡೆದು ಈ ಮಠಗಳನ್ನು ಜೀರ್ಣೋದ್ಧಾರವನ್ನು ಮಾಡಿ ಆ ವಂಶದಲ್ಲಿ ಕಂಬಿಬಸವಪ್ಪನವರೆಂಬ ಚರಮೂರ್ತಿಗಳನ್ನು ಇಟ್ಟು ಆ ಸೀಮೆಯಲ್ಲಿ ಕಾಣಿಕೆಯನ್ನು ಎತ್ತಿ ಜಡೇದ ತಮ್ಮ ಸನ್ನಿಧಾನಕ್ಕೆ ಕಳುಹಿಸುವಂತೆ ಅಜ್ಞೆಯನ್ನು ಮಾಡಿ ಅಲ್ಲಿಂದ ಸಂಚರಿಸುತ್ತ ತಾಳಗುಪ್ಪಿ ಗದ್ದೀ ಮಠವನ್ನು ಕಟ್ಟಿಸಿ ಆ ಮಠದಲ್ಲಿ ಒಬ್ಬ ಶಿವಮೂರ್ತೆಪ್ಪನವರೆಂಬ ವಿರಕ್ತರನ್ನು ಆ ಊರ ಶಕ್ಕರೆ ಸೆಟ್ಟರು ಮುಂತಾದ ಆ ಸೀಮೆಭಕ್ತರುಗಳ ಬಿನ್ನಹಂಗಳನ್ನು ತೀರಿಸಿಗೊಂಡು ಆ ಸೀಮೆಯಲ್ಲಿ ವರುಷಾಶನ ದೀಪಾರಾಧನೆ ಕಾಣಿಕೆಯನ್ನು ಎತ್ತಿ ಜಡೇದ ಮಠಕ್ಕೆ ಕಳುಹಿಸುವಂತೆ ಕಾಯಂ ಮಾಡಿ ಇಟ್ಟು ನಗರಕ್ಕೆ ದಯಮಾಡಿಸಿ ಅಲ್ಲಿರುವ ಭಕ್ತರುಗಳಿಂದ ಕಾಣಿಕೆಯನ್ನು ವಸೂಲು ಮಾಡಿ ನಗರದ ಮಠವನ್ನು ಜೀರ್ಣೋದ್ಧಾರವನ್ನು ಮಾಡಿ ಆ ಮಠದಲ್ಲಿ ಚನ್ನಬಸವಪ್ಪನವರನ್ನು ಇಟ್ಟು ಅಲ್ಲಿಂದ ಬಿಕ್ಕೋಡು ಸೀಮೆಗೆ ದಯಮಾಡಿಸಿ ಬಿಕ್ಕೋಡು ವಗೈರೆ ಆ ಸೀಮೆಯಲ್ಲಿ ೫ ಮಠವನ್ನು ಪಡೆದು ಆ ಮಠಗಳಲ್ಲಿ ಮೂರ್ತಿಗಳನ್ನು ಇಟ್ಟು ಆ ಸೀಮೆ ಭಕ್ತಗಣಂಗಳ ಬಿನ್ನಹಂಗಳ ಕೈಕೊಳ್ಳುತ್ತ ಆ ಸೀಮೆಯಲ್ಲಿ ಭಕ್ತರಿಂದ ೬೩ ಪುರಾತನರ ಪೂಜೆಯನ್ನು ಮಾಡಿಸಿ ಅಲ್ಲಿಂದ ನವಲೂರ ನಾಡಿಗ ಮರುಳಯ್ಯನ ಭಕ್ತಿಯಿಂದ ಆ ಗ್ರಾಮದಲ್ಲಿ ಮಠಸ್ವಾಸ್ಥಿಯನ್ನು ಪಡೆದು ಆ ಮಠದಲ್ಲಿ ಗಣಂಗಳನ್ನು ಇಟ್ಟು ಅಲ್ಲಿಂದ ಕುಮಸಿಗೆ ದಯಮಾಡಿಸಲು

ಆ ಊರ ವಿಪ್ರರು ಮುಂತಾದ ಕೆಲವು ಜನರು ಈ ಊರಲ್ಲಿ ೭೨ಬಿರುದುಗಳೊಡನೆ ಅಂದೋಳಿಕ ಸಹಿತವಾಗಿ ಉತ್ಸಹವನ್ನು ಮಾಡಗೊಡಲಿಕ್ಕೆ ಇಲ್ಲವೆಂತ ಯಾಕೆ ಅಂದರೆ ಈ ಅಡ್ಡಪಾಲಕಿ ಮುಖತೋರಣ ಶ್ವೇತಛತ್ರ ಹಗಲದೀವಟಿಗೆ ಹಂಡೇದಕತ್ತಿ ನಂದಿಧ್ವಜ ವ್ಯಾಸನತೋಳು ಮುಂತಾದ ಬಿರುದುಗಳನ್ನು ಯಾವ ಸಂಸ್ಥಾನಿಕರು ಕೊಟ್ಟು ಇದ್ದಾರೆ. ಇವರಲ್ಲಿ ಬಿಲ್ಲು ಕತ್ತಿ ತುಬಾಕಿಗಳು ಇರಲಿಕ್ಕೆ ಕಾರಣವೇನು ಎಂತ ತಕರಾರು ಮಾಡಿ ಸ್ವಾಮಿಗಳ ಸವಾರಿಯನ್ನು ಊರ ಒಳಗೆ ಬಿಡಲಿಲ್ಲವಾದ ಕಾರಣ ಸ್ವಾಮಿಗಳವರು ಊರ ಹೊರಗೆ ಹಂದರ ಹಾಕಿಸಿಕೊಂಡು ಅಲ್ಲೆ ಇದ್ದು ಆ ಊರ ದೈವದವರ ಕಡೆಯಿಂದ ತಾಲ್ಲೂಕ ಮಾಮಲೇ

ದಾರರವರ ಕಡೆಗೆ ಅರ್ಜಿ ಮಾಡಿಸಿ ತಮ್ಮಲ್ಲಿರುವ ನಗರದ ಸಂಸ್ಥಾನಿಕರೂ ಜಮಖಂಡಿ ಪಟವರ್ಧನರೂ ಮು ನವಳ್ಳಿ ಸಿಂಧ್ಯರವರೂ ಬಿರುದುಗಳದೆಸೆಯಿಂದ ಕೊಟ್ಟ ಕಾಗದಪತ್ರಗಳನ್ನು ಹಾಜರ ಮಾಡಿಸಿ ಹುಕುಂ ತರಿಸಿಕೊಂಡು ಸದರಿ ಹರಕತ್ತು ಮಾಡಿದ ಜನರಿಗೆ ದಂಡಶಿಕ್ಷೆಗಳನ್ನು ಮಾಡಿಸಿ ಆ ಊರಲ್ಲಿ ಆಂದೋಳಿಕ ಮುಂತಾದ ೭೨ ಬಿರುದುಗಳಿಂದ ಉತ್ಸಹದೊಡನೆ ದಯಮಾಡಿಸಿ ಆ ಊರಲ್ಲಿ ಇರುವ ತಮ್ಮ ಮಠದ ಮರಿದೇವರಿಗೆ ವಿರಕ್ತಿ ಆಶ್ರಮವನ್ನು ಕೊಟ್ಟು ಮೆರವಣಿಗೆಯನ್ನು ಮಾಡಿಸಿ ಆ ಮಠದಲ್ಲಿ ಗಣಂಗಳನ್ನು ಇಟ್ಟು ಅಲ್ಲಿಂದ ಸವಣೂರು ಸೀಮೆಗೆ ಚಿತ್ತೈಸಿ ಹೊಂಬಳ ಮಠವನ್ನು ಜೀರ್ಣೋದ್ಧಾರವನ್ನು ಮಾಡಿಸಿ ಅಲ್ಲಿಂದ ಕಂಚಿನೆಗಳೂರು ಅಡೂರು ಅಲದಕಟ್ಟಿ ಸುರುಳೇಶ್ವರ ಹಾವಣಿಗಿ ಮೂಡೂರು ಕೂಸನೂರು ಸಿರಗೋಡು ಈ ಎಂಟುಗ್ರಾಮಗಳಲ್ಲಿ ಮಠಗಳು ಮುಂತಾದ ಸ್ವಾಸ್ತಿಗಳನ್ನು ಪಡೆದು ಈ ಸಿರಗೋಡ ಲಗತ್ ಇರುವ ಜಂಗಮನಕೊಪ್ಪದಲ್ಲಿ ಮಲ್ಲಾಡದ ಸಾರಿಗೆ ಮಾಡತಕ್ಕ ಹಾದಿಯು ಆ ಊರ ಮುಂದೆ ಇರುವುದರಿಂದ ಅಲ್ಲಿ ಮಠಕ್ಕೆ ಸ್ವಾಸ್ತಿಯನ್ನು ಪಡೆದು ಆ ಮಠಕ್ಕೆ ಹಾದಿ ರುವಿ ಕೊಡುವಂತೆ ರುಸುಮು ಪಡೆದು ಆ ಮಠದಲ್ಲಿ ಶಿವಲಿಂಗಪ್ಪನವರೆಂಬ ವಿರಕ್ತರನ್ನು ಇಟ್ಟು ಕೋಣನಕೊಪ್ಪದ ಗೌಡರ ಭಕ್ತಿಯಿಂದ ಆ ಊರಲ್ಲಿ ಮಠವನ್ನು ಮಾಡಿ ಆ ಮಠಕ್ಕೆ ಸದರಿ ಶಿವಲಿಂಗಪ್ಪನವರೇ ಆ ಮಠದಲ್ಲಿ ಅಯ್ಯಗಳನ್ನು ಇಡುವಂತೆ ಅಪ್ಪಣೆ ಕೊಟ್ಟು ಅಲ್ಲಿಂದ ನಗರದ ಸೀಮೆಗೆ ದಯಮಾಡಿಸಿ ಆ ಸೀಮೆಯಲ್ಲಿರುವ ತಲೂರು ಅನವಟ್ಟಿ ಕುಬಟೂರು ಈ ಮೂರು ಗ್ರಾಮಗಳಲ್ಲಿ ಮಠ ಇನಾಮು ಭೂಮಿಗಳನ್ನು ಪಡೆದು ಅಲ್ಲಿ ಗಣಂಗಳನ್ನು ಇಟ್ಟು ಆ ಸೀಮೆಗಳಲ್ಲಿರುವ ಸಮಸ್ತ ಗ್ರಾಮಾನುಗ್ರಾಮದ ದೇವಭಕ್ತರು ಜಡೇದ ಮಠದ ದಾಸೋಹಕ್ಕೆ ವರುಷಾಶನದ ಭತ್ತ ದೀಪಾರಾಧನೆ ಕಾಣಿಕೆ ವಗೈರೆ ದರವರ್ಷ ಕೊಡುವಂತೆ ಗೊತ್ತುಮಾಡಿಸಿಕೊಂಡು ಅಲ್ಲಿಂದ ಜಡೇದ ಮಠಕ್ಕೆ ಚಿತ್ತೈಸಿ ಆ ಸ್ಥಳದಲ್ಲಿರುವ ತಮ್ಮ ಸನ್ನಿಧಾನವು ಇರುವ ಮಠವಲ್ಲದೆ ಉಳಿದ ನಾಲ್ಕು ಮಠಗಳನ್ನು ಕಟ್ಟಿಸಿ ಆ ಮಠಗಳಲ್ಲಿ ಗಣಂಗಳನಿಟ್ಟು ಆ ಸ್ಥಳದಲ್ಲಿ ತಮ್ಮ ಗಣಸಮೂಹದೊಡನೆ ಲಿಂಗಪೂಜೆ ಜಂಗಮದಾಸೋಹವನ್ನು ಮಾಡುತ್ತ ದೇಶದಲ್ಲಿರುವ ತಮ್ಮ ಮಠಂಗಳಿರುವ ಸಮಸ್ತ ಪೇಟೆ ಮನೆ ಗ್ರಾಮ ಗ್ರಾಮಂಗಳಿಗೆ ಆಶೀರ್ವಾದ ನಿರೂಪಗಳನ್ನು

ದಯಪಾಲಿಸುತ್ತ ಕಾಣಿಕೆಗಳನ್ನು ತರಿಸಿಕೊಳ್ಳುತ್ತ ಇದ್ದರು.

ಅವಾಗ್ಗೆ ದೊಡ್ಡ ತೆಲಗಡ್ಡೆ ಪೇಟೇದೈವ ಸೀಮೇ ಗೌಡಾಧ್ಯರು ಮುಂತಾದದೇವಭಕ್ತರು ರಾ|| ಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣುತರಾಗಿ ಅರಿಕೆ ಮಾಡಿಕೊಂಡಿದ್ದು ದೊಡ್ಡ ತೆಲಗಡ್ಡೆ ಗ್ರಾಮದಲ್ಲಿರುವ ತಮ್ಮ ಮಠದಲ್ಲಿರುವ ಅಯ್ಯನು ತಮ್ಮ ಇನಾಮು ಭೂಮಿಯಾದ ಗದ್ದೆಯಭತ್ತವನ್ನು ನಾವು ಕೊಟ್ಟವರು ಶಾಸನ ಕಾಣಿಕೆ ಹಣವನ್ನು ಎತ್ತಿ ಸನ್ನಿಧಾನಕ್ಕೆ ಕೊಡದೆ ಅಪಹಾರ ಮಾಡುತ್ತಾನೆ. ಕಾರಣ ಅವನನ್ನು ತೆಗೆದು ಬದಲಿ ಗಣಂಗಳನ್ನು ಇಡಬೇಕೆಂದು ಅರಿಕೆ ಮಾಡಿಕೊಂಡ ಕೂಡಲೆ ತಮ್ಮ ಸನ್ನಿಧಿಯಲ್ಲಿರುವ ಬಸವಲಿಂಗಪ್ಪನವರನ್ನು ತೆಲಗಡ್ಡಿ ಮಠದಲ್ಲಿ ಇಟ್ಟು ಮೊದಲು ಇದ್ದ ಅಯ್ಯನವರನ್ನು ಸ್ವಾಮಿಗಳವರು ತೆಗೆಯುವಂತೆ ಅಪ್ಪಣೆ ಕೊಟ್ಟು ಸದರಿ ದೇವಭಕ್ತರನ್ನು ಕಳುಹಿಸಿಕೊಟ್ಟರು.

(ಇದು ಒಂದು ಕಾಲು ಥಾನಿನ ಅಗಲದ ಪುಸ್ತಕದಿಂದ ಎತ್ತಿ ಬರೆಯಲ್ಪಟ್ಟಿದೆ. ಆ ಪುಸ್ತಕದಲ್ಲಿ ಇಲ್ಲಿಗೆ ಈ ವಿಷಯವು ನಿಲ್ಲಿಸಲ್ಪಟ್ಟು ಇರುವದರಿಂದ ಈ ವಿಷಯವು ಇಲ್ಲಿಗೆ ಮುಗಿದಂತಾಯಿತು.)

ಪ್ರಕಾಶಕ.

(ಈ ಭಾಗದಲ್ಲಿ ೧೦೦ ನೇ ಪುಟದಲ್ಲಿ..........ಹೀಗೆ ಸ್ಥಳ ಬಿಟ್ಟಿರುವ ಕಡೆಯಲ್ಲಿ ಸ್ವಾದಿ ಸೀಮೆಯೊಳಗೆ ವ್ಯಾಪಾರ ಮಾಡಬಾರದೆಂತ ಕಟ್ಟು ಮಾಡಿಕೊಂಡ ಸಮಾಚಾರವಿದೆ. ಮೊದಲು ಈ ವಿಷಯ ಪ್ರಕಟವಾದದ್ದಕ್ಕೂ ಇದಕ್ಕೂ ಸ್ವಲ್ಪ ಹೆಚ್ಚುಕಡಿಮೆ ಸರಿಯಾಗಿರುವದರಿಂದ ಅದನ್ನು ಪುನಃ ಪ್ರಕಟಿಸಲಿಲ್ಲ.)



(೨)
ಶ್ರೀ ನಿರಂಜನ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು ಮತ್ತು ಅವರ ಮುಂದಿನ ಕಲವರು ಶ್ರೀ॥ ॥ಗಳು.

೧ ಅಲ್ಲಮಪ್ರಭು.

"ಕ" ಪ್ರತಿ.

ಶ್ರೀ ಅಲ್ಲಮಪ್ರಭು ಸ್ವಾಮಿಗಳು ಕಲ್ಯಾಣದಲ್ಲಿ ಅನೇಕ ಮಹಿಮೆಗಳ ಮಾಡಿ ೫೬ ದೇಶಂಗಳ ದೇಶಾಂತರವ ಮಾಡಿ ಸವ್ವಾಲಕ್ಷ ಪರ್ವತದಲ್ಲಿ ಇದ್ದ ಮುನಿಗಳಿಗೆ ಜ್ಞಾನೋಪದೇಶವಂ ಮಾಡಿ ಅವಂಗೆ ಮುಕ್ತಿಯಂ ಕೊಟ್ಟ ಸಕಲ ದೇಶಂಗಳಲ್ಲಿ ಇರುವ ಭಕ್ತ ಮಹೇಶ್ವರಂಗೆ ಷಟುಸ್ಥಲ ಜ್ಞಾನೋಪದೇಶವ ಮಾಡುತ ವೀರಶೈವಮತವ ಉದ್ಧರಿಸಿ ೧೨ ವರುಷವಿರ್ದು ಆ ಮೇಲೆ ಕಲ್ಯಾಣಕ್ಕೆ ದಯಮಾಡಿಸಿ ಬಸವೇಶ್ವರನ ಭಕ್ತಿಗೋಸ್ಕರ ಶೂನ್ಯಸಿಂಹಾಸನವೇರಿ ಬಸವೇಶ್ವರ ಮುಂತಾದ ಸಕಲ ಪ್ರಮಥರಿಂ ಪೂಜೆಯಂ ಕೈಕೊಂಡು ಸಕಲರಿಗೂ ಷಟುಸ್ಥಲ ಜ್ಞಾನೋಪದೇಶವಂ ಕೊಟ್ಟ ಲಕ್ಷದಮೇಲೆ ತೊಂಬತ್ತಾರು ಸಾವಿರ ಗಣಂಗಳಪೈಕಿ ಷಟುಸ್ಥಲ ಬ್ರಹ್ಮಗಳಾದ ೧೨ಸಾವಿರ ವಿರಕ್ತರಿಗೆ ಗುರುಗಳಾಗಿ ಇದ್ದು ಶೂನ್ಯಸಿಂಹಾಸನ ಶಿಖಾ ಶೈಲ ತಾವು ಸಿದ್ಧರಾಮೇಶ್ವರ ಮುಂತಾದ ಸಕಲ ಪ್ರಮಥರಿಗೆ ಬೋಧಿಸಿದ ಮಂತ್ರಗೋಪ್ಯ ಎರಡೆಂಬತ್ತು ಕೋಟಿ ವಚನಗಳ ಸಂಗ್ರಹಿಸಿದ ಶಿವಾನುಭಾವ ಪುಸ್ತಕವನ್ನು ಶ್ರೀ ಬಸವೇಶ್ವರರು ಮುಂತಾದ ಸರ್ವ ಪ್ರಮಥರ ಮುಂತಿಟ್ಟುಕೊಂಡು ನಮ್ಮ ನಿರಂಜನ ಸೂತ್ರಕ್ಕೆ ಶೇರಿದ ೧೨ ಸಾವಿರ ಷಟುಸ್ಥಲ ಬ್ರಹ್ಮಗಳಾದ ವಿರಕ್ತಗಣಂಗಳಿಗೆ ಮೂಲಗುರುಗಳಾಗಿ ಇರುವುದೆಂದು ನಿರೂಪಿಸಿ ಶ್ರೀಚನ್ನಬಸವೇಶ್ವರರಿಗೆ ಸದರಿ ನಾಲ್ಕು ವಸ್ತುಗಳನ್ನು ಕೊಟ್ಟು ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ನೇಮಿಸಿ ಸಕಲ ಪ್ರಮಥರಿಗೆ ಆಶೀರ್ವಾದವ ಕೊಟ್ಟ ಆ ಮೇಲೆ ಶ್ರೀ ಶೈಲಕ್ಕೆ ದಯಮಾಡಿಸಿ ಅಲ್ಲಿ ಗೋರಕ್ಷನಾಥ ಅಕ್ಕಮಹಾದೇವಿಯರು ಮುಂತಾದ ಅನೇಕ ಶಿವಯೋಗಿಗಳಿಗೆ ಷಟುಸ್ಥಲ ಜ್ಞಾನೋಪದೇಶವಂ ಮಾಡಿ ಮುಕ್ತಿಮಾರ್ಗವಿ

ದಯಪಾಲಿಸುತ್ತ ಕಾಣಿಕೆಗಳನ್ನು ತರಿಸಿಕೊಳ್ಳುತ್ತ ಇದ್ದರು.

ಆವಾಗ್ಗೆ ದೊಡ್ಡ ತೆಲಗಡ್ಡೆ ಪೇಟೇದೈವ ಸೀಮೇ ಗೌಡಾಧ್ಯರು ಮುಂತಾದದೇವಭಕ್ತರು ರಾ|| ಸ್ವಾಮಿಗಳವರ ಸನ್ನಿಧಾನಕ್ಕೆ ಬಂದು ಸಾಷ್ಟಾಂಗ ಪ್ರಣುತರಾಗಿ ಅರಿಕೆ ಮಾಡಿಕೊಂಡಿದ್ದು ದೊಡ್ಡ ತೆಲಗಡ್ಡೆ ಗ್ರಾಮದಲ್ಲಿರುವ ತಮ್ಮ ಮಠದಲ್ಲಿರುವ ಅಯ್ಯನು ತಮ್ಮ ಇನಾಮು ಭೂಮಿಯಾದ ಗದ್ದೆಯಭತ್ತವನ್ನು ನಾವು ಕೊಟ್ಟವರು ಶಾಸನ ಕಾಣಿಕೆ ಹಣವನ್ನು ಎತ್ತಿ ಸನ್ನಿಧಾನಕ್ಕೆ ಕೊಡದೆ ಅಪಹಾರ ಮಾಡುತ್ತಾನೆ. ಕಾರಣ ಅವನನ್ನು ತೆಗೆದು ಬದಲಿ ಗಣಂಗಳನ್ನು ಇಡಬೇಕೆಂದು ಅರಿಕೆ ಮಾಡಿಕೊಂಡ ಕೂಡಲೆ ತಮ್ಮ ಸನ್ನಿಧಿಯಲ್ಲಿರುವ ಬಸವಲಿಂಗಪ್ಪನವರನ್ನು ತೆಲಗಡ್ಡಿ ಮಠದಲ್ಲಿ ಇಟ್ಟು ಮೊದಲು ಇದ್ದ ಅಯ್ಯನವರನ್ನು ಸ್ವಾಮಿಗಳವರು ತೆಗೆಯುವಂತೆ ಅಪ್ಪಣೆ ಕೊಟ್ಟು ಸದರಿ ದೇವಭಕ್ತರನ್ನು ಕಳುಹಿಸಿಕೊಟ್ಟರು.

(ಇದು ಒಂದು ಕಾಲು ಥಾನಿನ ಅಗಲದ ಪುಸ್ತಕದಿಂದ ಎತ್ತಿ ಬರೆಯಲ್ಪಟ್ಟಿದೆ. ಆ ಪುಸ್ತಕದಲ್ಲಿ ಇಲ್ಲಿಗೆ ಈ ವಿಷಯವು ನಿಲ್ಲಿಸಲ್ಪಟ್ಟು ಇರುವದರಿಂದ ಈ ವಿಷಯವು ಇಲ್ಲಿಗೆ ಮುಗಿದಂತಾಯಿತು.)

ಪ್ರಕಾಶಕ.

(ಈ ಭಾಗದಲ್ಲಿ ೧೦೦ ನೇ ಪುಟದಲ್ಲಿ..........ಹೀಗೆ ಸ್ಥಳ ಬಿಟ್ಟಿರುವ ಕಡೆಯಲ್ಲಿ ಸ್ವಾದಿ ಸೀಮೆಯೊಳಗೆ ವ್ಯಾಪಾರ ಮಾಡಬಾರದಂತ ಕಟ್ಟು ಮಾಡಿಕೊಂಡ ಸಮಾಚಾರವಿದೆ. ಮೊದಲು ಈ ವಿಷಯ ಪ್ರಕಟವಾದದ್ದಕ್ಕೂ ಇದಕ್ಕೂ ಸ್ವಲ್ಪ ಹೆಚ್ಚುಕಡಿಮೆ ಸರಿಯಾಗಿರುವದರಿಂದ ಅದನ್ನು ಪುನಃ ಪ್ರಕಟಿಸಲಿಲ್ಲ.)



(೨)

ಶ್ರೀ ನಿರಂಜನ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು ಮತ್ತು ಅವರ ಮ್ಯುಂ ದಿನ ಕಲವರು ಶ್ರೀ॥ ॥ಗಳು.

೧ ಅಲ್ಲಮಪ್ರಭು.

"ಕ" ಪ್ರತಿ.

ಶ್ರೀ ಅಲ್ಲಮಪ್ರಭು ಸ್ವಾಮಿಗಳು ಕಲ್ಯಾಣದಲ್ಲಿ ಅನೇಕ ಮಹಿಮೆಗಳ ಮಾಡಿ ೫೬ ದೇಶಂಗಳ ದೇಶಾಂತರವ ಮಾಡಿ ಸವ್ವಾಲಕ್ಷ ಪರ್ವತದಲ್ಲಿ ಇದ್ದ ಮುನಿಗಳಿಗೆ ಜ್ಞಾನೋಪದೇಶವಂ ಮಾಡಿ ಅವಂಗೆ ಮುಕ್ತಿಯಂ ಕೊಟ್ಟ ಸಕಲ ದೇಶಂಗಳಲ್ಲಿ ಇರುವ ಭಕ್ತ ಮಹೇಶ್ವರಂಗೆ ಷಟುಸ್ಥಲ ಜ್ಞಾನೋಪದೇಶವ ಮಾಡುತ ವೀರಶೈವಮತವ ಉದ್ಧರಿಸಿ ೧೨ ವರುಷವಿರ್ದು ಆ ಮೇಲೆ ಕಲ್ಯಾಣಕ್ಕೆ ದಯಮಾಡಿಸಿ ಬಸವೇಶ್ವರನ ಭಕ್ತಿಗೋಸ್ಕರ ಶೂನ್ಯಸಿಂಹಾಸನವೇರಿ ಬಸವೇಶ್ವರ ಮುಂತಾದ ಸಕಲ ಪ್ರಮಥರಿಂ ಪೂಜೆಯಂ ಕೈಕೊಂಡು ಸಕಲರಿಗೂ ಷಟುಸ್ಥಲ ಜ್ಞಾನೋಪದೇಶವಂ ಕೊಟ್ಟ ಲಕ್ಷದಮೇಲೆ ತೊಂಬತ್ತಾರು ಸಾವಿರ ಗಣಂಗಳ ಪೈಕಿ ಷಟುಸ್ಥಲ ಬ್ರಹ್ಮಿಗಳಾದ ೧೭ಸಾವಿರ ವಿರಕ್ತರಿಗೆ ಗುರುಗಳಾಗಿ ಇದ್ದು ಶೂನ್ಯಸಿಂಹಾಸನ ಶಿಖಾಶೈಲ ತಾವು ಸಿದ್ಧರಾಮೇಶ್ವರ ಮುಂತಾದ ಸಕಲ ಪ್ರಮಥರಿಗೆ ಬೋಧಿಸಿದ ಮಂತ್ರಗೋಪ್ಯ ಎರಡೆಂಬತ್ತು ಕೋಟಿ ವಚನಗಳ ಸಂಗ್ರಹಿಸಿದ ಶಿವಾನುಭಾವ ಪುಸ್ತಕವನ್ನು ಶ್ರೀ ಬಸವೇಶ್ವರರು ಮುಂತಾದ ಸರ್ವ ಪ್ರಮಥರ ಮುಂತಿಟ್ಟುಕೊಂಡು ನಮ್ಮ ನಿರಂಜನ ಸೂತ್ರಕ್ಕೆ ಸೇರಿದ ೧೨ ಸಾವಿರ ಷಟುಸ್ಥಲ ಬ್ರಹ್ಮಿಗಳಾದ ವಿರಕ್ತಗಣಂಗಳಿಗೆ ಮೂಲಗುರುಗಳಾಗಿ ಇರುವುದೆಂದು ನಿರೂಪಿಸಿ ಶ್ರೀಚನ್ನಬಸವೇಶ್ವರರಿಗೆ ಸದರಿ ನಾಲ್ಕು ವಸ್ತುಗಳನ್ನು ಕೊಟ್ಟ ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ನೇಮಿಸಿ ಸಕಲ ಪ್ರಮಥಂಗೆ ಆಶೀರ್ವಾದವ ಕೊಟ್ಟ ಆ ಮೇಲೆ ಶ್ರೀ ಶೈಲಕ್ಕೆ ದಯಮಾಡಿಸಿ ಅಲ್ಲಿ ಗೋರಕ್ಷನಾಥ ಅಕ್ಕಮಹಾದೇವಿಯರು ಮುಂತಾದ ಅನೇಕ ಶಿವಯೋಗಿಗಳಿಗೆ ಷಟುಸ್ಥಲ ಜ್ಞಾನೋಪದೇಶವಂ ಮಾಡಿ ಮುಕ್ತಿಮಾರ್ಗವಿ

ತ್ತು ತಾವು ಶ್ರೀಶೈಲದ ಮಲ್ಲಿಕಾರ್ಜುನ ಕದಳೀ ಬನದಲ್ಲಿ ತಮ್ಮ ಜ್ಯೋತಿರ್ಮಯಲಿಂಗವಾದ ಗೋಹೇಶ್ವರನಲ್ಲಿ ನಿರ್ವಯಲಾದರು. ಇವರು ನಿರ್ವಯಲಾದ ಸ್ಥಲ ಶ್ರೀಶೈಲದ ಕದಳಿ ಬನದಲ್ಲಿ ಇರುವ ಮಠದಲ್ಲಿ ಇರುತ್ತದೆ. ಆ ಮಠ ಶ್ರೀ ಶೈಲದ ಪಾತಾಳಗಂಗೆ ಇರುವ ಬೆಟ್ಟದಮೇಲೆ ನಿಂತು ನೋಡಿದರೆ ಈ ಹೊತ್ತಿಗೂ ಪ್ರತ್ಯಕ್ಷವಾಗಿ ಕಾಣಿಸುತ್ತದೆ. ಆ ಮಠದಲ್ಲಿ ಷಟುಸ್ಥಲ ಜ್ಞಾನಿಗಳಾದ ಗಣಂಗಳು ಇರುತ್ತಾರೆ. ಆ ಮಠಕ್ಕೆ ಹೋದೇವು ಎಂದರೆ ಹಾದಿ ಸಿಕ್ಕುವುದಿಲ್ಲ

" ಗ " ಪ್ರತಿ.

ಬಸವೇಶ್ವರನ ಭಕ್ತಿಯ ನೋಡಬೇಕೆಂದು ಸಾಕ್ಷಾತ್ ಅಲ್ಲಮಪ್ರಭುಸ್ವಾಮಿಗಳು ಕಲ್ಯಾಣಕ್ಕೆ ದಯಮಾಡಿಸುವಲ್ಲಿ ಬಸವಣ್ಣನು ಶೂನ್ಯ ಸಿಂಹಾಸನವ ರಚಿಸಿ ಅದರ ಮೇಲೆ ಪ್ರಭುಸ್ವಾಮಿಗಳ ಮೂರ್ತಗೊಳಿಸಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದ ಪೂಜೆಯಮಾಡಲು ಬಸವೇಶ್ವರನ ಭಕ್ತಿಯನ್ನು ಕೈಕೊಂಡು ಕಲ್ಯಾಣ ಮೊದಲಾಗಿ ಸಕಲದೇಶದ ಭಕ್ತರುಗಳಿಗೆ ದರ್ಶನಾಶೀರ್ವಾದವಂ ಕೊಡುತ್ತ ಪ್ರಭುದೇವರು ಸಿದ್ಧರಾಮೇಶ್ವರ ಅಕ್ಕ ಮಹಾದೇವಿ ಮುಂತಾದ ಚನ್ನಬಸವೇಶ್ವರ ದೇವರಿಗೆ ನಿರೂಪಿಸಿದ ಮಂತ್ರಗೋಪ್ಯ ಮೊದಲಾದ ಶಿವಾನುಭಾವ ಪುಸ್ತಕ, ನಿರಂಜನ ಶಿಖಾ, ಪ್ರಣವ ರಚಿತವಾದ ಶೈಲ, ಈ ಮೂರು ವಸ್ತುಗಳ ರುದ್ರಮುನಿಸ್ವಾಮಿಗಳು ಮುಂತಾದ ಸಕಲ ಪ್ರಮಥ ಗಣಂಗಳ ಮುಂತಿಟ್ಟುಕೊಂಡು ಶ್ರೀಚನ್ನಬಸವರಾಜೇಂದ್ರರಿಗೆ ಕೊಟ್ಟು ಆಶೀರ್ವಾದವಂ ಮಾಡಿ ಆ ಮೇಲೆ ಇವರೇ ಷಟುಸ್ಥಲಕ್ಕೆ ಅಧಿಪತಿಗಳೆನಿಸಿ ಪ್ರಭುಸ್ವಾಮಿಗಳನರು ರಾಕ್ಷಸನಾಮ ಸಂವತ್ಸರದ ಆಷಾಢ ಶುದ್ಧ ಪಾಡ್ಯ ಸೋಮವಾರ ಪ್ರಾತಃಕಾಲದ ೨೫ ಘಳಿಗೆಗೆ ತಮ್ಮ ಗುಹೇಶ್ವರ ಲಿಂಗದಲ್ಲಿ ಬಯಲಾದರು. ಇವರು ಬಯಲಾದ ಕ್ಷೇತ್ರವು ಲವಣ ಸಮುದ್ರ ತೀರದ ಗೋವೆ ಎಂಬ ಪಟ್ಟಣದಲ್ಲಿ ಗೋಹೇಶ್ವರಲಿಂಗದೊಳಗೆ ಅಡಕವಾದರು. ಇವರು ಬಯಲಾದ ಲಿಂಗವು ಗೋಹೆಯಲ್ಲಿ ಇರುತ್ತದೆ. ಇದಕ್ಕೆ ಪ್ರಭುಲಿಂಗಲೀಲಾ ಶರಣಲೀಲಾಮೃತ ಬಸವೇಶ್ವರ ಪುರಾಣ ಸಿಂಗಿರಾಜ ಪುರಾಣವೇ ಸಾಕ್ಷಿಯು. ಇನ್ನೂ ಕೆಲವು ಪುಸ್ತಕಂಗಳು ಇರುತ್ತವೆ.

ಬಸವೇಶ್ವರರು

"ಕ" ಪ್ರತಿ.

ಈ ಜಗದ್ಗುರುಗಳಾದ ಶೂನ್ಯ ಸಿಂಹಾಸನಾಧೀಶ್ವರರಾದ ಅಲ್ಲಮಪ್ರಭು ಸ್ವಾಮಿಗಳವರು ನಿರ್ವಯಲಾದ ವರ್ತಮಾನವ ಶ್ರೀ ಬಸವೇಶ್ವರದೇವರು ಕೇಳಿ ಅಕಂಡಲೆ ಚನ್ನಬಸವೇಶ್ವರ ಮುಂತಾದ ಸಕಲ ಪ್ರಮಥರ ಕರಸಿ ಪ್ರಭುವಂಶೀಭೂತರಾದ ೧೨ ಸಾವಿರ ಷಟುಸ್ಥಲ ಬ್ರಹ್ಮಗಳಾದ ವಿರಕ್ತರುಗಳ ಸಹಿತ ಪ್ರಭುದೇವರ ಅನುಭಾವ ಮಂಟಪದಲ್ಲಿ ಶಿವಜ್ಞಾನದಿಂ ಮೂರ್ತವ ಮಾಡಿ ಮುಂದೆ ಆಗುವ ಅಘೋಂತರವ ತಮ್ಮ ಜ್ಞಾನ ದೃಷ್ಟಿಯಿಂದ ತಿಳಿದು ಸರ್ವರಿಗೂ ಸೂಚಿಸಿ ತಾವು ಗಣ ಪರ್ವವಂ ಮಾಡಿ ರಕ್ತಾಕ್ಷಿನಾಮ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿ ಮಂಗಳವಾರ ಉದಯದ ಇಪ್ಪತ್ತೈದು ಗಳಿಗೆಯೊಳ್ ಬಸವನತಿ ಲೀಲೆಯಿಂ ಕಪ್ಪಡಿ ಸಂಗಮೇಶ್ವರ ಲಿಂಗದಲ್ಲಿ ಐಕ್ಯವಾಗಲು ಹಡಸದಪ್ಪಣ್ಣ ನೀಲಲೋಚನೆಯು ಈ ಈರ್ವರು ತಮ್ಮಿಷ್ಟಲಿಂಗದಲ್ಲಿ ಐಕ್ಯವಾದರು.

"ಗ" ಪ್ರತಿ.

ಬಸವಣ್ಣನವರು ಕಲಿ ಶಕ ೪೨೬೫ ನೆ ವಿಕ್ರಮ ಸಂವತ್ಸರದಲ್ಲಿ ಕಲ್ಯಾಣಕ್ಕೆ ಚಿತ್ತೈಸಿದರು. ಇವರು ೩೬ ವರುಷ ಪ್ರಧಾನ ಪಟ್ಟವಂ ಆಳಿ ಕಲಿಶಕ ೪೦೦೧ ವರುಷವೆಂಬ ರಾಕ್ಷಸನಾಮ ಸಂವತ್ಸರದಲ್ಲಿ ಕಪ್ಪಡಿ ಸಂಗಮನಾಥದಲ್ಲಿ ಅಡಕವಾದರು.

೨ ಚನ್ನಬಸವ ರಾಜೇಂದ್ರರವರು.

"ಕ" ಪ್ರತಿ.

ಆ ನಂತರ ಬಿಜ್ಜಳರಾಯನು ಬಸವೇಶ್ವರನ ಪ್ರಧಾನಪಟ್ಟವಂ ಚನ್ನಬಸವೇಶ್ವರರಿಗೆ ಕಟ್ಟಲು ತಾವು ಬಿಜ್ಜಳರಾಯನ ರಾಜಕಾರ್ಯವಂ ನಡೆಸುತ್ತ ಲಕ್ಷದಮೇಲೆ ತೊಂಬತ್ತಾರು ಸಾವಿರ ಗಣಸಮೂಹಕ್ಕೆ ತೃಪ್ತಿಪಡಿಸುತ್ತ ಚನ್ನನಂಜಯ್ಯ ಕುದುರೆಶಾಂತಯ್ಯ, ಕೋಲುಶಾಂತಯ್ಯ ಮುಂತಾದ ೧೨ ಸಾವಿರ ಷಟುಸ್ಥಲ ಬ್ರಹ್ಮಗಳಾದ ವಿರಕ್ತರಿಗೆ ಗುರುಗಳಾಗಿ ನಿತ್ಯ ನಂದಿಧ್ವಜ ವ್ಯಾಸನತೋಳು ಮುಂತಾದ ೭೨ ಬಿರುದುಗಳೊಡನೆ ಉತ್ಸಹಂಗೊಳ್ಳುತ್ತ ಕಲ್ಯಾಣದಲ್ಲಿ ಅನೇಕ ಮಹಿಮೆಗಳ ತೋರುತ್ತ ಒಂದು ದಿವಸ ಮುಂದೆ ಆಗುವ ಸೂಚನಾರ್ಥವ ತಿಳಿದು ಇವುಗಳ ಪ್ರಭುದೇವರ

ಅನುಭಾವ ಮಂಟಪದಲ್ಲಿ ಸೂಚಿಸಿ ತಾವು ಉಳುವಿಗೆ ದಯಮಾಡಿಸು ವಾಗ್ಗೆ ಸದರಿ ತಮ್ಮ ಶಿವಾನುಭಾವ ಪುಸ್ತಕವನ್ನು ಸಿದ್ಧರಾಮೇಶ್ವರನಿಗೆ ಕೊಟ್ಟು ಉಳುವಿಗೆ ಹೋಗಲು........

"ಗ" ಪ್ರತಿ.

೧. ಎರಡನೆಯ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಶ್ರೀ ಚನ್ನಬಸವ ರಾಜೇಂದ್ರರು ಅಧಿಪತಿಗಳಾಗಿ ಅಲ್ಲಮಪ್ರಭು ಸ್ವಾಮಿಗಳವರ ಸೂತ್ರಿಕ ರಾಗಿ ಪ್ರಭು-ಸ್ವಾಮಿ-ಗಳವರ ಶೂನ್ಯಸಿಂಹಾಸನಕ್ಕೆ ಕಾರಣ ಕರ್ತರಾಗಿ ಜಗದ್ಗುರುಗಳೆನಿಸಿಕೊಂಡು ರುದ್ರಮುನಿಸ್ವಾಮಿಗಳು ಮುಂತಾದ ಎಲ್ಲಪ್ರ ಮಥಗಣ ಸಮೂಹದಲ್ಲಿ ಇರುವ ಕಾಲದಲ್ಲಿ ಸಿದ್ಧರಾಮೇಶ್ವರನಿಗೆ ದೀಕ್ಷೆ ಯಂ ಮಾಡುವಾಗ್ಗೆ ಚನ್ನಬಸವೇಶ್ವರರೇ ಗುರುಗಳಾಗಿ ಪ್ರಭುವೇ ಸಾಕ್ಷಿ ಜಂಗಮವಾಗಿ ಕಿನ್ನರಿಬ್ರಹ್ಮಯ್ಯಗಳೇ ಕ್ರಿಯಾಮೂರ್ತಿಗಳಾಗಿ ದೀಕ್ಷೆಯನ್ನಿ ತ್ತು ೧೨ ಸಾವಿರ ವಿರಕ್ತರು ಮುಂತಾದ ಎಲ್ಲ ಪ್ರಮಥಗಣ ಸಮೂಹ ದಲ್ಲಿ ಶಿವಾನುಭಾವವನ್ನು ಮಾಡುತ್ತಾ ಸುಖಿಗಳಾಗಿ ಅನುಭಾವ ಮಂಟಪದಲ್ಲಿ ಇದ್ದರು.

೨. ಕಲ್ಯಾಣ ಪಟ್ಟಣದಲ್ಲಿ ಚನ್ನಬಸವಣ್ಣನವರು ಶೂನ್ಯಸಿಂಹಾಸನ ಕ್ಕೆ ಅಧಿಪತಿಗಳಾಗಿ ವೀರಶೈವ ಮತೋದ್ಧಾರಕರಾಗಿ ಗುರು ಲಿಂಗ ಜಂ ಗಮ ದಾಸೋಹದೊಡನೆ ಸಕಲ ಬಿರುದುಗಳಿಂದ ಉತ್ಸಹಂಗೊಳ್ಳು ತ್ತ ಪ್ರಧಾನಪಟ್ಟವಂ ನಡೆಸುತ್ತ ಇರಲಾಗಿ ಬಿಜ್ಜಳ ಅರಸು ಎಂಬ ರಾಜನು ತನ್ನ ಕಾಲಕ್ಕೆ ಸರಿಯಾಗಿ ದುರ್ಬುದ್ಧಿ ಹುಟ್ಟಿ ಹರಳಯ್ಯ ಮಧುವಯ್ಯಗಳೆಂಬ ಶರಣರನ್ನು ಎಳೆಹೂಟೆಯಂ ಕಟ್ಟಿ ಎಳಸಲಿಕ್ಕೆ ಪ್ರ ಯತ್ನವನ್ನು ಪಟ್ಟದ್ದರಿಂದ ಇಂಥ ಉತ್ಪಾತವನ್ನು ಕಣ್ಣಿನಿಂದ ನೋಡ ಬಾರದೆಂದು ಚನ್ನಬಸವರಾಜೇಂದ್ರರು ಈ ಕಾಲ ಸೂಚನೆಯನ್ನು ತಮ್ಮ ದಿವ್ಯಜ್ಞಾನದಿಂದ ನೋಡಿ ಪ್ರಮಥಗಣ ಸಮೂಹಕ್ಕೆ ಸೂಚಿಸಿ ಆ ಮೇಲೆ ಪ್ರಮಥಗಣಂಗಳ ಮುಂತಿಟ್ಟುಕೊಂಡು ತಮ್ಮ ಶಿವಾನುಭಾವ ಚರಂತಿಗೆ ಪುಸ್ತಕವನ್ನು ರುದ್ರಮುನಿಸ್ವಾಮಿಗಳಿಗೆ ಕೊಟ್ಟು ಗಣಪರ್ವದ ಉದ್ದಿಶ್ಯ ಹೋಗುತ್ತೇವೆ ಎಂದು ಬಿಜ್ಜಳರಾಯಗೆ ತಿಳಿಸಿ ಅನಂತರ ಮಲ್ಲಖಾ ನನೆಂಬ ವಜೀರ ಇವನ ಕಡೆಯಿಂದ ೧೨ ಸಾವಿರ ದಂಡು ತೆಗೆದುಕೊಂ ಡು ಗಣಪರ್ವವಂ ಮಾಡಿ ಎಲ್ಲ ಗಣ ಸಮೂಹದೊಡನೆ ಉಳುವಿಗೆ ದ ಯಮಾಡಿಸುತ್ತ ಇರುವಲ್ಲಿ ಈ ಸಂಗತಿಯು ಬಿಜ್ಜಳರಾಯನಿಗೆ ತಿಳಿದು

ತನ, ದಂಡು ಮಾರ್ಬಲವಂ ತೆಗೆದ ಕೊಂಡು ಉಗ್ರಕೋಪದಿಂದ ಬೆನ್ನು ಹತ್ತಿ ಬರುವಕಾಲದಲ್ಲಿ ಹಿರಿಯ ಹೆಗ್ಗಡಿತಿ ಹೊನ್ನಮ್ಮನ ಚಾವಡಿ ಬಳಿಯಲ್ಲಿ ಜಗದೇವ ಮಲ್ಲಿಬಮ್ಮಯ್ಯಗಳೆಂಬ ಶರಣರು ಪಂಜುಗಾರರಾಗಿ ಶಿವಶರಣ ದ್ರೋಹಿಯಾಡ ಬಿಜ್ಜಳ ಆರಸನನ್ನು ಇರಿಯುತ್ತೇವೆ ಎಂದು ಸೂರ್ರು ವೇಳೆ ಸಾರಿ ರಾಕ್ಷಸನಾಮ ಸಂವತ್ಸರದ ಕಾರ್ತಿಕ ಶುದ್ಧ ೧೫ ಮಂಗಳವಾರ ನಿಶಾ ರಾತ್ರಿಯಲ್ಲಿ ಬಿಜ್ಜಳನ ಸಂಹರಿಸಿ ಬುಧವಾರ ಉದಯ ಮೂಡುತ ಕಲ್ಯಾಣ ಪಟ್ಟಣವಂ ಬಿಟ್ಟು ದಯಮಾಡಿಸಿದರು.

೩ ಸಿದ್ಧರಾಮೇಶ್ವರ.

"ಕ" ಪ್ರತಿ.

ಶ್ರೀಸಿದ್ಧರಾಮೇಶ್ವರನು ತಮ್ಮ ಗುರುಗಳಾದ ಶ್ರೀಚನ್ನಬಸವೇಶ್ವರನು ಬೋಧಿಸಿದ ಕರಣಹಸುಗೆ, ಮಿಶ್ರಾರ್ಪಣ, ಹಿರಿಯಮಂತ್ರಗೋಪ್ಯ, ಪ್ರಭುದೇವರಮಂತ್ರಗೋಪ್ಯ, ಎರಡೆಂಬತ್ತೆಂಟು ಕೋಟಿ ವಚನ ಸಂಗ್ರಹಿಸಿದ ಶಿವಾನುಭಾವ ಪುಸ್ತಕವನ್ನು ರುದ್ರಮುನಿ ಸ್ವಾಮಿಗಳು ಮುಂತಾದ ಸಕಲ ಗಣ ಸಮೂಹವನ್ನು ಮುಂತಿಟ್ಟುಕೊಂಡು ತಮ್ಮ ಶಿಷ್ಯರಾದ ಅನಾದಿ ಗಣೇಶ್ವರನೆಂಬುವರಿಗೆ ಕೊಟ್ಟು ತಾವು ಬಿಲ್ಲೇಶಬ್ರಹ್ಮಯ್ಯ ಮುಂತಾದ ಶಿವಶರಣರಿಗೆ ಮೋಕ್ಷವಂ ಕೊಟ್ಟು ಶಿವಮತವನ್ನು ಉದ್ಧಾರವನ್ನು ಮಾಡಿ ಸೊನ್ನಲಾಪುರದಲ್ಲಿ ಅನೇಕ ಮಹಿಮೆಗಳ ಮಾಡಿ ಆ ಸ್ಥಲದಲ್ಲಿ ತಾವು ಕಟ್ಟಿಸಿದ ಕೆರೆಯ ತಟಿಯಲ್ಲಿ ಮಠವನ್ನು ಕಟ್ಟಿಸಿ ಆ ಮಠದಲ್ಲಿ ಯೋಗ ಸಮಾಧಿಯಂ ತೆಗಸಿ ಶಿವಯೋಗದೊಡನೆ ಮೂರ್ತವ ಮಾಡಿದರು. ಇವರ ತೋರುಗದ್ದುಗೆ ಸದರಿ ಸ್ಥಲದಲ್ಲಿ ಇರುತ್ತದೆ. ಇದಕ್ಕೆ ಸದರಿ ಸಿದ್ಧರಾಮೇಶ್ವರ ಸ್ವಾಮಿಗಳ ವಿಷಯ ನಿರೂಪಿಸಿದ ಸಿದ್ಧರಾಮೇಶ್ವರನ ಪುರಾಣವೆ ಸಾಕ್ಷಿ.

"ಗ" ಪ್ರತಿ.

ಶ್ರೀನಿರಂಜನ ರುದ್ರಮುನಿಸ್ವಾಮಿಗಳು ಮಾಡಿದ ನಿರ್ಣಯ

೩ ನೆಯ ಶಿವಾನುಭಾವ ಪಟ್ಟದವರಾದ ರುದ್ರಮುನಿಸ್ವಾಮಿಗಳವರು.

ಚನ್ನ ಬಸವೇಶ್ವರ ದೇವರು ಮುಂತಾದ ಸಕಲಗಣರು ಉಳವಿಗೆ ಹೋಗುವಾಗ್ಗೆ ಆ ಗಣಂಗಳ ಪೈಕಿ ಕೆಲವರು ಮರ್ತ್ಯದಲ್ಲಿ ಇಚ್ಛಾಇದ್ದ ಗಣಂಗಳು ಕಲ್ಯಾಣದಲ್ಲಿ ನಿಂತರು. ಕೆಲವರು ತಮ್ಮ ಇಚ್ಛೆ ಇದ್ದ ಕಡೆಗೆ ಚಿತ್ತೈಸಿದರು. ಈ ಗಣಸಮೂಹದೊಡನೆ ರುದ್ರಸ್ವಾಮಿಗಳವರು ಕಲ್ಯಾಣತ್ರಿಪುರಾಂತಕ ಕೆರೆಯ ತಟಿಯಲ್ಲಿರುವ ಗುಡ್ಡದಲ್ಲಿ ಲಿಂಗಪೂಜೆ

ಜಂಗಮ ದಾಸೋಹದೊಡನೆ ಅಲ್ಲಿರ್ದು ಇನ್ನುಮುಂದೆ ಈ ಮರ್ತ್ಯದಲ್ಲಿ ಚಾತುರ್ಯ ಹೆಚ್ಚಿ ಭಕ್ತಿಬರನಾಗಿ ಗುರು ಲಿಂಗ ಜಂಗಮದಲ್ಲಿ ನಂಬಿಗೆ ಇಲ್ಲದೆ ಸಾವಿರಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ ಹೀಗೆ ಸ್ತುತಿ ನಿಂದೆಗಳು ಹೆಚ್ಚಾಗುತ್ತವೆ. ಇನ್ನು ಲೋಕದಲ್ಲಿರಬಾರದೆಂದು ಈ ಗಣ ಸಮೂಹದ ವಂಶಿಕರಾದ ಗಣಂಗಳಲ್ಲಿ ಮರ್ತ್ಯದಲ್ಲಿ ಪೂಜ್ಯಾಪೂಜ್ಯ ವಿಶ್ವಷವಾಗಬೇಕೆಂದು ಗುರುಸ್ಥಲದ ಶಕ್ತಿ ಹಿಡಿದ ೧೨ ಸಾವಿರ ಜಂಗಮವು ಶಿಕ್ಷೆಗೆ ಕಾರಣರು ಶಂಖಗಿಳಲು ಮುಂತಾದ ಮುದ್ರೆಗಳುಹಿಡಿದ ಅತೀತ ಘನಲಿಂಗ, ಪಟ್ಟ, ಚರಂತಿ, ಮಹಂತು, ಕೂಡಿದ ಲಿಂಗಸ್ಥಲದವರು ಆರುಸಾವಿರ ದೀಕ್ಷೆಗೆ ಕಾರಣರು- ಸದರೀ ಮುದ್ರೆಗಳು ಸ್ಥಾವರವಾದ ಕಾರಣ ಇವುಗಳ ಹಿಡಿಯಬಾರದೆಂದು ಸಿರಾಭಾರ ವೀರಶೈವವುಳ್ಳ ಜಂಗಮಸ್ಥಲದ ವಿರಕ್ತರು ಪ್ರಣವ ಸಂಬಂಧವಾದ ಶಿವಾನುಭಾವ ಪುಸ್ತಕವ ಧರಿಸಿ ಬೋಳ ಮಸ್ತಕ ತೋಳಿಗಾಧಾರ ಮುಂತಾದ ಪಂಚಮುದ್ರೆಗಳಳ್ಳ ಮೂರುಸಾವಿರ ವಿರಕ್ತದೇಶಿಕರೇ ಮೋಕ್ಷಕ್ಕೆ ಕಾರಣರಾಗಿ ಆಚರಿಸುವುದು ಇವರೊಳಗೆ ೬೩ ಪುರಾತನರ ಕಾಯಕವ ಧರಿಸಿದ ಜಂಗಮವು ಗುಂಡಗಪ್ಪರ ಪಹರೆಗಂಟೆ ಕೂಗಿನಮಾರಯ್ಯ ಮುಗ್ಧಸಂಗಯ್ಯ ದೀಪದ ಕಾಯಕ ಬಿಬ್ಬಿಮುಳ್ಳಹಾವುಗೆ ಶಸ್ತ್ರಮುಂತಾದ ಕಾಶೀಧರಿಸಿದವರು ಕಲಿಖ್ಯಾತರು ಮುಂತಾದ ಟಕ್ಕೀಕಾಯಕದವರು, ಹಾಂಗು ವಸ್ತ್ರ ವಿಭೂತಿ ಗಣಾಚಾರಿ ಮಠಪತಿ ಬಂಡಾರಿ ಸ್ಥಾವರಪೂಜಾರಿ ಕಂಬಿ ಮುಂತಾದವರು, ಸಮ್ಮೇಳದಯ್ಯಗಳು ಇವರೆಲ್ಲರೂ ರೂಪಕ್ಕೆ ಯೋಗ್ಯರಲ್ಲದೆ ಪೂಜ್ಯಕ್ಕೆ ಯೋಗ್ಯರಲ್ಲವು. ಆದಕಾರಣ ರೂಪಿಗೆ ನಮಸ್ಕಾರ, ಆಪ್ಯಾಯನಕ್ಕೆ ಅನ್ನಕೊಡಬೇಕು, ಎಂದು ನಿರ್ಣಯಿಸಿ ಆದೇ ಗುಡ್ಡದಲ್ಲಿ ಮಠದೊಳಗೆ ಗವಿಯಂ ಮಾಡಿಸಿ ಆದರಲ್ಲಿ ಯೋಗ ಸಮಾಧಿ ತೆಗಸಿ ಆ ಮಠದಲ್ಲಿ ಸುತ್ತ ಸಾವಿರ ಬಿಲ್ವ ವೃಕ್ಷಗಳ ಹಾಕಿಸಿ ತಾವು ಯೋಗ ಸಮಾಧಿಯಲ್ಲಿ ಪೂರ್ತವ ಮಾಡಿದರು. ಇವರ ತೋರಗದ್ದುಗೆ ಕಲ್ಯಾಣದ ತ್ರಿಪುರಾಂತಕ ಕೆರೆಯದಂಡೆಯಲ್ಲಿರುವ ಮರಿದೇವರಗುಡ್ಡದಲ್ಲಿ ಇರುತ್ತದೆ.

೪ ಅನಾದಿ ಗಣೇಶ್ವರ ಸ್ವಾಮಿಗಳು.

"ಕ" ಪ್ರತಿ

೪ ನೆಯ ಶಿವಾನುಭಾವ ಚರಂತಿಗೆ ಪಟ್ಟದ ಅನಾದಿಗಣೇಶ್ವರ ಸ್ವಾಮಿಗಳು ಚನ್ನನಂಜಯ್ಯ ಕುದುರೆ ಶಾಂತಯ್ಯ ಕೋಲಶಾಂತಯ್ಯ ಮಂಚದ

ಶಾಂತಯ್ಯ ಮುಂತಾದ ಗಣಸಮೂಹದೊಡನೆ ಸಕಲ ದೇಶಂಗಳ ಸಂಚರಿಸುತ್ತ ಶಿವಭಕ್ತರುಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡುತ್ತ ವೀರಶೈವ ಮತವ ಉದ್ಧರಿಸಿ ತಾವು ಶ್ರೀಶೈಲಕ್ಕೆ ದಯಮಾಡಿಸಿ ಆ ಗಿರಿಯಲ್ಲಿ ಮಲ್ಲಿಕಾರ್ಜುನ ಭ್ರಮರಾಂಬೆ ಇವರ ಪ್ರಸನ್ನತೆಯಿಂದ ಮಠವನ್ನು ಮಾಡಿಸಿ ಆ ಮಠದಲ್ಲಿ ಲಿಂಗಪೂಜೆ ಜಂಗಮ ದಾಸೋಹದೊಡನೆ ಪರ್ವತ ಸಿಂಹಾಸನದ ವೀರಭಿಕ್ಷಾವತಿ ಪಟ್ಟಾಧ್ಯಕ್ಷರಿಗೆ ಕ್ರಿಯಾಮೂರ್ತಿಗಳಾಗಿ ಅಲ್ಲಿರುವ ಭಕ್ತ ಮಾಹೇಶ್ವರರಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡುತ್ತ ಕೆಲವು ದಿವಸ ರುದ್ರಮುನಿದೇವರ ಶಿಷ್ಯ ಮುಕ್ತಿಮುನಿದೇವರ ಭಕ್ತಿಯೊಳು ಇದ್ದು ಕಡೆಗೆ ತಮ್ಮಯ ಶಿವಾನುಭಾವ ಚರಂತಿಗೆಯಂ ಆದಿ ಗಣವರನಿಗೆ ಕೊಟ್ಟು ಶಿರಿಶೈಲದ ಮಠದಲ್ಲಿ ಯೋಗಸಮಾಧಿಯಲ್ಲಿ ಮೂರ್ತವ ಮಾಡಿ ನಿರ್ವಯಲಾದರು. ಇವರ ತೋರುಗದ್ದುಗೆ ಶ್ರೀಶೈಲದದಿ ಇರುತ್ತದೆ.

೫ ಆದಿಗಣೇಶ್ವರರು.

"ಕ" ಪ್ರತಿ,

ಇವರ ಶಿಷ್ಯರಾದ ಆದಿ ಗಣೇಶ್ವರನು ಮುಕ್ತಿಮುನಿದೇವರ ಶಿಷ್ಯ ದಿಗಂಬರ ಮುಕ್ತಿಮುನಿ ದೇವರ ಭಕ್ತಿಯೊಳು ಮಲದೇಶಕ್ಕೆ ದಯಮಾಡಿಸಿ ಆ ದೇಶಮುಂತಾದ ಸಕಲ ದೇಶವಂ ಸಂಚರಿಸಿ ಅಲ್ಲಿರುವ ಭಕ್ತ ಗಣಂಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವನ್ನಿತ್ತು ಪಾವನವ ಮಾಡಿ ತಾವು ಸಮುದ್ರತೀರ ಗೋವೆ ಎಂಬ ಪುರವಂ ಕಟ್ಟಿಸಿ ಆ ಪುರದಲ್ಲಿ ಗೋಹೇಶ್ವರಲಿಂಗವನ್ನು ಪ್ರತಿಷ್ಠಿಸಿ ತಾವು ಆ ಸ್ಥಲದಲ್ಲಿ ಲಿಂಗಪೂಜೆ ಜಂಗಮ ದಾಸೋಹದೊಡನೆ ಕೆಲವು ದಿವಸ ಇದ್ದು ಆ ಪಟ್ಟಣವ ಮ್ಲೇಂಛರು ಕೈವಶ ಮಾಡಿಕೊಳ್ಳಲು ಆ ಕೂಡಲೆ ಆ ದೇವಾಲಯದ ಕದವ ಬಂದು ಮಾಡಿಸಿ ಈ ಸ್ಥಲಕ್ಕೆ ಮುಂದೆ ಪ್ರಭುವಂಶೀಭೂತರಾದ ವಿರಕ್ತ ಜಂಗಮವು ಬಂದಾಗ್ಗೆ ಈ ದೇವಾಲಯದ ಬಾಗಿಲ ತೆಗೆದು ಲಿಂಗದಪೂಜೆ ಆಗಲಿ ಈ ಪಟ್ಟಣದಲ್ಲಿ ಇರುವ ಭವಿಗಳು ನಾಶವಾಗಲಿ ಎಂದು ಕುರುಹು ಇಟ್ಟು ಅಲ್ಲಿಂದ ಗೋಕರ್ಣಕ್ಕೆ ದಯಮಾಡಿಸಿ ಅಲ್ಲಿರುವ ಮಹಾಬಲೇಶ್ವರನ ದೇವಾಲಯದಲ್ಲಿ ಇದ್ದು ಶಿವಭಕ್ತಿಯನ್ನು ಅಲ್ಲಿರುವ ಜನರಿಗೆ ತಿಳಿಸಿ ಅಲ್ಲಿಂದ ಉಡುಪಿ ಸುಬ್ರಹ್ಮಣ್ಯ ಧರ್ಮಸ್ಥಳ ನೀಲಗಿರಿ ಬೆಟ್ಟ ಮಲಯಾಳ ಮುಂತಾದ ದೇಶಂಗಳ ಸಂಚರಿಸಿ ಅಲ್ಲಿದ್ದ ಶಿವಭಕ್ತರುಗಳಿಗೆ ಷಟ್‌ಸ್ಥ

ಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವಿತ್ತು ಆ ಬಳಿಕ ಕಾವೇರಿ ನದಿ ಸಮೀಪ ತಲಕಾಡಸೀಮೆಯಲ್ಲಿ ಇರುವ ಒಂದು ಬೆಟ್ಟಕ್ಕೆ ಪ್ರಭುಸ್ವಾಮಿಗಳ ಬೆಟ್ಟವೆಂತ ಹೆಸರಿಟ್ಟು ಅಲ್ಲಿ ಮಠವನ್ನು ಕಟ್ಟಿಸಿ ಆ ಮಠದಲ್ಲಿ ಆ ಸೀಮೆಯಭಕ್ತರ ಭಕ್ತಿಯೊಡನೆ ಲಿಂಗಪೂಜೆ ಜಂಗಮ ದಾಸೋಹವ ಮಾಡುತ್ತ ಗಣ ಸಮೂಹ ಸಮೇತರಾಗಿ ಕೆಲವು ವರುಷ ಇದ್ದರು. ಆ ಬಳಿಕ ಆ ಗಣಸಮೂಹದ ಪೈಕಿ ನಿರ್ವಾಣಯಗಣೇಶ್ವರರೆಂಬವರಿಗೆ ತಮ್ಮ ಶಿವಾನುಭಾವ ಚರಂತಿಗೆಯಂ ಕೊಟ್ಟು ಗೋಮೆಯಲ್ಲಿ ಬಯಲಾದರು ಇವರು ಬಯಲಾದ ಲಿಂಗದಾಲಯವು ಈಗ ಹಾಲಿ ಅದೆ.

೬ ನಿರ್ವಾಣಯ ಗಣೇಶ್ವರರು.

ಇವರ ಬಳಿಯಲ್ಲಿ ಇದ್ದ ಗಣ ಸಮೂಹದ ಪೈಕಿ ಮಾದೇಶ್ವರರೆಂಬ ಒಬ್ಬ ವಿರಕ್ತರು ತಮ್ಮ ಗುರುಗಳಾದ ನಿರ್ವಾಣಯಗಣನಾಥರು ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ನಿರಂಜನ ಗಣನಾಥನಿಗೆ ಮಾಡಲು ಈ ಮನಸ್ತಾಪದಿಂದ ಗುರುಗಳಿಗೆ ಹೇಳದೆ ೩–೪ ಬೆಟ್ಟಗಳ ದಾಟಿ ಒಂದು ಬೆಟ್ಟದಲ್ಲಿ ಹೋಗಿ ವಾಸವ ಮಾಡಲು ಅವರನ್ನು ಕರಕೊಂಡು ಬರುವುದಕ್ಕೆ ತಾವು ಮೂರ್ತಿ ಮಾಡುವ ಬಸವನನ್ನೂ ತಮ್ಮ ಲಿಂಗಪೂಜೆಯ ಕಾಲದಲ್ಲಿ ಹೆಡೆಎತ್ತಿಕೊಂಡು ಇರುವಂಥ ಸರ್ಪನನ್ನೂ ಕಳುಹಿಸಿ ಆಮೇಲೆ ಕೆಲವು ಗಣಂಗಳನ್ನು ಕಳುಹಿಸಿದರೂ ಮಾದೇಶ್ವರನು ಬಾರದೆ ನಿರ್ವಯಲಾದದ್ದನ್ನು ಕೇಳಿ ತಾವೂ ನಿರ್ವಯಲಾದರು. ಇವರ ತೋರಗದ್ದುಗೆ ಶಂಭುಲಿಂಗನಬೆಟ್ಟದ ಸಮೀಪವಾದ ಪ್ರಭುಸ್ವಾಮಿಗಳ ಬೆಟ್ಟದಲ್ಲಿ ಇರುತ್ತದೆ ಸದರೀ ಮಾದೇಶ್ವರನು ಬಯಲಾದ ಬೆಟ್ಟಕ್ಕೆ ಮಾದೇಶ್ವರನ ಬೆಟ್ಟವೆನ್ನುತ್ತಾರೆ. ಸದರಿ ಗುರುಗಳು ಕಳುಹಿಸಿದ ಬಸವನು ಹೋದ ಹಾದಿಗೆ ಬಸವನ ಹಾದಿ ಎನ್ನುತ್ತಾರೆ. ಸರ್ಪಹೋದ ಹಾದಿಗೆ ಸರ್ಪನ ಹಾದಿ ಎನ್ನುತ್ತಾರೆ ಈಹೊತ್ತಿಗೂ ಮಾದೇಶ್ವರ ಬೆಟ್ಟದಲ್ಲಿ ವರುಷಕ್ಕೆ ೩ ವೇಳೆ ಜಾತ್ರೆ ಆಗುತ್ತದೆ.

೭ ನಿರಂಜನ ಸ್ವಾಮಿಗಳು

೭ ನೇಯ ಶಿವಾನುಭಾವ ಚರಂತಿಗೆ ಪಟ್ಟದ ನಿರಂಜನ ಸ್ವಾಮಿಗಳು ತಮ್ಮ ಗಣಸಮೂಹದಲ್ಲಿ ಇದ್ದ ನೂರಒಂದು ವಿರಕ್ತರೊಡನೆ ದೇಶದಲ್ಲಿ ಸಂಚರಿಸಿ ಶಿವಮತದ ಉದ್ಧಾರವನ್ನು ಮಾಡಿ ಭಕ್ತ ಮಾಹೇಶ್ವರರಿಗೆ ಷಟ್‌ಸ್ಥಲ ಜ್ಞಾನಬೋಧೆಯನ್ನು ಮಾಡಿ ಮೋಕ್ಷಮಾರ್ಗವನ್ನು ಕೊಡುತ

ಆ ದೇಶದ ಪ್ರಾಂತದಲ್ಲಿರುವ ಒಂದು ಬೆಟ್ಟಕ್ಕೆ ನೂರೊಂದು ಸ್ವಾಮಿ ಬೆಟ್ಟವೆಂತ ಹೆಸರಿಟ್ಟು ಅಲ್ಲಿ ಮಠವನ್ನು ಕಟ್ಟಿಸಿ ಆ ಮಠದಲ್ಲಿ ಆ ದೇಶಭಕ್ತ ಮಾಹೇಶ್ವರರ ಭಕ್ತರೊಡನೆ ಕೆಲವು ಕಾಲ ಇದ್ದು ತಮ್ಮ ಗಣ ಸಮೂಹದ ಪೈಕಿ ಜ್ಞಾನಾನಂದ ಮುನೀಶ್ವರ ಸ್ವಾಮಿಗಳಿಗೆ ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ಮಾಡಿ ಅದೇ ಬೆಟ್ಟದಲ್ಲಿ ಬಯಲಾದರು. ಇವರ ತೋರಗದ್ದುಗೆ ನೂರೊಂದಯ್ಯನ ಬೆಟ್ಟದಲ್ಲಿ ಇರುತ್ತದೆ.

೮ ಜ್ಞಾನಾನಂದ ಸ್ವಾಮಿಗಳು.

೮ ನೆಯ ಶಿವಾನುಭಾವದ ಚರಂತಿಗೆ ಪಟ್ಟದ ಜ್ಞಾನಾನಂದ ಸ್ವಾಮಿಗಳು ಅದೇ ಮಠದಲ್ಲಿಯೇ ತಮ್ಮ ಗಣಸಮೂಹದೊಡನೆ ಲಿಂಗಪೂಜೆ ಜಂಗಮ ದಾಸೋಹ ಮಾಡುತ್ತ ಆ ದೇಶದಲ್ಲಿ ತಮ್ಮ ಕಡೆಯಿಂದ ಗಣಂಗಳ ಕಳುಹಿಸಿ ಕಾಣಿಕೆಗಳ ತರಿಸಿಕೊಳ್ಳುತ್ತ ಅನಾಚಾರದಲ್ಲಿ ಇದ್ದ ಶಿವಭಕ್ತರನ್ನು ಆಚಾರದಲ್ಲಿ ತರುತ್ತ ತಿರುಗಿಬಿದ್ದವರ ಕಡೆಯಿಂದ ಅಪರಾಧ ಕಾಣಿಕೆ ತರಿಸುತ್ತ ಬಂದ ಭಕ್ತಗಣಂಗಳಿಗೆ ಷಟುಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವನ್ನು ಕೊಡುತ್ತ ತಾವು ಕೆಲವು ಕಾಲವಲ್ಲಿದ್ದು ಆಮೇಲೆ ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ಆತ್ಮಗಣೇಶ್ವರನಿಗೆ ಕೊಟ್ಟು ಬಯಲಾದರು. ಇವರ ತೋರುಗದ್ದುಗೆ ನೂರೊಂದುಸ್ವಾಮಿ ಬೆಟ್ಟದಲ್ಲಿ ಇರುತ್ತದೆ.

೯ ಆತ್ಮ ಗಣನಾಥರು.

೯ನೆಯ ಶಿವಾನುಭಾವ ಚರಂತಿಗೆ ಪಟ್ಟದ ಆತ್ಮಗಣನಾಥರೆಂಬ ಸ್ವಾಮಿಗಳು ತಮ್ಮಗಣ ತಿಂಥಿಣಿ ಸಹಿತವಾಗಿ ಕಂಚಿ ಕಾಳಹಸ್ತಿ ಚಿದಂಬರ ತಿರುಣಾಮಲೆ ಕುಂಭಕೋಣ ಮುಂತಾಗಿ ಚೋಳದೇಶದಲ್ಲಿ ಸಂಚರಿಸುತ್ತ ಅರುಣಾಚಲಕ್ಕೆ ದಯಮಾಡಿಸಿ ಅಲ್ಲಿರುವ ಕೂಗುನಮಶ್ಶಿವಾಯ ಗುರುನಮಶ್ಶಿವಾಯ ಎಂಬ ಗಣಂಗಳಿಗೆ ಷಟುಸ್ಥಲ ಜ್ಞಾನೋಪದೇಶವಂ ಮಾಡಿ ಅದೇ ತಿರುವಣ್ಣಾಮಲೆಯಲ್ಲಿ ಮಠವನ್ನು ಮಾಡಿಸಿ ಆ ಮಠದಲ್ಲಿ ಲಿಂಗಪೂಜೆ ಜಂಗಮದಾಸೋಹಗಳ ಮಾಡುತ್ತ ಆ ದೇಶದ ಭಕ್ತರುಗಳು ಶರಣಾಗತರಾದವರನ್ನು ರಕ್ಷಿಸುತ್ತ ದುರ್ಜನರ ಶಿಕ್ಷಿಸುತ್ತ ತಮ್ಮ ಕಡೆಯಿಂದ ಶಾಖಾಚರಮೂರ್ತಿಗಳ ಕಳುಹಿಸಿ ಕಾಣಿಕೆ ಎತ್ತಿಸಿ ತರಿಸುತ್ತ ಅ

ವೇ ಕ್ಷೇತ್ರದಲ್ಲಿ ಇರ್ದು ಆಬಳಿಕ ತಮ್ಮ ಶಿವಾನುಭಾವ ಚರಂತಿಕೆ ಪಟ್ಟವನ್ನು ಅಧ್ಯಾತ್ಮಗಣನಾಥಂಗೆ ಮಾಡಿ ಅಲ್ಲಿಯೇ ಬಯಲಾದರು. ಇವರ ತೋರುಗದ್ದುಗೆ ತಿರುಣಾಮಲೆಯಲ್ಲಿ ಇರುತ್ತದೆ. ಇವರ ಶಾಖಾಗಣಂಗಳಾದ ಕೂಗುನಮಶ್ಶಿವಾಯ ಗುರುನಮಶ್ಶಿವಾಯ ಇವರ ಮಠಗಳು ತಿರುವಣ್ಣಾಮಲೆ ಚಿದಂಬರದಲ್ಲಿ ಇರುತ್ತವೆ.

೧೦ ಅಧ್ಯಾತ್ಮ ಗಣೇಶ್ವರರು.

೧೦ ನೆಯ ಶಿವಾನುಭಾವ ಚರಂತಿಗೆ ಪಟ್ಟದ ಅಧ್ಯಾತ್ಮ ಗಣೇಶ್ವರ ಸ್ವಾಮಿಗಳು ತಮ್ಮ ಗಣ ಸಮೂಹದೊಡನೆ ಚೋಳದೇಶವಂ ಸಂಚರಿಸುತ್ತ ಪೆನಗುಂಡೆ, ಹಂಡೆ, ಆನಂದಪುರ, ಬುಕ್ಕಾಪಟ್ಟಣ, ನಂದಿ, ಮಹಾನಂದಿ, ಮುಂತಾದ ಚೋಳ ದೇಶದಲ್ಲಿ ಇರುವ ವೈಷ್ಣವ ಜೈನ ಮುಂತಾದವರನ್ನ ಶಾಸ್ತ್ರಮುಖದಿಂದ ಗೆದ್ದು ಆ ದೇಶಂಗಳಲ್ಲಿ ತಿರುಗಿ ಬಿದ್ದ ಜನರಿಗೆ ಬಹಿಷ್ಕಾರವನ್ನು. ಕೊಟ್ಟು ಶರಣಾಗತರಾದವರ ಕಡೆಯಿಂದ ಅಪರಾಧ ಕಾಣಿಕೆ ತೆಗೆದುಕೊಳ್ಳುತ್ತ ಶ್ರೀಶೈಲಕ್ಕೆ ದಯಮಾಡಿಸಿ ಆ ಕ್ಷೇತ್ರದಲ್ಲಿ ಕೆಲವು ದಿವಸ ಇರ್ದು ಆ ಮೇಲೆ ತಮ್ಮ ಗಣ ಸಮೂಹದ ಪೈಕಿ ರುದ್ರಮುನಿಸ್ವಾಮಿಗಳಿಗೆ ತಮ್ಮಶಿವಾನುಭಾವ ಚರಂತಿಗೆ ಪಟ್ಟವನ್ನು ಮಾಡಿ ತಾವು ನಿರ್ವಯಲಾದರು. ಇವರ ತೋರುಗದ್ದುಗೆ ಶ್ರೀಶೈಲದಲ್ಲಿ ಇರುತ್ತದೆ.

೧೧ ಶ್ರೀ ರುದ್ರ ಮುನೀಶ್ವರರು.

೧೧ನೆಯ ಶಿವಾನುಭಾವ ಚರಂತಿಗೆ ಪಟ್ಟದ ಶ್ರೀರುದ್ರಮುನೀಶ್ವರರು ಭಕ್ತಿ ಜ್ಞಾನ ವೈರಾಗ್ಯವುಳ್ಳ ಘನವಿರಕ್ತಿಭಾವದಿಂದ ಗಣಸಮೂಹದೊಡನೆ ದೇಶಂಗಳ ಸಂಚರಿಸುತ್ತ ಹೊಯ್ಸಳ ದೇಶಕ್ಕೆ ದಯಮಾಡಿಸಿ ಆ ದೇಶದಲ್ಲಿ ಇರುವ ಹಳೇಬೀಡು ವೇಲಾಪುರ, ಸೋಸಲೆ, ಚನ್ನರಾಯಪಟ್ಟಣ, ಆನೆಗೊಂದಿ, ವಿದ್ಯಾನಗರಪಂಪಾಕ್ಷೇತ್ರ, ಕುಮಾರಸ್ವಾಮಿ ಮುಂತಾದ ದೇಶಂಗಳಲ್ಲಿರುವ ಭಕ್ತರಿಗೆ ಷಟ್ಸ್ಥಲ ಜ್ಞಾನೋಪದೇಶವಂ ಮಾಡಿ ವಿದ್ಯಾನಗರ ಮುಂತಾದ ದೇಶಗಳಲ್ಲಿರುವ ವೀರಣ್ಣಒಡೆಯರವರು, ಕರಸ್ಥಲದನಾಗಿದೇವರು, ಗುರುಬಸವದೇವರು, ಬಾಲಲಿಂಗಣ್ಣ, ಬತ್ತಲೇಶ್ವರ, ಬಿಲ್ಲಶಾಂತಯ್ಯ, ಮುಂತಾದ ನೂರೊಂದು ವಿರಕ್ತರಿಗೆ ಗುರುಗ

ಳಾಗಿ ಪ್ರೌಢದೇವೇಂದ್ರನೆಂಬ ರಾಜನ ಭಕ್ತಿಯೊಡನೆ ಕೆಲವು ದಿವಸ ವಿದ್ಯಾನಗರದಲ್ಲಿದ್ದು ಆ ದೇಶದಲ್ಲಿ ಕಾಣಿಕೆಯಂ ಎತ್ತಿಸುತ್ತ ತಿರುಗಿಬಿದ್ದವರ ಶಿಕ್ಷಿಸಿ ಶರಣಾಗತರಾದವರ ರಕ್ಷಿಸಿ ಅಪರಾಧ ಕಾಣಿಕೆಯಂ ಒಪ್ಪಿಸಿಕೊಂಡು ಲಿಂಗಪೂಜೆ . ಜಂಗಮದಾಸೋಹದೊಡನೆ ದೇಶಂಗಳ..........

(ಮೇಲೆ ' ರುದ್ರಮುನಿಸ್ವಾಮಿಗಳು ' ಎಂಬ ಹೆಸರಿನ ಕೆಳಗೆ ಗೀಟು ಹಾಕಲ್ಪಟ್ಟಿದೆ. ಇದರ ಕಾರಣವು ಗೊತ್ತುಮಾಡಲ್ಪಡಬೇಕಾಗಿದೆ)

" ಕ " ಪ್ರತಿಯಲ್ಲಿ ನಿರಂಜನ ಶ್ರೀ॥ ॥ ಗಳ ವಿಚಾರವು ಮೇಲೆ ಕಂಡ ಪ್ರಕಾರ ಇದ್ದಷ್ಟನ್ನು ಮುದ್ರಿಸಿ ಇದೆ ಈ ಪ್ರತಿಯಲ್ಲಿ ಒಂದು ಕಡೆಯಲ್ಲಿ ಬರೆಯಲ್ಪಟ್ಟಿರುವ ಶ್ರೀ ಅಲ್ಲಮಪ್ರಭು ಪರಂಪರೆಯ ಪಟ್ಟಿಯಲ್ಲಿ "೧೧ನೆಯ ರುದ್ರಮುನೀಶ್ವರರು, ಅವರಿಂದ ೧೨ ಬಸವಪ್ರಭು ಸ್ವಾಮಿಗಳು, ಅವರಿಂದ ೧೩ ಆದಿಲಿಂಗೇಶ, ಬಳಿಕವರಿಂದ ೧೪ ಚನ್ನವೀರೇಶ, ಇವರ ನಂತರ ೧೫ ಗೋಸಲಯತೀಶ, ಇವರಿಂದ ೧೬ ಶಂಕರೇಶ, ಇವರಿಂದ ೧೭ ದಿವ್ಯಲಿಂಗೇಶ, ಇವರಿಂದ ೧೮ ಶ್ರೀ ಚನ್ನಬಸವೇಶ, ಇವರ ಕರಸಂಜನಿತ ೧೯-ತೋಂಟದ ಸಿದ್ಧಲಿಂಗೇಶಸ್ವಾಮಿಗಳು " ಹೀಗೆ ಬರೆದಿರುತ್ತದೆ.

ಪ್ರಕಾಶಕ.

೩.

ಶ್ರೀ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಸ್ವಾಮಿಗಳು ಮತ್ತು ಅವರ ಮುಂದಿನ ಶ್ರೀ॥ ॥ಗಳು.

"ಗ" ಪ್ರತಿ.

ಶಿವಾನುಭಾವ ಚರಂತಿಗೆ ಪಟ್ಟದ ತೋಂಟದ ಸಿದ್ಧೇಶ್ವರಸ್ವಾಮಿಗಳವರು ಅನೇಕ ದೇಶಂಗಳಲ್ಲಿ ಸಂಚರಿಸುತ್ತ ಮೂರು ಸಾವಿರ ವಿರಕ್ತರಿಗೆ ಗುರುಗಳಾಗಿ ಅನೇಕ ಮಠಗಳ ಸಂಪಾದಿಸಿ ಆ ಮಠಗಳಿಗೆ ವಿರಕ್ತಿ ಆಶ್ರಮಗಳ ಮಾಡಿ ಅವರುಗಳ ಪೈಕಿ ಕೆಲವು ಮೂರ್ತಿಗಳಿಗೆ ಏಳುನೂರು ಚರಂತಿಗೆ ಪುಸ್ತಕವ ಕೊಟ್ಟು ಅವರವರ ಯೋಗ್ಯತೆ ಪ್ರಕಾರ ಗಣಸಮೂಹವ ಕೊಟ್ಟು ಆಂದೋಳಿಕ ಮುಂತಾದ ಬಿರುದುಗಳ ಕೊಟ್ಟು ಆ ಏಳುನೂರು ಚರಮೂರ್ತಿಗಳು ಮೂರುಸಾವಿರ ವಿರಕ್ತರು ಮುಂತಾದ ಗಣಸಮೂಹದೊಡನೆ ಹಲವು ದಿವಸ ಸಂಚರಿಸಿದರು. ಆ ಚರಮೂರ್ತಿಗಳೊಳಗೆ ಕೆಲವರು ಪಂಚಶಿಖವುಳ್ಳವರು(ಲೋಚಿನವರು) ಇದ್ದರು. ಕೆಲವರು ಒಪ್ಪತ್ತು ಮುಗಿಯುವವರು ಇದ್ದರು. ಕೆಲವರು ಶಿವಪೂಜಾಧುರಂಧರರು ಇದ್ದರು. ಕೆಲವರು ಲಿಂಗನೋಟ ನಿರೀಕ್ಷಣೆಯುಳ್ಳವರು ಇದ್ದರು. ಕೆಲವರು ಪಚ್ಚಕಂಥೆ ಧರಿಸಿದವರು ಇದ್ದರು. ಹೀಗೆ ಅವರವರ ಸ್ವಾಭಾವಿಕ ಗುಣವೇನಿರುವುದೋ ಆ ಪ್ರಕಾರ ಬುಡಕಟ್ಟುಗಳಾದವು. ಏಳುನೂರು ಚರಮೂರ್ತಿಗಳಿಗೂ ಏಳುನೂರು ಬುಡಕಟ್ಟೆಂದು ಹೆಸರು ಬಂದವು. ಆಯಾಯ ಬುಡಕಟ್ಟಿನ ಚರಮೂರ್ತಿಗಳ ಸೂತ್ರಿಕರಿಗೆ ಅವೇ ಬುಡಕಟ್ಟಿನ ಹೆಸರುಗಳೇ ಇವೆ. ಈ ಬುಡಕಟ್ಟುಗಳ ಮಠಗಳ ಪೈಕಿ ಯಾವದಾದರೂ ಒಂದು ಮಠದ ಚರಂತಿಗೆ ಸೂತ್ರ ಲೋಪವಾದರೆ ಆ ಚರಂತಿಗೆ ಸೂತ್ರ ಆಯಾ ಬುಡಕಟ್ಟಿನ ಚರಮೂರ್ತಿಗಳಿಂದಲೇ ಚರಂತಿಗೆ ಎತ್ತಿಸತಕ್ಕದ್ದು. ಬದಲಿ ಬುಡಕಟ್ಟಿನ ಚರಮೂರ್ತಿಗಳ ಕಡೆಯಿಂದ ಚರಂತಿಗೆ ಕೊಡಿಸಕೂಡದು. ಆಯಾಯ ಬುಡಕಟ್ಟಿನ ಮೂರ್ತಿಗಳ

ಚರಂತಿಗೆಯೇ ಆಗಲಿ ಅಥವಾ ಸ್ಥಲ ಕೂಡಿಸಿಕೊಂಬುವುದೇ ಆಗಲಿ ತಮ್ಮ ತಮ್ಮ ಬುಡಕಟ್ಟಿನ ಗಣಂಗಳೇ ಮಾಡತಕ್ಕದ್ದು. ಆಯಾಯ ಬುಡಕಟ್ಟಿನ ಮೂರ್ತಿಗಳು ದೊರೆಯದ ಪಕ್ಷದಲ್ಲಿ ಎರಡನೇ ಬುಡ ಕಟ್ಟಿನವರ ಕಡೆಯಿಂದ ಮಾಡಿಸತಕ್ಕದ್ದು. ಮತ್ತು ಒಂದೇಬುಡಕಟ್ಟಿನವರ ಮಠಗಳನ್ನು ಎರಡನೆಯ ಬುಡಕಟ್ಟಿನ ಮೂರ್ತಿಗಳು ತಕ್ಕೊಳ್ಳಬಾರದು. ಬುಡಕಟ್ಟಿನ ಮಠಗಳು ಆಯಾಯ ಬುಡಕಟ್ಟಿನವರಿಗೆ ಸಲ್ಲತಕ್ಕದ್ದು, ಎಂತ ತೋಂಟದ ಸಿದ್ಧೇಶ್ವರ ಸ್ವಾಮಿಗಳವರು ನಿರ್ಣಯಿಸಿದರು. ಆಯಾಯ ಬುಡಕಟ್ಟಿನ ಮಠಗಳು ಈಗ ದೇಶಂಗಳಲ್ಲಿ ಪ್ರಸಿದ್ಧವಾಗಿ ಇದ್ದಾವೆ

ಆ ತೋಂಟದಾರ್ಯ ಸ್ವಾಮಿಗಳವರು ತಮ್ಮ ಸನ್ನಿಧಿಯಲ್ಲಿ ಇದ್ದ ಸಮಸ್ತ ಚರಮೂರ್ತಿಗಳಿಗೆ ದೇಶ ಸಂಚರಿಸುವಂತೆ ನಿರೂಪವ ಕೊಟ್ಟು ಅವರವರ ಸಂಗಡ ತಕ್ಕತಕ್ಕಷ್ಟು ಆಚಾರಂಗಳಲ್ಲಿ ಗಣಸಮೂಹವ ಕಳುಹಿಸಿದರು.

ಇತ್ತ ತಮ್ಮ ಸಂಗಡ ಸ್ವಲ್ಪ ಶಿಷ್ಯ ಮಂಡಳಿಗಳ ಕರಕೊಂಡು ಸ್ವದೇಶದಲ್ಲಿ ಸಂಚರಿಸುತ್ತಿರುವಲ್ಲಿ ಕಗ್ಗೇರಿ ಗೌಡನು ತನ್ನ ಮನೆಗೆ ಚಿತ್ತಯಿಸಬೇಕೆಂದು ಬಹುತರ ಅರಿಕೆ ಮಾಡಿಕೊಂಡದ್ದರಿಂದ ಅವನ ಬಿನ್ನಹವ ಒಪ್ಪಿಕೊಂಡರು. ಅವನು ತನ್ನ ಮನೆಯಲ್ಲಿ ಪಾಕ ಶಾಖಾದಿಗಳ ಸಿದ್ಧ ಮಾಡಿಸಿ ಮನೆಗೆ ಕರಕೊಂಡು ಹೋದನು. ಅಷ್ಟರಲ್ಲಿ ಪರರಾಯರ ದಂಡು ಬಂದು ಗೌಡನ ಗ್ರಾಮಕ್ಕೆ ಮುತ್ತಿಗೆಯ ಹಾಕುವಲ್ಲಿ ಆ ಗೌಡನು ಆಯುಧ ಸಮೇತನಾಗಿ ಕೆಲವು ಜನರ ತಕ್ಕೊಂಡು ಲಡಾಯಕ್ಕೆ ಮುಖ್ಯಸ್ಥನಾಗಿ ದಂಡು ಸಹಿತವಾಗಿ ಅವರ ಬೆನ್ನು ಹತ್ತಿ ಹೋದನು. ಆಗ್ಯೆ ಸ್ವಾಮಿಗಳವರು ದೃಢವಿಲ್ಲದ ಮನೆಯ ಯಜಮಾನನ ಭಕ್ತಿ ಕೈಕೊಳ್ಳಬಾರದೆಂದು ಮಾಡಿದ ಪಾಕ ಶಾಖಾದಿಗಳನ್ನು ಒಂದು ಹಗೆಯದಲ್ಲಿ ಇಡಿಸಿ ಚಿತ್ತಯಿಸಿದರು. ಆ ಮೇಲೆ ಸ್ವಾಮಿಗಳವರು ತಮ್ಮ ಸನ್ನಿಧಿಯಲ್ಲಿ ಇದ್ದ ಶಿಷ್ಯರುಗಳಿಗೆ ಅಪ್ಪಣೆ ಕೊಟ್ಟು ಕಳುಹಿಸಿದರು.

ಇತ್ತ ಸ್ವಾಮಿಗಳವರು ಕಗ್ಗೇರಿ ಗೌಡನ ಭಕ್ತಿ ಗೋಸ್ಕರ ಬಿನ್ನಹದೊಳಗೆ ಸಿಕ್ಕಿರುವ ಕಾರಣ ಅವನು ಬರುವ ತನಕ ಅದೇ ಗ್ರಾಮದ ಒಂದು ವನಾಂತರದಲ್ಲಿ ಲಿಂಗ ಪೂಜಕರಾಗಿ ಸ್ಥಿರ ಪದ್ಮಾಸನದಿಂದ ಮಾವಿನ ವೃಕ್ಷದಡಿಯಲ್ಲಿ ಮೂರ್ತವ ಮಾಡಿದ

ರು. ಇವರ ಮೇಲೆ ಹುತ್ತ ಬೆಳೆದು ಮುಚ್ಚಿಕೊಂಡಿರುವಲ್ಲಿ ಆ ಹುತ್ತದಲ್ಲಿ ಅನೇಕ ಸರ್ಪ ವೃಶ್ಚಿಕಗಳು ವಾಸ ಮಾಡಿಕೊಂಡು ಇದ್ದವು. ಇತ್ತ ಸದರಿ ಗೌಡನು ೧೨ ವರ್ಷವೂ ಲಡಾಯಕ್ಕೆ ಹೋದವನು ಬರಲಿಲ್ಲವಾದ ಕಾರಣ ಸದರಿ ಗೌಡನ ಮನೆಯ ಗೋವು ದಿನಚರಿ ಆ ವನಾಂತರಕ್ಕೆ ಹೋಗಿ ಆ ಹುತ್ತದ ಮೇಲೆ ಕ್ಷೀರವನ್ನು ಕರೆದು ಬರುತ್ತಾ ಇತ್ತು ಆ ಬಳಿಕ ಸದರಿ ಗೌಡನು ಲಡಾಯದಲ್ಲಿ ಗೆದ್ದು ಮನೆಗೆ ಬಂದನು. ಅನಂತರ ಸ್ವಾಮಿಯವರು ನಾನು ಲಡಾಯಕ್ಕೆ ಹೋಗುವಾಗ್ಯೆ ಮನೆಯಲ್ಲಿ ಇದ್ದವರು ಎಲ್ಲಿಗೆ ಹೋದರು? ಎಂತ ಮನೆಜನಗಳ ಕೇಳುವಲ್ಲಿ ನೀವು ಹೋದ ದಿನವೇ ಲಿಂಗಪೂಜೆ ಮಾಡುತ್ತಿದ್ದವರು ಲಿಂಗ ಪೂಜೆ ಆದನಂತರ ಎಡೆಮಾಡುವುಗಕ್ಕೆ ಹೋಗುವಲ್ಲಿ ಮನೆಯ ಯಜಮಾನನಿಲ್ಲದೆ ತೃಪ್ತಿ ಮಾಡತಕ್ಕದಿಲ್ಲವೆಂದು ಮಾಡಿದ ಪದಾರ್ಥವನ್ನೆಲ್ಲ ಹೊತ್ತು ಒಂದು ಹಗೆಯ-ದಲ್ಲಿ ಭೂಗತವನ್ನು ಮಾಡಿಸಿ ಮರುದಿವಸವೇ ಚಿತ್ತಯಿಸಿದವರು ಎಲ್ಲಿ ಹೋದರೋ! ಎಂತ ಹೇಳಿದರಿಂದ ಶಿವ ಶಿವಾ ಇಲ್ಲಿಗೆ ೧೨ ವರುಷವಾಯಿತು. ನನ್ನ ಭಕ್ತಿ ಸಲ್ಲಲಿಲ್ಲ, ಎನುತ ವ್ಯಸನದಿಂದ ಹುಡುಕುತ್ತ ಇರುವಲ್ಲಿ ಒಂದು ದಿವಸ ಸದರಿ ಗೌಡನು ತನ್ನ ಮನದಲ್ಲಿ ವಿರಕ್ತರು ಮಾಯಕ್ಕೆ ಸಿಕ್ಕಲಿಲ್ಲ. ಮದನ ಮರ್ದನ ಮಾಯಾ ಕೋಲಾಹಲರುಗಳು ಇವರು. ಭಕ್ತಿಯಲ್ಲಿ ಸಿಕ್ಕಿದವರು. ಎಷ್ಟು ಮಾತ್ರಕ್ಕೂ ಬಿಟ್ಟು ಹೋಗಲಿಕ್ಕಿಲ್ಲ, ಇಲ್ಲಿಯೇ ಇರಬಹುದೆಂತ ಶೋಧಿಸುತ್ತ ವನಾಂತರಕ್ಕೆ ಹೋಗಿರುವಲ್ಲಿ ತನ್ನ ಮನೆಯ ಗೋವು ಹುತ್ತದಮೇಲೆ ಕ್ಷೀರವನ್ನು ಕರೆಯುತ್ತಿತ್ತು. ಅದನ್ನು ನೋಡಿ ಮನೆಗೆ ಹೊಡಕೊಂಡು ಬಂದನು. ಆ ದಿವಸ ಸರುರಾತ್ರಿಗೆ ತನ್ನ ಮನೆಯ ದನಗಳು ಕುರಿಗಳು ಏನು ನಿಮಿತ್ಯ ಕರೆಯುವದಿಲ್ಲ? ಎಂತ ವಿಚಾರಿಸುವಲ್ಲಿ ನೀವು ಹೋದ ಲಾಗಾಯಿತು ಅವು ಕರೆಯುವದಿಲ್ಲ, ಎಂದು ಹೇಳಿದರು, ಆ ಮನೆಜನಗಳ ಮಾತು ಕೇಳಿ ಇದು ಏನು ಆದೀತು ಎಂದು ಯೋಚಿಸುತ್ತಾ ಇದ್ದವನು ಮರುದಿವಸ ಅದೇ ವನಾಂತರಕ್ಕೆ ಹೋಗಿ ಯಾರೂ ಕಾಣದಂತೆ ಒಂದು ವೃಕ್ಷದ ಮೇಲೆ ಕೂತುಕೊಂಡನು. ಆ ಬಳಿಕ ಸದರಿ ಗೋವು ಆಹಾರವಂ ನೋಡಿಕೊಂಡು ಆ ವನಾಂತರಕ್ಕೆ ಬಂದು ಭಾವಿಯಲ್ಲಿ ಮುಳುಗಿ ಅಲ್ಲಿಂದ ಹುತ್ತದ ಮೇಲೆ ನಿಂದು ಕ್ಷೀರವನ್ನು ಕರೆಯುತ್ತಿತ್ತು. ಈ ಪ್ರಕಾರ ಒಂದೆರಡು ನೂರು ನಾಲ್ಕು ದಿವಸಗಳ ವರೆವಿಗೂ ಈ ದೃಷ್ಟಾಂತವನ್ನು ಗೌಡನು

ಕಣ್ಣಿನಿಂದ ನೋಡಿದವನಾಗಿ ಮಹಾಧೈರ್ಯದಿಂದ ತನ್ನ ಮನದಲ್ಲಿ ಗಟ್ಟಿಮಾಡಿಕೊಂಡು ಆ ಹುತ್ತವನ್ನು ಅಗಿದು ಅದರಲ್ಲಿ ಸ್ವಾಮಿಗಳವರು ಲಿಂಗಪೂಜಾರೂಢರಾಗಿ ಮೂರ್ತಗೊಂಡಿದ್ದರು. ಅವರನ್ನು ಕಂಡಾಕ್ಷಣವೇ ಸದರಿ ಗೌಡನು ಬಹಳ ಕಿಂಕರತ್ವದಿಂದ ಭಯಭಕ್ತಿಯಿಂದ ನಾನು ಇಷ್ಟು ದಿವಸ ತಮ್ಮ ಸೇವಾದಲ್ಲಿ ಇರದೆ ಹೋದದ್ದು ಶತಾಪರಾಧವಾಯಿತೆಂದು ಸಾಷ್ಟಾಂಗವನ್ನು ಹಾಕಿ ಬಹುತರ ಸ್ತೋತ್ರವ ಮಾಡಿದನು. ಸ್ವಾಮಿಗಳವರಿಗೆ ಚಿತ್ತದಲ್ಲಿ ಕರುಣ ಹುಟ್ಟಿ ನಿನ್ನ ಭಕ್ತಿ ಕೈಕೊಳ್ಳುತ್ತೀವೆ, ಎಂದು ಅಪ್ಪಣೆ ಕೊಟ್ಟು ಕಳುಹಿಸಿದರು..

ತತ್ ಕ್ಷಣವೇ ಮನೆಯಲ್ಲಿ ಪಾಕ ಶಾಖಾದಿಗಳನ್ನು ಮಾಡಿಸಿ ಸ್ವಾಮಿಗಳವರ ಕರಕೊಂಡುಹೋಗಿ ಲಿಂಗಪೂಜೆಗೆ ಅನುವ ಮಾಡಿಸಿ ಲಿಂಗಪೂಜೆ ಆದನಂತರ ಆಗ ಮಾಡಿದ ಶಾಖಪಾಕಾದಿಗಳನ್ನು ಎಡೆ ಮಾಡುವುದಕ್ಕೆ ಸಾಷ್ಟಾಂಗವ ಹಾಕುವಲ್ಲಿ ಈಗ ಮಾಡಿದ ಪದಾರ್ಥವ ನಾವು ತೆಗೆದುಕೊಳ್ಳುವದಿಲ್ಲ, ನೀನು ಲಡಾಯಕ್ಕೆ ಹೋಗುವ ಕಾಲದಲ್ಲಿ ಆಗ ಮಾಡಿದ ಪದಾರ್ಥವನ್ನು ಆಗ್ಯೆ ಒಪ್ಪಿಸದೆ ಹೋಗಿರುತ್ತೀ, ಈಗ ಆ ನಮ್ಮ ಪದಾರ್ಥವೇ ತಂದು ಒಪ್ಪಿಸಿದಲ್ಲಿ ಸೇವಿಸುತ್ತೀವೆ, ಎಂದು ಅಪ್ಪಣೆ ಆದ್ದಕ್ಕೆ ಸದರಿ ಗೌಡನು ಬಹಳ ಸಂಶಯದಿಂದ ಯೋಚಿಸುತ್ತಿರಲಾಗಿ ಆಗಿನ ಪದಾರ್ಥ ಹಗೆಯದಲ್ಲಿಡಿಸಿದ್ದುದನ್ನು ತೆಗೆದುಕೊಂಡು ಬಾ ಎಂತ ಅಪ್ಪಣೆಯಾದ್ದರಿಂದ ತತ್‌ಕ್ಷಣವೇ ಆ ಹಗೆಯುದ ಬಾಯಿ ತೆಗೆಸಿ ಆ ಪದಾರ್ಥವ ತೆಗೆದುಕೊಂಡು ಬರುವಲ್ಲಿ ಆ ದಿವಸ ಮಾಡಿದ ಪಾಕ ಶಾಖಾದಿಗಳಿಗಿಂತ ಹೆಚ್ಚಾಗಿ ಬಿಸಿಯ ಪದಾರ್ಥವಾಗಿದ್ದುದರಿಂದ ಎಡೆಯ ಮಾಡಿ ತೃಪ್ತಿ ಪಡಿಸಿದನು ಹೀಗೆ ಗಿರಿಯಪ್ಪಗೌಡ ನಂಜಣ್ಣಸೆಟ್ಟಿ ಇವರ ಭಕ್ತಿಯ ಕೈಕೊಂಡು ಆಶೀರ್ವಾದವಂ ದಯಪಾಲಿಸಿ ಅಲ್ಲಿಂದ ದೇಶಂಗಳ ಸಂಚರಿಸುತ್ತ ಜೈನ ಬೌದ್ಧ, ಚಾರ್ವಾಕ ಮುಂತಾದ ಮತಂಗಳನ್ನು ಮಹತ್ವದಿಂದ ಗೆದ್ದು ಕೆಲವು ಜನಂಗಳಿಗೆ ಲಿಂಗ ಧಾರಣವಂ ಮಾಡಿಸಿದರು. ಈಜೆಗೆ ಶಿವ ಮತವಂ ಉದ್ಧರಿಸಿ ಮೈಸೂರ ಸೀಮೆಯಲ್ಲಿರುವ ಎಡೆಯೂರಲ್ಲಿ ಯೋಗ ಸಮಾಧಿಯಂ ಮಾಡಿಸಿ ಮೂರ್ತವಂ ಗೊಂಡರು, ಇವರು ಮಾಡಿದ ಮಹತ್ವಕ್ಕೆ ಸ್ಥಲಪುರಾಣವೇ ಸಾಕ್ಷಿಯಾಗಿರುತ್ತದೆ. ಇವರ ತೋರುಗದ್ದುಗೆಯು ಎಡೆಯೂರಲ್ಲಿ ಇರುತ್ತದೆ.

ಇವರು ೩೬ ವರುಷ ಪಟ್ಟಸ್ಥಲಕ್ಕೆ ಅಧಿಪತಿಗಳಾಗಿ ಇದ್ದರ. ಈಚೆಗೆ ಕೆಲವು ದಿವಸ ಶಿವಾನುಭಾವ ಚರಂತಿಗೆ ಪಟ್ಟವಿಲ್ಲದೆ ನಿಂತಿತು ಕೆಲವು ಸಂವತ್ಸರಗಳ ವೇಲೆ ಶಿವಾನುಭಾವ ಚರಂತಿಗೆ ಪಟ್ಟವು ನಿರಕ್ಷರದ ಜೋಳ ಬಸವೇಶ್ವರ ಸ್ವಾಮಿಗಳಿಗಾಯಿತು.

ಜೋಳ ಬಸವೇಶ್ವರ ಸ್ವಾಮಿಗಳು

ಇವರು ತೋಂಟದ ಸಿದ್ಧಲಿಂಗ ದೇಶಿಕೇಂದ್ರರ ಅನುಗ್ರಹದಿಂದ ಇಪ್ಪತ್ತೊಂದು ದಿವಸದಲ್ಲಿ ತರ್ಕ, ವ್ಯಾಕರಣ, ಮೀಮಾಂಸ, ವೇದಾಗಮ ಪುರಾಣೋಪನಿಷತ್ತುಗಳನ್ನು ಕಲಿತು ಏಳುನೂರು ಚರಮೂರ್ತಿಗಳಿಗೆ ಮೂರು ಸಾವಿರ ವಿರಕ್ತರಿಗೆ ಗುರುಗಳಾಗಿ ಶಾಸ್ತ್ರವಂ ಪೇಳುತ್ತ ವೀರಶೈವ ಮತೋದ್ಧಾರಕರಾಗಿ ದೇಶಂಗಳಂ ಸಂಚರಿಸುತ್ತ ವೈಷ್ಣವ ಮಾಯಾವಾದಿಗಳನ್ನು ಗೆದ್ದು ಮದ್ಗಿರಿ (ಮಧುಗಿರಿ) ಗೆ ದಯಮಾಡಿಸಿ ಆ ಸ್ಥಲದಲ್ಲೇ ಬಯಲಾದರು. ಇವರ ತೋಂಗದ್ದುಗೆ ಮದ್ಗಿರಿಯಲ್ಲಿ ಇರುತ್ತದೆ. ಇವರು ತೊಂಬತ್ತಾರು ವರುಷ ವಯಸ್ಸುಳ್ಳವರಾಗಿ ದಯಮಾಡಿಸಿದರು. ಈಚೆಗೆ ಪಟ್ಟ ಕೆಲವು ವರುಷ ನಿಂತು ಆಮೇಲೆ ಶಿವಾನುಭಾವ ಚರಂತಿಗೆ ಪಟ್ಟವು ಗಡ್ಡದ ಸಿದ್ಧವೀರಣ್ಣ ಸ್ವಾಮಿಗಳಿಗಾಯಿತು.

ಗಡ್ಡದ ಸಿದ್ಧವೀರ ಸ್ವಾಮಿಗಳು

ಇವರು ಪಜೀರನನ್ನು ವಿವಾದದಲ್ಲಿ ಗೆದ್ದು ಶಾಸ್ತ್ರಮುಖದಿಂದ ೧೨ ಸಾವಿರ ಜನಕ್ಕೆ ಲಿಂಗಧಾರಣಮುಖದಿಂದ ಶೀಲವಂತರಮಾಡಿಸಿದರು. ಆ ಬಳಿಕ ಗುಮ್ಮಳಾಪುರದಲ್ಲಿ ಬಯಲಾದರು. ಇವರ ತೋರುಗದ್ದುಗೆ ಗುಮ್ಮಳಾಪುರದಲ್ಲಿ ಇರುತ್ತದೆ ಇವರು ತೊಂಬತ್ತೆಂಟು ವರುಷ ವಯಸ್ಸುಳ್ಳವರಾಗಿ ಚಿತ್ತಯಿಸಿದರು ಈಚೆಗೆ ಕೆಲವು ವರುಷ ನಿಂತು ಶಿವಾನುಭಾವ ಚರಂತಿಗೆ ಪಟ್ಟವು ಗೂಳೂರು ಗುರುಸಿದ್ಧ ಸ್ವಾಮಿಗಳವರಿಗೆ ಆಯಿತು.

ಗೂಳೂರು ಗುರುಸಿದ್ಧ ಸ್ವಾಮಿಗಳು

ಇವರು ಗುಮ್ಮಳಾಪುರವೆಂಬ ಗ್ರಾಮದಲ್ಲಿ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಈ ನಾಲ್ಕು ದಿಕ್ಕಿನಲ್ಲಿ ಲಿಂಗವು

ಪ್ರಿ ಸ್ಥಾಪನವಂ ಮಾಡಿಸಿ ಆ ಗ್ರಾಮದಲ್ಲಿರುವ ಜನರಲ್ಲಿ ಶಿವಭಕ್ತರಲ್ಲದೆ ಭವಿಜನರ ಊರುಬಿಡಿಸಿ ಅಲ್ಲಿರುವ ಶಿವಭಕ್ತರಿಗೆ ಶಾಸ್ತ್ರಮುಖದಿಂದ ದೀಕ್ಷೆಯುಂ ಮಾಡಿಸಿ ಆ ಗ್ರಾಮದೊಳಗೆ ಶಿವಭಕ್ತರಲ್ಲದೆ ಭವಿಗಳು ಹೋಗದ ಹಾಗೆ ಸರಕಾರದಿಂದ ಉತ್ತರವನ್ನು ಪಡೆದು ಶಿವಭಕ್ತ ಜನಂಗಳ ಕಾವಲಿಟ್ಟು ತಾವು ಲಿಂಗಪೂಜೆ ಜಂಗಮ ದಾಸೋಹದೊಡನೆ ಬಹುದಿವಸ ಅನೇಕ ಮಹತ್ವವನ್ನುಂಟುಮಾಡಿ ನೂರು ವರುಷ ವಯಸ್ಸುಳ್ಳವರಾಗಿ ಇದ್ದು ಗೂಳೂರಲ್ಲಿ ಬಯಲಾದರು. ಇವರ ತೋರುಗದ್ದುಗೆ ಗೂಳೂರಲ್ಲಿ ಇರುತ್ತದೆ. ಇವರ ಮಹತ್ವವು ಸ್ಥಲ ಪುರಾಣದಲ್ಲಿ ಇರುತ್ತದೆ ಈಚಿಗೆ ಸ್ವಲ್ಪ ದಿವಸಗಳಮೇಲೆ ಶಿವಾನುಭಾವ ಚರಂತಿಗೆ ಪಟ್ಟವು ಗಗನದಾರ್ಯ ಸ್ವಾಮಿಗಳವರಿಗಾಯಿತು.

ಗಗನದಾರ್ಯ ಸ್ವಾಮಿಗಳು

ಇವರು ಮಾಗಡಿ ಪಟ್ಟಣದಲ್ಲಿ ಅರುವತ್ತಾರು ವಿರಕ್ತ ಮಠಗಳನ್ನು ಕಟ್ಟಿಸಿ ಅನಾಚಾರದಲ್ಲಿ ನಡೆವಂತಹ ಶಿವಭಕ್ತರನ್ನು ಸದಾಚಾರ ಸನ್ಮಾರ್ಗಕ್ಕೆ ತಂದು ಕ್ವಚಿತ್ ತಿರುಗಿ ಬಿದ್ದ ಜನರಿಗೆ ಬಹಿಷ್ಕಾರ ಸ್ಥಾಪನವಂ ಮಾಡಿಸಿ ಆ ಸೀಮೆಯ ದೊರೆಯನ್ನು ಕೇವಲ ಭೃತ್ಯನ ಮಾಡಿಕೊಂಡು ಆ ಭಕ್ತನಾದ ದೊರೆಯ ಭಕ್ತಿಯ ಕೈಕೊಂಡು ಧನ್ಯನಮಾಡಿ ತಿರುಗಿಬಿದ್ದಜನಗಳಿಂದ ಅಪರಾಧ ಕಾಣಿಕೆಯುಂ ಒಪ್ಪಿಸಿಕೊಂಡು ಕೃತಾರ್ಥರ ಮಾಡಿದನಂತರ ಆ ತಾಲ್ಲೂಕಿನಲ್ಲಿ ಇರುವ ಪುರುಷರಿಗೆ ಶಾಸ್ತ್ರಮುಖದಿಂದ ಲಿಂಗಧಾರಣವಂ ಮಾಡಿಸಿ ಸಕಲಭಕ್ತಾದಿಗಳ ಸೇವೆಯ ಕೈಕೊಂಡು ಗಣಸಮೂಹದೊಡನೆ ತೊಂಬತ್ತೊಂಬತ್ತು ವರುಷ ವಯಸ್ಸುಳ್ಳವರಾಗಿದ್ದು ಇತ್ತ ಬಯಲಾದರು. ಇವರ ತೋರಗದ್ದುಗೆ ಬೈರನ ದುರ್ಗದಲ್ಲಿ ಇರುತ್ತದೆ. ಈಚಿಗೆ ಕೆಲವು ವರುಷ ನಿಂತು ಶಿವಾನುಭಾವ ಚರಂತಿಗೆ ಪಟ್ಟವು ಕಟ್ಟಿಗೆ ಹಳ್ಳಿ ಸ್ವಾಮಿಗಳವರಿಗೆ ಆಯಿತು.

ಕಟ್ಟಿಗೆಹಳ್ಳಿ ಸ್ವಾಮಿಗಳು

ಇವರ ಬಳಿಗೆಶಂಪಾದನೆ ಸಿದ್ಧವೀರಪ್ಪನವರು ಬಂದು ತಮ್ಮ ಇಷ್ಟಲಿಂಗದ ಗೋಳಕ ಸಡಲಿ ಅಗಲಿತೆಂದು ಸನ್ನಿಧಿಗೆ ಹೇಳಿಕೊಂಡದ್ದರಿಂದ ಚಿಂತೆಯಿಲ್ಲ, ಕಂಥೆಯ ಬಲಿಸಿ ಧರಿಸಿಕೊಳ್ಳುವಂತೆ ಅಪ್ಪಣೆ ಆದದ್ದಕ್ಕೆ ಒಂದೆರಡು ಮೂರುವೇಳೆ ಕಂಥೆಯ ಬಲಿದು ಧರಿಸಿಕೊಂಡಾಗ್ಯೂ ನಿಲ್ಲದೆ ಸಡಲಿದ್ದರಿಂದ ಇವರಿಗೆ ಗುರು ಲಿಂಗ ಜಂಗಮ ಮುಂತಾದ ಅಷ್ಟಾವರಣಂಗಳಲ್ಲಿ ದೃಢವಿಲ್ಲದ ಕಾರಣ ಈ ಸಿದ್ಧವೀರಪ್ಪನೆಂಬ ಚರಮೂ

ರ್ತಿಯು ಇದರಿಂದ ಪ್ರಾಣ ಕಳೆದು ಕೊಳ್ಳುತ್ತೇನೆ ಎಂತ ಸನ್ನಿಧಿಗೆ
ಅರಿಕೆ ಮಾಡಿಕೊಂಡದ್ದರಿಂದ ಸನ್ನಿಧಿಗೆ ಆಗ್ರಹಹುಟ್ಟಿ ಅವರ ಕೊರಳಿಗೆ
ಹಸ್ತಪಾವಡವ ಉಚ್ಚಿಸಿ ಹೊರಗೆ ಹಾಕಿಸಿದರು. ಈ ಸಂಪಾದನೆ
ಸಿದ್ಧವೀರಪ್ಪನವರು ಮೈಸೂರ ಸೀಮೆಯಲ್ಲಿ ಇದ್ದ ಹಾಗೂ ಮೈಸೂರಲ್ಲಿ
ಇದ್ದ ರಾಮಾನುಜರು ವೈಷ್ಣವರು ಕೆಲವು ಹತ್ತಿ ಬಣಜಿಗರನ್ನು ಸಹ ಕ
ಟ್ಟಿಕೊಂಡು ಶಾಸ್ತ್ರ ಮುಖದಿಂದ ತರ್ಕವ ಮಾಡಬೇಕೆಂದು ಸನ್ನಿಧಿಯ
ಮೇಲೆ ತಿರುಗಿ ಬಿದ್ದುದರಿಂದ ಈ ಸಂಗತಿಯು ಮೈಸೂರ ಸಂಸ್ಥಾನಿಕರಿ
ಗೆ ತಿಳಿದು ಶ್ರೀ ಮಠಸ್ಥರಿಗೂ ಇವರ ಕೂಡ ತರ್ಕ ನಡೆಯುವುದರಲ್ಲಿ
ಶಾಸ್ತ್ರಮುಖದಿಂದ ಸ್ವಾಮಿಗಳವರು ಗೆದ್ದುದಕ್ಕೆ ಆ ಸಂಸ್ಥಾನಿಕರು
ಮಾನ ಸನ್ಮಾನಂಗಳಿಂದ ಉತ್ಸಾಹಂಗೊಳಿಸಿದರು. ಈ ತಿರುಗಿ ಬಿದ್ದ ಜ
ನಂಗಳು ಅವರ ಪೈಕಿ ಕೆಲವು ಜನಗಳು ಕಪ್ಪ ಕಾಣಿಕೆಯಂ ಕೊಟ್ಟು
ಸನ್ನಿಧಿಯ ದಯವಂ ಪಡಕೊಂಡರು ಕೆಲವು ಜನರು ದಯವ ಪಡಕೊಳ್ಳ
ದೆ ಬಹಿಷ್ಕಾರದಲ್ಲಿಯೇ ಇರುತ್ತಾರೆ. ಈ ಜನಗಳಿಗೆ ತಿಗಳರು ಎಂಬ ದಾ
ಗಿಯೂ ತೆಲಗು ಬಣಜಿಗರು ಎಂಬುದಾಗಿಯೂ ಹೆಸರು. ಇವರು
ಮೈಸೂರ ಸೀಮೆ ಗಟ್ಟದಕೆಳಗೆ ಕಂಚಿ ಚನ್ನಪಟ್ಟಣ ಕುಂಭಕೋಣ ಮುಂ
ತಾದ ಉತ್ತರ ದೇಶದಲ್ಲಿ ಸಹ ಇರುತ್ತಾರೆ. ಈ ತಿರುಗಿಬಿದ್ದ ಜನರ ಲಿಂಗ
ವ ತೆಗಸಿದ್ದರಿಂದ ಆ ಜನರು ಶಿವಮತವ ಬಿಟ್ಟು ವಿಷ್ಣುವಿನ ಮತಕ್ಕೆ ಹೊಂ
ದಿ ಇದ್ದಾರೆ. ಕೆಲವು ತಿಗಳರು ಲಿಂಗವ ಬಿಟ್ಟರೂ ವಿಭೂತಿ ರುದ್ರಾಕ್ಷ
ಧಾರಕರಾಗಿ ಶಿವಮತದಲ್ಲಿಯೇ ಇರುತ್ತಾರೆ. ಈ ಸಂಪಾದನೆ ಸಿದ್ಧವೀರ
ಪ್ಪನೆಂಬ ಚರಮೂರ್ತಿಯು ಹಾಗಲವಾಡಿ ದೊರೆಯನ್ನು ಭಕ್ತನ ಮಾ
ಡಿಕೊಂಡು ಅವನ ಕಡೆಯಿಂದ ಮಠಮಾನ್ಯಗಳ ಪಡೆದು ಅದೇ ಸ್ಥಲದಲ್ಲಿ
ಬಯಲಾದನು. ಈತನ ಪೌತ್ರಿಕರಾದ ಮೂರ್ತಿಗಳು ಇವರ ಮಠಗಳು
ಹಾಗಲವಾಡಿ, ಬೆಂಗಳೂರು, ವಂಟಮುರಿ ಮುಂತಾದ ದೇಶಗಳಲ್ಲಿ ಇ
ರುತ್ತವೆ. ಕಾರಣ ಸಂಪಾದನೆಯು ಸಮಯವೆಂಬುದು ಭೇದವಾಯಿತು.

ಇತ್ತ ಮಹಾಸನ್ನಿಧಿಯಲ್ಲಿ ಇರುವ ಸಮಸ್ತ ಚರಮೂರ್ತಿಗಳವರ
ಸಮ್ಮತವಾಗಿ ಮಹಾರಾಜ ಶ್ರೀ ಕಟ್ಟಿಗೆಹಳ್ಳಿ ಸ್ವಾಮಿಗಳವರು ತಾವು
ಸಲಹಿದ ಮರಿಗಳಾದ ಈರ್ವರಪೈಕಿ ನೋಡ ಸಿದ್ಧಲಿಂಗ ದೇಶಿಕೇಂ
ದ್ರರು ಲಿಂಗಪೂಜೆ ಗುರುಭಕ್ತಿ ಜಂಗಮಸೇವೆಯಲ್ಲಿ ತತ್ಪರರಾಗಿ ಲಿಂ
ಗ ನಿರೀಕ್ಷಣಪರರಾದ ಕಾರಣ ಇವರಿಗೆ ನೋಡ ಸಿದ್ಧಲಿಂಗನೆಂಬ ತಮ್ಮ
ಮೂಲ ಗುರು ತೋಂಟದ ಸಿದ್ಧಲಿಂಗ ದೇಶಿಕೇಂದ್ರರ ಅಭಿಧಾನವಂ

ಕೊಟ್ಟ ಆ ಸೀಮೆಯ ಭಕ್ತಮಹೇಶ್ವರರ ಮುಂತಿಟ್ಟುಕೊಂಡು ತಮ್ಮ ಶಿವಾನಃಭಾವ ಚರಂತಿಗೆ ಪಟ್ಟವನ್ನು ನೋಡಸಿದ್ದಲಿಂಗ ಸ್ವಾಮಿಗಳವರಿಗೆ ಮಾಡಿ ಅನಂತರ ಕಟ್ಟಿಗೆಹಳ್ಳಿ ಮಹಾಸ್ವಾಮಿಗಳವರು ನೋಡಸಿದ್ಧಲಿಂಗ ಸ್ವಾಮಿಗಳವರಿಗೆ ಅಪ್ಪಣೆ ಮಾಡಿದ್ದೇನಂದರೆ:– ನಿಮಗಿಂತ ಚಿಕ್ಕವರಾದ ಮುರುಗೇಂದ್ರ ದೇಶಿಕನು ಮುಂದೆ ಮಹಿಮಾ ಪುರುಷರಾಗಿ ಈರ್ವರಿಂದಲೂ ಮುಂದೆ ಕಾರಣಾರ್ಥಗಳು ಇವೆ, ನೀವು ಇವರ ಕರಕೊಂಡು ಹೋಗಿ ಡಿಳ್ಳಿ ಶಹರದಲ್ಲಿ ಮಹಿಮುವ ಮಾಡಿ ಡಿಳ್ಳಿ ಪಾಚ್ಛಾ(ಪಾದ್‌ಷಹ)ನ ಸಂಸ್ಥಾನದಲ್ಲಿ ಇರುವ ನಮ್ಮ ಪರಮ ಗುರುಗಳಾದ ಶ್ರೀ ಚನ್ನಬಸವ ರಾಜೇಂದ್ರರು ವಜೀರವ ಕೈಯಲ್ಲಿ ಕಳುಹಿಸಿದ ಶಿಖಾ (ಸಿಕ್ಕಾ?) ಶೈಲ ಸಿಂಹಾಸನ ಈ ಮೂರು ವಸ್ತುಗಳನ್ನು ತಹುದು ಎಂದು ಅಪ್ಪಣೆಕೊಟ್ಟು ಆಬಳಿಕ ಗಣಾರಾಧನೆಯಂ ಮಾಡಿಸಿ ಆ ಪ್ರಸ್ತದಲ್ಲಿ ನೋಡಸಿದ್ಧಲಿಂಗ ಸ್ವಾಮಿಯವರ ಕಡೆಯಿಂದ ಮುರುಗೇಂದ್ರ ದೇಶಿಕರಿಗೆ ಅನುಗ್ರಹವ ಕೊಡಿಸಿ ಸ್ಥಲ ಕೊಡಿಸಿ ಮೆರವಣಿಗೆ ಸಹ ಮಾಡಿಸಿ ಎಪ್ಪತ್ತೆರಡು ಬಿರುದುಗಳೊಡನೆ ಆಂದೋಳಿಕ ಸಹಿತವಾಗಿ ಗಣಸಮೂಹದೊಡನೆ ನೋಡಸಿದ್ಧಲಿಂಗ ಸ್ವಾಮಿಗಳವರಿಗೆ ಚನ್ನಬಸವೇಶ್ವರ ದೇವರು ಉಳವಿಯಲ್ಲಿ ಡಿಳ್ಳಿ ವಜೀರನಾದ ಪುಲ್ಲೂಖಾನನ ವಶಕ್ಕೆ ಕೊಟ್ಟ ಶಿಖಾ ಶೈಲ ಸುವರ್ಣ ಪೀಠಗಳಕೊಟ್ಟ ದಾಖಲೆ ಲಿಖಿತಪತ್ರಿಕೆಯನ್ನು ಕೊಟ್ಟು ಜಯಿಸಿಕೊಂಡು ಬರುವಂತೆ ಆಶೀರ್ವಾದವಂ ಮಾಡಿ ನೋಡ ಸಿದ್ದಲಿಂಗಸ್ವಾಮಿಗಳವರು ಮುರುಗಾದೇಶಿಕೇಂದ್ರ ಸ್ವಾಮಿಗಳವರು ಈ ಉಭಯ ಸ್ವಾಮಿಗಳವರ ಡಿಳ್ಳಿಗೆ ಕಳುಹಿಸಿಕೊಟ್ಟರು.

ಇತ್ತ ಕಟ್ಟಿಗೆ ಹಳ್ಳಿ ಸ್ವಾಮಿಗಳವರು ಗೂಳೂರಿಂದ ಸಂಚಾರಾರ್ಥವಾಗಿ ತಿಳವಳ್ಳಿ ಗ್ರಾಮದ ಭಕ್ತರ ಭಕ್ತಿಯೊಡನೆ ಆ ಸ್ಥಲದಲ್ಲಿ ಮಠವ ಮಾಡಿಸಿ ಆ ಮಠದಲ್ಲಿ ಲಿಂಗಪೂಜೆ ಜಂಗಮ ದಾಸೋಹ ಮುಂತಾದ ಗಣತಿಂಥಿಣಿಯಲ್ಲಿ ಇದ್ದರು. ಇವರು ೯೦ ವರುಷ ವಯಸ್ಸುಳ್ಳವರಾಗಿ ನಗರಸೀಮೆಗೆ ಸೇರಿದ (ಈಗ ಧಾರವಾಡ ಜಿಲ್ಲಾ) ತಿಳವಳ್ಳಿಯಲ್ಲಿ ಬಯಲಾದರು. ಇವರ ತೋರಗದ್ದುಗೆ ತಿಳುವಳ್ಳಿಯಲ್ಲಿ ಇರುತ್ತವೆ.

ನೋಡ (ನೋಟದ) ಸಿದ್ಧಲಿಂಗ ಸ್ವಾಮಿಗಳು

ಇತ್ತ ಶಿವಾನುಭಾವ ಚರಂತಿಗೆಯ ಪಟ್ಟದ ನೋಡ ಸಿದ್ಧಲಿಂಗ ಸ್ವಾಮಿಗಳವರು ಮತ್ತು ಮುರುಗೇಂದ್ರಸ್ವಾಮಿಗಳವರು ಇವರು ಆಂದೋ

ಳಿಕ ಮುಂತಾದ ಎಪ್ಪತ್ತೆರಡು ಬಿರುದುಗಳೊಡನೆ ದೇಶಂಗಳ ಸಂಚರಿಸು ತ್ತ ಡಿಳ್ಳಿ ಶಹರಕ್ಕೆ ದಯಮಾಡಿಸಿ ಅಲ್ಲಿ ಮುದಿ ಮಲ್ಲಪ್ಪನೆಂಬ ಶಿವಭ ಕ್ತನ ಅರಮನೆಯಲ್ಲಿ ಕೆಲವು ದಿವಸ ಅವನ ಭಕ್ತಿಯಲ್ಲಿ ಇರುವಾಗ್ಯೆ ಡಿಳ್ಳಿ ಪಾಚ್ಛಾ(ಪಾದ್ ಷಹ)ನ ಪಟ್ಟದಾನೆ ಮೃತಪಟ್ಟು ಬಿದ್ದಿತ್ತು, ಈವರ್ತಮಾ ನವು ಉಭಯ ಸ್ವಾಮಿಗಳವರಿಗೆ ತಿಳಿದು ತತ್ ಕ್ಷಣವೇ ಆ ಆನೆಯು ಬಳಿ ಗೆ ದಯಮಾಡಿಸಿ ಬೆತ್ತದಿಂದ ಹೊಡೆದು ಕರುಣ ದೃಷ್ಟಿಯಿಂದ ನೋ ಡಲು ಸತ್ತ ಗಜವು ಎದ್ದು ನಿಂತಿತು ಈ ಸಮಾಚಾರವು ಆಕೂಡಲೆ ಪಾಚ್ಛ (ಪಾದ್ ಷಹ)ನಿಗೆ ತಿಳಿದದ್ದರಿಂದ ಬಹಳ ಹರಷದಿಂದ ತನ್ನ ಸೈನ್ಯ ಸಹಿತ ವಾಗಿ ತನ್ನ ಅರಮನೆಗೆ ಚಿತ್ತಯಿಸ ಬೇಕೆಂದು ದೈನ್ಯೋಕ್ತಿಯಿಂದ ಅಂಕೆ ಮಾಡಿಕೊಂಡದ್ದರಿಂದ ಅವನ ಭಕ್ತಿಗೆ ಒಪ್ಪಿಕೊಂಡು ಅರಮನೆಗೆ ಬಿಜ ಯಂಗೆಯ್ದರು. ಆ ಮೇಲೆ ಪಾಚ್ಛಾನು ಉಭಯ ಸ್ವಾಮಿಗಳವರನ್ನು ಸಿಂಹಾಸನದ ಮೇಲೆ ಮೂರ್ತಗೊಳಿಸಿ ಪೂಜೆಯನ್ನು ಮಾಡಿ ಮುಂದೆ ಏನು ಅಪ್ಪಣೆ ಆಗುತ್ತದೆ? ಅದರಂತೆ ನಡಕೊಳ್ಳುತ್ತೇನೆ ಎಂದು ಸಾ ಷ್ಟಾಂಗವ ಹಾಕಿ ವಿನಂತಿ ಮಾಡಿಕೊಂಡನು.

ಹಿಂದೆ ನಮ್ಮ ಗುರುಗ ಳಾದ ಚನ್ನಬಸವ ದೇಶಿಕೇಂದ್ರರು ಕಲಿ ಶಕ ೪೦೦೧ನೇ ವರುಷ ಶಾಲಿ ವಾಹನ ಶಕ ೮೩೨ ನೆಯ ಸಂವತ್ಸರದ ೭ ತಾರೀಖಿನಲ್ಲಿ ನಿಮ್ಮ ವಜೀರನಾ ದ ಮಲ್ಲೂಖಾನನ ವಶಕ್ಕೆ ನಮ್ಮ ಶಿಖಾ ಶೈಲ ನವರತ್ನಖಚಿತ ಬಂಗಾರ ದ ಸಿಂಹಾಸನ ಈ ಮೂರು ವಸ್ತುಗಳ ಅನಾಮತ ಕೊಟ್ಟು ಚಿತ್ತಯಿ ಸಿದ್ದಾರೆ. ನಮ್ಮ ವಸ್ತುಗಳನ್ನು ನಮಗೆ ಒಪ್ಪಿಸುವದು ಎಂದು ನಿರೂಪವಾ ಗಲು ಆ ಕೂಡಲೆ ಪಾಚ್ಛಾನು ತನ್ನ ಪೂರ್ವ ದಫ್ತರ ಕಚೇರಿಯಲ್ಲಿ ಲೆ ಕ್ಕಗಳ ಕಿತಾಬುಗಳನ್ನು ತೆಗಸಿ ನೋಡುವಲ್ಲಿ ಸದರಿ ಶಕಗಳು ಸಂವ ತ್ಸರಂಗಳು ಸರಿಯಾಗಿ ಮೂರು ವಸ್ತುಗಳ ಶಮ್ಮ ವಶಕ್ಕೆ ಕೊಟ್ಟ ಹಾಗೆ ಮುಂದೆ ಮಹಿಮ ಪುರುಷರು ಬಂದಲ್ಲಿ ಅವರ ವಶಕ್ಕೆ ಕೊ ಡುವುದು ಎಂದು ದಾಖಲೆ ಇರುವುದರಿಂದ ಸದರಿ ಮೂರು ವಸ್ತುಗ ಳನ್ನು ಮತ್ತು ತನ್ನ ಸ್ವಂತವಾದ ಲಾಲ ಶಿಖಾ ೧ ಹಸುರು ಜುಷ್ಟಿ ೧ ಸದರ ಗುಂಡು ೧ ಇವುಗಳ ಒಪ್ಪಿಸಲು ಅವುಗಳ ತೆಗೆದುಕೊಂಡ ನಂ ತರ ನೋಡ ಸಿದ್ಧ ಲಿಂಗಸ್ವಾಮಿಗಳವರು ತಮ್ಮ ಗುರುಗಳಾದ ಕಟ್ಟಿಗೆ ಹಳ್ಳಿ ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಶಿಖಾಶೈಲ ಬಂದನಂತರ ಮುರುಗೇಂದ್ರದೇಶಿಕರಿಗೆ ಪಾಚ್ಛಾನೊದಲಾದ ಡಿಳ್ಳಿಶಹರದ ಮುದಿಮಲ್ಲಪ್ಪ

ನ ಅರಮನೆಯಲ್ಲಿ ಸರ್ದಾರರನ್ನೂ ಕರಸಿಕೊಂಡು ಶಿಖಾಪಟ್ಟವನ್ನು ಮುರುಗಾರಾಜೇಂದ್ರರಿಗೆ ಮಾಡಿದರು. ಅನಂತರ ಪಾಚ್ಛಾನು ತನ್ನ ಪಟ್ಟಣದಲ್ಲಿ ಶಿಖಾಪಟ್ಟವಾದ ಮುರುಗಾ ಸ್ವಾಮಿಗಳವರನ್ನು ಅಂದೋಳಿಕದಲ್ಲಿ ಮೂರ್ಶವಮಾಡಿಸಿ ಉತ್ಸಹಂಗೊಳಿಸಿ ಉಭಯ ಸ್ವಾಮಿಗಳವರಿಗೆ "ಜಿತಾ ಜಂಗಮ ಫಕೀರ ಅಲ್ಲಮ ಪ್ರಭು" ಎಂಬ ಕಿತಾಬನ್ನು ಕೊಟ್ಟು ಉಭಯರಿಗೂ ಅಂದೋಲಿಕ ಮುಂತಾದ ೬೩ ಬಿರುದುಗಳ ಒಪ್ಪಿಸಿ ಬಿರುದುಗಳು ನಡೆವಂತೆ ಸನದುಗಳು ಕೊಟ್ಟು ಸ್ವಾಮಿಗಳವರ ಸವಾರಿ ದೇಶದಲ್ಲಿ ದಯಮಾಡಿಸಿದರೆ ಆಯಾಯ ತಾಲೂಕಿನಲ್ಲಿ ಸರಬರಾಯಿ ಮಾಡಿ ಉತ್ಸಹದಿಂದ ಮುಂದಕ್ಕೆ ಕಳುಹಿಸುವಂತೆ ಒಟ್ಟ ರಹದಾರಿ ಕೊಟ್ಟು ಉತ್ಸಹದಿಂದ ಕಳುಹಿಸಿ ಇವರ ಕೂಡ ಬೆಂಬಲದ ದೆಸೆಯಿಂದ ಆನೆ ಕುದುರೆ ಮುಂತಾದ ಕೆಲವು ದಂಡ ತೋಫುಗಳು ಸಹಿತವಾಗಿ ಸ್ವಾಮಿಗಳವರು ತಮ್ಮ ದೇಶಕ್ಕೆ ತಲಪುವವರೆಗೂ ಕಳುಹಿಸಿಕೊಟ್ಟನು.

ಅಲ್ಲಿಂದ ಹೈದರಬಾದ್‌ಷಹರಕ್ಕೆ ದಯಮಾಡಿಸಲು ಆ ಊರ ಧಣಿಯು ತನ್ನ ಸೈನ್ಯ ಸಹಿತವಾಗಿ, ಇದಿರ್ಗೊಂಡು ೬೩ ಬಿರುದುಗಳೊಡನೆ ಸಕಲ ಸಂಭ್ರಮದಿಂದ ಉತ್ಸಹಮಾಡುತ್ತ ತನ್ನ ಅರಮನೆಗೆ ಕರೆದುಕೊಂಡುಹೋಗಿ ಮಹಾ ಸನ್ಮಾನಗಳನ್ನು ಮಾಡಿ ತನ್ನ ಭಕ್ತಿಯಿಂದ ತನ್ನ ಪಟ್ಟಣದಲ್ಲಿ ಮಠಮಾನ್ಯ ರುಸುಮು ಕಾಣಿಕೆ ವಗೈರೆ ನಡೆಯುವಂತೆ ಮಾನಪತ್ರಕೊಟ್ಟು ಡಿಳ್ಳಿಯಲ್ಲಿ ಉಭಯ ಸ್ವಾಮಿಗಳವರು ಮಹಿಮೆ ಮಾಡಿದ್ದನ್ನು ಕೇಳಿ ಸಂತೋಷಪಟ್ಟು ಇವರುಗಳಿಗಾಗಿ ನವಾಬನು ಪಟ್ಟದಾನೆಗೆ ಕಾಹಿಲೆ ಆಗಿದೆ, ಸ್ವಾಮಿ ಅನುಗ್ರಹ ಆಗಬೇಕು, ಎಂತ ಬಿನ್ನಯಿಸಲು ಸ್ವಾಮಿಗಳವರು ಕರುಣದೃಷ್ಟಿಯಿಂದ ನೋಡಿ ತಮ್ಮಹಸ್ತದಿಂದ ಉದಕವನ್ನು ತಳಿಯಲು ಆ ಆನೆಯರೋಗವು ಪರಾಭವವಾಗಲು ಇದನ್ನು ನವಾಬನು ನೋಡಿ ಆಶ್ಚರ್ಯಪಟ್ಟು ಉಭಯ ಸ್ವಾಮಿಗಳವರಿಗೆ ಪಾದಕಾಣಿಕೆ ಎರಡು ಶ್ವೇತಛತ್ರಗಳ ಒಪ್ಪಿಸಿ ತನ್ನ ಷಹರದಲ್ಲಿ ಉತ್ಸಹದೊಡನೆ ೬೩ ಬಿರುದುಗಳು ಸಹಿತ ಮೆರವಣಿಗೆ ಮಾಡಿ ಕಳುಹಿಸಿ ಕೊಟ್ಟನು.

ಇತ್ತ ಸ್ವಾಮಿಗಳವರು ದೇಶಸಂಚರಿಸುತ್ತ ಸ್ವಾದಿ (ಸೋದೆ) ಸೀಮೆಯಲ್ಲಿರುವ ಇಸಳೂರಿಗೆ ಚಿತ್ತಯಿಸಲು ಆ ಊರ ಸೆಟ್ಟರು ದೈವದವ

ರು ಇದಿರುಗೊಂಡು ೭೨ ಬಿರುದುಗಳೊಡನೆ ಮೆರವಣಿಗೆ ಮಾಡುತ್ತ ಸ್ವಾ
ಮಿಗಳವರನ್ನು ಧರ್ಮಾನದಿಯ ಉದ್ಭವಸ್ಥಾನದಲ್ಲಿರುವ ಮಠದಲ್ಲಿ ಇಳಿಸಿ
ದರು. ಆ ಮಠದಲ್ಲಿ ಉಭಯ ಸ್ವಾಮಿಗಳವರು ಲಿಂಗ ಜಂಗಮ ದಾ
ಸೋಹದೊಡನೆ ಆ ದೇಶದ ಭಕ್ತ ಮಾಹೇಶ್ವರರಿಗೆ ಆಶೀರ್ವಾದವ
ಮಾಡುತ್ತಾ ಇದ್ದು ಡಿಳ್ಳಿಯಿಂದ ಬೆಂಬಲವಾಗಿ ಬಂದ ಸೇನಾಧೀಶರಿಗೆ
ಅಪ್ಪಣೆ ಕೊಟ್ಟು ಆಶೀರ್ವಾದವ ಮಾಡಿ ಕಳುಹಿಸಿದರು. ಅನಂತರ ನೋ
ಡ ಸಿದ್ಧಲಿಂಗ ಸ್ವಾಮಿಗಳವರಿಗೆ ಅಂತ್ಯಕಾಲವು ಸಮೀಪಿಸಲು ಸ್ವಾಮಿ
ಗಳವರು ಸ್ವಾದಿಅರಸನೇ ಮುಂತಾದ ಸಿರಸಿ ಆ ಸೀಮೆಯ ಸಮಸ್ತ ದೇವ
ಭಕ್ತರುಗಳ ಕರಸಿಕೊಂಡು ಗಣಸಮೂಹದಲ್ಲಿರುವ ಗುರುಚರಮೂರ್ತಿ
ಗಳ ಸಮ್ಮತವಾಗಿ ನೋಡಸಿದ್ಧಲಿಂಗ ಸ್ವಾಮಿಗಳವರು ಮುರುಗಾ
ಸ್ವಾಮಿಗಳವರ ಸಮಕ್ಷಮ ಅಪ್ಪಣೆ ಕೊಟ್ಟಿದ್ದು :—

ಶ್ರೀ ಮನ್ಮಹಾನಿರಂಜನ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳ
ವರು ಮುಂತಾದ ಚನ್ನಬಸವರಾಜೇಂದ್ರಸ್ವಾಮಿ ಗಳವರ ಸೂತ್ರಧಾರಿ
ಗಳಾಗಿ ಶ್ರೀ ಚನ್ನಬಸವೇಶ್ವರ ದೇವರು ಬೋಧಿಸಿದ ಶಿವಾನುಭಾವ ಪು
ಸ್ತಕದ ಸೂತ್ರಪಿಡಿದು ಶಿಖಾ ಶೈಲವಿಲ್ಲದೆ ನಮ್ಮನ್ನು ಹಿಡಿದು ಒಂಬ
ತ್ತು ಶಿವಾನುಭಾವ ಚರಂತಿಗೆ ಪಟ್ಟಗಳು ಆದವು. ಮೇಲೆ ಬರೆದ ಪ್ರ
ಭು ಸ್ವಾಮಿಗಳು ಚನ್ನಬಸವಸ್ವಾಮಿಗಳು ಇವರ ತರುವಾಯದಲ್ಲಿ ಶಿ
ಖಾಪಟ್ಟವನ್ನು ನಮ್ಮ ಗುರುಗಳಾದ ಕಟ್ಟಿಗೆ ಹಳ್ಳಿ ಸ್ವಾಮಿಗಳವರ
ಆಜ್ಞೆಯ ಪ್ರಕಾರ ಡಿಳ್ಳಿಯಲ್ಲಿ ಮುರುಗಾರಾಜೇಂದ್ರಂಗೆ ಶಿಖಾಪಟ್ಟ
ವನ್ನು ಮಾಡಿದೆವು. ಪ್ರಭುಸ್ವಾಮಿಗಳವರ ಹಿಡಿದು ಹನ್ನೊಂದನೆಯ
ಶಿಖಾಪಟ್ಟದವರು ಮುರುಗಾರಾಜೇಂದ್ರರು ಪ್ರಭು ಚನ್ನ ಬಸವ ರಾ
ಜೇಂದ್ರರು ಬೋಧಿಸಿದ ಶಿವಾನುಭವ ಪುಸ್ತಕದ ಚರಂತಿಗೆ ಪಟ್ಟದ
ವರು ನಾವು ಇದ್ದು ನಮಗೆ ಸಾಂಬನ ಅಪ್ಪಣೆಯ ಮೇರೆಗೆ ಸಾಂ
ಬಲೋಕಕ್ಕೆ ಬರುವಂತೆ ಆಗಿದೆ ನಾವು ಚಿತ್ತಯಿಸುತ್ತೇವೆ ಎಂ
ದು ಮುರುಗಾರಾಜೇಂದ್ರರು ಮುಂತಾದ ದೇವ ಭಕ್ತರುಗಳಿಗೆ ಅಪ್ಪ
ಣೆ ಕೊಡಲು ಮುರುಗಾಸ್ವಾಮಿಗಳು ಮುಂತಾದವರು ಒಡಂಬಟ್ಟು
ತಾವು ತಮ್ಮ ತರುವಾಯದಲ್ಲಿ ಶಿವಾನುಭವ ಪಟ್ಟವನ್ನು ಮಾಡಿ ದ
ಯಮಾಡಿಸುವದು, ಎಂದು ಸಕಲ ಗುರು ಚರಮೂರ್ತಿಗಳೂ ಭಕ್ತ
ಮಾಹೇಶ್ವರರೂ ಹೇಳಿಕೊಳ್ಳಲು, ಆ ಸಕಲರ ಸಮ್ಮತವಾಗಿ ತಮ್ಮ
ಶಿವಾನುಭಾವ ಚರಂತಿಗೆ ಪಟ್ಟವನ್ನು ಕುಮಾರ ಸ್ವಾಮಿ

ಗಳವರಿಗೆ ಮಾಡಿ ಶಿಖಾಪಟ್ಟದ ಮುರುಗಾರಾಜೇಂದ್ರ ಸ್ವಾಮಿಗಳವರ ಹಸ್ತದಲ್ಲಿ ಕೊಟ್ಟು, ನೀವೂ ನೀವೂ ಏಕ ರೂಪಿನಿಂದ ಭೇದವಿಲ್ಲದೆ ಬೀಜವೃಕ್ಷನ್ಯಾಯದಂತೆ ನೀವು ನೀವು ಏಕವಾಗಿ ಈ ಯಾವತ್ತು ಗುರುಚರಮೂರ್ತಿಗಳಲ್ಲಿ ಸೇವ್ಯರು ಪೂಜ್ಯರಾಗಿ ಇರಬೇಕೆಂದು ಅಪ್ಪಣೆ ಕೊಟ್ಟು ಸಾಂಬಲೋಕಕ್ಕೆ ದಯಮಾಡಿಸಿದರು.

ಈ ಶಿವಾನುಭವ ಪಟ್ಟದ ನೋಡಸಿದ್ಧಲಿಂಗ ಸ್ವಾಮಿಗಳವರ ತೋರಗದ್ದುಗೆ ಇಸಳೂರು ಧರ್ಮಾನದಿ ತೀರದಲ್ಲಿರುವ ಮಠದಲ್ಲಿ ಇರುತ್ತದೆ.

ಆಮೇಲೆ ಮುರುಗಾರಾಜೇಂದ್ರ ಸ್ವಾಮಿಗಳವರು ಶಿವಾನುಭಾವಪಟ್ಟದ ಕುಮಾರ ಸ್ವಾಮಿಗಳವರನು ಛತ್ರ ಬಿರುದುಗಳೊಡನೆ ಆಂದೋಳಿಕದಲ್ಲಿ ಮೂರ್ತವಮಾಡಿಸಿ ಉತ್ಸವಂಗೊಳಿಸಿದರು ಅನಂತರ ಸ್ವಾದಿ ಮುಂತಾದ ದೇಶಂಗಳ ಸಂಚರಿಸುತ್ತ ಚಿತ್ರದುರ್ಗಕ್ಕೆ ಉಭಯ ಸ್ವಾಮಿಗಳವರು ದಯಮಾಡಿಸಿ ಆ ಚಿನ್ಮೂಲಾದ್ರಿ ಗುಡ್ಡದಲ್ಲಿ ಚಂಪಕ ಸಿದ್ಧೇಶ್ವರನ ದೇವಾಲಯದ ಸಮೀಪದಲ್ಲಿರುವ ಕಟ್ಟಿಗೆಹಳ್ಳಿ ಸ್ವಾಮಿಗಳವರಿಗೆ ಚಿತ್ರದುರ್ಗದ ದೊರೆಯಾದ ಚಂದ್ರವಾಳಿ ಎಂಬ ಅರಸನು ನಮಸ್ಕಾರವಂ ಮಾಡಿ ಕಟ್ಟಿಸಿಕೊಟ್ಟ ಮಠದಲ್ಲಿ ತಮ್ಮ ಘನಸಹಿತವಾಗಿ ಲಿಂಗಪೂಜೆ ಜಂಗಮ ದಾಸೋಹದೊಡನೆ ಇದ್ದರು.

ಮುರುಗಾ ಸ್ವಾಮಿಗಳವರ ರೂಪವು ಕೆಂಗಣ್ಣು ಕೆಮ್ಮೀಸೆ ಊರ್ಧ್ವಗರೋಮ ಪಂಚವರ್ಣದ ಮುರಿ ಮುರಿ ಮಾಡಿ ಸುತ್ತಿದ ಮುಡಿ ಶಾಲು ಹೊದ್ದುಕೊಂಡು ಮುರಿಗೆ ದೊಣ್ಣೆಯನ್ನು, ಕಿನ್ನರಿ ಹಸ್ತದಲ್ಲಿ ಹಿಡಿದು ಕೊಂಡು ಏಕಾಂತವಾಗಿ ಒಬ್ಬರೇ ಸಂಚರಿಸುವದುಂಟು

ಕುಮಾರ ಸ್ವಾಮಿಗಳವರ ರೂಪವು ಕೆಂಪುವರ್ಣದ ದೀರ್ಘ ದೇಹವು ಡಮರುಗ ಹಸ್ತ ಹಸ್ತದಲ್ಲಿ ಜಪಮಾಲೆ, ಏಕಕಣ್ಣಿನ ಚಿತ್ತ ಶಿವಾನುಭಾವಪುಸ್ತಕ ತೋಳಿಗಾಧಾರ ಬೋಳಮಸ್ತಕ ಕಾವಿಮುಡಿಯ ಮಸ್ತಕಕ್ಕೆ ಕಾವಿ ಕಾಷಾಯಾಂಬರ ಕಾವಿ ಕಂಬಳಿ ಹೊತ್ತುಕೊಂಡು ಏಕಾಂತವಾಗಿ ಭಕ್ತಿ ಜ್ಞಾನ ವೈರಾಗ್ಯ ಮೂರ್ತಿಗಳಾದಕಾರಣ ಒಬ್ಬರೇ ಚರಿಸಾಡುವದುಂಟು.

ಈ ಉಭಯ ಸ್ವಾಮಿಗಳವರು ಚಿನ್ಮೂಲಾದ್ರಿ ಗಿರಿಯಲ್ಲಿ ಸಂಚರಿಸುತ್ತಿರಲು ಒಂದು ದಿವಸ ಆ ಅರಣ್ಯದಲ್ಲಿ ಬೇಡರ ಬರಮನೆಂಬ ಹುಡುಗನು ಗೋವುಗಳ ಕಾಯುತ್ತ ಒಂದು ವೃಕ್ಷದ ಕೆಳಗೆ ನಿದ್ದೆಗೆಯ್ಯು

ತ್ರ ಇರಲಾಗಿ ಅವನ ಮುಖಕ್ಕೆ ಸೂರ್ಯಕಿರಣವು ಬೀಳುತ್ತಿರಲು ಹೀಗೆ ಅವನ ಮುಖಕ್ಕೆ ಕಿರಣದ ಛಾಯವು ಬೀಳವಂತೆ ಒಂದು ಸರ್ಪವು ಹೆಡೆಯನೆತ್ತಿಕೊಂಡು ನೆರಳು ಮಾಡಿರುವುದನ್ನು ಉಭಯ ಸ್ವಾಮಿಗಳವರು ಕಂಡು ತಮ್ಮ ಹಸ್ತದಲ್ಲಿರುವ ದಂಡವನ್ನು ಮಸ್ತಕದ ಮೇಲೆ ಇಡಲು, ಆ ಹುಡುಗನು ಎಚ್ಚತ್ತು ಉಭಯ ಸ್ವಾಮಿಗಳವರನ್ನು ನೋಡಿ ಭಯಗ್ರಸ್ಥನಾಗಿ ಸಾಷ್ಟಾಂಗವೆರಗಿದನು. ಆಗ ಸ್ವಾಮಿಗಳವರು ನೀನು ಐಶ್ವರ್ಯವಂತನಾಗಿ ಈ ಸ್ಥಲಕ್ಕೆ ದೊರೆಯಾಗಿ ಬಾಳುವದು ಎಂತ ಆಶೀರ್ವಾದವ ಮಾಡಿದರು. ಆ ಹುಡುಗನು ನನಗೆ ದೊರೆತನವಾದರೆ ಸ್ವಾಮಿಗಳವರಾದ ತಮ್ಮ ಉಭಯತರದೇ ಕುಳಿತುಕೊಂಡ ಪಟ್ಟವು, ನನ್ನದು ನಿಂತುಕೊಂಡ ಪಟ್ಟವು, ಎಂಬುದಾಗಿ ಸಾಷ್ಟಾಂಗವ ಹಾಕಿದ ನಂತರ ಅವರ ಸೇವಾದಲ್ಲಿ ಇದ್ದುಕೊಂಡು ಇರುತ್ತಾ ಇದ್ದನು.

ಹೀಗೆ ಇರುವಲ್ಲಿ ಚೆನ್ನಮ್ಮಾಲಾದ್ರಿ ಗಿರಿ ಎಂಬ ಸ್ಥಳದ ದೊರೆಯಾದ ಚಂದ್ರಮೌಳಿ ರಾಜನು ವೃದ್ಧನಾಗಿ ಪುತ್ರ ಸಂತ ನವಿಲ್ಲದೆ ಇರುವುದರಿಂದ ಆ ಗುಡ್ಡದಲ್ಲಿ ಇರುವ ಉಭಯ ಸ್ವಾಮಿಗಳವರು ತನ್ನ ಭಕ್ತಿಯಿಂದ ಮಠದಲ್ಲಿ ಇದ್ದ ಸನ್ನಿಧಿಗೆ ರಾಜನು ಒಂದು ಕೇವಲ ಭಯ ಭಕ್ತಿಯಿಂದ ಸಾಷ್ಟಾಂಗ ಪ್ರಣತನಾಗಿ ಅರಿಕೆ ಮಾಡಿಕೊಂಡನು :- ನಾನು ವೃದ್ಧನಾದೆನು ಮುಂದ ನನ್ನ ಸಂಸ್ಥಾನಕ್ಕೆ ನನ್ನ ಹೊಟ್ಟೆಯಿಲ್ಲ ಪುತ್ರಿಲ್ಲದ ಕಾರಣ ಈ ದವಲತ್ತನ್ನು ಉಭಯ ಸ್ವಾಮಿಗಳ ಪಾದಕ್ಕೆ ಒಪ್ಪಿಸಿಕೊಳ್ಳಬೇಕು, ಎಂದು ನಮಸ್ಕಾರವ ಮಾಡಿದನು. ಅವನ ಭಕ್ತಿಗೆ ಸ್ವಾಮಿಗಳವರು ಮೆಚ್ಚಿ ಉಭಯ ಸ್ವಾಮಿಗಳವರ ಅಪ್ಪಣೆ ಆದದ್ದು :-- ನಿನ್ನ ದವಲತ್ತು ನಷ್ಟವಾಗಬಾರದು, ಅಭಿವೃದ್ಧಿ ಆಗತಕ್ಕಬಗ್ಗೆ ಪುತ್ರಸಂತಾನ ಕೊಡುತ್ತೇವೆ, ಎಂದು ತಮ್ಮ ಸೇವಾದಲ್ಲಿ ಇದ್ದ ಬರಮನೆಂಬ ಹುಡುಗನನ್ನು ಕರೆದು ಬಿಚ್ಚುಗತ್ತಿ ಬರಮನಾಯಕನೆಂಬ ಅಭಿಧಾನವಂ ಕೊಟ್ಟು ಚಂದ್ರಮೌಳಿ ಎಂಬ ದೊರೆಗೆ ಈ ಹುಡುಗನನ್ನು ಕರಕೊಂಡು ಹೋಗಿ ಪಟ್ಟಗಟ್ಟಿಕೊಂಡು ನಿನ್ನ ದವಲತ್ತು ಅಭಿವೃದ್ಧಿ ಮಾಡಿಕೊಂಡು ಬರುವಂತೆ ಆಶೀರ್ವಾದವಂ ಮಾಡಿ ಉಭಯರಿಗೂ ಅಪ್ಪಣೆಕೊಟ್ಟು ಕಳುಹಿಸಿದರು

ಚಂದ್ರಮೌಳಿದೊರೆಯು ಉಭಯ ಸ್ವಾಮಿಗಳವರ ಅಪ್ಪಣೆಯ ಪ್ರಕಾರ ಬಿಚ್ಚುಗತ್ತಿ ಬರಮನಾಯಕನಿಗೆ ಪಟ್ಟಗಟ್ಟಿ ಆ ಮೇಲೆ ಆರು ತಿಂಗಳಿಗೆ ಮೃತವಾದನು.

ಈ ಚಂದ್ರಮೌಳಿರಾಜನು ತೀರಿದ ನಂತರ

ಬಿಚ್ಚುಗತ್ತಿ ಬರಮನಾಯಕನೆಂಬ ದೊರೆಯು ತನ್ನ ತಂದೆಯಾದ ಚಂ ದ್ರಮೌಳಿ ರಾಜನು ಮಾಡಿಕೊಟ್ಟ ಮಠವು ಸಣ್ಣದಾದಕಾರಣ ಅದೇ ಮ ಠಕ್ಕೆ ಸೇರಿಸಿ ಮುನ್ನೂರಾ ಅರುವತ್ತು ಅಂಕಣ ಕಲ್ಲುಮಠವನ್ನು ಹಾಕಿಸಿ ನಮಸ್ಕರಿಸಿ ಉಭಯ ಸ್ವಾಮಿಗಳವರು ತಮ್ಮ ಗಣಸಮೂಹದೊಡನೆ ತಾವು ಈ ಮಠವಲ್ಲಿ ವಾಸವಾಗಿರಬೇಕು ಎಂದು ಸಾಷ್ಟಾಂಗವ ಹಾಕಿ ಉಭಯ ಸ್ವಾಮಿಗಳವರಿಂದ ಅಭಯ ತೆಗೆದುಕೊಂಡು ಆ ಮಠದಲ್ಲಿ ಸ್ವಾಮಿಗಳವರನ್ನು ತನ್ನ ಭಕ್ತಿಯಿಂದ ಇಟ್ಟುಕೊಂಡು ಪೂಜೆಮಾಡುತ್ತಾ ಇದ್ದನು. ಆಗ್ಯೆ ಉಭಯ ಸ್ವಾಮಿಗಳವರು ಗಣ ಸಮೂಹದಿಂದಲ್ಲಿ ಲಿಂಗಪೂಜಾ ಜಂಗಮ ದಾಸೋಹವ ದಿನಚರಿ ನಡಸು ತ್ತಿರುವಲ್ಲಿ ಆ ಪೈಕಿ ಖಾಸ ಚರಮೂರ್ತಿಗಳಾದ ಚೀಲಾಪ್ಪನವರ ನ್ನು ಭಿಕ್ಷುಕ ರೂಪವಾಗಿ ಹರಪನಹಳ್ಳಿ ಸೀಮೆಗೆ ಚರಸಮೇತವಾಗಿ ಅಪ್ಪಣೆ ಕೊಟ್ಟು ಕಳುಹಿಸಿದರು. ಇತ್ತಲಾಗಿ ಉಭಯ ಸ್ವಾಮಿಗಳ ವರು ತಮ್ಮ ಭಕ್ತನಾದ ಬಿಚ್ಚುಗತ್ತಿ ಬರಮನಾಯಕನೆಂಬ ದೊರೆ ಗಳವರಿಗೆ ದುರ್ಗದ ಸಮೀಪ ಒಂದು ಕೊಂಬಿನಳತೆ ದೂರದಲ್ಲಿ ಈ ಗುಡ್ಡ ದ ಕೆಳಗೆ ಒಂದು ಮಠವನ್ನು ನಿನ್ನ ಭಕ್ತಿಯಿಂದ ಕಟ್ಟಿಸಿಕೊಟ್ಟರೆ ಅಲ್ಲಿ ವಾಸವಾಗಿ ಇರುತ್ತೇವೆ, ಇಲ್ಲವೆ ನಮ್ಮ ಇಚ್ಛಾ ಇದ್ದಕಡೆಗೆ ಚಿತ್ತೈಸುತ್ತೇವೆ, ಎಂದು ಅಪ್ಪಣೆ ಕೊಡಲು ಸದರಿ ದೊರೆಗಳವರು ಉಭ ಯ ಸ್ವಾಮಿಗಳವರ ಬಿಡದೆ ತನ್ನ ಭಕ್ತಿಯಿಂದ ಅಪ್ಪಣೆ ಮೇರೆಗೆ ತನ್ನ ಚಿತ್ರದುರ್ಗದ ಸಮೀಪದಲ್ಲಿ ಮಠವ ಕಟ್ಟಿಸಿ ಆ ಮಠದ ಸ್ಥಳಕ್ಕೆ ಲಿಂಗಮುದ್ರೆ ಸ್ಥಾಪನವನ್ನು ಮಾಡಿಸಿ ಆ ಮಠವನ್ನು ನಮಸ್ಕರಿಸಿ ಆ ಮಠಕ್ಕೆ ತನ್ನ ಸೀಮೆಯಲ್ಲಿ ವರುಷಾಶನ ರುಸುಮು, ಗಳೇವಿಗೆ ಒಕ್ಕ ಳ (೧ಕೊಳಗ)ರಾಗಿ ಕೊಡುವಂತೆ ಆ ಸೀಮೆಯ ಆಚಾರ ವಿಚಾರ ವಗೈರೆ ಕೆಲಸಗಳಿಗೆ ಸ್ವಾಮಿಗಳಲ್ಲದೆ ಬೇರೆ ಸಿಂಹಾಸನ ಮುಂತಾದ ಮಠಸ್ಥರು ಸಹ ಸನ್ನಿಧಿ ಆಜ್ಞಾ ಪ್ರಕಾರ ನಡಕೊಂಬುವಂತೆ ಕಾಯಂ ಮಾಡಿ ಸನದ ಪ್ರತಿಗಳ ಮಾಡಿಕೊಟ್ಟು ಅನಂತರ ಮೇಲು ದುರ್ಗದ ಮಠದಲ್ಲಿ ಒಬ್ಬ ಚರಮೂರ್ತಿಗಳು ಇರುವಂತೆ ಅರಿಕೆ ಮಾಡಿಕೊಂಡು ಆ ಮೇಲು ದುರ್ಗದ ಮಠದಿಂದ ಉತ್ಸಹದೊಡನೆ ಗಣಸಮೂಹ ಸಹಿತವಾಗಿ ಉಭಯ ಸ್ವಾಮಿಗಳವರ ಕರಕೊಂಡು ಬಂದು ಆ ಊರ ಸಮೀಪದ ಮಠವನ್ನು ಬಿಚ್ಚುಗತ್ತಿ ಬರಮನಾಯಕನೆಂಬ ದೊರೆಯು ಒಪ್ಪಿಸಿ ದನು. ಆ ಮಠದಲ್ಲಿ ಲಿಂಗಪೂಜಾ ಜಂಗಮ ದಾಸೋಹ ದಿನಚರಿ

ನಡಸುತ್ತ ಉಭಯ ಸ್ವಾಮಿಗಳವರು ತಮ್ಮ ಗಣತಿಂಥಿಣಿಯಲ್ಲಿ ಇದ್ದರು.

(ಈ ನಿರಂಜನವಂಶ ರತ್ನಾಕರದ ಉಳಿದ ಭಾಗದಲ್ಲಿನ ೬-೩ನೆಯ ವಿಷಯಗಳು ಶ್ರೀ ನಿರಂಜನ ಜಗದ್ಗುರು ಅಲ್ಲಮ ಪ್ರಭು ದೇವರಿಂದ ಪರಂಪರೆಯಾಗಿಬಂದ ಶೂನ್ಯ ಸಿಂಹಾಸನಾಧೀಶ್ವರರ ಸಂಬಂಧವಾಗಿ ನಿರಂಜನವಂಶ ರತ್ನಾಕರದ ೨ನೆಯ ಭಾಗದ ಸಂಗತಿಗಳ ಪ್ರಾರಂಭದ ಕಾಲದ ವರೆವಿಗೆ ನಡೆದ ಸಂಗತಿಗಳನ್ನು ತಿಳಿಸುತ್ತವೆ. ರಾ| ಸಾ| ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು ಮುದ್ರಿಸಿದ ನಿರಂಜನವಂಶ ರತ್ನಾಕರದಲ್ಲಿನ ವಿಷಯಗಳಿಗೂ ಈ ಸಂಗತಿಗಳಿಗೂ ಒಟ್ಟಿನ ಅಭಿಪ್ರಾಯವು ಒಂದೇ ವಿಧದಲ್ಲಿದ್ದಾಗ್ಯೂ ಒಳಗಿನ ಕೆಲವು ಸಂಗತಿಗಳು ಸ್ವಲ್ಪ ಭಿನ್ನವಾಗಿ ಇದ್ದುದರಿಂದ ಇವನ್ನು ತಿಳಿಸುವ ಈ ಮೂಲಪ್ರತಿಗೆ "ಗ" ಪ್ರತಿ ಎಂಬ ಹೆಸರನ್ನು ಕೊಟ್ಟು ಇಲ್ಲಿ ಮುದ್ರಿಸಿದುದಾಗಿದೆ. ಪ್ರಕಾಶಕ)

(...

(೧) ಇಲ್ಲಿ ಹಳೆಬೀಡು ವ್ಯಾಜ್ಯದ ಸಂಬಂಧವನ್ನೂ (೨) ಚೀಲಾಳಪ್ಪನವರ ವಿಷಯವನ್ನೂ ಬರೆದಿರುತ್ತಾರೆ.

ಈ ವಿಷಯಗಳು ಈ ಪುಸ್ತಕದ ಪ್ರಾರಂಭದಲ್ಲಿ ಹೇಳಲ್ಪಟ್ಟ ಈ ಸಂಗತಿಗಳಿಗೆ ಹೆಚ್ಚು ಭಿನ್ನ ವಿಲ್ಲದಿರುವುದರಿಂದ ಪುನಃ ಮುದ್ರಿಸಲಿಲ್ಲ. ಪ್ರಕಾಶಕ)

೪

ಕೆಂಪಿನಪ್ಪನವರು.

"ಗ" ಪ್ರತಿ



ಚಿತ್ರದುರ್ಗದಲ್ಲಿ ಮುರುಗಾಸ್ವಾಮಿಗಳವರ ಸನ್ನಿಧಿಯಲ್ಲಿ ಕೆಂಪಿನಪ್ಪನವರೆಂಬ ಚರಮೂರ್ತಿಯು ಕುಮಾರ ಸ್ವಾಮಿಗಳವರ ಕೂಡ ನಾವೂ ನೀವೂ ಚರಮೂರ್ತಿಗಳು, ಆದ್ದರಿಂದ ಸಮಾನಸ್ಕಂಧರು ಎಂತ ವಾಗ್ವಾದವಮಾಡಿ ಈ ಕುಮಾರ ಸ್ವಾಮಿಗಳವರು ಪ್ರಭು ಚನ್ನಬಸ

ವೇಶ್ವರ ಸ್ವಾಮಿಗಳವರ ಬಳಿವಿಡಿದುಬಂದ ಚರಂತಿಗೆ ಪಟ್ಟವೆಂದು ತಿಳಿಯದೆ ದುರಹಮ್ಕಾತ್ತಿನ ಮಾತು ಆಡಿದ್ದರಿಂದ ಈ ಕೆಂಪಿನಪ್ಪ ನೆಂಬ ಚರಮೂರ್ತಿಯು ತನ್ನ ಚರಂತಿಗೆ ಸೂತ್ರವು ಖಾಸ ಚರಮೂರ್ತಿಗಳಾದ ಚೀಲಾಳಪ್ಪನವರಿಂದ ಆದದ್ದು ಎಂಬುದ ತಿಳಿದುಕೊಳ್ಳದೆ ದುರಹಂಕಾರದ ಮಾತು ಬಳಸಿದ ಕಾರಣ ಈತನು ಗುರು ದ್ರೋಹಿ ಯಾದ ಕಾರಣ ನಮ್ಮ ಸೂತ್ರೀಕರಾದ ಎಲ್ಲ ಬುಡಕಟ್ಟಿನ ಚರಮೂರ್ತಿಗಳು ಈ ಕೆಂಪಿನಪ್ಪನ ಪಂಕ್ತಿ ಪಾದಾರ್ಚನ ಮುಂತಾದ ಪ್ರವರ್ತಕವ ಮಾಡಬಾರದು, ಈತನಂತೆಯೇ ಕುಮಾರ ಸ್ವಾಮಿಗಳವರು ನಮ್ಮ ಸಮಾನ ಸ್ಕಂಧರು, ನಮಗೆ ಮರಿಯಾದೆಕೊಡದೆ ಅವರಿಗೆ ಕೊಡತಕ್ಕದ್ದು ಇಲ್ಲ, ನಮಗೆ ಶರಣು ಹಾಕದೆ ಅವರಿಗೆ ನಾವು ಶರಣು ಹಾಕತಕ್ಕವರಲ್ಲವೆಂದು ಕುಮಾರ ಸ್ವಾಮಿಗಳವರ ವಿಷಯದಲ್ಲಿ ಆದಿಯಿಂದ ಸೂತ್ರವಿಡಿದು ಬಂದ ಶಿವಾನುಭಾವ ಚರಂತಿಗೆ ಸೂತ್ರಿಕರು ಎಂಬುದನು ಅರಿಯದೆ ಅಹಂಕರಿಸಿದ ಕಾರಣ ಗದ್ದಕಟ್ಟಿನ ಚರಮೂರ್ತಿ ಗೂಳಿಕೊಂಡ ಅಯ್ಯನವರ ಚರಮೂರ್ತಿ ಸೋಮೆಕಟ್ಟೆ ಚರಮೂರ್ತಿ ಆಯಕಟ್ಟಿನ ಚರಮೂರ್ತಿ, ಈ ನಾಲ್ವರೂ ಗುರು ದ್ರೋಹಿಗಳೆಂಬುದಾಗಿ ನಿರ್ಣಯಿಸಿ ಅನಂತರ ಸದರಿ ಕೆಂಪಿನಪ್ಪನವರು ಮತ್ತು ಈ ನಾಲ್ವರ ಬಳಕೆಯ ಮಾಡಬಾರದೆಂದು ಚಿತ್ರದುರ್ಗದ ಮಠವಲ್ಲಿ ೧೩| ಮುರುಗಾ ಸ್ವಾಮಿಗಳವರು ಕುಮಾರ ಸ್ವಾಮಿಗಳವರು ಸಹಾ ತಮ್ಮ ಗಣಸಮೂಹದಿಂದ ಇವರನ್ನು ಹೊರಗೆ ಹಾಕಿಸಿದರು. ಈ ವಾರ್ತೆಯನ್ನು ಚಿತ್ರದುರ್ಗದ ದೊರೆಯಾದ ಬಿಚ್ಚುಗತ್ತಿ ಬರಮನಾಯಕರು ಕೇಳಿ ಈ ೫ ಚರಮೂರ್ತಿಗಳು ನಮ್ಮ ಸೀಮೆಯಲ್ಲಿ ಇರಬಾರದೆಂದು ಸೀಮೆ ಗಡಿಪಾರಮಾಡಿಸಿ ಬಿಟ್ಟರು. ಇವರ ಸೂತ್ರಿಕರಾದವರ ಮಠಗಳು ಬೆಂಗಳೂರು ಮುಂತಾಗಿ ಕಲ್ಯಾಣ ಸೀಮೆಯತನಕ ಕೆಲವು ಮಠಗಳಿರುತ್ತವೆ ಈ ಕೆಂಪಿನಪ್ಪನವರು ತಮ್ಮ ಚರಂತಿಗೆ ಸೂತ್ರವು ಚೀಲಾಳಪ್ಪನವರಿಂದಾದ ಕಾರಣ ಸದರಿ ಕೆಂಪಿನಪ್ಪನವರು ಮುರಿಗಾ ಸ್ವಾಮಿಗಳವರ ಕಾಲದಲ್ಲಿ ಭೇದವಾದ ಸದರಿ ನಾಲ್ಕು ಬುಡಕಟ್ಟಿನ ಚರಮೂರ್ತಿಗಳ ಕರಕೊಂಡು ಚೀಲಾಳಪ್ಪನವರಲ್ಲಿ ಹೋಗಿ ಅವರಿಗೆ ೧೩| ಕುಮಾರ ಸ್ವಾಮಿಗಳವರ ಚರಂತಿಗೆ ಸೂತ್ರದ ದೆಸೆಯಿಂದ ಚಿತ್ರದುರ್ಗದಲ್ಲಿ ನಡೆದ ಸಂಗತಿಯನ್ನು ಶೃತಪಡಿಸಲು ಅದನ್ನು ಚೀಲಾಳಪ್ಪನವರು ಕೇಳಿ ನಿಮ್ಮಲ್ಲಿ ನಾವು ಪಂಕ್ತಿ ಪಾದಾರ್ಚನೆ ಮುಂತಾದ ಬಳಕೆ ನಾವು

ಮಾಡಿದಲ್ಲಿ ನಮಗೆ ದೋಷವಿಲ್ಲವೆಂತ ಹೇಳಿ ಅನಂತರ ಸದರಿ ಈ ಐದು ಚರಮೂರ್ತಿಗಳನ್ನು ತಮ್ಮ ಆಚರಣೆಯಲ್ಲಿ ತೆಗೆದುಕೊಂಡರು ಈ ೫ ಬುಡಕಟ್ಟಿನ ಚರಮೂರ್ತಿಗಳು ಚೀಲಾಳ ಸಮಯದಲ್ಲಿ ಕೂಡಿದರೂ ಆಯಾಯ ಸಮಯದ ಮಠಗಳು ಬೇರೆ ಬೇರೆ ಇರುತ್ತವೆ. ಈ ಸಮಯಗಳು ಮೇಲೆ ಹೇಳಿದ ಕಾರಣಗಳಿಂದ ಈ ೫ ಸಮಯಗಳು ಭೇದವಾದವು.

(ಈ ಪುಸ್ತಕದ ೮–೧೧ ನೆಯ ಪುಟಗಳಲ್ಲಿ ಕೆಂಪಿನ ಬುಡಕಟ್ಟಿನ ಸಂಗನ ಬಸಪ್ಪನವರು ನಾಲ್ಕು ಬುಡಕಟ್ಟಿನವರಾದ ಸೋಮೇಕಟ್ಟೆ ಬುಡಕಟ್ಟಿನ ಚನ್ನಬಸಪ್ಪನವರು ಗದ್ದಕಟ್ಟಿನ ಬುಡಕಟ್ಟಿನ ಗುರುಬಸವಪ್ಪನವರು, ಗೂಳಿಕೊಂಡಯ್ಯನವರ ಬುಡಕಟ್ಟಿನ ರುದ್ರಪ್ಪನವರು ಆಯಕಟ್ಟಿನ ಬುಡಕಟ್ಟಿನ ಸಿದ್ಧಲಿಂಗಪ್ಪನವರು ಇವರ ಸಹಿತವಾಗಿ ಐವರೂ ಮಹಾನವಮಿಯಲ್ಲಿ ದುರಹಮ್ಮತ್ತಿನ ಮಾತಾಡಿದ್ದರಿಂದ ಇವರನ್ನು ಹೊರಗೆ ಹಾಕಿಸಿದರೆಂದು ಹೇಳಲ್ಪಟ್ಟಿರುತ್ತದೆ. ಅಲ್ಲಿ ಹೇಳಲ್ಪಟ್ಟ ಕೆಂಪಿನ ಬುಡಕಟ್ಟಿನ ಸಂಗನ ಬಸವಪ್ಪನವರೇ ಮೇಲೆ ಕಂಡ ಕೆಂಪಿನಪ್ಪನವರಾಗಿರಬಹುದೆಂದೂ ಉಳಿದ ನಾಲ್ವರು ಚರಮೂರ್ತಿಗಳೇ ಮೇಲೆ ಕಂಡ ಚರಮೂರ್ತಿಗಳೆಂದೂ ಊಹಿಸಲಿಕ್ಕೆ ಬರುವಂತೆ ಇದೆ. ಪ್ರಕಾಶಕ)

ಶಿ

ಶ್ರೀ ನಿರಂಜನ ಜಗದ್ಗುರು
ಶಿವಾನುಭಾವ ಚರಂತಿಗೆ ಪಟ್ಟದ
ಗೋಸಲ ಸಿದ್ಧೇಶ್ವರ ಸ್ವಾಮಿಗಳು.



ಇವರು ಮೂರು ಸಾವಿರ ವಿರಕ್ತ ಗಣಸಮೂಹದೊಡನೆ ಭಕ್ತಿ ಜ್ಞಾನ ವೈರಾಗ್ಯ ಉಳ್ಳವರಾಗಿ ದೇಶಂಗಳಲ್ಲಿ ಸಂಚರಿಸುತ್ತ ಭಕ್ತರ ಪಾವನರ ಮಾಡುತ್ತಾ ಮೈಸೂರ ಸೀಮೆಗೆ ದಯಮಾಡಿಸಿದರು. ಆ ಸೀಮೆಯಲ್ಲಿ ಹರದನಹಳ್ಳಿ ಎಂಬ ಗ್ರಾಮದಲ್ಲಿ ಆ ಊರ ಭಕ್ತರು ಭಕ್ತಿಯಿಂದ ಮಠವನ್ನು ಕಟ್ಟಿಸಿ ನಮಸ್ಕಾರವ ಮಾಡಲು ಆ ಮಠದಲ್ಲಿ ಲಿಂಗಪೂಜಾ ಜಂಗಮ ದಾಸೋಹ ದೊಡನೆ ಇದ್ದರು. ಆವಾಗ್ಯೆ ಅಯೋನಿಜರಾದ ತೋಂಟದಾರ್ಯರು ಬಾಲ ರೂಪುಉಳ್ಳವರಾಗಿ ಹರದನಹಳ್ಳಿ ಗ್ರಾಮದಲ್ಲಿ ಗೋಸಲ ಸಿದ್ಧೇಶ್ವರ ಸ್ವಾಮಿಗಳವರ ಸೇವಾ ಮಾಡುತ್ತಾ ಆ ಊರಲ್ಲಿ ಬಾಲ ಲೀಲೆಯಿಂದ ಅನೇಕ ಮಹಿಮೆ ತೋರುತ್ತಾ ಆಸ್ಥಳದಲ್ಲಿ ಕಲ್ಲ ಬಸವಣ್ಣನಿಗೆ ಉಣಿಸಿದರು. ಇದನ್ನು ಅಲ್ಲಿಯ ಪ್ರಜೆಗಳು ನೋಡಿ ಆಶ್ಚರ್ಯಪಟ್ಟು ಸಮಸ್ತರೂ ಇವರು ಮನುಷ್ಯರಲ್ಲ ಕೈಲಾಸದಿಂದ ಬಂದ ಮಹಾ ಯೋಗಿಗಳು, ಎಂದು ಕೊಂಡಾಡಿದರು.

ಈ ವರ್ತಮಾನವು ಗೋಸಲ ಸಿದ್ಧೇಶ್ವರ ಸ್ವಾಮಿಗಳವರಿಗೆ ತಿಳಿದು ತತ್‌ಕ್ಷಣವೆ ಅಲ್ಲಿ ಭಕ್ತ ಮಾಹೇಶ್ವರರ ಕರಸಿ ಅವರ ಮುಂತಿಟ್ಟುಕೊಂಡು ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ಮಾಡಿ ನೀವು ಇನ್ನುಮೇಲೆ ನಮ್ಮ ಸೇವೆ ಮಾಡಬಾರದು ನೀವು ಮಹಾ ಪುರುಷರು ಎಂಬ ತಿಳಿಯದೆ ನಿಮ್ಮ ಕಡೆಯಿಂದ ಸೇವಾ ಕೈಕೊಂಡದ್ದಾಯಿತು. ನೀವು ಗಣಸಮೂಹದೊಡನೆ ಸಕಲ ದೇಶಂಗಳಲ್ಲಿ ಸಂಚರಿಸಿ ಭಕ್ತರ ಪಾವನರಮಾಡಿ ನಮ್ಮ ಪ್ರಭುವಂಶ ಉದ್ಧಾರ ಮಾಡುವದೆಂದಪ್ಪಣೆ ಕೊಟ್ಟು ದೇಶದಮೇಲೆ ಸಂಚಾರಾರ್ಥವಾಗಿ ಕಳುಹಿಸಿ ಕೊಟ್ಟು ಅನಂತರ ಸ್ವಲ್ಪ ದಿವಸ ಶಿವಯೋಗದೊಡನೆ ಇದ್ದು ಆದೇಸ್ಥಲದಲ್ಲಿ ಬಯಲಾದರು. ಇವರ ತೋರುಗದ್ದಿಗೆಯು ಮೈಸೂರ ಸೀಮೆಯುಹರದನಹಳ್ಳಿಯಲ್ಲಿ ಇರುತ್ತದೆ. ಹಾಗೂ ಸದರಿ ಸ್ಥಲದಲ್ಲಿ ತೋಂಟದಾರ್ಯರು ಉಣಿಸಿದ ಕಲ್ಲ ಬಸವನು ಇರುತ್ತದೆ. ಇದಕ್ಕೆ ಸಿದ್ಧೇಶ್ವರ ಪುರಾಣ ಪ್ರಭುದೇವರ ಪುರಾಣ ಮುಂತಾದುವೇ ಸಾಕ್ಷಿ.

೬

ಕಟ್ಟಿಗೆಹಳ್ಳಿ ಶ್ರೀ॥ ॥ಗಳ ತರುವಾಯ ಚರಂತಿಗೆಯನ್ನು ಹೊಂದಿದ ಚರಮೂರ್ತಿಗಳ ವಿವರ.

ಕಟ್ಟಿಗೆಹಳ್ಳಿ ಸ್ವಾಮಿಗಳವರ ತರುವಾಯದಲ್ಲಿ ಶಿವಾನುಭಾವ ಚರಂತಿಗೆ ಪಟ್ಟದ ನೋಡ(ನೋಟದ)ಸಿದ್ಧಲಿಂಗಸ್ವಾಮಿಗಳವರು ಚರಂತಿಗೆ ಪುಸ್ತಕವನ್ನು ಕೊಟ್ಟ ಚರಮೂರ್ತಿಗಳು ಹನ್ನೊಂದು ಇವರ ಹೆಸರು :- ೧ ಉದ್ಧರಣೆ ಶಾಂತಪ್ಪನವರು ೨ ಅರಮನೆ ಗುರುಶಾಂತಪ್ಪನವರು ೩ ಮೂರು ಸಾವಿರದ ಚನ್ನವೀರಪ್ಪನವರು ೪ ಸಾವಳಿಗೆ ಬಸವಲಿಂಗಪ್ಪನವರು ೫ ರೇವಣಸಿದ್ಧಪ್ಪನವರು ೬ ಕೆಂಪಿನ ಶಿವಲಿಂಗಪ್ಪನವರು ೭ ವಿರೂಪಾಕ್ಷಪ್ಪನವರು ೮ ಟೀಕಿನ ಕರಿಬಸವಪ್ಪನವರು ೯ ಗುರು ಸಿದ್ಧಪ್ಪನವರು ೧೦ ಮೂರು ಸಾವಿರದ ಸಿದ್ಧಲಿಂಗಪ್ಪನವರು ೧೧ ಚಿನ ನಂಜಯ್ಯನವರು ಈ ಹನ್ನೊಂದು ಚರಂತಿಗೆ ಕೊಟ್ಟವರು ಮೂಲ ಗುರುಗಳವರಾದ ನೋಡ ಸಿದ್ಧಲಿಂಗ ಸ್ವಾಮಿಗಳವರು

ಇವರ ತರುವಾಯದಲ್ಲಿ ಶಿವಾನುಭಾವ ಚರಂತಿಗೆ ಪಟ್ಟದ ಕುಮಾರ ಸ್ವಾಮಿಗಳವರು ಕೊಟ್ಟ ಚರಮೂರ್ತಿಗಳವರು ಒಂಬತ್ತು ಇವರ ವಿವರ:— ೧ ದಾಬಳಿ ಬಸವಲಿಂಗಪ್ಪನವರು ೨ ಪುರಾಣದ ಶಿವಲಿಂಗಪ್ಪನವರು ೩ ವಾಣ್ಯದ ಬಸವಲಿಂಗಪ್ಪನವರು ೪ ಹೊಟ್ಟೆ ಮಹಂತಪ್ಪನವರು ೫ ಶಿವ್ಮೊಗ್ಗೆ (ಶಿವಮೋಹಿ?) ಸಿದ್ಧರಾಮಪ್ಪನವರು ೬ ಗುಡ್ಡದಪ್ಪನವರು ೭ ಗಳಿಗೆ ರುದ್ರಯ್ಯನವರು ೮ ಕಪ್ಪಿನ ಸಂಜಯ್ಯನವರು ೯ ಶಾಂತಲಿಂಗಪ್ಪನವರು ಈ ಒಂಬತ್ತು ಚರಂತಿಗೆ ಪುಸ್ತಕವನ್ನು ಕೊಟ್ಟ ಮೂಲ ಗುರುಗಳು ಶಾ॥ ಕುಮಾರ ಸ್ವಾಮಿಗಳವರು.

ಇವರ ತರುವಾಯದಲ್ಲಿ ಶಿವಾನುಭಾವ ಚರಂತಿಗೆ ಪಟ್ಟದ ಶಾ॥ ಕುಮಾರ ಕೆಂಪಿನ ಸಿದ್ಧಬಸವ ಸ್ವಾಮಿಗಳವರು (೫) ಐದು ಚರಂತಿಗೆ ಪುಸ್ತಕವನ್ನು

ಕೊಟ್ಟರು. ಈ ಚರಮೂರ್ತಿಗಳ ಹೆಸರು ೧ ವಾಚ್ಯದ ಕುಮಾರಪ್ಪನವರು ೨ ನೀಲಮ್ಮಯ್ಯನವರು ೩ ಗುರುಸಿದ್ಧಪ್ಪನವರು ೪ ಬಸವಪ್ರಭುವಪ್ಪನವರು ೫ ವ್ಯಾಕರಣದ ಬಸವಲಿಂಗಪ್ಪನವರು ಈ ಐದು ಚರಂತಿಗೆ ಕೊಟ್ಟ ಮೂಲ ಗುರುಗಳು ಕೆಂಪಿನ ಸಿದ್ಧಬಸವಸ್ವಾಮಿಗಳವರು.

ಈ ಒಟ್ಟು ೨೫ ಚರಂತಿಗೆ ತೆಗೆದುಕೊಂಡ ಚರಮೂರ್ತಿಗಳ ಗುರು ಮನೆತನವೇ ಜಡೇದ ಮನೆತನವು. ಒಟ್ಟು ಈ ೨೫ ಚರಂತಿಗೆಯೂ ಜಡೇದ ಸ್ವಾಮಿಗಳವರಿಂದ ಹುಟ್ಟಿದವು. ಈ ೨೫ ಚರಂತಿಗೆಯಿಂದ ಕುಮಾರ ಸಮಯದಲ್ಲಿ ಅನೇಕ ಚರಂತಿಗೆಗಳು ಹುಟ್ಟಿದವು.

ಸದರಿ ಚರಮೂರ್ತಿಗಳ ಪೈಕಿ ರೇವಣ ಸಿದ್ಧಪ್ಪನವರು ಕಲಬುರಿಗಿಯಲ್ಲಿ ಮಠವನ್ನು ಮಾಡಿ ತಾವು ೯ ಚರಂತಿಗೆ ಕೊಟ್ಟರು ಈ ಒಂಬತ್ತು ಚರಂತಿಗೆಯಿಂದ ೨೦ ಚರಂತಿಗೆ ಆಗಿದ್ದಾವೆ. ಸಾವಳಗಿ ಬಸವಲಿಂಗಪ್ಪನವರು ಹಿರೇ ಸಾವಳಗಿಯಲ್ಲಿ ಮಠವನ್ನು ಮಾಡಿದರು. ಇವರು ೫ ಚರಂತಿಗೆ ಕೊಟ್ಟರು. ಕೆಂಪಿನ ಶಿವಲಿಂಗಪ್ಪನವರು ಯಕ್ಕುಂಡಿಯಲ್ಲಿ ಮಠವನ್ನು ಮಾಡಿದರು. ಇವರು ೨ ಚರಂತಿಗೆ ಕೊಟ್ಟರು. ದಾಬಳಿ ಬಸವಲಿಂಗಪ್ಪನವರು ಹರ್ಲಾಪುರದಲ್ಲಿ ಮಠವನ್ನು ಮಾಡಿದರು. ಇವರು ೬ ಚರಂತಿಗೆಯನ್ನು ಮಾಡಿದರು. ಉದ್ಧರಣೆ ಶಾಂತಪ್ಪನವರು ತಡಸದಲ್ಲಿ ಮಠವನ್ನು ಮಾಡಿದರು. ಇವರು ೪ ಚರಂತಿಗೆಯನ್ನು ಮಾಡಿದರು. ವಾಚ್ಯದ ಕುಮಾರಪ್ಪನವರು ಜಡೇದ ಸನ್ನಿಧಿ ಕಡೆಯಿಂದ ಹಾನಗಲ್ಲ ಮಠವನ್ನು ಪಡಕೊಂಡು ಇವರು ೩ ಚರಂತಿಗೆಯನ್ನು ಕೊಟ್ಟರು.

ನೀಲಮ್ಮಯ್ಯನವರು (ನೀಲಲೋಚನಪ್ಪನವರು) ಇವರು ಹಳೇಬೀಡ ಸೀಮೆಯಲ್ಲಿ ರಾ|| ಕೆಂಪಿನ ಸಿದ್ಧಬಸವ ಸ್ವಾಮಿಗಳವರ ಖಾಸ ಚರಮೂರ್ತಿಗಳು. ಹಾರನಹಳ್ಳಿಯಲ್ಲಿ ಇದ್ದು ೬ ಚರಂತಿಗೆಯನ್ನು ಕೊಟ್ಟಿದ್ದಾರೆ. ಗುರುಸಿದ್ಧಪ್ಪನವರು ಹುಕ್ಕೇರಿಯಲ್ಲಿ ಮಠವನ್ನು ಮಾಡಿ ಇವರು ೫ ಚರಂತಿಗೆಯನ್ನು ಕೊಟ್ಟಿದ್ದಾರೆ. ವಿರುಪಾಕ್ಷಪ್ಪನವರು ಉಪ್ಪಿನ ಬೆಟಗೇರಿಯಲ್ಲಿ ಮಠವನ್ನು ಮಾಡಿ ಇವರು ೨ ಚರಂತಿಗೆ ಮಾಡಿದರು. ಮೂರು ಸಾವಿರದ ಸಿದ್ಧಲಿಂಗಪ್ಪನವರು ಹಾವಸೇದಲ್ಲಿ ಮಠವನ್ನು ಮಾಡಿ ೭ ಚರಂತಿಗೆಯನ್ನು ಮಾಡಿದರು. ಪುರಾಣದ ಶಿವಲಿಂಗಪ್ಪನವರು ಅಷ್ಟಗಿಯಲ್ಲಿ ಮಠವನ್ನು ಮಾಡಿ ೮ ಚರಂತಿಗೆಯನ್ನು ಮಾಡಿದರು. ಗುಡ್ಡದಪ್ಪನವರು ಹೂವಿನ ಹಿಪ್ಪರಗಿಯಲ್ಲಿ ಮಠವನ್ನು ಮಾಡಿ ೧೦ ಚರಂತಿಗೆಯನ್ನು ಕೊಟ್ಟರು. ಬಸವಪ್ರಭುವಪ್ಪನವರು ಜಮಖಂಡಿಯಲ್ಲಿ ವಹಿಲಿ (ಓಲೆ?) ಮಠವನ್ನು ಪಡೆದು ೪

ಚರಂತಿಗೆಯನ್ನು ಕೊಟ್ಟರು. ಗಳಿಗೆ ರುದ್ರಪ್ಪನವರು ಬೀಳಗಿಯಲ್ಲಿ ಮಠವನ್ನು ಮಾಡಿ ೨ ಚರಂತಿಗೆಯನ್ನು ಕೊಟ್ಟರು. ಹೊಟ್ಟಿ ಮಹಂತಪ್ಪನವರು ಉಪ್ಪಿನ ಬೆಟಗೇರಿಯಲ್ಲಿ ಮಠವನ್ನು ಮಾಡಿ ೨ ಚರಂತಿಗೆಯನ್ನು ಕೊಟ್ಟರು. ಅರಮನೆಯ ಗುರುಶಾಂತಯ್ಯನವರು ಕೆರೂರಲ್ಲಿ ಮಠವನ್ನು ಮಾಡಿ ೩ ಚರಂತಿಗೆ ಕೊಟ್ಟರು. ಟೀಕಿನ ಕರಿಬಸವಪ್ಪನವರು ಬಾಗಲಕೋಟಿಯಲ್ಲಿ ಟಂಗಿನ ಮಠವನ್ನು ಮಾಡಿ ೩ ಚರಂತಿಗೆಯನ್ನು ಮಾಡಿದರು ಶಿವದ್ರೋಹಿ (ಶಿವದ್ರೋಹಿ?) ಸಿದ್ಧರಾಮಪ್ಪನವರು ಗೋಕಾವಿಯಲ್ಲಿ ಮಠವನ್ನು ಮಾಡಿ ೨ ಚರಂತಿಗೆಯನ್ನು ಕೊಟ್ಟರು. ಶಾಂತಲಿಂಗಪ್ಪನವರು ಇಡಕೊಳ್ಳದಲ್ಲಿ ಮಠವನ್ನು ಮಾಡಿ ೨ ಚರಂತಿಗೆಯನ್ನು ಕೊಟ್ಟರು. ಮೂರು ಸಾವಿರದ ಚನ್ನವೀರಪ್ಪನವರು ಗಂಗಾವಾರದಲ್ಲಿ ಮಠವನ್ನು ಮಾಡಿ ೫ ಚರಂತಿಗೆ ಕೊಟ್ಟರು. ಕಪ್ಪಿನ ನಂಜಯ್ಯನವರು ಸವದತ್ತಿಯಲ್ಲಿ ಮಠವನ್ನು ಮಾಡಿ ೧ ಚರಂತಿಗೆಯನ್ನು ಕೊಟ್ಟರು. ಚನ್ನನಂಜಯ್ಯನವರು ಮೈಸೂರಲ್ಲಿ ಮಠವನ್ನು ಮಾಡಿ ೧ ಚರಂತಿಗೆಯನ್ನು ಕೊಟ್ಟರು. ಮಾಚ್ಯದ ಬಸವಲಿಂಗಪ್ಪನವರು ಹುಬ್ಬಳ್ಳಿಯಲ್ಲಿರುವ ಚೀಲಾಳಸಮಯದ ಕೌದಿಮಠವನ್ನು ಪಡೆದು ೪ ಚರಂತಿಗೆಯನ್ನು ಕೊಟ್ಟರು.



೭

ಶ್ರೀ ನಿರಂಜನ ಜಗದ್ಗುರು ಗುರುಸಿದ್ಧಸ್ವಾಮಿಗಳು ಮತ್ತು ಕೆಂಪಿನ ಸಿದ್ದಬಸವ ಸ್ವಾಮಿಗಳು

ಇವರ ವ್ಯಾಜ್ಯ ವಿಮರ್ಶೆಗಾಗಿ ಜಡೆಯಕ್ಕೆ ಸೇರಿದವರ ವಿವರ ("ಡ" ಪ್ರತಿ)



ಈ ವ್ಯಾಜ್ಯದ ತೀರ್ಪಿನ ಕಾರ್ಯವು ದೇಶ ಮಧ್ಯದಲ್ಲಿ ಇರುವ ಮುಖ್ಯ ಸ್ಥಲಗಳಾದ ಕೊಟ್ಟೂರು, ಅಮರಗೊಂಡ, ಸಿದ್ಧಗಿರಿ, ಮು ಸಕಿ, ಶಿವಕಂಚಿ, ಮಹಾನಂದಿ, ತೊಗರಸಿ, ಕುರುಗೋಡು, ನಂದ್ಯಾಲ, ಶಿವಗಂಗೆ, ಗೋಕರ್ಣ, ಹಳೆಯಬೀಡು, ಈ ೧೨ ಕಟ್ಟೆಯ ಮನೆಯ ವರಿಂದಲೂ ತೂಪ (ತೋಪು?) ಜಾತ್ರೆಗಳಾದ ಹಂಸೆ, ಕಲ್ಯಾಣ, ನಂಜನಗೂಡು, ಕಾಶಿ, ಮಹಾಬಲೇಶ್ವರ, ಕಾಳಹಸ್ತಿ, ಈ ಆರು ಜಾತ್ರೆ ಸ್ಥಲಗಳವರಿಂದಲೂ ಆಗುವದಿಲ್ಲವೆಂದು ತಿಳಿದು

ಮ|| ರಾ|| ಗುರುಸಿದ್ಧ ಸ್ವಾಮಿಗಳು ಸದರಿ ಹಳೆಯಬೀಡ ಹೊಲೆ ಬಳಕೆ ಮತ್ತು ಪಂಚದ್ರೋಹದ ವ್ಯಾಜ್ಯದ ವಿಚಾರದ ದೆಸೆಯಿಂದ ಶಾಲಿವಾಹನ ಶಕೆ, ೧೬೪೧ ನೆಯ ವಿಕಾರಿ ಸಂವತ್ಸರದ ಪುಷ್ಯ ಮಾಸಕ್ಕೆ ಜಡೆಯಕ್ಕೆ ಬರಬೇಕೆಂದು ಸಕಲದೇಶಗಳ ಪೇಟೇ. ಮನೆ, ಮಠಮಹಂತು, ಸ್ಥಲ ಪರಸ್ಥಲದ ದೇಶಭಕ್ತರಿಗೆ ಆಶೀರ್ವಾದ ನಿರೂಪಗಳನ್ನು ಬರಸಿ ಕಳುಹಿಸಿದರು. ಇದೇ ಪ್ರಕಾರ ಮ|| ರಾ|| ಕೆಂಪಿನ ಸಿದ್ಧಬಸವ ಸ್ವಾಮಿಗಳು ಸದರಿ ದೇಶಗಳಲ್ಲಿರುವ ಭಕ್ತಮಹೇಶ್ವರರಿಗೆ ಆಶೀರ್ವಾದ ನಿರೂಪಗಳನ್ನು ಬರೆಯಿಸಿ ಕಳುಹಿಸಿ ದರು. ಸದರಿ ಉಭಯ ಸ್ವಾಮಿಗಳವರು ಬರೆಸಿ ಕಳುಹಿಸಿದ ಆಶೀರ್ವಾದ ನಿರೂಪಗಳನ್ನು ಸದರಿ ಭಕ್ತರು ನೋಡಿಕೊಂಡು ಕೆಳದಿ ರಾಷ್ಟ್ರ ವಾದ ಜಡೇದ ಸ್ಥಲಕ್ಕೆ ಬಂದವರ ವಿವರ :–

ಜಡೆ, ತಿಲಗಡ್ಡೆ ಪೇಟೆ ಸೀಮೆಯದ್ವೈವ, ಹಾನಗಲ್, ಆಲೂರು, ಆಡೂರು, ತಿಳುವಳ್ಳಿ, ಕಾಗಿನೆಲ್ಲಿ, ಕಬ್ಬೂರು ಪೇಟೆಯದ್ವೈವ ಚಿಕ್ಕೇರೂರು, ಹಿರೇಕೇರೂರು, ಹಾಂಸಭಾವಿ ಪೇಟೆಯದ್ವೈವ, ಇಮರಾಪುರ, ತಡಸ, ಮಿ

ಶ್ರೀಕೋಟಿ ಪೇಟೆಯುದೈವ, ಬಂಕಾಪುರ, ರಾಯರ ಹುಬ್ಬಳ್ಳಿ, ಮಂಗಳವಾಡದ ಪೇಟೇದೈವ, ಕಾಶಿಗ್ಗಾವಿ, ತೆಲಸಂಗ, ಜತ್ತಿ ಪೇಟೆಯುದೈವ, ಮುಮ್ಮಾಡಿಕಾಸಾವಸಿ, ಕುಂದಗೋಳ, ಡೊಂಬಳ, ತಿಂಹಟ್ಟಿ, ಕಲ್ಲುಮಳಗುಂದದ ಪೇಟೆಯುದೈವ, ಅಗಡಿ, ಹಾವೇರಿ, ರಾಹುಪುರ, ಗುತ್ತಲ, ಹಾವನೂರು ಪೇಟೆದೈವ, ಹರಿಹರ, ರಾಣೇಬೆನ್ನೂರು ಪೇಟೆಯುದೈವ ಶಿವಮೊಗ್ಗೆ, ಹೊಳೆಹೊನ್ನೂರು, ಕುರಕರಹೊನ್ನಳ್ಳಿ, ಶಿಕಾರಿಪುರದ ಪೇಟೆಯು ದೈವ, ಸೊರಬ, ಸಾಗರ, ಶಿರವಂತಿ, ಪತ್ತೆಪೇಟೆಯುದೈವ ಬೀಳಗಿ, ಸಿದ್ದಾಪುರ, ಸಿರಸಿ, ಸೋದೆ, ಹುಲಿಕಲ್ಲು, ಮೋಲಗೈಯಲ್ಲಾಪುರ, ಸೀದಿಗಿ, ಯಳವಲ್ಲಿ, ದೇವರಹಿಪ್ಪರಗಿ ಪೇಟೇದೈವ, ಮುರಗೋಡು, ಹೂಲಿ, ನರಗುಂದ, ನವಲಗುಂದದ ಪೇಟೇದೈವ, ಕಂಪಲಿ, ಕಮಲಾಪುರ, ಚಿತ್ರವಾಡಿಗಿ, ಹೊಸಪೇಟೆಯುದೈವ, ಇಸಳೂರು ಮುಂತಾದ ಏಳು ನೂರು ಪೇಟೆದೈವದವರು ಸೆಟ್ಟರು ಯಜಮಾನರು ಶಾಂತಪುರದ ಒಡೆಯರು ಮುಂತಾದ ರಾ|| ಗುರುಸ್ಥಲದ ಪಟ್ಟ ಚರಂತರು ಕೂಡಿ ಎರಡು ನೂರು, ವಿರಕ್ತರು ಚರಮೂರ್ತಿಗಳ ಕೂಡಿ ಅರುನೂರು, ಮಹಂತಿನಕೂಡಿದ ಮೂರ್ತಿಗಳು ನಾನೂರು, ಗುರುಸ್ಥಲದ ಮೂರ್ತಿಗಳು ಒಂದು ಸಾವಿರ, ನಗರದಸೀಮೆ, ಸೋದೆಸೀಮೆ, ಬೀಳಗಿ ಸೀಮೆ, ಧಾರವಾಡ ಸೀಮೆ, ಈ ನಾಲ್ಕು ಸೀಮೆ ಗೌಡಾಧ್ಯರು ನಾಡಿಗರು ಅಂತೂ ಕೂಡಿ ನಾಲ್ಕು ಸಾವಿರ ಜನ ಗೌಡರು ನಾಡಿಗರು, ನವಲಗುಂದ, ತಲವೂರು, ಹವಿನ್ಯಾಗಿ, ಸಿಂಹಟ್ಟಿ, ಕಿತ್ತೂರು, ವಂಟಮೂರಿ ಮುಂತಾದ ೫೦ ಮಂದಿ ದೇಸಾಯಿಗಳು ನಾಡ ಗೌಡರು ಅಂತು ಕೂಡಿ ೫೦ ಸಾವಿರ ಪ್ರಜೆಗಳು, ಏಳುನೂರು ಚಲವಾದಿಗಳ ಹಿಡಿದು ಲೆಖ್ಖಮಾಡಲು ಐವತ್ತುಸಾವಿರದ ಒಂಭೈನೂರು ಜನಗಳು ಕೂಡಲು ಇವರ ಅನ್ನ ಖರ್ಚುಗಳಿಗೋಸ್ಕರವಾಗಿ ಸೋದೇ ಸದಾಶಿವ ರಾಜನು ನಗರದ ಸೀಮೆಯು ಗೌಡಾಧ್ಯರು ಇವರು ಯಾ ಹೊತ್ತರೂ ಕೂಡಿಏರ್ಪಡಿಸಿದರು.

ಮೆಣಸಿನ ಹಳ್ಳದಾಚೆಯಲ್ಲಿ ತನ್ನ ಸೀಮೆಯಲ್ಲಿ ಸೋದೆಯ ದೊರೆಗಳು ಹಂದರಾಹಾಕಿಸಿ ಕೂಡಿದ ಪ್ರಜೆಗಳಿಗೋಸ್ಕರವಾಗಿ ಸರಬರಾಯಿ ಮಾಡಿಸಿದ್ದರು. ನಗರಸೀಮೆ ಸದರಿ ಹಳ್ಳದ ಈಚೆಯಲ್ಲಿ ಮ|ರಾ| ಕೆಂಪಿನ ಸಿದ್ಧಬಸವ ಸ್ವಾಮಿಗಳವರ ಅಪ್ಪಣೆಯ ಪ್ರಕಾರ ನಗರದ ಸೀಮೆಯು ಗೌಡಾಧ್ಯರು ಹಂದರಾಹಾಕಿಸಿ ಪ್ರಜೆಗಳಿಗೋಸ್ಕರವಾಗಿ ಅಕ್ಕಿವಗೈರೆ ಸಕಲ ಸಾಹಿತ್ಯವನ್ನೂ ಮಾಡಿಸಿದ್ದರು.

ಈ ಮೆಣಸಿನ ಹಳ್ಳದ ಆಚೆ ಈಚೆ ಎರಡು ದಂಡೆಗಳಲ್ಲಿ ಹಾಕಿಸಿದ ಹಂದರಗಳಲ್ಲಿ ಸದರಿ ಕೂಡಿದ ದೇವಭಕ್ತರು ಮುಂತಾದ ಸಕಲರೂ ಜಡೆ ಯಕ್ಕೆ ಮತ್ತು ಬನವಾಸಿಗೆ ಬಂದು ಮ|ರಾ|ಉಭಯ ಸ್ವಾಮಿಗಳವರ ದರ್ಶ ನ ತಕ್ಕೊಂಡು ಉಭಯ ಮಹಾ ಸ್ವಾಮಿಗಳವರ ಅಪ್ಪಣೆ ಮೇರೆಗೆ ಸದರಿ ಹಳ್ಳದ ದಂಡೆಗಳಲ್ಲಿ ಹಾಕಿಸಿದ ಹಂದರಗಳಲ್ಲಿ ಇಳಿದುಕೊಂಡರು. ಆ ಮೇಲೆ ಈ ಕೂಡಿದ ಸಭೆಯಲ್ಲಿ ಮುಖ್ಯರಾದ ಕಿತ್ತೂರು ದೇಸಾ ಯರು ಸೋದೆ ದೊರೆಗಳು ನಗರದ ದೊರೆಗಳ ಮಾವನವರಾದ ಮರಿ ಯಪ್ಪ ಸೆಟ್ಟರು ಹಾವೇರಿ ಆನೂರು ಸೆಟ್ಟರು ವರದಪ್ಪ ಸೆಟ್ಟರು ನವಲ ಗುಂದ ನರಗುಂದದ ಸೆಟ್ಟರು ಹುಬ್ಬಳ್ಳಿ ಬಸಪ್ಪ ಸೆಟ್ಟರು ಮುರಗೋಡು ಸೆಟ್ಟರು ಮುಂತಾದ ಪಳನೂರು ಪೇಟೆ ಮುಖ್ಯ ಮುಖ್ಯ ಸೆಟ್ಟರು ದೇಸಾಯಿಗಳು ದೊರೆಗಳು ನಾಡಗೌಡರು ಗೌಡರು ನಾಡಿಗರು ಶಾಂತ ಪುರದ ಮರಿಒಡೆಯರು ಮುಂತಾದ ಪಟ್ಟ ಚರಂತಿಗೆ ದೇವರುಗಳು ಮೊ ದಲಾದ ದೇವಭಕ್ತರು ಸಹವಾಗಿ ಈ ಸಭೆಯಲ್ಲಿ ನಡೆಯಬೇಕಾದ ಕಾರ್ಯ ಭಾಗವನ್ನು ಆಲೋಚಿಸಿದರು.

೮

ಇತರ ವಿಷಯಗಳು.

"ಛ" ಪ್ರತಿ

೧ ಪ್ರಭುಸ್ವಾಮಿಗಳು ಶ್ರೀಶೈಲದ ಕದಳಿಯಲ್ಲಿ ನಿರ್ವಯಲಾದರು.

---

೨ ಶಾಲಿವಾಹನ ಶಕೆ ೭೦೭ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿ ಮಂಗಳವಾರ ಉದಯ ೨೫ ಘಳಿಗೆ ವೇಳೆಯೊಳು ಬಸವೇಶ್ವರ ದೇವರು ಕಪ್ಪಡಿ ಸಂಗಮೇಶ್ವರ ಲಿಂಗದೊಳೈಕ್ಯವಾದರು.

---

೩ ಆನಂತರ ಶಾಲಿವಾಹನ ಶಕೆ ೮೦೦ನೇ ವಿಳಂಬಿ ಸಂವತ್ಸರದ ಚೈತ್ರ ಶುದ್ಧ ೧೦ ಗುರುವಾರ ಉದಯ ೧೨ ಘಳಿಗೆ ವೇಳೆಯೊಳು ಹೊಯ್ಸಳ ದೇಶದ ಹಳೇಬೀಡು ವೇಲಾಪುರದ ಅರಸು ವಿಷ್ಣುವರ್ಧನ ನೆಂಬ ಬಲ್ಲಾಳನಿಗೆ ಸದರಿ ದೇಶದ ಪಟ್ಟಾಭಿಷೇಕವಾಯಿತು.

ಈತನ ಆಳಿಕೆಯಲ್ಲಿ ಕರಿಹರಾಚಾರ್ಯ ರಾಘವಾಂಕ ಕೆರೆಯ ಪ ದ್ಮರಸರು ಚಾಮರಸರ ಪಾಲ್ಕುರಿಕೆ ಸೋಮನಾರಾಧ್ಯರು ಮಂತಾ ದ ಕವಿಗಳು ಮತ್ತು ಅನೇಕ ವೀರಶೈವ ಮಹೋದ್ಧಾರಕರಿಂದ ಸೋ ಸಲೆ ಭೈರವರಾಜ ಒಕ್ಕಲೂರ ಮಲಿಯ ಕಲ್ಲಪ್ಪ ಅರಮಾಗೆ ಅದರಿ ಕಲ್ಯಾಣದಿಂದ ಉಳವಿಗೆ ದಯಮಾಡಿಸಿದ ಶ್ರೀ ಚನ್ನಬಸವೇಶ್ವರ ದೇ ವರ ಕೂಡ ಹೋದ ೨ ಸಾವಿರ ಷಟ್ಸ್ಥಲ ಬ್ರಹ್ಮಗಳಾದ ವಿರಕ್ತರ ಪೈಕಿ ಉಳಿದ ಚನ್ನನಂಜಯ್ಯಸ್ವಾಮಿಗಳು ಕೇರಲು ಶಾಂತಯ್ಯ ಕುದು ರೆ ಶಾಂತಯ್ಯ ಮಂಚದ ಶಾಂತಯ್ಯ ಮುಂತಾದ ಮೂರುಸಾವಿ ರ ವಿರಕ್ತರಿಗೆ ಸದಾ ಚನ್ನಂಜಯ್ಯ ದೇವರೇ ಗುರುಗಳಾಗಿ ವೀರಶೈವ ನಿಷ್ಠಾಪರರಾದ ಭಕ್ತಮಹೇಶ್ವರರಿಗೆ ಷಟ್ಸ್ಥಲನಿರ್ಣಯಂಗಳಂ ಪೇಳಿ ಮೋಕ್ಷವನಿತ್ತು ನಿರ್ಣಯಲಾದರು.

---

೪ ಅನಂತರ ಶಾಲಿವಾಹನ ಶಕ ೧೫೫೪ ನೆಯ ಧಾತು ಸಂವತ್ಸರದ ವೈ ಶಾಖ ಶುದ್ಧ ಸಪ್ತಮಿಯಲ್ಲಿ ಹರಿಹರ ನೃಪಗೆ ಆನೆಗೊಂದಿ ನಗರದ ಪ ಟ್ಟವಾಗಲು ಈತನ ವಂಶಜರು ಹದಿಮೂರು ಪಟ್ಟ ಆಳಿದರು ಇ ವರು ೧೫೦ ವರ್ಷ ಆಳಲು ಇವರ ಪೈಕಿ ಪ್ರೌಢ ದೇವೇಂದ್ರನು ಪಂಪಾ ವಿರೂಪಾಕ್ಷಾಲಯಕ್ಕೆ ಸಮೀಪವಾದ ವಿದ್ಯಾನಗರವಾಳುತ್ತಿರುವ ಕಾಲ ದಲ್ಲಿ ಪರಮೇಶ್ವರನಾಜ್ಞೆಯಿಂ ಕೈಲಾಸದಿಂ ಮರ್ತ್ಯಲೋಕಕ್ಕೆ ಬಂದ ನೂರೊಂದು ವಿರಕ್ತರಾದ ವೀರಣ್ಣ ಒಡೆಯರು ಕರಸ್ಥಲದ ನಾಗಿದೇವರು ಗುರುಬಸವ ದೇವರು ಬತ್ತಲೇಶ್ವರ ನಿರ್ವಾಣ ಬೋಳೇಶ್ವರ ಮೊದಲಾದ ನೂರೊಂದು ವಿರಕ್ತರಿಗೆ ಗುರುಗಳಾಗಿ ಹರದನಹಳ್ಳಿ ಗೋಸಲೆ ಚನ್ನಬಸವೇ ಶ್ವರ ಕರಸಂಜಾತರೆನಿಸಿದ ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಗಳು ಇ ವರ ಶಿಷ್ಯರು ಈ ನಿರಂಜನ ಗಣೇಶ್ವರರ ಸಂಗಡ ೭೦೦ ವಿರಕ್ತರು ಕೈ ಲಾಸದಿಂ ಇಹಲೋಕಕ್ಕೆ ಬಂದರು ಶ್ರೀ ತೋಂಟದಾರ್ಯರು ಸದಾ ೭೦೦ ವಿರಕ್ತರಿಗೆ ಗುರುಗಳಾಗಿ ಇವರಿಂದ ಈ ಲೋಕದಲ್ಲಿ ೭೦೦ ಚ ರಮೂರ್ತಿಗಳೂ ೬೦೦೦ ವಿರಕ್ತರೂ ಆದರು.

ಧಾರವಾಡ ಜಿಲ್ಲಾ ನವಲಗುಂದ ತಾಲೂಕ ನರಗುಂದ ಪೇಟಕ್ಕೆ ಸೇರಿದ ವಡ್ಡೀರ ನಾಗನೂರಲ್ಲಿ ಇರುವ ಹಿರೇಮಠದ ಶಿವಮೂರ್ತಿ ಯ್ಯಾ ಬಿನ್ ಮುದಕಯ್ಯಾ (ಎಂತ ಈ ಪ್ರತಿಯಲ್ಲಿ ಇದೆ. ಬರಹವೂ ಇದರ ನಮೂನೆಯಲ್ಲಿಯೇ ಇದೆ)